ಈ ನಿಟ್ಟಿನಲ್ಲು ಮಾನ್ಯ ಬೃಹತ್ ಕೈಗಾರಿಕಾ ಮಂತ್ರಿಗಳ ಸಮಕ್ಷಮದಲ್ಲಿ ಒಂದು ಸಭೆ ನಡೆದು ದೀರ್ಘ ಚರ್ಚೆಯ ನಂತರ ಇಂತಹ ಕೈಗಾರಿಕೆಗಳಿಗೆ ಕೆಲವು ಸವಲತ್ತುಗಳ ಒದಗಿಸುವುದಲ್ಲದೇ ಅವರು ಕೂಡಬೇಕಾದ ಶುಲ್ಕಗಳಲ್ಲಿ ಸ್ವಲ್ಪ ವಿನಾಯಿತಿ ತೋರಿಸಬೇಕೆಂದು ತೀರ್ಮಾನಿಸಿದೆ. ಈ ತೀರ್ಮಾನದಂತೆ ಎಂ.ಆರ್.ಪಿ.ಎಲ್ ಗೆ ವಿನಾಯಿತಿ ನೀಡಬೇಕೆ ಹಾಗಿದ್ದಲ್ಲಿ ಎಷ್ಟು ನೀಡಬೇಕು ಎಂಬುದನ್ನು ಸರ್ಕಾರವು ಪರಿಶೀಲಿಸುತ್ತಿದೆ. ಇದರ ಬಗ್ಗೆ ಇನ್ನು ಅಂತಿಮ ತೀರ್ಮಾನ ತೆಗೆದು ಕೊಂಡಿಲ್ಲ. ತೀರ್ಮಾನ ತೆಗೆದುಕೊಂಡ ನಂತರ ಬಾಕಿ ಹಣವನ್ನು ವಸೂಲಿ ಮಾಡುವ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದು.

ನಿಯಮ ೬೯ರ ಅಡಿಯಲ್ಲಿ ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿ ತಲೆದೋರಿರುವ ಬರಗಾಲ ಹಾಗೂ ಬರಪರಿಹಾರ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿರುವುದರಿಂದ ಉಂಟಾಗಿರುವ ಪರಿಸ್ಥಿತಿ.

ರಾಜ್ಯದಲ್ಲಿ ಮುಂಗಾರು ಮಳೆಯ ವಿಳಂಬದಿಂದಾಗಿ, ಜುಲೈ ತಿಂಗಳ ಪ್ರಾರಂಭದಲ್ಲಿ ರಾಜ್ಯದ ಬಹಳಷ್ಟು ಭಾಗಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿದ್ದು, ರಾಜ್ಯದ ೧೭೫ ತಾಲ್ಲೂಕುಗಳ ಪೈಕಿ ೧೦೬ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿತ್ತು.

೨. ಸಾಮಾನ್ಯವಾಗಿ, ರಾಜ್ಯದಲ್ಲಿ ಪ್ರತಿ ವರ್ಷದ ಎಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಪೂರ್ವ ಮುಂಗಾರು ಮಳೆಬೀಳುತ್ತಿದ್ದು, ಇದು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯಕವಾಗಿತ್ತು. ಮೈಸೂರು ಹಾಗೂ ಹಾಸನ ಜಿಲ್ಲೆಗಳ ಕೆಲವು ಭಾಗಗಳಲ್ಲಿನ ಪೂರ್ವ ಖಾರೀಫ಼ಿ ಬೆಳೆಯುರ ಪೂರ್ವ ಮುಂಗಾರು ಮಳೆಯನ್ನು ಅವಲಂಭಿಸಿರುತ್ತವೆ. ರಾಜ್ಯದ ವಾರ್ಷಿಕ ಮಳೆಯ ಪ್ರಮಾಣವು ೧,೧೩೯ ಮಿಲಿ ಮೀಟರಗಳಾಗಿದ್ದು, ಇದರ ಪೈಕಿ ಶೇಕಡ ೧೨ ರಷ್ಟು ಅಂದರೆ ೧೩೮ ಮಿ.ಮೀ.ನಷ್ಟು ಮಳೆಯು ಪೂರ್ವ ಮುಂಗಾರಿನ ಸಮಯದಲ್ಲಿ ಬರಬೇಕಾಗಿತ್ತು. (ಜನವರಿಯಿಂದ ಮೇ ವರೆಗೆ). ಆದರೆ ಈ ವರ್ಷದಲ್ಲಿ ವಾಸ್ತವವಾಗಿ ಕೇವಲ ೧೧೯ ಮಿ.ಮೀ.ನಷ್ಟು ಮಳೆ ಬಿದ್ದಿದ್ದು, ಇದು ಸಾಮಾನ್ಯ, ಪೂರ್ವ ಮುಂಗಾರಿನ ಶೇಕಡ ೮೬ ರಷ್ಟು ಆಗುತ್ತದೆ.

೩. ದಿನಾಂಕ ೮ನೇ ಜುಲೈ, ೧೯೯೫ರವರೆಗಿನ ಮಾಹಿತಿಯ ಪ್ರಕಾರ ರಾಜ್ಯದ ೧೦೬ ತಾಲ್ಲೂಕುಗಳು, ಅಂದರೆ, ಬೆಂಗಳೂರು ವಿಭಾಗದ-೩೨, ಮೈಸೂರು ವಿಭಾಗದ-೨೪. ಗುಲ್ಬರ್ಗಾ ವಿಭಾಗದ ೧೪. ಮತ್ತು ಬೆಳಗಾಂ ವಿಭಾಗದ-೩೬ ತಾಲ್ಲೂಕುಗಳ್ಲಿ ಕಡಿಮೆ ಮಳೆ ಬಿದ್ದಿರುತ್ತದೆ. ಮುಂಗಾರು ಪ್ರಾರಂಭವಾದ ೫ ವಾರಗಳ ನಂತರದ ಸಮೀಕ್ಷೆಯಂತೆ ರಾಜ್ಯದ ೫೦ ತಾಲ್ಲೂಕುಗಳಲ್ಲಿ ೪ ರಿಂದ ೫ ವಾರಗಳು ಒಣಹವೆ (ಅಂದರೆ ೧೦ ಮೀ.ಮೀ.ಗಿಂತ ಕಡಿಮೆ ಮಳೆ) ಮತ್ತು ೧೦೮ ತಾಲ್ಲೂಕುಗಳಲ್ಲಿ ೪ ವಾರಗಳು ಒಣ ಹವೆ ಇದ್ದಿತು.

೪. ಕಡಿಮೆ ಮಳೆ ಬಿದ್ದ ೧೦೬ ತಾಲ್ಲೂಕುಗಳ ಪೈಕಿ ೪೧ ತಾಲ್ಲೂಕುಗಳಲ್ಲಿ ತೀವ್ರ ಕಡಿಮೆ ಮಳೆ ಅಂದರೆ, ಶೇಕಡ ೪೦ ಕ್ಕಿಂತ ಕಡಿಮೆ ಮಳೆ ಬಿದ್ದಿದ್ದು, ಬೆಳಗಾಂ ವಿಭಾಗದಲ್ಲಿ ಹೆಚ್ಚಿನ, ಅಂದರೆ ೧೮ ತಾಲ್ಲೂಕುಗಳು ತೀವ್ರ ತೊಂದರೆಗೆ ಒಳಗಾಗಿದ್ದು, ಬೆಂಗಳೂರು ವಿಭಾಗದ ೧೪, ಮೈಸೂರು

ವಿಭಾಗದ ೬ ಮತ್ತು ಗುಲ್ಬರ್ಗಾ ವಿಭಾಗದ ೩ ತಾಲ್ಲೂಕುಗಳಲ್ಲಿ ತೀವ್ರ ಕಡಿಮೆ ಮಳೆ ಬಿದ್ದಿರುತ್ತದೆ. ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಮತ್ತು ಬೆಳಗಾಂ ವಿಭಾಗದ ತಲಾ ೧೮ ತಾಲ್ಲೂಕುಗಳಲ್ಲಿ ಸಾಧಾರಣ, ಅಂದರೆ ಶೇಕಡ ೪೦ ರಿಂದ ೮೦ ರಷ್ಟು ಮಳೆ ಬಿದ್ದಿರುತ್ತದೆ.

೫. ಮಳೆಯ ಕೊರತೆಯಿಂದಾಗಿ ಕೃಷಿ ಚಟುವಟಿಕೆಗಳಿಗೆ ತೀವ್ರ ಹಿನ್ನೆಡೆಯುಂಟಾಗಿದ್ದು, ಬಹಳಷ್ಟು ತಾಲ್ಲೂಕುಗಳಲ್ಲಿ ಬಿತ್ತನೆಕಾರ್ಯವನ್ನು ಕೈಗೊಳ್ಳಾಲಾಗಿರಲಿಲ್ಲ. ದಿನಾಂಕ ೮ನೇ ಜುಲೈ ೧೯೯೫ರ ವರೆಗಿನ ವರದಿಯಂತೆ, ರಾಜ್ಯದ ಸಾಮಾನ್ಯ ಒಟ್ಟು ಖಾರೀಫ್ ಕ್ಷೇತ್ರವಾದ ೭೧.೪೯ ಲಕ್ಷ ಹೆಕ್ಟೇರ್ ನ ಪೈಕಿ ಕೇವಲ ೧೫.೦೩ ಲಕ್ಷ ಹೆಕ್ಟೇರ್ ನಲ್ಲಿ ಮಾತ್ರ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಅಂದರೆ, ಕೇವಲ ಶೇಕಡ ೨೧ ರಷ್ಟು ಸಾಮಾನ್ಯ ಕೃಷಿ ಕ್ಷೇತ್ರದಲ್ಲಿ ೫.೦೪ ಲಕ್ಷ ಹೆಕ್ಟೇರ್ ಪ್ರದೇಶವು ಒಣ ಹವೆಯಿಂದಾಗಿ ಹಾನಿಗೋಂಡಿದೆಯೆಂದು ಕಂಡು ಬಂದಿತ್ತು. ಕಡಿಮೆ ಮಳೆ ಬಿದ್ದಿರುವ ಎಲ್ಲಾ ತಾಲ್ಲೂಕುಗಳಲ್ಲಿ ಹಾಗೂ ಇನ್ನಿತರೆ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿತ್ತು. ರಾಜ್ಯದ ೧೨೧ ಪಟ್ಟಣಗಳು ಮತ್ತು ೮,೦೩೭ ಗ್ರಾಮಗಳು, ಕುಡಿಯುವ ನೀರಿನ ತೊಂದರೆಯನ್ನು ಎದರುರಿಸುತ್ತಿವೆಯೆಂದು ಅಂದಾಜು ಮಾಡಲಾಗಿತ್ತು. ಚಿತ್ರದುರ್ಗ, ಹಾಸನ, ಮಂಡ್ಯ,ಕೋಲಾರ, ಬಳ್ಳಾರಿ, ಗುಲ್ಬರ್ಗಾ, ರಾಯಚೂರು ಮತ್ತು ಧಾರವಾಡದಂತಹ ಜಿಲ್ಲೆಗಳಲ್ಲಿ ಮೇವಿನ ಅಭಾವವಿರುವುದಾಗಿ ತಿಳಿದು ಬಂದಿತ್ತು.

೬. ಸಾಮಾನ್ಯ ಕೃಷಿ ಚಟುವಟಿಕೆಗಳಲ್ಲಿನ ಹಿನ್ನಲೆಯಿಂದಾಗಿಕೃಷಿ ಕಾರ್ಮಿಕರಿಗೆ ಉದ್ಯೋಗಾವಕಾಶದ ಅಭಾವ ಉಂಟಾಗಿತ್ತು. ಈ ಅಭಾವ ಪರಿಸ್ಥಿತಿಯು ಹೀಗೆಯೇ ಮುಂದುವರಿದಲ್ಲಿ ಸುಮಾರು ೪೦ ಲಕ್ಷದಷ್ಟು ಜನರು ತೊಂದರೆಗೊಳಗಾಗಬಹುದೆಂದು ಅಂದಾಜು ಮಾಡಲಾಗಿತ್ತು.

೭. ರಾಜ್ಯದಲ್ಲಿ ದಿನಾಂಕ ೧೦ನೇಯ ಜುಲೈ, ೧೯೯೫ರವರೆಗಿದ್ದ ಋತುಮಾನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಮನವಿ ಪತ್ರವೊಂದನ್ನು ತಯಾರಿಸಲಾಯಿತು. ಈ ಮನವಿ ಪತ್ರದ ಅಭಾವ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಕಾರ್ಯಯೋಜನೆಯನ್ನು ಒಳಗೊಂಡಿದ್ದು, ಸಾಮಾನ್ಯವಾಗಿ ತೀವ್ರ ತೊಂದರೆಗೊಳಗಾಗುವ ದುರ್ಬಲವರ್ಗದವರ ಸಂಕಷ್ಟವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ತಯಾರಾಗಿದ್ದು, ಈ ಮುಂದಿನ ಅಂಶಗಳನ್ನು ಒಳಗೊಂಡಿತ್ತು.

೧) ಉದ್ಯೋಗ ವಂಚಿತರಾದ ಕೃಷಿ ಕಾರ್ಮಿಕರಿಗಾಗಿ ಸಣ್ಣ ಮತ್ತು
ಅತೀ ಸಣ್ಣ ರೈತರುಗಳಿಗಾಗಿ ಪೂರಕ ಉದ್ಯೋಗ ಸೃಜನೆ ಯೋಜನೆ. ಇದು ಸಾಮಾನ್ಯ ಉದ್ಯೋಗ ಸೃಜನೆ ಯೋಜನೆಗಳಾದ ಜವಾಹರ್ ರೋಜ್‌ಗಾರ್ ಯೋಜನೆ ಅಡಿಷನಲ್ ಜವಾಹರ್ ರೋಜಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ ಇತ್ಯಾದಿಗಳೊಂದಿಗೆ ಪೂರಕವಾಗಿದೆ. ಈ ಪೂರಕ ಯೋಜನೆಗೆ ೯೪.೫೬ ಕೋಟಿ ರೂ.ಗಳ ಅಗತ್ಯವಿದೆಯೆಂದು ಅಂದಾಜಿಸಲಾಗಿತ್ತು.

೨) ಕುಡಿಯುವ ನೀರಿನ ಸಮಸ್ಯೆಯಿರುವ ತಾಲ್ಲೂಕು ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ೫೪.೩೬ ಕೋಟಿ ರೂ.ಗಳು.

೩) ಮೇವು ಹಾಗೂ ಗೋಶಾಲೆಗಳಿಗಾಗಿ ೧೫.೨೦ ಕೋಟಿ ರೂ.ಗಳು.

೪) ಮಳೆಯ ಕೊರತೆಯಿಂದಾಗಿ ಬಿತ್ತನೆ ಕೈಗೊಳ್ಳಲಸಮರ್ಥವಾದ ಸಣ್ಣ ಮತ್ತು ಅತೀಸಣ್ಣ ರೈತರುಗಳಿಗೆ ಕೃಷಿ ಚೀಲಗಳನ್ನು ನೀಡಲು ೫೫.೯೯ ಕೋಟಿ.ರೂ.ಗಳು.

೫) ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯಕರಣಕ್ಕಾಗಿ ೩.೧೭ ಕೋಟಿ ರೂ.ಗಳು.

೬) ಗರ್ಭಿಣಿ ತಾಯಂದಿರಿಗೆ ಮತ್ತು ಮಕ್ಕಳಿಗಾಗಿ, ಪೌಷ್ಟಿಕ ಆಹಾರ ಯೋಜನೆಗೆ ೩೨.೯೫ ಕೋಟಿ ರೂ.ಗಳು.

೮. ಮೇಲ್ಕಂಡ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ, ಒಟ್ಟು ೨೫೬.೨೩ ಕೋಟಿ ರೂ.ಗಳನ್ನು ನೀಡುವಂತೆ ಹಾಗೂ ತಕ್ಷಣವೇ ೧೦೦.೦೦ ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿ ಸದರಿ ಮನವಿ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

೯. ಕೇಂದ್ರ ಸರ್ಕಾರದ ಸಹಾಯಕ್ಕೆ ಕಾಯದೆ, ಬರಪೀಡಿತ ಜನರ ಸಂಕಷ್ಟವನ್ನು ನಿವಾರಿಸುವ ಸಲುವಾಗಿ ರಾಜ್ಯ ಸರ್ಕಾರವು ಸಾಧ್ಯವಾದ ಹಲವಾರು ಕ್ರಮಗಳನ್ನು ಕೈಗೊಂಡಿದೆ. ರಾಜ್ಯ ಸರ್ಕಾರವು ದಿನಾಂಕ ೧೯-೮-೧೯೯೫ರವರೆಗೆ, ಪ್ರಸ್ತುತ ಸಾಲಿನಲ್ಲಿ ವಿವಿಧ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಸರ್ಕಾರವು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿ.ಯಿಂದ ೨೦೦೬.೮೪ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಅವಶ್ಯವೆಂದು ಕಂಡುಬಂದಲ್ಲಿ ಲಭ್ಯವಿರುವ ಮೊತ್ತವನ್ನು ಬರ ಪರಿಹಾರ ಕಾರ್ಯಗಳಿಗೆ ಮರು ವಿಂಗಡಣೆ ಮಾಡಿಕೊಳ್ಳಲು ಅನುಮತಿಯನ್ನೂ ಸಹ ನೀಡಲಾಗಿದೆ. ಈ ಮೇಲಿನ ಬಿಡುಗಡೆಯಲ್ಲಿ ಬರ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಕುಡಿಯುವ ನೀರಿನ ಪೂರೈಕೆಗೆ ರೂ. ೧೨೬೫.೦೦ ಲಕ್ಷಗಳು, ಉದ್ಯೋಗ ಸೃಜನೆಗೆ ರೂ. ೩೫೨.೫೦ ಲಕ್ಷಗಳು ಹಾಗೂ ಮೇವಿನ ಪೂರೈಕೆಗಾಗಿ ರೂ. ೧೦೦.೦೦ ಲಕ್ಷಗಳನ್ನು ಒದಗಿಸಲಾಗಿದೆ.(ವಿವರಗಳನ್ನು ಅನುಬಂಧ -೧ ರಲ್ಲಿ ನೀಡಿದೆ.)

೧೦. ದಿನಾಂಕ ೩೧-೭-೧೯೯೫ ರವರೆಗೆ ಅನುಷ್ಠಾನಾಧಿಕಾರಿಗಳಿಂದ ಬಂದಿರುವ ವರದಿಯು ಪ್ರಕಾರ ರೂ. ೧೦೪೩.೪೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ(ವಿವರವನ್ನು ಅನುಬಂಧ-೨ ರಲ್ಲಿ ನೀಡಿದೆ.) ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ೧೯೪೨ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಂಡಿದ್ದು,೧೫೧೭, ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉದ್ಯೋಗ ಸೃಜನಿಯಡಿಯಲ್ಲಿ ೭೩ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ೬೮ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಹಾಸನ ಕೊಡಗು, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮೇವು ಸರಬರಾಜಿಗಾಗಿ ರೂ.೫.೦೯ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

೧೧. ಇಷ್ಟಲ್ಲದೆ, ಜವಾಹರ್ ರೋಜಗಾರ್, ಅಡಿಷನಲ್ ಜವಾಹರ್ ರೋಜಗಾರ್ ಯೋಜನೆಗಳು, ಉದ್ಯೋಗ ಭರವಸೆ ಯೋಜನೆ, ಇತ್ಯಾದಿ ಯೋಜನೆಗಳಡಿಯಲ್ಲಿ ಸಂತ್ರಸ್ಥರಿಗೆ ಉದ್ಯೋಗವನ್ನು ಒದಗಿಸಲಾಗುತ್ತಿದ್ದು, ಕುಡಿಯುವ ನೀರು ಪೂರೈಕೆ ಹಾಗೂ ಉದ್ಯೋಗ ನೀಡಿಕೆಗಾಗಿ ಪ್ರಸಕ್ತ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುದಾನವನ್ನು ಬಿಡುಗಡೆ ಮಾಡಿದ್ದು, ವಿವರ ಕೆಳಕಂಡಂತಿದೆ.

೧. ಕುಡಿಯುವ ನೀರಿನ ಸರಬರಾಜು ರೂ.೪೨.೮೦ ಕೋಟಿಗಳು
೨. ಉದ್ಯೋಗ ಸೃಜನೆ ಕಾರ್ಯಕ್ರಮ ರೂ.೧೧೨.೪೩ ಕೋಟಿಗಳು

ಇದ್ದಲ್ಲದೇ ೧.೪.೯೫ಕ್ಕೆ ಜಿಲ್ಲಾ ಪಂಚಾಯತ್ ಗಳಲ್ಲಿ ಪ್ರಾರಂಭ ಶಿಲ್ಕು ರೂ. ೬೨.೨೭ ಕೋಟಿಗಳೂ ಸೇರಿ ಒಟ್ಟು ೧೭೪.೭೦ ಕೋಟಿ ರೂ.ಗಳು ಲಭ್ಯವಿತ್ತು. ತುರ್ತು ಸಂದರ್ಭದಲ್ಲಿ ಅವಶ್ಯವೆನಿಸಿದಲ್ಲಿ ಯೋಜನಾ ಕಾರ್ಯಕ್ರಮಗಳನ್ನು ಮಾರ್ಪಡಿಸಿಕೊಂಡು ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಲು ಜಿಲ್ಲಾ ಆಡಳಿತಕ್ಕೆ ಅನುಮತಿಯನ್ನು ನೀಡಲಾಗಿದೆ. ಜುಲೈ, ೩೧-೧೯೯೫ರ ವರೆಗಿನ ಪ್ರಗತಿ ವರದಿಯ ಪ್ರಕಾರ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ೧೯.೯೩ ಕೋಟಿ ರೂ.ಗಳನ್ನು ವೆಚ್ಚ ಮಾಡಿ ೪೨.೦೪ ಲಕ್ಷ ಮಾನವ ದಿನಗಳನ್ನು, ಜವಹಾರ್ ರೋಜಗಾರ್ ಯೋಜನೆ ೧ನೇ ವಾಹಿನಿಯಡಿಯಲ್ಲಿ ೧೯.೪೮ ಕೋಟಿ ರೂ.ಗಳನ್ನು ವೆಚ್ಚ ಮಾಡಿ ೪೨.೧೦ ಲಕ್ಷ ಮಾನವ ದಿನಗಳನ್ನು ಮತ್ತು ಜವಹಾರ್ ರೋಜಗಾರ್ ಯೋಜನೆ ೨ನೇ ವಾಹಿನಿಯಡಿಯಲ್ಲಿ ೮.೨೩ ಕೋಟಿ ರೂ.ಗಳನ್ನು ಖರ್ಚು ಮಾಡಿ ೧೭.೬೬ ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ಒಟ್ಟಿನಲ್ಲಿ, ಉದ್ಯೋಗ ಸೃಜನೆಗಾಗಿ ೪೭.೬೪ ಕೋಟಿ ರೂ.ಗಳನ್ನು ವೆಚ್ಚ ಮಾಡಿ ೧೦೨.೭೦ ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ಜುಲೈ ಅಂತ್ಯದವರೆಗೆ ಕುಡಿಯುವ ನೀರಿಗಾಗಿ ೨೨.೨೪ ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗಿದೆ.

೧೨. ಉದ್ಯೋಗ ಒದಗಿಸುವ ಇತರೆ ಪ್ರಮುಖ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಅರಣ್ಯ ಇಲಾಖೆ ಮತ್ತು ನೀರಾವರಿ ಇಲಾಖೆಗಳಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣ ಜುಲೈ ಅಂತ್ಯದವರೆಗೆ ವೆಚ್ಚ ಮಾಡಿರುವ ಹಣ ಮತ್ತು ಆದರಿಂದ ಮಾನವ ದಿನಗಳನ್ನು ಸೃಜನೆ ಮಾಡಿರುವ ವಿವರಗಳು ಕೆಳಕಂಡಂತಿವೆ.

	ಇಲಾಖೆ	*ಆಯವ್ಯಯದಲ್ಲಿ ಒದಗಿಸಿದ ಹಣ*	*೩೧-೭-೯೫ಕ್ಕೆ ವೆಚ್ಚ*	*ಉತ್ಪಾದಿಸಿದ ಮಾನವ ದಿನಗಳು (ಲಕ್ಷಗಳಲ್ಲಿ)*
೧	ಲೋಕೋಪಯೋಗಿ ಇಲಾಖೆ-			
	ರಸ್ತೆ			
	ಸೇತುವೆ	೧೯.೨೦	೧೦.೧೮	೮.೧೪
	ಕಟ್ಟಡಗಳು	೪೬.೧೩	೯.೬೮	೫.೦೩
೨	ನೀರಾವರಿ ಇಲಾಖೆ-			
	ಸಣ್ಣನೀರಾವರಿ	೨೫.೩೫	೧೧.೨೨	೪.೩೧
	ಮಧ್ಯಮ ಮತ್ತು ಭಾರಿ ನೀರಾವರಿ	೭೬೭.೫೦	೯೬.೯೭	೬೨.೦೦
	ಜೂನ್ ಅಂತ್ಯದವರೆಗೆ)			
೩	ಅರಣ್ಯ ಇಲಾಖೆ	೧೦೧.೫೮	೧೯.೯೮	೩೫.೩೦

೧೩. ದಿನಾಂಕ ೧೯.೮.೧೯೯೫ ರವರೆಗಿನ ವರದಿಯ ಪ್ರಕಾರ ರಾಜ್ಯದ ೬೫ ತಾಲ್ಲೂಕುಗಳಲ್ಲಿ ಕಡಿಮೆ ಹಾಗೂ ೫ ತಾಲ್ಲೂಕುಗಳಲ್ಲಿ ಅತೀ ಕಡಿಮೆ ಮಳೆ ಬಿದ್ದಿರುತ್ತದೆ. ಈ ಐದು ತಾಲ್ಲೂಕುಗಳು-ಚಿತ್ರದುರ್ಗ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿವೆ.(ವಿವರ ಅನುಬಂಧ-೩ ರಲ್ಲಿ ನೀಡಿದೆ.)

೧೪. ಅಗಸ್ಟ ೧೫ ರವರೆಗಿನ ಮಾಹಿತಿಯಂತೆ ಉತ್ತಮಗೊಂಡ ಮುಂಗಾರಿನಿಂದಾಗಿ ಕೃಷಿ ಚಟುವಟಿಕೆಗಳು ಚೇತರಿಸಿಕೊಂಡಿದ್ದು, ೫೬.೬೦ ಲಕ್ಷ ಹೆಕ್ಟೇರ್ ಗಳಲ್ಲಿ ಬಿತ್ತನೆ ಕಾರ್ಯ ಕೈಗೊಳ್ಳಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ೪೮.೧೧ ಲಕ್ಷ ಹೆಕ್ಟೇರ್ ನಲ್ಲಿ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗಿತ್ತು (ವಿವರಗಳನ್ನು ಅನುಬಂಧ-೪ರಲ್ಲಿ ನೀಡಿದೆ).

೧೫. ಇದಲ್ಲದೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಂಸತ್ ಸದಸ್ಯರು, ಶಾಸಕರು ಮತ್ತು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರಗಳನ್ನು ಒಳಗೊಂಡಂತೆ ಜಿಲ್ಲಾ ಮಟ್ಟದ ಅಭಾವ ಪರಿಹಾರ ಪರಿವೀಕ್ಷಣಾ ಸಮಿತಿಯನ್ನು ಮತ್ತು ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮೇಲ್ಮನೆಯ ಸದಸ್ಯರನ್ನೂ ಒಳಗೊಂಡಂತೆ ತಾಲ್ಲೂಕು ಮಟ್ಟದ ಅಭಾವ ಪರಿಹಾರ ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ಸಮಿತಿಗಳನ್ನು ರಚಿಸಿದ್ದು, ಅವುಗಳು ಕಾರ್ಯೋನ್ಮುಖವಾಗಿವೆ.

೧೬. ಹಾಲಿ ಪರಿಸ್ಥಿತಿಯಲ್ಲಿ ಚೇತರಿಕೆಯುಂಟಾಗಿದ್ದರೂ ಸಹ, ಸರ್ಕಾರವು ಋತುಮಾನ ಪರಿಸ್ಥಿತಿಯ ಬಗ್ಗೆ ತೀವ್ರ ಎಚ್ಚರಿಕೆಯನ್ನು ವಹಿಸಿದ್ದು, ಯಾವುದೇ ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಎದುರಿಸಿ ಸಂಕಷ್ಟ ಕ್ಕೊಳಗಾಗುವ ಜನರಿಗೆ ನೆರವು ಒದಗಿಸಲು ಸನ್ನದ್ಧವಾಗಿದೆ.

ANNEXURE-1

STATEMENT SHOWING THE FUNDS RELEASED UNDER "CALAMITY RELIEF FUND" FOR THE YEAR 1995-96 [FROM 01.04.1995 TO 19.08.1995] RUPEES IN LAKHS

SL NO.	NAME OF THE DISTRICT	BALANCE AVAILABLE WITH THE DC's AS ON 01.04.95	RELEASES										TOTAL [4TO13]	GRAND TOTAL [3+14]
			ACCDTL FIRE	REPAIRS TO DAMAGED MIT's CANALS & ROADS	CROP COMPENSATION	FLOOD RELIEF	DRINKING WATER SUPPLY	PUR-CHASE OF BOATS	EMP GEN	FODDER SUPPLY	EARTH QUAKE	ANTI SEA EROSION		
1	2	3	4	5	6	7	8	9	10	11	12	13	14	15
1.	BANGALORE[U]	26.99					10.00			5.00			15.00	41.99[1]
2.	BANGALORE[R]	64.07	10.00				35.00			5.00			50.00	114.07[2]
3.	KOLAR	131.75					80.00			5.00			85.00	216.75[3]
4.	TUMKUR	26.35					65.00			5.00			70.00	96.35[4]
5.	CHITRADURGA	104.94					105.00			5.00			110.00	214.94[5]
6.	SHIMOGA	77.61			45.00	45.00	75.00		90.00	5.00			260.00	337.61[6]
7.	MYSORE	129.50					75.00	2.00	12.50	5.00			94.50	224.10[7]
8.	MANDYA	64.32					30.00		50.00	5.00			85.00	149.32[8]
9.	CHIKKAMAGALUR	1.97	3.00	7.83			40.00			5.00			55.83	57.80[9]
10.	HASSAN	1.83	5.00				70.00	50.00		5.00			130.00	131.83[10]
11.	KODAGU	37.36		10.00			25.00	2.00		5.00			42.00	79.36[11]
12.	DA. KANNADA	12.06	15.00				20.00	45.00	2.00	5.00	—	5.00	92.00	104.06[12]
13.	GULBARGA	91.87	10.00	5.00	—		60.00	2.00	25.00	5.00			107.00	198.87[13]
14.	BIDAR	45.53	15.00				60.00			5.00			80.00	125.53 [14]
15.	RAICHUR	262.55					75.00	2.00	12.50	5.00			94.50	357.05[15]
16.	BELLARY	19.58	10.00				50.00	2.00		5.00			67.00	86.58[16]
17.	BELGAUM	200.00		2.99			125.00	2.00	37.50	5.00			172.49	372.49[17]
18.	BIJAPUR	266.23	5.00			3.02	75.00			5.00	1.36		89.38	355.58[18]
19.	DHARWAD	277.71	10.00			15.14	105.00	2.00		5.00			137.14	414.85[19]
20.	UT. KANNADA	70.11				10.00	60.00		75.00	5.00		20.00	170.00	240.11[20]
	TOTAL	**1912.40**	**83.00**	**25.82**	**45.00**	**93.16**	**1265.00**	**16.00**	**352.50**	**100.0**	**1.36**	**25.00**	**2006.84**	**3919.24**

Excluding diversion of Rs. 52.58 towards D.W. & Rs. 5.55 towards Fodder from Flood Relief. Excluding diversion of Rs. 34.00 towards D.W from Flood Relief.

ANNEXURE - 2

STATEMENT SHOWING THE UTILISATION OF FUNDS UNDER "CALAMITY RELIEF FUND" DURING 1995-96 (FROM 1.4.1995 TO 30.7.1995)

(Rs. in Lakhs)

Sl. No.	Name of the District	Accidental Fire	Flood Relief	Drinking Water	Emp. Gen.	Fodder supply	Earth-Quake	Total Expr.	Total Funds released the year with O.B.	Balance No. with D.Cs as on 1.8.1995 (Col.10-9)
1	Bangalore (U)	0.30	0.03	-	-	-	-	0.33	41.99	41.66
2	Bangalore (R)	-	-	9.87	-	-	-	9.87	114.07	104.20
3	Kolar	5.16	47.84	30.00	1.08	-	-	84.08	216.75	132.67
4	Tumkur	2.75	3.00	14.22	1.25	1.50	-	22.72	96.35	73.63
5	Chitradurga	4.50	—	99.37	—	0.45	—	104.32	214.94	110.62
6	Shimoga	1.84	89.70	7.04	-	-	-	98.58	337.61	239.03
7	Mysore	0.54	15.57	4.59	-	-	-	20.70	224.10	203.40
8	Mandya	0.88	3.11	0.92	—	—	—	4.91	149.32	144.41
9	Chikkamagalur	0.53	36.79	15.18	-	0.92	—	53.42	57.80	4.38
10	Hassan	4.70	—	—	50.00	0.02	—	54.72	131.83	77.11
11	Kodagu	0.18	9.41	3.73	-	1.35	-	14.67	79.36	64.69
12	Da.Kannada	10.27	19.02	0.30	-	-	-	29.59	104.06	74.47
13	Bidar	4.33	0.50	67.58	—	—	—	72.41	125.53	53.12
14	Gulbarga	3.45	1.00	47.03	-	-	-	51.48	198.87	147.39
15	Raichur	2.21	28.99	53.86	5.00	0.35	—	90.41	357.05	266.64
16	Bellary	12.20	-	8.40	-	0.50	-	21.10	86.58	65.48
17	Bijapur	4.38	71.07	33.82	-	-	40.43	149.70	355.58	205.88
18	Belgaum	8.48	9.62	—	3.65	—	—	21.75	372.49	350.74
19	Dharwad	3.97	36.08	48.67	-	-	-	88.72	414.85	326.13
20	Uttara Kannada	0.11	10.72	18.60	20.50	—	—	49.93	240.11	190.18
	Total	**70.78**	**382.45**	**463.18**	**81.48**	**5.09**	**40.43**	**1043.41**	**3919.24**	**2875.83**

22TH AUG 1995

ANNEXURE - 3
LIST OF TALUKS WHICH HAVE RECEIVED DEFICIT RAINFALL FROM 1.6.95 TO 10.8.95

Taluk

Deficient	*Scanty*	*Deficient*	*Scanty*
Bangalore (U) District		**Bangalore (R) District**	
1. Anekal		1. Magadi	
		2. Nelamangala	
Kolar District		**Chitradurga District**	
1. Chikballapur		1. Challakere	1. Hiriyur
2. Kolar		2. Davangere	
3. Malur		3. Harihar	
4. Sidlaghatta		4. Holalkere	
		5. Jagalur	
Shimoga District		**Mysore District**	
1. Bhadravathi		1. Gundlupet	
2. Honnali		2. Hunsur	
3. Sagar		3. Yelandur	
4. Shikaripur			
5. Shimoga			
6. Sorab			
7. Tirthahalli			
Mandya District		**Hassan District**	
1. Malavalki		1. Arkalgud	
2. Nagamangala		2. Belur	
		3. Hassan	
		4. Holenarasipur	
Chickmagalur District		**Kodagu District**	
1. Koppa		1. Madikere	
2. Mudigere		2. Somwarpet	
3. Narasimharajapur		3. Virajpet	
4. Tarikere			
Bellary District		**Raichur District**	
1. Siruguppa		1. Kushtagi	
		2. Sindhanur	
Gulbarga District		**Belgaum District**	
1. afzalpur		1. Athani	1. Gokak
2. Gulbarga		2. Bailhongal	
3. Shorapur		3. Belgaum	
		4. Chikkodi	
		5. Hukkeri	
		6. Khanapur	
		7. Raibagh	

Bijapur District
1. Bagalkote
2. Jamkhandi
3. Mudhol
4. Sindgi

Uttara Kannada District
1. Mundgod
2. Siddapur
3. Supa
4. Yellapur

Dharwar District
1. Gadag
2. Hanagal
3. Haveri
4. Hubli
5. Kalghatgi
6. Mundargi
7. Savanur
8. Shiggaon
9. Shirahatti

1. Byadgi
2. Hirekerur
3. Ranebennur

Total	**35**	**3**	**30**	**2**

Deficiet = 35 + 30 = 65 Scanty = 3 + 2 = 5

ANNEXURE- 4

STATEMENT SHOWING DISTRICT-WISE NORMAL KHARIFF AREA, AREA SOWN AS ON 15.8.1995, AREA NORMALLY SHOULD HAVE BEEN SOWN BY 15.8.1995, AREA SOWN ON 15.8.1994 AND CORRESPONDING PERCENTAGE

Area in Lakh Hecs.

Sl. No	Name of the District	Normal Kharif Area	Area sown upto 15.8.95	% of col. 4 to col. 3	Area normally should have been sown by 15.8.96	% of col. 4 to Col6	Area sown as on 15.8.94	% of col. 8 to Col. 3	% of col. 8 to Col. 6
1	2	3	4	5	6	7	8	9	10
1	Bangalore (U)	0.80	0.59	73.8	0.49	120.4	0.57	71.3	116.3
2	Bangalore (R)	2.32	1.69	72.8	1.49	113.4	1.57	67.7	105.4
3	Kolar	2.70	2.56	94.8	2.09	112.5	2.00	74.1	95.7
4	Tumkur	4.70	4.07	86.6	3.15	129.2	3.15	67.0	100.0
5	Shimoga	2.95	2.62	88.8	2.68	97.8	2.56	86.8	95.5
7	Mysore	4.65	3.85	82.8	3.75	102.7	3.93	84.5	104.8
8	Mandya	2.20	1.42	64.5	1.13	125.7	0.64	29.1	56.6
9	Kodagu	0.46	0.34	73.9	0.34	100.0	0.28	60.9	82.4
10	Hassan	2.50	1.44	57.6	2.06	69.9	1.97	78.8	95.6
11	Chikkamagalur	1.75	1.42	81.1	1.39	102.2	1.42	81.1	102.2
12	Da. Kannada	1.02	0.97	95.1	1.01	96.0	0.93	91.2	92.1
13	Dharwad	6.70	4.39	65.5	6.48	67.7	5.43	81.0	83.8
14	Ut. Kannada	0.90	0.73	81.1	0.74	98.6	0.68	75.6	91.9
15	Belgaum	6.30	5.44	86.4	5.94	91.6	5.32	84.4	89.6
16	Bijapur	6.25	4.14	66.2	5.35	77.4	2.91	46.6	54.4
17	Raichur	5.85	4.63	79.1	4.81	96.3	2.53	43.2	52.6
18	Bellary	4.40	3.17	72.0	3.64	87.1	2.13	48.4	58.5
19	Gulbarga	6.85	6.38	93.1	6.20	102.9	2.80	40.9	45.2
20	Bidar	3.15	3.16	100.3	3.05	103.6	2.77	87.9	90.8
	State	**71.60**	**56.60**	**79.1**	**59.96**	**94.4**	**48.11**	**67.2**	**80.2**

ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ಮಾತನಾಡುವಾಗ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಆದರೆ ಮಾನ್ಯ ಕಂದಾಯ ಸಚಿವರು ಹೇಳಿಕೆ ಕೊಟ್ಟ ಮೇಲೆ ನಾನು ಪುನಃ ಮಾತನಾಡಬೇಕು ಎಂದು ಹೇಳಿ ಅಪೇಕ್ಷೆ ಪಟ್ಟಿದ್ದೆ. ಏಕೆಂದರೆ ತಾವು ಕೊಡತಕ್ಕ ಹೇಳಿಕೆ, ಬಹಳ ಸವಿಸ್ತಾರವಾಗಿ ಮತ್ತು ರಾಜ್ಯದ ಎಲ್ಲಾ ಭಾಗದಲ್ಲಿ ಇದ್ದಂತಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಈ ರಾಜ್ಯದ ಎಲ್ಲಾ ಏನು ಅವರು ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದಾರೆ, ಅದನ್ನು ಸಂಪೂರ್ಣವಾಗಿ ಮಾಹಿತಿಯನ್ನು ಪಡೆದುಕೊಂಡು ನಮಗೆ ಕೊಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅವರ ಹೇಳಿಕೆ ನೋಡಿದರೆ ಜುಲೈ ತಿಂಗಳಿನಲ್ಲಿ ಏನು ಕೇಂದ್ರ ಸರ್ಕಾರಕ್ಕೆ ಒಂದ್ಮುಟಿಈಜಾಫ್ಪ್ಪಿಓಘೌಓಖ್ದಓಒಟಿಜಟಓಟಿ ಒದು ಪುಸ್ತಕ ಕೊಟ್ಟಿದ್ದರು, ಮನವಿ ಕೊಟ್ಟಿದ್ದರು. ಆ ಮನವಿಯ ಸಾರಾಂಶ ಒಂದು ಪುಟ ಇದೆ. ಅಂದರೆ ಎಷ್ಟು ತಿಂಗಳುಗಳಲ್ಲಿ ಅಂದರೆ ೧೭೫ ತಾಲ್ಲೂಕುಗಳ ಪೈಕಿ ೧೦೬ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ. ಇದು ಸುಮಾರು ೪-೫ ತಿಂಗಳಿನಿಂದ ನಾವು ಕೇಳಿ ಬರುತ್ತಾ ಇದ್ದೇವೆ. ಆದರೆ, ಇವತ್ತು ಕೆಲವು ಭಾಗದಲ್ಲಿ ಮಳೆ ಬಂದು ಏನಾದರೂ ಪರಿಸ್ಥಿತಿ ಸುಧಾರಣೆ ಆಗಿದೆಯೋ? ಇಲ್ಲ ಎಂದರೆ ಈ ಪರಿಸ್ಥಿತಿ ೧೭೫ ತಾಲ್ಲೂಕುಗಳ ಪೈಕಿ ೧೦೬ ತಾಲ್ಲೂಕುಗಳು ಒಳಪಟ್ಟಿದ್ದೆಯೋ ಅಥವಾ ಇನ್ನು ಜಾಸ್ತಿಯಾಗಿದೆಯೋ? ಎನ್ನತಕ್ಕಂತಹ ಮಾಹಿತಿ ತೆಗೆದುಕೊಳ್ಳುವಷ್ಟು ಪುರುಸೊತ್ತು ಈ ಸರ್ಕಾರಕ್ಕೆ ಇಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಏಕೆಂದರೆ ನೀವು ಮೊದಲನೆಯ ಪುಟವನ್ನು ನೋಡಿದರೆ, ಮೆಮೋರಂಡಂನಲ್ಲಿರತಕ್ಕಂತಹ ಪ್ರಾರಂಭದ ಪುಟಗಳು ಏನಿದೆ ಅದರ ಮೇಲೆಯೇ ಚರ್ಚೆ ಹೆಚ್ಚು ಕಡಿಮೆ ಆಗಿದೆ. ಎರಡನೇಯದಾಗಿ ಅಂದರೆ ಎಷ್ಟರಮಟ್ಟಿಗೆ ಸರ್ಕಾರದವರು ಅಸಕ್ತಿಯನ್ನು ವಹಿಸಿದ್ದಾರೆ ಅನ್ನುವುದಕ್ಕೆ ಇದು ಒಂದು ಸ್ಪಷ್ಟವಾದಂತಹ ಉದಾಹರಣೆ. ಆಮೇಲೆ ಪ್ರಕಾಶರವರೂ ಕೂಡ ತಮ್ಮ ಪರವಾಗಿಯೇ ಮೇಲ್ಮನೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಂಪೂರ್ಣವಾದ ವರದಿಯನ್ನು ಕೂಡ ತರಿಸಿ ಓದಿದೆ. ಅವರು ಕೂಡ ೨೧ನೇ ತಾರೀಖು ಅಥವಾ ಹೋದ ಸದನ ಪ್ರಾರಂಭವಾದಾಗ ೧೦೬ ಎಂದು ಹೇಳಿದ್ದಾಗಿ ಕಾಣುತ್ತದೆ. ಅಂದರೆ ಇವತ್ತು ಸದನಕ್ಕೆ ಯಾವುದೇ ಹೇಳಿಕೆಯನ್ನು ಕೊಡಬೇಕಾದರೆ, ಇತ್ತೀಚಿನ ವರದಿಯನ್ನು ಕೊಟ್ಟರೆ, ಇವತ್ತಿನ ಪರಿಸ್ಥಿತಿ ಏನಿದೆ ಎಂದು ನಮಗೆ ತಿಳಿಸಿದರೆ, ನಮಗೆ ಏನು ಅನುಕೂಲವಾಗುತ್ತಿತ್ತು. ಎಂದರೆ ಇನ್ನು ಯಾವ ತಾಲ್ಲೂಕುಗಳಿಗೆ ಇನ್ನು ಹೆಚ್ಚಿನ ಒತ್ತನ್ನು ಕೊಡಬಹುದು. ಯಾವ ಜಿಲ್ಲೆಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಬಹುದು, ಯಾವ ತಾಲ್ಲೂಕುಗಳಲ್ಲಿ, ಕೆಲವು ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕಾದ ರಂತಹ ಪರಿಸ್ಥಿತಿ ಬರಬಹುದು, ಕೆಲವು ತಾಲ್ಲೂಕುಗಳಲ್ಲಿ ಎಂಪ್ಲಾಯಿಮೆಂಟಗೆ ಹೆಚ್ಚು ಒತ್ತು ಕೊಡತಕ್ಕಂತಹ ಪ್ರಸಂಗ ಬರಬಹುದು. ಕೆಲವು ಜಿಲ್ಲೆಗಳಲ್ಲಿ ಮೇವಿಗೆ ಹೆಚ್ಚು ಒತ್ತು ಕೊಡತಕ್ಕಂತಹ ಪ್ರಸಂಗ ಬರಬಹುದು.ಆದರೆ ಈ ಸ್ಟೇಟಮೆಂಟನಲ್ಲಿ ಯಾವುದೂ ಕೂಡ ವ್ಯವಸ್ಥಿತವಾಗಿ ಹೇಳಿಲ್ಲ. ಅಧ್ಯಕ್ಷರೇ, ಈ ಜುಲೈನಲ್ಲಿ ಸಬಮಿಟ್ ಮಾಡಿದಂತಹ ಮೆಮೋರಂಡಂನ ಒಂದು ಹೇಳಿಕೆಯ ಮೊದಲನೆಯ ಪುಟದಲ್ಲಿ ಇದ್ದರೆ, ಇನ್ನೊಂದು ಇದು ಕೂಡ ಅಷ್ಟೆ ೭೧.೪೮ಲಕ್ಷ ಹೆಕ್ಟೇರನಲ್ಲಿ ೧೫ಲಕ್ಷ ಹೆಕ್ಟೇರಗಳು

ಇದು ಎಲ್ಲಾ ಸೇರಿಸಿ ಅದಕ್ಕೆ ಇಷ್ಟೊಂದು ಗಂಭೀರವಾದಹತಹ ಪರಿಸ್ಥಿತಿ ಇದ್ದಮೇಲೆ, ಉಳಿದಂತಹ ಬರಗಾಲ ಬಿದ್ದಂತಹ ಪ್ರದೇಶದಲ್ಲಿ ಅಥವಾ ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಮಳೆಯಾಗಿದೆ, ಅಂತಹ ಕಡೆ ಬಿತ್ತನೆ ಮಾಡಲಿಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಅದು ಇದರಲ್ಲಿ ಇರಲಿಲ್ಲ. ಯಾವ ಮೆಜರ್ಸ್ ತೆಗೆದುಕೊಂಡಿದ್ದೀರಿ? ಈಗ ನೀವು ಹೇಳಿದ ಪ್ರಕಾರ ಸುಮಾರು ೭೯.೪೯ಲಕ್ಷ ಹೆಕ್ಟೇರಗಳ ಪೈಕಿ, ಕೇವಲ ೧೫.೦೩ ಲಕ್ಷ ಹೆಕ್ಟೇರನಲ್ಲಿ ಮಾತ್ರ ಬಿತ್ತನೆ ಕಾರ್ಯಕ್ರಮ ಕೈಗೊಳ್ಳಲಾಗಿದ್ದು, ಎಂದರೆ ಕೇವಲ ಶೇಕಡ ೨೧ರಷ್ಟು, ಇನ್ನು ಸುಮಾರು ೭೯ ಅಂದರೆ, ೮೦ ಪರ್ಸೆಂಟ್ ಭಾಗದಲ್ಲಿ ಬಿತ್ತನೆ ಮಾಡಲಿಕ್ಕೆ ಆಗಲಿ ಅಥವಾ ಬೇರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ ಎಷ್ಟರಮಟ್ಟಿಗೆ ಪರಿಸ್ಥಿತಿ ಸುಧಾರಣೆಯಾಗಿದೆ ಅಥವಾ ಇನ್ನು ವಿಕೋಪಕ್ಕೆ ಹೋಗಿದೆ ಎನ್ನತಕ್ಕದ್ದು ಇವತ್ತು ಬೇಕಾಗಿತ್ತು. ಈ ಅಂಕಿ ಸಂಖೆಗಳಿಗೆ ಮೆಮೋರಂಡಂ ಅಂಕಿ ಸಂಖ್ಯೆಗೆ ಮತ್ತು ಆ ಮೇಲ್ಮನೆಯಲ್ಲಿ ಮಾಡಿದಂತಹ, ತಮ್ಮ ಉತ್ತರಕ್ಕೆ ಹೋಲಿಸಿ ನೋಡಿದಾಗ, ಎಲ್ಲ ಒಂದೇ ಇದೆ ಸೈಕ್ಲೋಸ್ಟೈಲ್ ಕಾಪಿ ಎಂದು ಕಾಣುತ್ತದೆ. ಇದು ಸರಿಯಲ್ಲ ಮತ್ತು ಇದರಿಂದ ಸಮಸ್ಯೆ ಬಗೆಹರಿಸತ್ತೀರಿ ಎನ್ನತಕ್ಕಂತಹ ವಿಶ್ವಾಸ ಕೂಡ ನನಗೆ ಇಲ್ಲ. ಈಗ ನಾನು ಅಂಕಿ ಸಂಖ್ಯೆಗಳನ್ನು ನೋಡಿದೆ. ಮಾತನಾಡುವಾಗ ತಾವು ಏನು ಹೇಳಿದ್ದೀರಿ, ಹಳ್ಳಿಯಲ್ಲಿ ಉದ್ಯೋಗಾವಕಾಶ ಕೊಡಲಿಕ್ಕೆ, ಈ ಜವಾಹಾರ್ ರೋಜಗಾರ್ ಯೋಜನೆಯಲ್ಲಿ ಮತ್ತು ಉದ್ಯೋಗ ಭರವಸೆಯ ಯೋಜನೆಯಲ್ಲಿ ಮತ್ತು ಉಳಿದಂತಹ ತಾಲ್ಲೂಕು ಮತ್ತು ಪಂಚಾಯತನಲ್ಲಿ ಕೊಡತಕ್ಕಂತಹ ಹಣ ಇದನ್ನು ನೀವು ಉದ್ಯೋಗ ಜನರೇಷನಗಾಗಿ ಉಪಯೋಗ ಮಾಡಿದ್ದೇವೆಂದು ಹೇಳಿ, ಮಾನವ ದಿನ ಕೂಡ ತಾವು ಇದರಲ್ಲಿ ಲಕ್ಷಗಟ್ಟಲೆ ಕೊಟ್ಟಿದ್ದೀರಿ, ಹೌದೆ? ಆದರೆ ಎಷ್ಟು ಜನ ಸ್ವಾಮಿ? ತಾವೇ ಹೇಳಿದ ಹಾಗೆ, ೪೦ ಲಕ್ಷ ಜನರಿಗೆ ಉದ್ಯೋಗಾವಕಾಶ ಕೊಟ್ಟಿದ್ದೇವೆ ಎಂದು ತಾವೇ ಒಂದು ಕಡೆ ಹೇಳುತ್ತಾ ಇದ್ದೀರಿ. ಅಂದರೆ ೪೦ ಲಕ್ಷ ಜನರಿಗೆ ಉದ್ಯೋಗಾವಕಾಶ ಕೊಡಬೇಕಾದರೆ, ಕೇವಲ ನೀವು ನಿಮ್ಮ ನ್ಯಾಚುರಲ್ ಕ್ಯಾಲಮಿಟಿ ಫಂಡನ್ನು ನೀವು ೨೦ ಕೋಟಿ, ೨೫ ಕೋಟಿ ಬಿಡುಗಡೆ ಮಾಡಿದ್ದೀರಿ ಅಂದರೆ ಸಾಧ್ಯರೇ, ಟ್ಯಾಕಲ್ ಮಾಡಲಿಕ್ಕೆ, ಇದು ತಯಾರಿನ ಒಂದು ಎಂದು. ಎರಡನೆಯದಾಗಿ ಮಧ್ಯಮ ಮತ್ತು ಭಾರಿ ನೀರಾವರಿಗೆ ಬಡ್ಜಟನಲ್ಲಿರತಕ್ಕಂತಹ ಪ್ರಾವಿಷನ೭೬೭ ಕೋಟಿ, ಇಲ್ಲಿಯವರೆಗೆ ವೆಚ್ಚವಾಗಿರುವುದು ೯೬ ಕೋಟಿ, ಜೂನ್ ಅಂತ್ಯದವರೆಗೆ ಎಂದು ತೋರಿಸಿದ್ದೀರಿ.

೧೨.೩೦ ಪಿ.ಎಂ

ಸ್ವಾಮಿ, ೭೬೭ ಕೋಟಿ ರೂಪಾಯಿಗಳಿಗೆ ನಾವು ಓಟು ಮಾಡಿಲ್ಲ. ನಾವು ಒಪ್ಪಿಗೆ ಕೊಟ್ಟದ್ದುದು, ಕೇವಲ ೬ ತಿಂಗಳಿಗೆ ಮಾತ್ರ. ತಾವು ಖರ್ಚು ಮಾಡುವುದಕ್ಕೆ ತೆಗೆದುಕೊಂಡ ಷರವಾಗಿ ೭೬೭ ಕೋಟಿ ರೂಪಾಯಿಗಳಿಗೆ ಮಾತ್ರ. ಇದಕ್ಕಂತ ಜಾಸ್ತಿಯಂತೂ ಇಲ್ಲ. ಬಜೆಟ್ ಪ್ರಾವಿಷನನಲ್ಲಿ ಓಟ್ ಆನ್ ಅಕೌಂಟ್ ಮಾಡಿಕೊಂಡು ಹಣ ಕಡಿಮೆ ಇರುವಾಗ, ಇಲ್ಲಿ ಇಷ್ಟು ತೋರಿಸಿ ಖರ್ಚು ಮಾಡಿದ್ದುದು ೯೬ ಕೋಟಿ ರೂಪಾಯಿಗಳು. ೭೬೭ ಕೋಟಿ ರೂಪಾಯಿಗಳ ಪೈಕಿ ಕೂಡ ನಿಮ್ಮ ಕೆಲವು ಯುಕೆಪಿ. ಪ್ರದೇಶಗಳಲ್ಲಿ ೮೦೦ ಕೋಟಿ ತೋರಿಸಿದ್ದು ಜಲ ನಿಗಮದಿಂದ ಕೊಡುತ್ತೇವೆಂದು ಹೇಳಿದ್ದೀರಿ. ಇದನ್ನು ನೀವು ಯಾವ ರೀತಿಯಾಗಿ ಸಮರ್ಥನೆ ಮಾಡಿಕೊಳ್ಳುತ್ತೀರಿ? ಯಾವ ರೀತಿಯಾಗಿ ಹಣ ಖರ್ಚಾಗಿದೆ

ಎಂದು ತೋರಿಸಬೇಕು. ಸುಮ್ಮನೆ ಅಂಕಿ ಅಂಶ ಲೋಕೋಪಯೋಗಿ ಇಲಾಖೆಯವರು ಕೊಟ್ಟರು ಎಂದು ಲೋಕೋಪಯೋಗಿ, ಸಣ್ಣ ನೀರಾವರಿ, ಪಂಚಾಯತ್ ರಾಜ್ ಎಲ್ಲವನ್ನು ಕ್ರೋಢೀಕರಿಸಿ ನಮ್ಮ ಮುಂದೆ ಇಟ್ಟು ದೊಡ್ಡ ಫಿಗರ್ ನಮಗೆ ಕೊಟ್ಟು ಇಷ್ಟು ಹಣ ಖರ್ಚು ಮಾಡಿದ್ದೇವೆಂದು ಹೇಳಿದಿರಿ. ನೀವು ಎಲ್ಲಿ ಹೋದರೂ ನಿಮ್ಮ ಪ್ರಯತ್ನ ಅಂದರೆ ಬೇರೆ ಇಲಾಖೆಗಳಿಂದ ಹಣ ಕ್ರೋಢೀಕರಿಸಿ ಎಷ್ಟರಮಟ್ಟಿಗೆ ನೀವು ಖರ್ಚು ಮಾಡಿದ್ದೀರೆಂದು ಹೇಳಲಿಲ್ಲ. ನೀವು ಏನು ಹೇಳಿದ್ದೀರೆಂದರೆ ರೆಗ್ಯುಲರ್ ಫಂಡ್ಸ ಏನಿದೆ ಜಿಲ್ಲಾ ಪಂಚಾಯತಿಯಲ್ಲಿ, ತಾಲ್ಲೂಕು ಪಂಚಾಯಿತಿಯಲ್ಲಿ ಮತ್ತು ಮಂಡಲ ಪಂಚಾಯಿತಿಯಲ್ಲಿ, ತಾಲ್ಲೂಕು ಪಂಚಾಯಿತಿಯಲ್ಲಿ ಬರತಕ್ಕದ್ದು ಆ ಫಿಗರ್ಸ ಅನ್ನು ಇಲ್ಲಿ ಹೇಳಿದ್ದೀರಿ. ನೀವು ಕುಡಿಯುವ ನೀರಿಗಾಗಿ ೪೨.೮೦ ಕೋಟಿ ರೂಪಾಯಿ, ಉದ್ಯೋಗ ಕಾರ್ಯಕ್ರಮಕ್ಕೆ ೧೧೨ ಕೋಟಿ ರೂಪಾಯಿ ಎಂದೆಲ್ಲ ತೋರಿಸಿರುವುದು ಏನಿದೆ ಇದೆಲ್ಲ ರೊಟೀನ್ ವರ್ಕ್ಸ. ಮಾಡು ಅಂದರೂ ಖರ್ಚು ಮಾಡುತ್ತಾರೆ, ಬೇಡ ಅಂದರೂ ಖರ್ಚು ಮಾಡುತ್ತಾರೆ. ಎರಡನೆಯದಾಗಿ ಈ ಹಣ ಎಷ್ಟಿದ್ದರೂ ಇದರಲ್ಲಿ ಹೆಚ್ಚು ಹಣ ಖರ್ಚಾಗಿಲ್ಲ. ಏಕೆಂದರೆ ನಿಮ್ಮ ಆಕ್ಷನ್ ಪ್ಲಾನ್ಸ ಏನಿವೆ ಅವು ಮೊನ್ನೆ ಮೊನ್ನೆ ಅಪ್ರೂವ್ ಆಗಿ ಹೋಗಿವೆ. ಕೆಲವು ಕಡೆ ಒಂದು ತಿಂಗಳ ಹಿಂದೆ ಮತ್ತೆ ಕೆಲವು ಕಡೆ ೧೫ ದಿನಗಳ ಹಿಂದೆ ಪ್ರಾರಂಭವಾಗಿವೆ. ಅಂದಾಗ ಆ ಹಣ ಇವತ್ತಿನ ದಿವಸ ಖರ್ಚಾಗಿಲ್ಲ. ಅನೇಕ ಜಿಲ್ಲೆಗಳಲ್ಲಿ ನೀವು ಏನು ಇವತ್ತು ಎಂಪ್ಲಾಯಮೆಂಟ್ ಅಶ್ಯೂರೆನ್ಸ ಸ್ಕೀಂನಲ್ಲಿ ಹಣ ಬಿಡುಗಡೆ ಮಾಡಿದ್ದೀರಿ, ಆ ಬಿಡುಗಡೆ ಆದಂತ ಹಣವನ್ನು ಖರ್ಚು ಮಾಡಲಿಲ್ಲ. ನೀವು ಸ್ಪಷ್ಟವಾಗಿ ಹೇಳಬೇಕು. ಏಪ್ರಿಲನಿಂದ ಇಲ್ಲಿಯವರೆಗೆ ೪-೫ ತಿಂಗಳುಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ನಿಮ್ಮ ಅವಶ್ಯಕತೆಯನ್ನನುಸರಿಸಿ ಜಿಲ್ಲಾವಾರು ಎಷ್ಟು ಹಣ ಖರ್ಚಾಗಿದೆ ಅದರಿಂದ ಎಷ್ಟು ಎಂಪ್ಲಾಯಮೆಂಟ್ ಜನರೇಷನ್ ಆಗಿದೆ? ಆ ಜಿಲ್ಲೆಯಲ್ಲಿ ಎರಡು ಲಕ್ಷ ಕೂಲಿಗಾರರು ಇದ್ದಾರೆಯೇ ಎಂದು ತಿಳಿದುಕೊಳ್ಳಿ. ಎರಡು ಲಕ್ಷ ಸ್ಮಾಲ್ ಅಂಡ್ ಮಾರ್ಜಿನಲ್ ಅಗ್ರಿಕಲ್ಚರಲ್ ಲೇಬರರ್ಸಗೆ ಎಷ್ಟು ಹಮ ಖರ್ಚು ಮಾಡಿದ್ದೀರಿ, ಅವರು ಎಷ್ಟು ಹಣ ಪಡೆದುಕೊಂಡಿದ್ದಾರೆ, ಅವರಿಗೆ ಎಷ್ಟು ದಿನ ಕೆಲಸ ಸಿಕ್ಕಿದೆ, ಅದು ಇದರಲ್ಲಿ ಇಲ್ಲ. ಈಗಾಗಲೇ ಹೇಳಿದ ಹಾಗೆ, ೮೦ ಪರ್ಸೆಂಟ್ ಭಾಗ ಬಿತ್ತನೆ ಆಗಿಲ್ಲವೆಂದು ನೀವೇ ಹೇಳುವಾಗ, ೧೫ ಲಕ್ಷ ಹೆಕ್ಟೇರನಲ್ಲಿ ಮಾತ್ರ ಬಿತ್ತನೆಯಾಗಿ ಉಳಿದ ಭಾಗದಲ್ಲಿ ಬಿತ್ತನೆ ಆಗಿಲ್ಲವೆಂದು ಮಾಡಿದ್ದೀರಿ? ಏನು ಅವರಿಗೆ ಪರಿಹಾರ ಕೊಡುತ್ತೀರಿ? ಏನಾದರೂ ಕಾಂಪನಸೇಷನ್ ಕೊಡುತ್ತಿರೋ ಮತ್ತೇನಾದರೂ ಸಾಲ ಸೌಲಭ್ಯ ವ್ಯವಸ್ಥೆ ಮಾಡಿದ್ದೀರೋ, ಇದನ್ನು ತವು ಹೇಳಬೇಕಾಗುತ್ತದೆ. ಅದನ್ನು ಕೂಡ ಸ್ಟೇಟಮೆಂಟನಲ್ಲಿ ಸ್ಪಷ್ಟವಾಗಿ ಹೇಳಲಿಲ್ಲ. ಮೂರನೆಯದಾಗಿ, ತಾವೇ ಒಪ್ಪಿಕೊಂಡಿದ್ದೀರಿ, ಗುಲ್ಬರ್ಗಾ ಭಾಗದಲ್ಲಿ ಮತ್ತು ಕೆಲವು ಜಿಲ್ಲೆಗಳಲ್ಲಿ ಇವತ್ತಿನ ದಿವಸ ಮೇವಿನ ಅಭಾವ ಇದೆ ಎಂದು ಹೇಳುತ್ತಿದ್ದೀರಿ. ಮೇವಿನ ಅಭಾವ ಇದ್ದಗ ಇವತ್ತು ಎಷ್ಟು ಫಾಡರ್ ಬ್ಯಾಂಕುಗಳನ್ನು ಮಾಡಿದ್ದೀರಿ? ತಮ್ಮ ಹೇಳಿಕೆಯಲ್ಲಿ ರಾಜ್ಯದ ೪-೫ ಜಿಲ್ಲೆಗಳಲ್ಲಿ, ಚಿತ್ರದುರ್ಗ, ಹಾಸನ, ಮಂಡ್ಯ, ಕೋಲಾರ, ಬಳ್ಳಾರಿ, ಗುಲ್ಬರ್ಗಾ, ರಾಯಚೂರು ಮತ್ತು ಧಾರವಾಡದಂಥ ಜಿಲ್ಲೆಗಳಲ್ಲಿ ಮೇವಿನ ಅಭಾವ ಇರುವುದಾಗಿ ತಿಳಿದುಬಂದಿದೆ ಎಂಬ ಮಾತನ್ನು ಹೇಳಿದ್ದೀರಿ. ನೀವು ಇಲ್ಲಿ ಫಾಡರಗೆ ಹಣ ಬಿಡುಗಡೆ ಮಾಡಿದ್ದುದು ಎಲ್ಲಾ ಸೇರಿ ಕೇವಲ ಒಂದು ಕೋಟಿ ರೂಪಾಯಿ ಮಾತ್ರ. ಅಭಾವ ಇದೆ ಎಂದು ಹಣ ಬಿಡುಗಡೆ ಎಲ್ಲಿ

ಮಾಡಿದ್ದೀರೆಂದರೆ ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ಗೆ ೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ತಮ್ಮ ಅನೆಕ್ಷರ್ ನೋಡಿ. ಅನೆಕ್ಷರ್ ಒಂದರಲ್ಲಿ ಅಭಾವ ಇದೆ ಎಂದು ಹೇಳಿದ್ದೀರಿ. ಅಭಾವ ಇರತಕ್ಕ ಜಿಲ್ಲೆಗಳೆಂದರೆ ಚಿತ್ರದುರ್ಗ, ಹಾಸನ, ಕೋಲಾರ, ಬಳ್ಳಾರಿ, ಗುಲ್ಬರ್ಗಾ, ರಾಯಚೂರು ಮತ್ತು ಧಾರವಾಡ. ಆದರೆ ಹಣ ಬಿಡುಗಡೆ ಮಾಡಿದ್ದುದು ಸಾರಾಸಗಟಾಗಿ ಎಲ್ಲಾ ಜಿಲ್ಲೆಗಳಿಗೂ ಎರಡೆರಡು ಲಕ್ಷ. ಬೆಂಗಳೂರು ಅರ್ಬನಗೆ ೫ ಲಕ್ಷ, ಬೆಂಗಳೂರು ರೂರಲಗೆ ೫ ಲಕ್ಷ, ಕೋಲಾರಕ್ಕೆ ೫ ಲಕ್ಷ, ತುಮಕೂರಿಗೆ ೫ ಲಕ್ಷ, ಹೀಗೆ ಓದಿಕೊಂಡು ಹೋದರೆ ಒಂದು ಕೋಟಿ ರೂಪಾಯಿಗಳನ್ನು ೨೦ ಜಿಲ್ಲೆಗಳಲ್ಲಿ ಹಂಚಿದ್ದೀರಿ. ಅಂದರೆ ಇದರಲ್ಲಿ ಎಷ್ಟರ ಮಟ್ಟಿಗೆ ಸೀರಿಯಸನೆಸ್ ಇದೆಯೆಂದು ಈ ಒಂದು ಸ್ಟೇಟಮೆಂಟಿನಿಂದ ಗೊತ್ತಾಗುತ್ತದೆ. ನೀವು ಎಷ್ಟು ಕಾಳಜಿ ವಹಿಸಿದ್ದೀರೆಂಬುದು ಇದರಿಂದ ಗೊತ್ತಾಗುತ್ತದೆ. ಅಭಾವ ಇರತಕ್ಕ ಪ್ರದೇಶಗಳಲ್ಲಿ ಫಾಡರ್ ಬ್ಯಾಂಕ್ ಮಾಡಿ ಅಲ್ಲಿ ಮೇವು ಸಂಗ್ರಹಿಸಿ ಮೇವು ಕೊಡತಕ್ಕ ವ್ಯವಸ್ಥೆ ಮಾಡತಕ್ಕದ್ದು, ಮೇವನ್ನು ಖರೀದಿ ಮಾಡುವುದಕ್ಕೆ ಹೆಚ್ಚು ಹಣ ಕೊಡತಕ್ಕದ್ದು ಒಂದು. ಆದರೆ ನೀವು ಎಲ್ಲರಿಗೂ ಖುಷಿಪಡಿಸುವುದಕ್ಕೆ ಬೆಂಗಳೂರು ಅರ್ಬನ್ ಜಿಲ್ಲೆಗೆ ಮತ್ತೊಂದಕ್ಕೆ ಕೊಟ್ಟಿದ್ದೀರಿ. ಅಲ್ಲಿ ಕೊಡಬಾರದೆಂದು ಅಲ್ಲ. ಆದರೆ ಅಲ್ಲಿ ಎಷ್ಟು ತಾಲ್ಲೂಕುಗಳಿವೆ? ಅಲ್ಲಿರತಕ್ಕದ್ದು ಕೇವಲ ೩-೪ ತಾಲ್ಲೂಕುಗಳು. ಆ ೩-೪ ತಾಲ್ಲೂಕುಗಳಿಗೆ ೫ ಲಕ್ಷ, ಅದೇ ಗುಲ್ಬರ್ಗಾದಲ್ಲಿ ಹತ್ತು ತಾಲ್ಲೂಕುಗಳಿದ್ದರೂ ಅಲ್ಲಿಗೆ ೫ ಲಕ್ಷ, ಧಾರವಾಡದಂತೆ ದೊಡ್ಡ ಜಿಲ್ಲೆಗೆ ೫ ಲಕ್ಷ, ಕೊಡಗಿಗೆ ೫ ಲಕ್ಷ, ಏನು ಇದರ ಅರ್ಥ?

ನೀವು ನಿಮ್ಮ ಡಿಸ್ಕ್ರಿಷನ್ ಅನ್ನು ನ್ಯಾಯವಾಗಿ ಉಪಯೋಗ ಮಾಡಿಲ್ಲ ಎಂಬುದಕ್ಕೆ ಇದು ಒಂದು ಉದಾಹರಣೆ, ಮತ್ತು ಯಾವ ರೀತಿಯಾಗಿ ಬರಗಾಲ ಪರಿಸ್ಥಿತಿಯನ್ನು ಟ್ಯಾಕಲ್ ಮಾಡುತ್ತಿದ್ದೀರಿ ಎಂಬುದಕ್ಕೆ ಇದು ಒಂದೇ ಉದಾಹರಣೆ ಸಾಕು; ನೀವು ಕೊಟ್ಟಂಥ ನಿಮ್ಮ ಹೇಳಿಕೆಯೇ ಸಾಕು. ಇದೀ ರೀತಿಯಾಗಿ ಎಲ್ಲಾ ಕಡೆ ಹಾನಿಯಾಗಿದೆ. ಇನ್ನು ಕುಡಿಯುವ ನೀರಿನ ಅಭಾವದ ಬಗ್ಗೆ ಇವರು ಹೇಳಿದ ಪ್ರಕಾರ, ಇವರು ಕೊಟ್ಟ ಹೇಳಿಕೆ ಪ್ರಕಾರ, ಕುಡಿಯುವ ನೀರಿನ ಅಭಾವ ಗುಲ್ಬರ್ಗಾದಲ್ಲಿದೆ, ಚಿತ್ರದುರ್ಗದಲ್ಲಿದೆ ತುಮಕೂರಿನಲ್ಲಿದೆ ಮತ್ತು ಹಾಸನದಲ್ಲಿದೆ. ಹೀಗೆ ೬-೭ ಜಿಲ್ಲೆಗಳನ್ನು ಸ್ಪಷ್ಟವಾಗಿ ಮೆನಷನ್ ಮಾಡಿದ್ದಾರೆ. ಆದರೆ ನ್ಯಾಚುರಲ್ ಕೆಲಾಮಿಟೀಸಗೆ ೧೨ ಕೋಟಿ ೬೫ ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿದ್ದಾರೆ. ಅದು ಎಲೆಲ್ಲಿ ಮಾಡಿದ್ದಾರೆಂದರೆ, ಬೆಂಗಳೂರು ಅರ್ಬನ್, ಬೆಂಗಳೂರು ರೂರಲ್, ಕೋಲಾರ ಹಿಡಿದುಕೊಂಡು ಕೊನೆಗೆ ಉತ್ತರ ಕನ್ನಡದವರೆಗೆ, ಅತಿವೃಷ್ಟಿ ನಾರ್ತ ಕೆನರಾದಲ್ಲಿದೆ ಅಲ್ಲಿ ೬೦ ಲಕ್ಷ ಮತ್ತು ದಕ್ಷಿಣ ಕನ್ನಡದಲ್ಲಿ ೪೫ ಲಕ್ಷ ಹೀಗೆ ಎಲ್ಲಾ ಕಡೆ ಕೊಟ್ಟಿದ್ದಾರೆ. ಅಂದರೆ ಹೇಗೆ ನೀವು ಇದನ್ನು ರೆವ್ಯೂ ಮಾಡಿದ್ದೀರಿ? ಅಥವಾ ರಾಜಯ ಮಟ್ಟದಲ್ಲಿ ಏನಾದರೂ ಮೀಟಿಂಗ್ ಮಾಡಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯದರ್ಶಿಗಳಿಗೆ ಅಥವಾ ಸಂಬಂಧಪಟ್ಟವರಿಗೆ ಕರೆಸಿ ಏನಾದರೂ ರೆವ್ಯೂ ಮಾಡಿ ಹಣ ಬಿಡುಗಡೆ ಮಾಡಿದ್ದೀರಾ? ಅಥವಾ ಕುಂತಲ್ಲೇ ಬರೆದುಕೊಡತಕ್ಕದ್ದು ಮಾಡಿದ್ದೀರಾ? ಒಂದು ಕಡೆ ನೀರಿನ ಅಭಾವ ೫-೬ ಜಿಲ್ಲೆಗಳಲ್ಲಿ ಇದೆ, ಮತ್ತೊಂದು ಕಡೆ ೫-೬ ಜಿಲ್ಲೆಗಳಲ್ಲಿ ಮೇವಿನ ಅಭಾವ ಇದೆ, ಹಣವನ್ನು ಮಾತ್ರ ಯಥೇಚ್ಛವಾಗಿ ಹಂಚಿದ್ದೀರಿ. ಹೀಗೆ ನೀವು ಇದಕ್ಕೆ ನಿಮ್ಮ ಮೈಂಡ್ ಅಪ್ಲೈ ಮಾಡಿಲ್ಲವೆಂದು ಹೇಳಬೇಕಾಗುತ್ತದೆ. ತಾವು

ಹಿರಿಯರಿದ್ದೀರಿ. ನಾನು ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ನೀವು ಕೊಟ್ಟಂತ ಸ್ಟೇಟಮೆಂಟಮೇಲೆ ನಾನು ಹೇಳಬೇಕಾಗಿದೆ. ನಿಮ್ಮ ಅಧಿಕಾರಿಗಳಾಗಲಿ, ನೀವಾಗಲಿ, ಜಿಲ್ಲಾಧಿಕಾರಿಗಳಾಗಲಿ ಯಾರಿಗೆ ನೀವು ನ್ಯೂಡಲ್ ಆಫೀಸರ್ಸ್ ಎಂದು ಮಾಡಿದ್ದೀರಿ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸರಿಯಾಗಿ ಮಾಹಿತಿ ಕೊಡುತ್ತಿಲ್ಲ. ನೀವು ನೋಡುತ್ತಿಲ್ಲ ಎಂಬ ಪ್ರಶ್ನೆ ಇದೆ. ಈ ರೀತಿ ಮೆಮೊರ್‍ಯಾಂಡಂನಲ್ಲಿ ಹೇಳತಕ್ಕದ್ದು ಒಂದು, ಸ್ಟೇಟಮೆಂಟ್ ಕೊಡತಕ್ಕದ್ದು ಒಂದು, ಖರ್ಚು ಮಾಡತಕ್ಕದ್ದು ಬೇರೆ ರೀತಿಯಾದರೆ ಯಾರು ನಿಮ್ಮ ಸಹಾಯಕ್ಕೆ ಬರುತ್ತಾರೆ? ಈ ರೀತಿ ವ್ಯತ್ಯಾಸ ತಾವು ಮಾಡುತ್ತಿದ್ದೀರಿ. ಇನ್ನೊಂದು ಏನೆಂದರೆ, ಕುಡಿಯುವ ನೀರಿಗೆ ಕೂಡ ಏನು ಇವತ್ತು ಸರ್ಕಾರ ಪಿಹೆಚ್‌ಇ. ಇಲಾಖೆಗೆ ಹಣ ಬಿಡುಗಡೆ ಮಾಡುತ್ತಿದೆ, ಆ ಹಣವನ್ನು ಕೂಡ ಇವತ್ತಿನ ದಿವಸ ನೀವು ಉಪಯೋಗ ಮಾಡಿಕೊಳ್ಳುತ್ತಿದ್ದೀರಿ. ಮಾಡಿಕೊಳ್ಳಿ, ಬೇಡ ಅನ್ನುವುದಿಲ್ಲ. ಏಕೆಂದರೆ ಒಂದು ಇಲಾಖೆಯ ಹಣ ಉಪಯೋಗ ಮಾಡಿಕೊಂಡು ಬರಗಾಲ ಕಾಮಗಾರಿ ಮಾಡಬೇಕು ಮತ್ತು ಜನರ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಹೇಳುತ್ತಿಲ್ಲ. ಇಂಥ ಒಂದು ಕೆಟ್ಟ ಪರಿಸ್ಥಿತಿ ಬಂದಾಗ, ಇಂಥ ಒಂದು ಅನಾವೃಷ್ಟಿ ಇದ್ದಾಗ, ನಾವು ಎಲ್ಲಾ ಇಲಾಖೆಯ ಸಹಾಯ ಪಡೆದುಕೊಂಡು ಇದನ್ನು ಎದುರಿಸಬೇಕಾಗುತ್ತದೆ. ಈ ಮಾತ್ನು ನಾನು ಒಪ್ಪಿಕೊಳ್ಳುತ್ತೇನೆ.

ಆದರೆ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಯಾವ ಯಾವ ತಾಲ್ಲೂಕುಗಳಿಗೆ ಪ್ರಾಮುಖ್ಯತೆ ಕೊಡಬೇಕು ಎಂಬುದನ್ನು ನೋಡಿ, ಎಲ್ಲಿ ಇದರ ಅಭಾವವಿದೆ ಅಂಥ ಕಡೆ ಕೊಡಬೇಕೇ ಹೊರತು ತಾವು ಅಧಿಕಾರ ಇದೆ ಎಂದು ಎಲ್ಲಾ ಜಿಲ್ಲೆಗಳಲ್ಲಿ ಒಂದೇ ಸಮ, ಎಲ್ಲಾ ತಾಲ್ಲೂಕುಗಳಿಗೆ, ಈ ರೀತಿ ಹಂಚಿದರೆ ಇದರಿಂದ ಯಾವ ಪ್ರಯೋಜನವೂ ಕೂಡ ಆಗುವುದಿಲ್ಲ. ಮತ್ತು ನೀವು ಏನು ಡಿವಿಷನವೈಸ್ ಹೇಳಿ ಒಂದು ಡಿವಿಷನನಲ್ಲಿ ೧೪ ತಾಲ್ಲೂಕುಗಳು ಒಂದು ಡಿವಿಷನನಲ್ಲಿ ಮೂರು ತಾಲ್ಲೂಕುಗಳು, ಒಂದು ಡಿವಿಷನನಲ್ಲಿ ೨೦ ರಿಂದ ೩೦ ತಾಲ್ಲೂಕುಗಳು ಎಂದು ನೀವೇ ಹೇಳುತ್ತೀರಿ, ಮತ್ತು ಹಣ ಹಂಚುವಾಗ ಮಾತ್ರ ವ್ಯತ್ಯಾಸಗಳನ್ನು ಮಾಡಿ ನೀವು ಆ ಕೆಲಸಕ್ಕೆ ಪುಷ್ಠಿ ಕೊಡುತ್ತಿಲ್ಲ ಇದು ಒಂದು ಉದಾಹರಣೆ. ಇನ್ನೊಂದು ಉದಾಹರಣೆ ಏನೆಂದರೆ, ಇದರಲ್ಲಿ ಮಜ ಏನೆಂದರೆ ಈಗ ತಾವು ಮೆಮೋರ್‍ಯಾಂಡಮನಲ್ಲಿ ಕೇಳಿರುವ ಹಣ ಕೃಷಿ ಕಾರ್ಮಿಕರ ಮತ್ತು ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಕೆಲಸ ಕೊಡುವ ಸಲುವಾಗಿ ತಾವು ಕೇಂದ್ರಸರ್ಕಾರವನ್ನು ಕೇಳಿದ ಹಣ ೯೪ ಕೋಟಿ ೫೬ ಲಕ್ಷ ರೂಪಾಯಿ. ಕುಡಿಯುವ ನೀರಿಗಾಗಿ ಕೇಳಿದ್ದುದು ೫೪ ಕೋಟಿ ೩೬ ಲಕ್ಷ ರೂಪಾಯಿ. ಮೇವಿಗಾಗಿ ಕೇಳಿದ್ದುದು ೧೫ ಕೋಟಿ ೨೦ ಲಕ್ಷ. ಮಳೆ ಕೊರತೆಗಾಗಿ ಬಿತ್ತನೆ ಬೀಜಕ್ಕಾಗಿ ಕೇಳಿದ್ದುದು ೫೫ ಕೋಟಿ. ಆಮೇಲೆ ಸಾರ್ವಜನಿಕರ ಆರೋಗ್ಯ ಮತ್ತು ನೈರ್ಮಲ್ಯೀಕರಣಕ್ಕೆ ೩ ಕೋಟಿ ೧೭ ಲಕ್ಷ. ಗರ್ಭಿಣಿ ತಾಯಂದಿರಿಗೆ ಊಟ, ಮಕ್ಕಳಿಗೆ ಪೌಷ್ಠಿಕಾಹಾರಕ್ಕೋಸ್ಕರ ೩.೨ ಕೋಟಿ. ನಾನು ಕೇಳುತ್ತೇನೆ, ಈ ೯೪ ಕೋಟಿ ನೀವು ಕೇಳಿದ್ದೀರಿ ಅಂದರೆ ಅದರ ಮ್ಯಾಗ್ನಿಟ್ಯೂಡ್ ನೋಡಿಯೇ ಕೇಳಿರಬೇಕಲ್ಲ. ಕೇಳಿದಾಗ ಕನಿಷ್ಠಪಕ್ಷ ನೀವು ೯೦ ಕೋಟಿ ಕೇಳಿದರೆ ೧೦-೧೫ ಕೋಟಿಯಾದರೂ ನಿಮ್ಮ ನ್ಯಾಚುರಲ್ ಕೆಲಾಮಿಟಿ ಫಂಡನಿಂದ ನೀವು ಖರ್ಚು ಮಾಡಬೇಕು. ೯೦ ಕೋಟಿ ಕೂಡ ಇವತ್ತೇ ಖರ್ಚಾಗಬೇಕು ಎಂದು ಇಲ್ಲ. ೯೪ ಕೋಟಿ ಕೇಳಿದವರು ೧೦-೧೫ ಕೋಟಿಯಾದರೂ ನೀವು ಖರ್ಚು ಮಾಡಬೇಕು ಈ ಹೆಡನಲ್ಲಿ.

ಅದೇ ರೀತಿಯಾಗಿ ಕುಡಿಯುವ ನೀರಿಗೆ ತಾವು ೫೪ ಕೋಟಿ ಕೇಳಿದ್ದೀರಿ. ಆದರೆ ನೀವು ಎಷ್ಟು ಖರ್ಚು ಮಾಡಿದ್ದೀರಿ? ನಾನು ಈಗಾಗಲೇ ಹೇಳಿದಹಾಗೆ ೧೨ ಕೋಟಿ ರೂಪಾಯಿ ನ್ಯಾಚುರಲ್ ಕೆಲಾಮಿಟೀಸ್ ಫಂಡನಿಂದ ಬಿಡುಗಡೆ ಮಾಡಿದ್ದೀರಿ. ಅದೇ ರೀತಿಯಾಗಿ ಮೇವಿಗಾಗಿ ಒಂದು ಕೋಟಿ. ನೀವು ಕೇಳಿದ್ದು ೧೫ ಕೋಟಿ. ೧೫ ಕೋಟಿ ರೂಪಾಯಿನಷ್ಟು ಸಮಸ್ಯೆ ಇದ್ದರೆ, ಕನಿಷ್ಠಪಕ್ಷ ೨-೩ ಕೋಟಿ ಎಲ್ಲೆಲ್ಲಿ ಬೇಕೋ ಅಲ್ಲಿಯಾದರೂ ಮಾಡಬೇಕಾಗಿತ್ತು. ಇಲ್ಲವೇ ನಿಮ್ಮಲ್ಲಿ ಹಣದ ಕೊರತೆ ಇದ್ದಾಗ, ಅವಶ್ಯಕತೆಗೆ ಅನುಸಾರವಾಗಿ ಹಣ ಹಂಚಬೇಕಾಗಿತ್ತೇ ಹೊರತಾಗಿ ಅದನ್ನು ಬಿಟ್ಟು ನಾವು ಯಾವತ್ತೂ ಮಾತನಾಡುತ್ತೇವಲ್ಲ ಕಾನಸ್ಟಿಟುಯೆನ್ಸಿ ವೈಸ್, ತಾಲ್ಲೂಕಾವೈಸ್ ಹೀಗೆ ಕೊಡಿ ಎಂದು ಹೇಳಿದಾಗೆ ಕೊಟ್ಟಿದ್ದೀರಿ. ಆ ಕಡೆ ನಿರ್ಲಕ್ಷ್ಯ ಮಾಡಿದ್ದೀರಿ ಎಂದು ಸ್ಪಷ್ಟವಾಗಿ ನಾನು ಹೇಳುತ್ತೇನೆ. ಏಕೆಂದರೆ ಎಲ್ಲಾ ಕೂಡ ನೀವು ಕೊಟ್ಟಂಥ ಅಂಕಿಅಂಶದ ಮೇಲೆ ಹೇಳುತ್ತಿದ್ದೇನೆ. ಬಹುಶಃ ಬರುವಾಗ ನೀರು ವ್ಯತ್ಯಾಸಗಳಿರತಕ್ಕದ್ದನ್ನು ನೋಡಿಕೊಂಡು ಬಂದಿಲ್ಲ ಎಂದು ಕಾಣಿಸುತ್ತದೆ. ಇಲ್ಲಿ ತರಾತುರಿಯಲ್ಲಿ ಬಂದು ಸ್ವಲ್ಪ ನೋಡಿರಬಹುದು. ಮೂರನೆಯದಾಗಿ ಇದೇ ರೀತಿಯಾಗಿ ಪೌಷ್ಠಿಕಾಹಾರದ ಬಗ್ಗೆ ತಾವು ಏನಾದರೂ ಬಿಡುಗಡೆ ಮಾಡಿದ್ದೀರೋ? ಯಾವುದಾದರೂ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಮಾಡಿದ್ದೀರೋ? ಮಾಡಿಲ್ಲ. ಬರೀ ಇಲ್ಲಿ ಕೊಟ್ಟಿದ್ದೀರಿ. ಆದರೆ ಇವತ್ತಿನ ದಿವಸ ಎಲ್ಲೆಲ್ಲಿ ಅವಶ್ಯಕತೆ ಇದೆ, ಅದರನುಸಾರ ಅದನ್ನು ಕೂಡ ಇವತ್ತಿನದಿವಸ ನೀವು ಮಾಡಿಲ್ಲ. ಆಮೇಲೆ ನ್ಯಾಚುರಲ್ ಕೆಲಾಮಿಟಿ ಫಂಡನಿಂದ ಬರೀ ಅನಾವೃಷ್ಟಿಯಲ್ಲ, ಅತಿವೃಷ್ಟಿ ಕಡೆಗೆ ಆದರೂ ಮಾಡಬೇಕು. ಕೆಲವು ಕಡೆ ಅತಿವೃಷ್ಟಿಯೂ ಇರುತ್ತದೆ. ನಾರ್ತಕೆನರಾ ಇದೆ, ಸೌತ್ ಕೆನರಾ ಇದೆ. ಚಿಕ್ಕಮಗಳೂರಿನಲ್ಲಿ ಕೆಲವು ಕಡೆ ಆಗಿರಬಹುದು. ಅಂಥ ಕಡೆಯೂ ಕೂಡ ಇದರಿಂದ ಕೊಡಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಕೊಡುವಾಗ ನಿಮಗೆ ದುಡ್ಡು ಕಡಿಮೆ ಇದ್ದರೆ, ಬೇರೆ ಕೆಲಸಗಳನ್ನು ನಿಲ್ಲಿಸಿ ಅಲ್ಲಿನ ಫಂಡನ್ನು ಡೈವರ್ಟ ಮಾಡಬೇಕಾಗುತ್ತದೆ. ಅದು ಇಂಡಸ್ಟ್ರೀಸ್ ಡಿಪಾರ್ಟಮೆಂಟ್ ಇರಬಹುದು, ಮೇಜರ್ ಇರಿಗೇಷನ್ ಇರಬಹುದು ಅಥವಾ ಮತ್ತೆ ಯಾವುದೇ ಇಲಾಖೆಯಲ್ಲಿ ಹಣ ಇದ್ದರೆ, ತಾತ್ಕಾಲಿಕವಾಗಿ ನಿಲ್ಲಿಸಿ ಇದಕ್ಕೆ ನಾವು ಆದ್ಯತೆ ಕೊಡಬೇಕಾಗುತ್ತದೆ. ಜನಗಳನ್ನು ಜಾನುವಾರುಗಳನ್ನು ಉಳಿಸಬೇಕಾಗುತ್ತದೆ. ಅದಕ್ಕಾಗಿ ಡೈವರ್ಟ ಮಾಡಬೇಕೆಂದು ನೀವು, ಫೈನಾನ್ಸ ಮಿನಿಸ್ಟರ್ ಮತ್ತು ಮುಖ್ಯಮಂತ್ರಿಗಳು ಸೇರಿ ರೀ ಅಪ್ರೋಪ್ರಿಯೇಟ್ ಮಾಡಿಕೊಂಡು ಇದಕ್ಕೆ ಆದ್ಯತೆ ಕೊಡಬೇಕಾಗುತ್ತದೆ. ಯಾವಾಗ ಇದಕ್ಕೆ ಆದ್ಯತೆ ಕೊಟ್ಟಿಲ್ಲ ಅಂದರೆ ಇದಕ್ಕೆ ಸಂಪೂರ್ಣವಾಗಿ ನೀವು ಮೂವರೂ ನಿರ್ಲಕ್ಷ್ಯ ಮಾಡಿದ್ದೀರಿ, ಇದರ ಬಗ್ಗೆ ಮನಸ್ಸು ಮಾಡಲಿಲ್ಲ ಎಂದು ಭಾವಿಸಬೇಕಾಗುತ್ತದೆ. ಬಂತೇನೋ. ಸ್ವಲ್ಪ ಅಲ್ಲಿ ಇಲ್ಲಿ ಬಂದಾಗ ಜನ ಅಷ್ಟು ಕೇಳುತ್ತಿಲ್ಲ ಅಂತ ಹೇಳಿ....

ಶ್ರೀ ಆರ್.ಎಲ್. ಜಾಲಪ್ಪ : ಇದು ಬಹಳ ಬೇಗ ರೀಅಪ್ರೋಪ್ರಿಯೇಷನ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇಲ್ಲ. ಎಲ್ಲಿಂದಲಾದರೂ ಡೈವರ್ಟ ಮಾಡಿಕೊಳ್ಳಿ. ಅದು ಸಮಸ್ಯೆ ಅಲ್ಲ. ನಾನು ಒಂದು ಹೇಳಿದೆ. ಇದು ಬಹಳ ಬೇಗ ಖರ್ಚು ಮಾಡಬೇಡಿ. ಚಾರಿಟಿ ಎಂದು ಹೇಳಿ ಕೊಡಬೇಡಿ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಅವರು ಬರೀ ಪೇಜ್ ನಂಬರ್ ೧ ಮತ್ತು ೨ರಲ್ಲಿದ್ದಾರೆಯೇ ವಿನಹ, ಪೇಜ್ ನಂಬರ್ ೪ಕ್ಕೆ ಅವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಪೇಜ್ ೪ರಲ್ಲಿ ಪ್ಯಾರಾ ೧೩ರಲ್ಲಿ ನಾವು ಹೇಳಿದ್ದೇವೆ. "ದಿನಾಂಕ ೧೮.೯.೯೫ರವರೆಗಿನ ವರದಿಯ ಪ್ರಕಾರ, ರಾಜ್ಯದ ೬೫ ತಾಲ್ಲೂಕುಗಳಿಗೆ ಕಡಿಮೆ ಹಾಗೂ ೫ ತಾಲ್ಲೂಕುಗಳಲ್ಲಿ ಅತೀ ಕಡಿಮೆ ಮಳೆ ಬಿದ್ದಿರುತ್ತದೆ. ಈ ಐದು ತಾಲ್ಲೂಕುಗಳು ಚಿತ್ರದುರ್ಗ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿವೆ. ವಿವರ ಅನುಬಂಧ ೩ರಲ್ಲಿ ನೀಡಿದ್ದೆ."

ಎಲ್ಲೆಲ್ಲಿ ಮಳೆ ಕಡಿಮೆಯಾಗಿದೆ ಎಂಬ ಬಗ್ಗೆ ಈಗಾಗಲೇ ನಾವು ಇನಫಾರ್ಮೇಷನ್ ಪ್ರೊವೈಡ್ ಮಾಡಿದ್ದೇವೆ. ೧೪ನೇ ಪ್ಯಾರಾದಲ್ಲಿ "ಆಗಸ್ಟ ೧೫ರವರೆಗಿನ ಮಾಹಿತಿಯಂತೆ, ಉತ್ತಮಗೊಂಡ ಮುಂಗಾರಿನಿಂದಾಗಿ ಕೃಷಿ ಚಟುವಟಿಕೆಗಳು ಚೇತರಿಸಿಕೊಂಡಿದ್ದು ೫೬.೬ ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆ ಕಾರ್ಯಕೈಗೊಳ್ಳಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ೧೮.೧೧ ಲಕ್ಷ ಹೆಕ್ಟೇರಿನಲ್ಲಿ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗಿತ್ತು. ವಿವರ ಅನುಬಂಧ ೪ರಲ್ಲಿ ನೀಡಿದೆ. ಅಂದಾಗ ತಾವು ಯೋಜನೆ ಮಾಡಬೇಕು. ತಮ್ಮಲ್ಲಿ ಮನವಿ ಏನೆಂದರೆ ಬರೀ ನಾವು ಮೆಮೋರ್ಯಾಂಡಮ್‌ನಲ್ಲಿ ಕೊಟ್ಟಿದ್ದನ್ನು ರೀಪ್ರೊಡ್ಯೂಸ್ ಮಾಡುತ್ತಿಲ್ಲ. ಲೇಟೆಸ್ಟ ಫಿಗರ್ಸ ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇವೆ ಇಲ್ಲಿ. ಎಷ್ಟು ಹಣ ಖರ್ಚು ಮಾಡಿದ್ದೇವೆ ಮತ್ತು ಈಗಿನ ನಮ್ಮ ಪರಿಸ್ಥಿತಿ ಏನು ಎಂಬುದನ್ನು ಕೂಡ ತಮ್ಮ ಗಮನಕ್ಕೆ ತಂದಿದ್ದೇವೆ. ಇನ್ನೊಂದು ಹೇಳಿದ್ದೀರಿ, ಫಾಡರಗೆ ತಲಾ ೫-೫ ಲಕ್ಷ ಸಾರಾಸಗಟಾಗಿ ಕೊಟ್ಟಿದ್ದೀರಿ ಎಂದು. ಆದರೆ ನಾವು ಫಾಡರಗಾಗಲೀ, ಬಿಂಕಿ ಅಕಸ್ಮಿಕಕ್ಕಾಗಲೀ ಹಣ ಏನು ರಿಲೀಸ್ ಮಾಡಿದ್ದೇವೆ ಆ ಹಣ ಅದಕ್ಕೆ ಅವಶ್ಯಕತೆ ಇಲ್ಲದಿದ್ದರೆ ನೀವು ಈ ಕೆಲಸಗಳಿಗೆ ಉಪಯೋಗಿಸಿಕೊಳ್ಳಬಹುದು ಎಂದು ಇನಸ್ಟ್ರಕ್ಷನ್ ಕೊಟ್ಟಿದ್ದೇವೆ. ಅದನ್ನೂ ಕೂಡ ನಾನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಆದ್ದರಿಂದ ನಾವು ಎಕ್ಸರಸೈಸ್ ಮಾಡಿಲ್ಲ ಎಂದು ತಾವು ಹೇಳಬೇಡಿ. ಜೊತೆಗೆ ಡೆಪ್ಯೂಟಿ ಕಮಿಷನರ್ ಮತ್ತು ಡಿವಿಷನಲ್ ಕಮಿಷನರಗಳ ಸಭೆಯನ್ನು, ಸನ್ಮಾನ್ಯ ಮುಖ್ಯಮಂತ್ರಿಗಳು ಕರೆದು ಅವರೊಡನೆ ಚರ್ಚೆ ಮಾಡಿ, ಎಲ್ಲೆಲ್ಲಿ ಎಷ್ಟೆಷ್ಟು ಅವಶ್ಯಕತೆ ಇದೆ ಅದರ ಆಧಾರದ ಮೇಲೆ ಕುಡಿಯುವ ನೀರಿಗೆ ಸರಬರಾಜು ಮಾಡಿದ್ದೇವೆ. ಈಗ ಆರ್.ಡಿ.ಪಿ.ಆರ್.ನಿಂದ ೪೨ ಕೋಟಿ ರೂಪಾಯಿಗಳು ಮತ್ತು ನಾವು ೧೨ ಕೋಟಿ ರೂಪಾಯಿಗಳು ಎರಡೂ ಸೇರಿ ಸುಮಾರು ೫೨ ಕೋಟಿ ರೂಪಾಯಿಗಳಷ್ಟು ಹಣವನ್ನು, ಈಗಾಗಲೇ ನಾವು ಕುಡಿಯುವ ನೀರಿಗೆ ಒದಗಿಸಿದ್ದೇವೆ. ಹೋದ ವರ್ಷ ದುರಾದೃಷ್ಟವಶಾತ್ ಮಳೆ ಇಲ್ಲದೇ ಇರುವುದರಿಂದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಈ ವರ್ಷ ಕುಡಿಯುವ ನೀರಿನ ಅಭಾವ ಇತ್ತು. ಏಕೆಂದರೆ ಕಳೆದ ವರ್ಷ ಮಳೆ ಸರಿಯಾಗಿ ಬೀಳಲಿಲ್ಲ. ಯಾವುದೇ ಕೆರೆಕಟ್ಟೆಗಳಲ್ಲಿ ನೀರು ಇರಲಿಲ್ಲ. ಆದ್ದರಿಂದ ಭೂಮಿಯಲ್ಲಿ ನೀರು ಇಂಗಿಹೋಗಿ ಬೋರವೆಲಗಳಲ್ಲಿ ನೀರು ಅವಕಾಶ ಇಲ್ಲದೇ ಇರುವುದರಿಂದ ಕೊಡಗು ಜಿಲ್ಲೆಯಲ್ಲಿ ಕೂಡ ನಾವು ಬೋರವೆಲಗಳನ್ನು ಕೊಡಬೇಕಾಯಿತು, ಆದ್ದರಿಂದ ಕೊಟ್ಟಿದ್ದೇವೆ. ಅದಕ್ಕೋಸ್ಕರ ನಾವು ಹಣ ಖರ್ಚು ಮಾಡಿದ್ದೇವೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿ ಅಂತ ಹೇಳಿ, ಈ ವರ್ಷ ಅತಿವೃಷ್ಟಿಯೂ ಇಲ್ಲ, ಅಲ್ಲಿ ಸುಮಾರು ೫೦ ರಿಂದ ೬೦ ಭಾಗದಷ್ಟು ಮಳೆಯಾಗಿದೆ. ನಾನು ದಕ್ಷಿಣ ಕನ್ನಡ ಜಿಲ್ಲೆಗೂ

ಹೋಗಿದ್ದೇನೆ. ಮತ್ತು ನಾನು ಮತ್ತು ಪ್ರಕಾಶರವರು ಐದೂ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಲ್ಲಿನ ಶಾಸನ ಸಭಾಸದಸ್ಯರನ್ನು, ಜಿಲ್ಲಾಪರಿಷತ್ ಅಧ್ಯಕ್ಷರು ಸದಸ್ಯರನ್ನು ಮತ್ತು ಇತರೆ ಮುಖಂಡರುಗಳನ್ನು ಕರೆಯಿಸಿ ಸಭೆ ಮಾಡಿ, ಅವರನ್ನು ಕೇಳಿ ಎಲ್ಲೆಲ್ಲಿ ತೊಂದರೆಯಾಗಿದೆ ಎಂದು ಕೇಳಿ ಆಗಲೇ ಇನಸ್ಟ್ರಕ್ಷನ್ಸ ಕೊಟ್ಟಿದ್ದೇವೆ. ಕಮಿಟಿ ಇನ್ನೂ ಆಗಿರಲಿಲ್ಲ. ಆದರೂ ಕೂಡ ನಾವು ಇನಸ್ಟ್ರಕ್ಷನ್ಸ ಕೊಟ್ಟು ಬಂದಿದ್ದೇವೆ. ಇಲ್ಲಿ ಶಾಸಕರು ಮತ್ತು ಮುಖಂಡರುಗಳು ಏನೇನು ಹೇಳುತ್ತಾರೆ ಆ ಕೆಲಸಗಳನ್ನು ತಕ್ಷಣ ತೆಗೆದುಕೊಳ್ಳಿ, ಸಬ್ಸೀಕ್ವೆಂಟಾಗಿ ಬೇಕಾದರೆ ನೀವು ಆಕ್ಷನ್ ಪ್ಲಾನಗೆ ಸೇರಿಸಿಕೊಳ್ಳಿ ಎಂದು ಅವರಿಗೆ ಇನಸ್ಟ್ರಕ್ಷನ್ಸ ಕೊಟ್ಟುಬಿಟ್ಟು ಬಂದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಪ್ಪಿಕೊಂಡೆ. ಕೆಲವು ಮಾತನ್ನು ತಾವು ಹೇಳಿದ್ದೀರಿ. ಆದರೆ ಒಂದು ಕೇಳುತ್ತೇನೆ. ಅಂದರೆ ಆ ಹೆಡನಲ್ಲಿ ನೀವು ಕೊಡತಕ್ಕ ಅವಶ್ಯತೆಯೇ ಇರಲಿಲ್ಲ. ನ್ಯಾಚುರಲ್ ಕೆಲಾಮಿಟಿ ಫಂಡ್ ಎಂದರೆ ಒಟ್ಟು ಡೆಪ್ಯುಟಿ ಕಮಿಷನರಗೆ ಒಂದೇ ಹೆಡನಲ್ಲಿ ಕೊಟ್ಟು, ನೋಡಪ್ಪ, ಬೆಂಕಿ ಅನಾಹುತ ಆದರೆ ಅದಕ್ಕಾದರೂ ಉಪಯೋಗ ಮಾಡು, ಫ್ಲಡ್ ಬಂದರೆ ಅದನ್ನೂ ಮಾಡು, ಅಥವಾ ಸ್ಕೇರ್ಸಿಟಿಗಾದರೂ ಮಾಡು, ಇಲ್ಲವೇ ಡ್ರಿಂಕಿಂಗ್ ವಾಟರಗಾದರೂ ಮಾಡು ಎಂದು ಹೇಳಬೇಕು. ಇಲ್ಲಿ ಏನಾಗುತ್ತದೆಂದರೆ ಬಿಡುಗಡೆ ಮಾಡುವಾಗ ಏನು ರಿಟನ್ ಇನಸ್ಟ್ರಕ್ಷನ್ಸ ಕೊಡುತ್ತೀರೋ ಅದನ್ನು ಡೆಪ್ಯುಟಿ ಕಮಿಷನರ್ ಫಾಲೋ ಮಾಡುತ್ತಾರೆ. ಈಗ ಯಾರು ನಿಮ್ಮ ಓರಲ್ ಇನಸ್ಟ್ರಕ್ಷನ್ಸ ಫಾಲೋ ಮಾಡುತ್ತಾರೆ ಸ್ವಾಮಿ? ನೀವು ಓರಲ್ ಇನಸ್ಟ್ರಕ್ಷನ್ಸೇ ಫಾಲೋ ಮಾಡಬೇಡಿ ಎಂದು ನೀವು ರೈಟಿಂಗನಲ್ಲಿ ಸ್ಟೇಟಮೆಂಟ್ ಕೊಡುವಾಗ, ನಿಮ್ಮ ಓರಲ್ ಇನಸ್ಟ್ರಕ್ಷನ್ಸ ಯಾರು ಫಾಲೋ ಮಾಡುತ್ತಾರೆ? ಅಥವಾ ಆದೇಶ ಕೊಟ್ಟಿದ್ದೀರೋ, ನಾವು ಫಾಡರಗೆ ಆ ಹೆಡನಲ್ಲಿ ಕೊಟ್ಟರೂ ನೀವು ಬೇರೆಯದಕ್ಕೆ ಉಪಯೋಗ ಮಾಡಬೇಕು ಎನ್ನತಕ್ಕದ್ದನ್ನೇನಾದರೂ ರೈಟಿಂಗನಲ್ಲಿ ಕೊಟ್ಟಿದ್ದೀರೋ, ಅದಿದ್ದರೆ ಅದು ಕೊಡಿ. ಏಕೆಂದರೆ ಈಗಾಗಲೇ ನೀವು ಬಹಳ ಸದರ್ಥಿಸಿಕೊಂಡಿರಿ. ನಿನ್ನೆ ಒಬ್ಬ ಡೈರೆಕ್ಟರ್ ಸರ್ಕ್ಯುಲರ್ ಇಷ್ಯೂ ಮಾಡಿದ್ದನ್ನು ಏನು ಸಮರ್ಥನೆ ಮಾಡಿಕೊಂಡಿರಿ?

ಮಿಸ್ ಯೂಸ್ ಆಗುತ್ತದೆ ಎಂಧು ಯಾರು ಬೇಕಾದರೂ ಇನಸ್ಟ್ರಕ್ಷನ್ಸ ಕೊಡುತ್ತಾರೆ. ಮಿಸಯುಸ್ ಆಗಬಾರದು ಅಂತ ಹೇಳಿ everything in writing, ಅದಕ್ಕೆ ಸ್ವಾಮಿ, ನಾಳೆ ನೀವು ಏನು ಮಾಡಿ ಅಂದರೆ ಛೆಲಾನ್ ಮಾಡುವಾಗಲೇ ಅಲ್ಲಿ ಒಂದು ರೆಕಾರ್ಡಿಂಗ ಮಾಡಿಕೊಳ್ಳಿ. ಅವರ ಮಾತು ಇದು ಎಂದು ಇಲ್ಲಿ ರೆಕಾರ್ಡಿಂಗ್ ಮಾಡಿಕೊಳ್ಳಿ. ಮಾಡಿದ್ದನ್ನು ರಿಪ್ರೊಡ್ಯೂಸ್ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಇನಸ್ಟ್ರಕ್ಸನ್ಸ ಯಾರು ಕೇಳುತ್ತಾರೆ ಹೇಳಿ. ನಿಮ್ಮ ಪರಿಸ್ಥಿತಿ ಹೀಗೆ ಇಲ್ಲದಿದ್ದರೆ ಆಗಿದೆ. ನಾನು ಏನೂ ಹೇಳುವುದಿಲ್ಲ. ಬಹುಶಃ ನಿಮ್ಮ ಮಂತ್ರಿಗಳ ಈ ಓರಲ್ ಇನಸ್ಟ್ರಕ್ಸನ್ಸ ಮೇಲೆ ಜಾಸ್ತಿ ಕೆಲಸ ಆಗಿ, ಇವತ್ತಿನ ದಿವಸ ಅದಕ್ಕೆ ಬೆಲೆ ಇರಲಾರದ ಮಟ್ಟಿಗೆ ಅನೇಕ ಅಧಿಕಾರಿಗಳು ಈ ಇನಸ್ಟ್ರಕ್ಸನ್ಸನ್ನು ರೈಟಿಂಗ್ನಲ್ಲಿ ಕೇಳುತ್ತಾ ಇರಬಹುದು. ಇಲ್ಲದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಯಾವುದೋ ಒಂದು ಇಲಾಖೆಯಲ್ಲಿ ಮಾಡಿದರು ಎಂದ ತಕ್ಷಣನೇ ಬೇರೆ ಮಂತ್ರಿಗಳು ಹೇಳಿದ ಕೆಲಸ ನಡೆಯುವುದಿಲ್ಲ ಅಂತ ತಾವು ಏನು ಅಭಿಪ್ರಾಯ

ಪಡುವುದು ಬೇಡ. ಒಂದು ಇಲಾಖೆಯಲ್ಲಿ ಏನೋ ತಾವು ಹೇಳಿದಂತಹ ಸಿಚುಯೇಶನ್ ಇತ್ತು ಎಂದು ಕಾಣಿಸುತ್ತದೆ. ಒಂದು ಇಲಾಖೆಯಲ್ಲಿ ಆಗಿದೆ. ಬೇರೆ ಇಲಾಖೆಯಗಳಲ್ಲಿ ಮಂತ್ರಿಗಳು ಇವತ್ತಿಗೂ ಓರಲ್ ಆಗಿ ಹೇಳಿ ಮಾಡಿಸಬೇಕಾಗುತ್ತದೆ. ಕೆಲವು ಅರ್ಜೆಂಟ್ ಕೆಲಸಗಳನ್ನು ಫೋನ್ ನಲ್ಲಿ ಹೇಳಿ ಮಾಡಿಸಬೇಕಾಗುತ್ತದೆ. ನಿನ್ನೆ ಬಿಜಾಪುರದಲ್ಲಿ ಕ್ವಾರಿಯ ಬಗ್ಗೆ ಈವಾಗಲೇ ಇನಫರಮೇಶನ್ ಬೇಕು ಎಂದು ಹೇಳಿದೆ. ಇಂತಹ ಸಂದರ್ಭ ಬಂದಾಗ, ನಾನೇ ಇನಸ್ಟ್ರಕ್ಷನ್ಸ ಕೊಟ್ಟೆ `Go ahead' ಎಂದು, ಅಂತಹ ಸಂದರ್ಭದಲ್ಲಿ ನೀವು ರೈಟಿಂಗನಲ್ಲಿ ಕಳುಹಿಸಿ ನಮಗೆ ಅಂತ ಅವರು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ಏನೆಂದರೆ ನಾನೇ ಇದನ್ನು ಹೇಳಿದೆ ೭೮ರ ಒಂದು ಸರ್ಕ್ಯುಲರ್ ಆಧಾರದ ಮೇಲೆ ಈ ರೀತಿಯಾಗಿ ಸರ್ವೇಸಾಮಾನ್ಯ, ಅವರು ಏನು ಹೇಳಿದರು ಅಲ್ಲಿಯವರೆಗೆ ಇದು ಒಂದೇ ಇಲಾಖೆಯಲ್ಲಿ ಅಲ್ಲ. ಸರ್ವೇಸಾಮಾನ್ಯವಾಗಿ ಎಲ್ಲಾ ಇಲಾಖೆಗಳಲ್ಲಿ ಇಂತಹ ಇನಸ್ಟ್ರಕ್ಷನ್ಸನ್ನು ಸರ್ಕಾರವೇ ಇಶ್ಯೂ ಮಾಡುತ್ತದೆ ಎನ್ನತಕ್ಕಂಥ ಸಮರ್ಥನೆ ನಿನ್ನೆ ಮಾಡಿಕೊಂಡು, ಇವತ್ತು ಫಾಡರಗೆ ಬಿಡುಗಡೆ ಆದಂಥ ಹಣವನ್ನು ನೀವು ಯಾವುದಕ್ಕಾದರೂ ಉಪಯೋಗ ಮಾಡಿಕೊಳ್ಳಬೇಕೆಂದು ನಾವು ಓರಲ್ ಇನಸ್ಟ್ರಕ್ಷನ್ ಕೊಟ್ಟಿದ್ದೇವೆ ಅಂದರೆ ನಾವು ಯಾವುದು ನಂಬಬೇಕು? ಅವರಿಗೆ ನಂಬಬೇಕೋ....ಅಲ್ಲ ನಂಬರ್ ಓನ್ ಮ್ಯಾನಗೆ ನಂಬಬೇಕೋ, ನಂಬರ್ ತ್ರೀ ಮ್ಯಾನಗೆ ನಂಬಬೇಕೋ ಅಂತ ಗೊತ್ತಾಗುತ್ತಾ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಇಬ್ಬರನ್ನು ನಂಬಬೇಕಾಗುತ್ತದೆ. ಸ್ವಾಮಿ, ಬೇರೆ ಇಲಾಖೆಯದು ನನಗೆ ಗೊತ್ತಿಲ್ಲ. ನನ್ನ ಇಲಾಖೆಯಲ್ಲೂಂತೂ ಬಹಳಷ್ಟು ಕೆಲಸವನ್ನು ನಾನು ಓರಲ್ ಇನಸ್ಟ್ರಕ್ಷನ್ಸ ಕೊಟ್ಟು ಮಾಡಿಸುತ್ತೇನೆ. ವಿಧಿ ಇಲ್ಲ ಈ ರೀತಿ ಮಾಡಿಸಲೇಬೇಕಾಗುತ್ತದೆ. ನನ್ನನ್ನು ಯಾರೂ ಇವತ್ತಿನ ವರೆಗೆ ರೈಟಿಂಗನಲ್ಲಿ ಕೊಡಿ ಎಂದು ಕೇಳಲಿಲ್ಲ. ನಮ್ಮ ಕಾರ್ಯದರ್ಶಿಗಳು ಆಗಿರಬಹುದು, ಅಥವಾ ಡಿವಿಷನಲ್ ಕಮಿಷನರ್ ಆಗಿರಬಹುದು ಅಥವಾ ಡೆಪ್ಯುಟಿ ಕಮಿಷನರ್ ಆಗಿರಬಹುದು. ಸಮಯ ಬಂದಾಗ ಕ್ವಿಕ್ ಆಗಿ ಈ ಕೆಲಸವನ್ನೆಲ್ಲಾ ಮಾಡಬೇಕಾಗುತ್ತದೆ. ಗಿಡಕ್ಕೆ ರೋಗ ಬಿದ್ದಾಗ ಔಷಧಿ ಹೊಡೆಯಬೇಕು. ನಾವು ಟೆಂಡರ್ ಕರೆಯುತ್ತೇವೆ, ನನಗೆ ವೇಯಿಟಂಗನಲ್ಲಿ ಕೊಡಿ ತ ತಡೆಯಲಿಕ್ಕೆ ಆಗುತ್ತದೆಯೇ ? immediate instructions, ಡಿಶಿಷನ್ ಕೊಡಬೇಕಾಗುತ್ತದೆ. `You must go and purchase in the market and use it on the plants.'

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಒಪ್ಪಿಕೊಂಡೆ. ನಿಮ್ಮ ಅಧಿಕಾರಿಗಳು ನಿಮ್ಮ ಕಾನಫಿಡೆನ್ಸನಲ್ಲಿ ಇದ್ದು ನೀವು ಓರಲ್ ಇನಸ್ಟ್ರಕ್ಷನ್ಸ ಕೊಟ್ಟರೆ ಈ ಮಾತು ನಡೆಯುತ್ತದೆ. ನಿಮ್ಮ ಮಾತನ್ನು ಕೇಳುತ್ತಾರೆ ಅಧಿಕಾರಿಗಳು ಎನ್ನತಕ್ಕಂಥ ನಂಬಿಕೆ ನಿಮಗೆ ಇರಬೇಕು. ಮಂತ್ರಿಗಳು ಏನಾದರೂ ಇನಸ್ಟ್ರಕ್ಷನ್ಸ ಕೊಟ್ಟರೆ ಅದನ್ನು ನಿಭಾಯಿಸಿಕೊಂಡು ಹೋಗುತ್ತಾರೆ ಎನ್ನತಕ್ಕಂಥ ನಂಬಿಕೆ ಅಧಿಕಾರಿಗೆ ಇದ್ದಾಗ ಮಾತ್ರ, ಆಗ ಓರಲ್ ಇನಸ್ಟ್ರಕ್ಷನ್ಸ್ ನಡೆಯುತ್ತದೆ. ಆ ನಂಬಿಕೆಯೇ ಹೋರಿ ಹೋಗಿದೆಯಲ್ಲ ಸ್ವಾಮಿ. ಆ ನಂಬಿಕೆ ಈ ಸರ್ಕಾರದಲ್ಲಿ ಉಳಿದೆ ಇಲ್ಲ. ಯಾವಾಗ ನೀವು ರೈಟಿಂಗನಲ್ಲಿ ಇಶ್ಯೂ ಮಾಡುತ್ತಾ ಇದ್ದೀರಿ ಎಂದರೆ ಸ್ವಾಮಿ ಇದು ಫ್ಲಡಗಾಗಿ ಬಂದಿರುವ ಹಣ, ನಾವು ಸ್ಕೇರಸಿಟಿಗೆ ಖರ್ಚು

ಮಾಡುವುದಿಲ್ಲ, ಅಥವಾ ಫಾಡರಗೆ ಕೊಟ್ಟಿದ್ದಾರೆ, ಈ ಹಣದಲ್ಲಿ ನಾವು ಇತರೆ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಬಹಳ ಕಡೆ ಹೇಳಿದ್ದಾರೆ. ಇದು ನನ್ನ ಅನುಭವದ ಮಾತನ್ನು ಹೇಳುತ್ತಾ ಇದ್ದೇನೆ. ಈ ಹಣವನ್ನು ಬೇರೆ ಕೆಲಸಗಳಿಗಾಗಿ, ಕಾಮಗಾರಿಗಳಿಗಾಗಿ ತೆಗೆದುಕೊಳ್ಳಬೇಕು ಎಂದು ಹೇಳಿ ನೀವು ಮೇಲಿನವರಿಂದ ಇನಸ್ಟ್ರಕ್ಷನ್ಸ ಕೊಡಿಸಿದರೆ, ನಾವು ಒಪ್ಪುತ್ತೇವೆ ಎಂದು ಅನೇಕ ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಅದಕ್ಕೆ ನೀವು ಒಂದು ಕೆಲಸ ಮಾಡಿ. ಈ ರೀತಿಯ ಪದ್ಧತಿ ಹಿಂದೆ ಇರಲಿಲ್ಲ. ಇದು ೨-೩ ವರ್ಷಗಳಿಂದೀಚೆಗೆ ಪ್ರಾರಂಭವಾಯಿತು. ಈ ಪದ್ಧಿತಿ ಬರುವುದಕ್ಕೆ ಮುಂಚೆ ಲಂಪಸಮ್ ಅಮೌಂಟ್ ಕೊಡುತ್ತಾ ಇದ್ದರು. ಬಹಳಷ್ಟು ಜನರಿಂದ ಬೇರೆ ಕೆಲಸ ಅಂದರೆ ಫಾಡರಗೆ ಕೊಟ್ಟಿದ್ದುದು, ನೀರಿಗೆ ಕೊಟ್ಟಿದ್ದುದು ಬೇರೆ ಬೇರೆ ಕೆಲಸಕ್ಕೆ ಕೊಟ್ಟಿದ್ದುದನ್ನು ಮತ್ತೆ ಯಾವುದಾದರೂ ಬೇರೆ ಕಾಮಗಾರಿಗಳಿಗೆ ಉಪಯೋಗ ಮಾಡುತ್ತಾರೆ ಎಂದು ಕೆಲವು ದೂರುಗಳ ಬಂದ ಮೇಲೆ, ಸ್ವಲ್ಪ ವ್ಯವಸ್ಥೆಗಳನ್ನು ಮಾಡಿದ್ದಾರೆ. ನಾನು ಇವತ್ತು ಏನು ಕೇಳುತ್ತಾ ಇದ್ದೇನೆ ಎಂದರೆ ಇದರಲ್ಲಿ ಸ್ವಲ್ಪ ನೀವು ಎಡವಿದ್ದೀರಿ. ಅದು ತಪ್ಪು. ಎಲ್ಲಾ ಕಡೆ ಸಾರಾಸಗಟಾಗಿ ಹಂಚಿದಾಗ ಇದು ಸ್ವಲ್ಪ ತಪ್ಪಾಗಿದೆ. ತಪ್ಪಾಗಿದೆ ಎಂದು ಒಪ್ಪಿಕೊಂಡರೆ, ಮಹಾ ಅಪರಾಧ ಏನೂ ಆಗುವುದಿಲ್ಲ. ಆದ್ದರಿಂದ ಅದನ್ನು ಈಗಲೂ ಸರಿಪಡಿಸಿ, ಎಲ್ಲಿ ಅವಶ್ಯಕತೆ ಇದೆ, ಎಲ್ಲಿ ತೊಂದರೆ ಇದೆ ಅಲ್ಲಿಗೆ ನೇರವಾಗಿ ಹಣವನ್ನು ಕಳುಹಿಸತಕ್ಕಂಥಾದ್ದು ಮಾಡಿ. ಇನ್ನೊಂದು ನನ್ನ ಸೂಚನೆ ಏನೆಂದರೆ ಫಾಡರ್ ಬ್ಯಾಂಕುಗಳನ್ನು ಮಾಡಬೇಕು. `Shelf of projects' ಮಾನ್ಯ ಪ್ರಕಾಶರವರು ಹೇಳುತ್ತಾ ಇದ್ದರು, ಈಗಾಗಲೆ ನಮ್ಮಲ್ಲಿ ಇದೆ ಎಂದು. ಆದರೆ ನನಗೆ ಬಂದಂಥ ವರ್ತಮಾನ ಏನು ಎಂದರೆ ಹಣ ಇದ್ದರೂ, ಪಂಚಾಯಿತಿಯಿಂದ ಹಣ ಬಿಡುಗಡೆ ಆಗಿದ್ದರೂ ಅನೇಕ ಕಡೆ ಸರಿಯಾಗಿ ಖರ್ಚು ಮಾಡಿಲ್ಲ. ನೀವು ಹಣ ಖರ್ಚು ಮಾಡುವವರೆಗೆ ಭಾರತ ಸರ್ಕಾರದವರು ಸೆಕೆಂಡ್ ಇನಸ್ಟಾಲಮೆಂಟ್ ಕೊಡುವುದಿಲ್ಲ. ನೀವು ಎಕ್ಸಪೆಂಡಿಚರ್ ತೋರಿಸಿದಾಗ ಮಾತ್ರ ಅವರು ಸ್ಪಷ್ಟವಾಗಿ ಎಲ್ಲಿ ಅವಶ್ಯಕತೆ ಇದೆ, ಎಲ್ಲಿ ಜರೂರು ಇದೆ ಅಲ್ಲಿತೋರಿಸಿದರೆ ಹಣ ಕೊಡುತ್ತಾರೆ. ಅದಕ್ಕಾಗಿ ಇವತ್ತು ನಿಮಗೆ ಸೆಕೆಂಡ್ ಇನಸ್ಟಾಲಮೆಂಟ್ ಕೂಡ ಬಂದಿಲ್ಲ. ಈಗ ಸುಮಾರು ೫ ತಿಂಗಳು ಆಯಿತು. ಇನ್ನೊಂದು ೧೫ ದಿವಸದಲ್ಲಿ ೬ನೇ ತಿಂಗಳನ್ನು ಕಳೆಯುತ್ತೇವೆ. ಅದಕ್ಕೆ Employment Assurance ಇದರಲ್ಲೂ ಕೂಡ ಫಸ್ಟ ಇನಸ್ಟಾಲಮೆಂಟ್ ಹಣವನ್ನು ನಿಮ್ಮ ಜಿಲ್ಲಾಪರಿಷತ್ತಿನವರು ಖರ್ಚುಮಾಡಿ, ಏನಾದರೂ ತೋರಿಸಿದರೆ ಸೆಕೆಂಡ್ ಇನಸ್ಟಾಲಮೆಂಟ್ ಬಿಡಡುಗಡೆ ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಕೆಲವುಕಡೆ ಆಗಿದೆ. ಅನೇಕ ಕಡೆಗಳಲ್ಲಿ ಬೇಕಾದರೆ ನೀವವು ರಿವ್ಯೂ ಮಾಡಿ. ಅಧಿಕಾರಿಗಳ ಹತ್ತಿರ ಬೇರೆಯವರ ಹತ್ತಿರ ಬೇಕಾದ ಇನಫಾರ್ಮೇಶನನ್ನು ತೆಗೆದುಕೊಳ್ಳುತ್ತೇವೆ. ಅವರ ಹೆಸರು ಹೇಳುವ ಅವಶ್ಯಕತೆ ಇಲ್ಲ. ಆದರೆ ಇಲ್ಲಿ ಕೆಲಸ ಆಗಬೇಕು. ಒಬ್ಬರ ಮೇಲೆ ಒಬ್ಬರು ದೂರು ತರತಕ್ಕಂಥದ್ದು ಅಲ್ಲ. ಏಕೆಂದರೆ ಇಂತಹ ಕಷ್ಟ ಕೆಲಸ ಆಗುತ್ತದೆ. development works ಬಹಳಷ್ಟು ನಿಂತುಹೋಗಿದೆ. ಅನೇಕ ಬಜೆಟೆಡ್ ವರ್ಕ ಎಲ್ಲಿ ನೀವು ಮಾಡಿ ತೋರಿಸಿರಿ, ಸಣ್ಣ ನೀರಾವರಿ, ಮಧ್ಯಮ ನೀರಾವರಿ ಮತ್ತು ದೊಡ್ಡ ನೀರಾವರಿಗೆ ನೀವು ಬಜೆಟನಲ್ಲಿ ತೋರಿಸಿದಷ್ಟು ಪ್ರಾವಿಷನ್ ಇಲ್ಲ ಎಂದು ನಾನು ಈಗಾಗಲೇ ನಿಮಗೆ ಹೇಳಿದೆ. ಸುಮ್ಮನೆ ನಾವು ಅದನ್ನು ಹೇಳಿಕೊಂಡಂತಾಗುತ್ತದೆ. ಅಷ್ಟೆ. ಅದಕ್ಕೆ, ಸ್ವಲ್ಪ ರಿಯಾಲಿಟಿಯನ್ನು ಅರ್ಥಮಾಡಿಕೊಂಡು, ಹಣವನ್ನು

ಬಿಡುಗಡೆ ಮಾಡಬೇಕು ಮತ್ತು ಸ್ಟೇಟಲೆವೆಲನಲ್ಲಿ ಇದಕ್ಕೆ ಒಂದು ರಿವ್ಯೂ ಮಾಡಿ. ಯಾವ ಯಾವ ಇಲಾಖೆಯಲ್ಲಿ ಎಷ್ಟು ಹಣ ಇದೆ, ಯಾರ್‍ಯಾರು ಎಷ್ಟೆಷ್ಟು ಇದಕ್ಕಾಗಿ ಖರ್ಚು ಮಾಡಬಹುದು ಎನ್ನತಕ್ಕಂಥಾದ್ದನ್ನು ಮಾಡಿದರೆ ಮಾತ್ರ ನಮ್ಮ ಮುಂದೆ ಒಂದು ಕ್ಲಿಯರ್ ಪಿಕ್ಚರ್ ಬರುತ್ತದೆ. ಅಂದರೆ ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ನಾವು ಎಷ್ಟೆಷ್ಟು ಹಣ ಕೊಡಬೇಕು, ಆ ರೀತಿ ಕೊಡಬೇಕಾದರೆ ಎಲ್ಲೆಲ್ಲಿ ಕಟ್ ಮಾಡಬೇಕು ಇದನ್ನೂ ಕೂಡ ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಅದಕ್ಕಾಗಿ ಬೇಗ ಬಿಡುಗಡೆ ಮಾಡಿ. ನಾವು ಊರಿಗೆ ಹೋಗುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಊರಿಗೆ ಹೋಗುತ್ತೀರಾ? ಆಗಬಹುದು. ಅದು ಬಿಟ್ಟು, ಈ ಗ್ರಾನೈಟ್ ಮಾಡುವುದಕ್ಕೆ ಹೋಗಬೇಡಿ. ಈ ಗ್ರಾನೈಟನಿಂದಲೇ ಸದನದ ಇಷ್ಟೊಂದು ಟೈಮ್ ಹೋಗಿದ್ದುದು....

ಅದಕ್ಕಾಗಿ ಇದನ್ನು ಗಣನೆಗೆ ತೆಗೆದುಕೊಂಡು, ಹಣವನ್ನು ಈಕ್ವಲ್ಲಾಗಿ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕಿಂತಲೂ ಅವಶ್ಯಕತೆಗಳು ರಿಲೀಫನಲ್ಲಿ ನಾನು ನಿಮಗೆ ತೋರಿಸುತ್ತೇನೆ. ಅನೆಕ್ಷರ್ - ೨ ನಿಮ್ಮ ಸ್ಟೇಟಮೆಂಟನಲ್ಲಿ ಫ್ಲಡ್ ರಿಲೀಫನಲ್ಲಿ ಬೆಂಗಳೂರು ಅರ್ಬನಗೆ ಫ್ಲಡ್ ಆಯಿತು ಎಂದು ಅಲ್ಲಿ ಹಣ ಬಿಡುಗಡೆಯಾಗಿದೆ. ಕೋಲಾರದಲ್ಲಿ ಫ್ಲಡ್ ರಿಲೀಫ್ ೪೭ ಲಕ್ಷ ತಮಲ್ಲಿ. ಅಲ್ಲಿ ಬರಗಾಲ - ಇದೂ ಎರಡೂ ಇವೆ. ಆಮೇಲೆ ಚಿಕ್ಕಮಗಳೂರು ಒಪ್ಪಿಕೊಳ್ಳೋಣ. ಆಮೇಲೆಹಾಸನ - ಕೊಡಗಿಗೆ ೯ ಲಕ್ಷ. ದಕ್ಷಿಣ ಕನ್ನಡ ಜಿಲ್ಲೆಗೆ ೧೯ ಲಕ್ಷ, ಬೀದರನಲ್ಲಿ ೫೦ ಸಾವಿರ. ಗುಲ್ಬರ್ಗಾದಲ್ಲಿ ೧ ಲಕ್ಷ. ಎಲ್ಲಿ ೯ ಟ್ಯಾಂಕ್ ಹೊಡೆದು ಹೋಗಿದೆ ಎಂದು ನಾವು ಹೇಳಿದರೆ ಅಲ್ಲಿಗೆ ೧ ಲಕ್ಷ, ಬೇರೆ ಕಡೆ ಅದನ್ನು ತಮ್ಮ ಗಮನಕ್ಕೆ ತಂದಿರಬಹುದು. ಆಮೇಲೆ ಧಾರವಾಡ ೩೬ ಲಕ್ಷ. ಹೀಗೆ ಫ್ಲಡ್ ಡಾಮೇಜಾಗಿದೆ ಅಂತ ಹೇಳಿ, ಅತೀ ಮಳೆ ಬಂದು, ಅತೀವೃಷ್ಟಿಯಾಗಿ ಅನೇಕ ಕಡೆ ತೊಂದರೆಯಾಗುದ ಕಾರಣ, ಆ ಒಂದು ಕೆರೆಯಾಗಲ್ಲಿ, ರಸ್ತೆಯಾಗಲಿ, ದುರಸ್ತಿ ಮಾಡುವುದಕ್ಕೆ ಧಾರವಾಡದಲ್ಲಿ, ಕೋಲಾರದಲ್ಲಿ ಆಮೇಲೆ ಬೆಂಗಳೂರು ಅರ್ಬನನಲ್ಲಿ ಹಾಗೂ ಬಿಜಾಪುರದಲ್ಲಿ ಹಣ ಬಿಡುಗಡೆಯಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಉಪಾಧ್ಯಕ್ಷರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಮ್ಮೆಗೆ ಉತ್ತರಕೊಡಿ. ಮಧ್ಯದಲ್ಲಿ ಏಕೆ ಎದ್ದು ನಿಲ್ಲುತ್ತೀರಿ?

ಶ್ರೀ ಆರ್.ಎಲ್. ಜಾಲಪ್ಪ : ನನಗೆ ಜ್ಞಾಪಕ ಇರುವುದಿಲ್ಲ. ಅದಕ್ಕಾಗಿ ಆಗಿಂದಾಗ್ಗೆ ಹೇಳಿಬಿಟ್ಟರೆ ಸರಿಹೋಗುತ್ತದೆ. ಕೋಲಾರ ಜಿಲ್ಲೆಗೆ ಮತ್ತು ಬೆಂಗಳೂರು ರೂರಲ್ ಜಿಲ್ಲೆಗೆ ಈ ಹಣವನ್ನು ಬಿಡುಗಡೆ ಮಾಡಿರುವುದು ಹಿಂದಿನ ಬಾಕಿಯನ್ನು ಸೆಟ್ಲ ಮಾಡುವುದಕ್ಕೆ. ಸ್ವಾಮಿ ತಮಗೆ ಗೊತ್ತಿದೆ, ತಮಗೆ ಜ್ಞಾಪಕ ಇದೆ. ೧೯೯೧-೯೨ರಲ್ಲಿ ಬಂದಿದ್ದೀರಿ. ಹೆವಿರೈನ್ಸ ಆಗಿ, ಕೋಲಾರ ಜಿಲ್ಲೆಯೊಳಗೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯೊಳಗೆ ಮನೆಗಳು ಬಿದ್ದು ಹೋಗಿದ್ದದನ್ನು ತಾವೇ ಬಂದು ನೋಡಿದ್ದೀರಿ. ನಾನು ನನ್ನ ತಾಲ್ಲೂಕಿನ ಗಡಿ ಭಾಗವಾದ ದೇಗಡೆಹಳ್ಳಿ ಹತ್ತಿರ ತಮ್ಮನ್ನು ರಿಸೀಟ್ ಮಾಡಿ, ತಮಗೆಲ್ಲಾ ಅವುಗಳನ್ನು ತೋರಿಸದ ನಂತರ ಕಳುಹಿಸಿಕೊಟ್ಟೆ. ಆ ಭಾಗದಲ್ಲಿ ಹೆಚ್ಚಿಗೆ ಮಳೆಯಾಗುವುದಿಲ್ಲ ಎಂದು

ತಿಳಿದುಕೊಳ್ಳಬೇಡಿ. ಒಂದೊಂದು ಸಾರಿ ಎದ್ವಾತದ್ವ ಆದಾಗ ನಮ್ಮ ತಾಲ್ಲೂಕೊಂದರಲ್ಲೇ ೧೪,೩೦೦ ಮನೆಗಳು ಬಿದ್ದು ಹೋದವು. ೫ ಮನೆಗೂ ದುಡ್ಡು ಸಿಕ್ಕಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮತ್ತೆ ಸಿಕ್ಕಿ ಹಾಕಿಕೊಳ್ಳುತ್ತೀರಿ. ಮತ್ತೆ ಎಡುವುತ್ತೀರಿ; ನೀವು ಏನು ಮಾಡಿದ್ದೀರಿ? ಆಯಿತು ನಾನು ಒಪ್ಪಿಕೊಂಡೆ. ನಿಮ್ಮ ಊರಲ್ಲಿ ಫ್ಲಡನಲ್ಲಿ ಆಗಿದ್ದರೆ, ಬೆಂಗಳೂರು ರೂರಲ್ ಜಿಲ್ಲೆಗೆ ಹಣವನ್ನೇ ಬಿಡುಗಡೆ ಮಾಡಿಲ್ಲ. ಒಂದು ನಯಾಪೈಸೆಯನ್ನೂ ಕೊಟ್ಟಿಲ್ಲ. ಅರ್ಬನಗೆ ಕೊಟ್ಟಿದ್ದೀರಿ. ಮತ್ತೆ ಏಕೆ ಹೇಳಿಕೊಳ್ಳುತ್ತೀರಿ. ಸುಮ್ಮನೆ, ಸ್ವಲ್ಪ ನೋಡಿಯಾದರೂ ಹೇಳಿಬಿಡಿ. ಸುಮ್ಮನೆ ಸಮರ್ಥನೆ ಏಕೆ ಮಾಡಿಕೊಳ್ಳುತ್ತೀರಿ? ಬೆಂಗಳೂರು ರೂರಲಗೆ ಕೊಟ್ಟಿಲ್ಲ ನೀವು. ಅನೆಕ್ಸರ್ - ೨ ಅರ್ಬನಗೆ ಕೊಟ್ಟಿದ್ದೀರಿ; ಹಣ. ಬೆಂಗಳೂರು ರೂರಲಗೆ ಕೊಟ್ಟಿಲ್ಲ ನೀವು. ಹಾಗಾದರೆ ಯಾವುದು ಸರಿ ಅಂತ ತಿಳಿದುಕೊಳ್ಳಲು ನಾನು? ಅದಕ್ಕಾಗಿ ಸುಮ್ಮನೆ ಹೇಳಬೇಡಿ, ಸ್ವಲ್ಪ ಏಕೋ ಸಮಯ ಸರಿಯಲ್ಲ. ಇದನ್ನು ನೋಡಿದರೆ ಸ್ವಲ್ಪ ಎಡವಟ್ಟಾಗಿದೆಯೆಂದು ಕಾಣುತ್ತದೆ.

Sri R.L. Jalappa : You are correct. I agree with you.

Sri M. Mallikarjuna Kharge : For everything, I am correct.

ಅದಕ್ಕಾಗಿ ಹೇಳುತ್ತಿದ್ದೇನೆ. ಅದಕ್ಕಾಗಿ ನೋಡಿ ಇದರಲ್ಲೇನೋ ಎಡವಟ್ಟಾಗಿದೆ. ಅವರು ಇದನ್ನು ನೋಡುವುದಕ್ಕೆ ಸ್ವಲ್ಪ ಅವಕಾಶ ಸಿಕ್ಕಿಲ್ಲ. ಅವರೇನು ತಿಳಿದುಕೊಂಡಿದ್ದಾರೆಂದರೆ ಬಹುಶಃ ಇವತ್ತೂ ಗ್ರಾನ್ಟೈಟನಲ್ಲೇ ಸಮಯ ಹೋಗತ್ತದೆ. ಸೋಮವಾರ ಇದರ ಚರ್ಚೆ ಬರಬಹುದು, ಅಷ್ಟರಲ್ಲಿ ತಯಾರಾಗಬಹುದು ಅಂತ್ ತಿಳಿದುಕೊಂಡಿದ್ದರು ಎಂದು ಕಾಣುತ್ತದೆ. ನೀವು ಇದನ್ನು seriously ರಿವ್ಯೂ ಮಾಡಿ. ಅನೇಕ ಕಡೆ ನಾನು ನೋಡಿದ್ದೇನೆ. ಎಲ್ಲಿ ಕೊಡಬಾರದು ಅಲ್ಲಿ ಹಣ ಕೊಟ್ಟಿದ್ದೀರಿ. ಎಲ್ಲಿ ಕೊಡಬೇಕು ಅಲ್ಲಿ ಕೊಟ್ಟಿಲ್ಲ. ಹೀಗಾಗಿ ಬರಗಾಲ ಪರಿಹಾರ ಕಾಮಗಾರಿ ಸರಿಯಾದ ರೀತಿಯಲ್ಲಿ ನಡೆದಿಲ್ಲ. ಸಮರ್ಪಕವಾಗಿ ನಡೆದಿಲ್ಲ. ಅದಕ್ಕಾಗಿ ನಾಳೆ ಇದರ ಹೊಣೆಯನ್ನು ನೀವು ಹೊತ್ತುಕೊಳ್ಳಬೇಕಾಗುತ್ತದೆ. ಅನೇಕ ಜನ ಏನು ಎನ್ನುತ್ತಿದ್ದಾರೆಂದರೆ, ಸೀನಿಯರ್ ಮ್ಯಾನ್ ಏಕೆ ಅರರ ಮನ ನೋಯಿಸಬೇಕು, ತಾವು ನೊಂದುಕೊಳ್ಳುತ್ತೀರಿ ಅಂತ ಬಹಳ ಕಠೋರವಾಗಿ ಹೇಳುವುದಿಲ್ಲ. ಆದರೆ ಈ ಸ್ಟೇಟಮೆಂಟ್ ನೋಡಿದ ಮೇಲೆ ನಿಜವಾಗಿಯೂ ನಾವು ಹೇಳಬೇಕಾಗುತ್ತದೆ. ನೀವು ಬಹುಶಃ ನಿಮ್ಮ ಮೈಂಡನ್ನು ಇದರ ಕಡೆಗೆ ಅಪ್ಲೈ ಮಾಡಲಿಲ್ಲ ಎಂದು. ಅದಕ್ಕಾಗಿ ಪುನಃ ನೀವು ಇರದ ಬಗ್ಗೆ ರಿವ್ಯೂ ಮಾಡಬೇಕು. ಮತ್ತು ಒಂದು ಸ್ಪಷ್ಟವಾದ ಚಿತ್ರ ನಿಮ್ಮ ಉತ್ತರದಲ್ಲಿ ಕೊನೆಗೆ ಎಲ್ಲವನ್ನೂ ಬಿಡಿಸಿ ಬಿಡಿಸಿ ಹೇಳಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮತ್ತು ಎಲ್ಲೆಲ್ಲಿ ತೊಂದರೆಗೆ ಈಡಾಗಿದ್ದಾರೆ, ಅಲ್ಲಿ ಹಣ ಬಿಡುಗಡೆ ಮಾಡಿ. ನಾನು ಆ ಜಿಲ್ಲೆ, ಈ ಜಿಲ್ಲೆ ಎಂದು ಹೇಳುವುದಿಲ್ಲ. ನೀವೇ ಖುದ್ದಾಗಿ ಪರಿಶೀಲಿಸಿ, ಒಂದು ಸಲ ನೀವು ಜಿಲ್ಲಾಧಿಕಾರಿಗಳ ಮೀಟಿಂಗನ್ನು ಕರೆಯಿರಿ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ನೀವು ಕರೆಯಿರಿ, ಖುದ್ದಾಗಿ ಫಗರ್ಸ ತೆಗೆದುಕೊಂಡು ಈ ಸದನದ ಮುಂದೆ ಬಂದರೆ ಒಂದು ಕ್ಲಿಯರ್ ಪಿಕ್ಚರ್ ಬರುತ್ತದೆ. ನಮಗೂ ಕೂಡ ಆ ಬಗ್ಗ ಕೇಳುವುದಕ್ಕೂ ಅನುಕೂಲವಾಗುತ್ತದೆ. ಅದು ಏನೇ ಇರಲಿ, ಇವತ್ತು ಕೊಟ್ಟಿರತಕ್ಕಹತಹ ಸ್ಟೇಟಮೆಂಟ್

ಅಷ್ಟು ಸಮಾಧಾಕಾರಕವಾಗಿಲ್ಲ ಮತ್ತು ಯಾವ ವೇಗದಿಂದ ಈ ರಿಲೀಫ್ ವರ್ಕ್ಸ ನಡೆಯಬೇಕಾಗಿತ್ತು. ಆ ವೇಗದಲ್ಲಿ ಈ ಕೆಲಸ ನಡೆದಿಲ್ಲ. ಮತ್ತು ನ್ಯಾಚುರಲ್ ಕೆಲಾಮಿಟಿ ಫಂಡನಲ್ಲಿ ಹೆಚ್ಚು ಹಣವನ್ನು ಕೊಟ್ಟು, ಇದರ ಸದುಪಯೋಗ ಮಾಡತಕ್ಕಂತಹ ಕೆಲಸವನ್ನು ಅವರು ಮಾಡಿಲ್ಲ. ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಹುಡುಕುತ್ತಾರೆ. ಸರಿಯಾದ ವ್ಯವಸ್ಥೆ ಹುಡುಕಿ ಎಲ್ಲಾ ಕಡೆ ಬರಗಾಲ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆಯನ್ನು ಕೂಡಿ ಮತ್ತೆ ಇನ್ನೊಂದು ಮನವಿ ನಿಮ್ಮಲ್ಲಿ ಅಂದರೆ ನೀವು ಏನು ಡಿಸ್ಟ್ರಿಕ್ಟ ಇನಚಾರ್ಜ ಮಿನಿಸ್ಟರ್ ಮಾಡಿದ್ದೀರಿ; ಒಂದು ಸಾರಿ ಕೊನೆಯಪಕ್ಷ ಅವರಾದರೂ ರಿವ್ಯೂ ಮಾಡಲಿ. ಈಗ ಅವರೆಲ್ಲಾ ರಿವ್ಯೂ ಮಾಡಿ ನಿಮಗೆ ಪಟ್ಟಿ ಕೊಟ್ಟಿದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ. ನೀವೇ ಎಲ್ಲಾ ಕಡೆ ಹೋಗುವುದಕ್ಕೆ ಆಗುವುದಿಲ್ಲ ಎಂದು ತಿಳಿದುಕೊಳ್ಳಿ. ಕೊನೆಯಪಕ್ಷ ನಿಮ್ಮ ಡಿಸ್ಟ್ರಕ್ಟ ಇನಚಾರ್ಜ ಮಂತ್ರಿಗಳು ಜಿಲ್ಲಾಗಳಿಗೆ ಹೋಗಿ ರಿಲೀಫನಲ್ಲಿ ಏನು ಮಾಡಿದ್ದಾರೆ? ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ. ಅಥವಾ ಫ್ಲಡನಲ್ಲಿ ಫಾಡರಗೆ, ಕುಡಿಯುವ ನೀರಿಗೆ, ಇವನ್ನಾದರೂ ಕರೆಕ್ಟ ಫಿಗರ್ಸ ತಂದು ಕೊಟ್ಟು, ಅವುಗಳನ್ನು ನೋಡಿಕೊಂಡು ನೀವು ಒಂದು ಕನ್ಸಾಲಿಡೇಟ್ ಮಾಡಿ, ಒಂದು ಸ್ಟೇಟಮೆಂಟನ್ನು ಹೌಸಗೆ ಹೇಳಿದರೆ, ಒಂದು ಒಳ್ಳೆಯ ರೀತಿಯಲ್ಲಿ ಅದು ಉಪಯೋಗವಾಗುತ್ತದೆ ಎನ್ನತಕ್ಕ ಮಾತನ್ನು ಈ ಸದನದಲ್ಲಿ ಹೇಳುತ್ತೇನೆ. ಇನ್ನು ಮೇಲಾದರೂ ಕೂಡ ಸರ್ಕಾರ ಎಚ್ಚರ ವಹಿಸಿ, ಹೆಚ್ಚಿನ ಹಣವನ್ನು ಎಲ್ಲೆಲ್ಲಿ ತೊಂದರೆಗೆ ಜನ ಈಡಾಗಿದ್ದಾರೆ, ಜಾನುವಾರುಗಳಾಗಲಿ, ಜನ ಆಗಲಿ, ಕಾರ್ಮಿಕರಾಗಲಿ, ಅವರಿಗೆ ಸಹಾಯ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಮತ್ತು ಯಾವ ರೈತರು ಶಾರ್ಟಟರ್ಮ ಕ್ರಾಪ್ಸ ಇಡುತ್ತಾರೆ, ೬೦ ದಿವಸಕ್ಕೆ, ೭೦ ದಿವಸಕ್ಕೆ, ಬೆಳೆ ಬರುವಂತಹ ಬೀಜ ಸಿಕ್ಕಿದರೆ, ಅವುಗಳನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಆ ಬಗ್ಗೆ ಪ್ರಚಾರ ಮಾಡಬೇಕು. ಅಗ್ರಿಕಲ್ಚರಲ್ ಆಫೀಸರ್ಸನ್ನು ಕರೆಯಿಸಿ. ನಿಜವಾಗಿಯೂ ನೋಡಿದರೆ, ಈ ಒಂದು ಬರಗಾಲ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಚರ್ಚೆ ಇದ್ದಾಗ ಎಲ್ಲಾ, ಆಗ್ರಿಕಲ್ಚರಲ್ ಡಿಪಾರ್ಟಮೆಂಟನವರನ್ನು ಕರೆಯಿಸಿ ಕೂಡಿಸಿ ಅವರನ್ನು ಇನ್ವಾಲ್ವ ಮಾಡಿ, ಅವರ ಕಾರ್ಯಕ್ರಮಗಳು ಏನು ಇವೆ, ಅವುಗಳನ್ನು ನೋಡಿಕೊಂಡು, ಮಾಡುತ್ತಾ ಇದ್ದೆವು ಹಿಂದೆ. ಇವತ್ತು ಆಗ್ರಿಕಲ್ಚರಲ್ ಡಿಪಾರ್ಟಮೆಂಟನವರು ಇದರ ಬಗ್ಗೆ ಇನಾಕ್ಟೀವ್ ಆಗಿದ್ದಾರೆ. ಎಕ್ಸಪ್ಟ ೩ ಸೆಂಟೆನ್ಸ ನೀವು ಹೇಳಿದ್ದು ಬಿಟ್ಟರೆ, ಅವರದ್ದೇನೂ ಕಾಂಟ್ರಿಬ್ಯೂಷನ್ ಇಲ್ಲ. ಸಾಯಿಲ್ ಕನ್ಸರ್ವೇಸಗೆ ಸಂಬಂಧಪಟ್ಟವರು ಇಲ್ಲ. ಫಾರೆಸ್ಟ ಡಿಪಾರ್ಟಮೆಂಟನವರು ಇಲ್ಲ. ಅದಕ್ಕಾಗಿ ಅವರೆಲ್ಲರನ್ನೂ ಕರೆಯಿಸಿ, ನೀವು ಒಂದು ಮೀಟಿಂಗ್ ಮಾಡಿ, ಇದಕ್ಕೆ ಪರಿಹಾರವನ್ನು ಕಂಡುಹಿಡಿಯತಕ್ಕ ಕೆಲಸವನ್ನು ಮಾಡಬೇಕು. ಮತ್ತೆ ನಿಮ್ಮ ಉತ್ತರವನ್ನು ಏನೇನು ಅಕ್ಷನ್ ತೆಗೆದುಕೊಂಡಿದ್ದೀರಿ, ನಾನು ಏನೇನು ವಿಚಾರಗಳನ್ನು ಈಗಾಗಲೇ ಸದನದ ಮುಂದೆ ಇಟ್ಟಿದ್ದೇವೆ, ಅವುಗಳಿಗೆಲ್ಲಾ ಸ್ಪಷ್ಟೀಕರಣ ಕೊಡಬೇಕು ಮತ್ತು ಒಂದು ಸ್ಪಷ್ಟವಾದ ಹೇಳಿಕೆ ಕೊಡಬೇಕು.

೧.೦೦ ಪಿ.ಎಂ

ಇಲ್ಲಿಂದ ಒಂದು ಡೈರೆಕ್ಷನ್ ಹೋಗಬೇಕು, ಏನು ಅಂದರೆ ಡೆಪ್ಯೂಟಿ ಕಮೀಷನರರವರನ್ನು ನೋಡಲ್ ಆಫೀಸರನ್ನಾಗಿ ಮಾಡಿ, ಅವರು ಹೇಳಿದಂತಹ ಮಾತನ್ನು ಎಲ್ಲಾ ಅಧಿಕಾರಿಗಳು

ಕೇಳಬೇಕು. ಇಲ್ಲದಿದ್ದರೆ ಆ ಚೀಫ್ ಸೆಕ್ರೆಟರಿ ಸೀನಿಯರ್, ಡೈಪ್ಯುಟಿ ಕಮೀಷನರ್ ಜ್ಯೂನಿಯರ್ ಇವನಿಗೆ ನೀವು ನೋಡಲ್ ಆಫೀಸರನ್ನಾಗಿ ಮಾಡಿದರೆ, ಡಿ.ಸಿ.ಮೀಟಿಂಗ್ ಕರೆದರೆ, ಆ ಡೈಪ್ಯುಟಿ ಕಮೀಷನರ್ ನನಗಿಂತ ೪ ವರ್ಷ ಜ್ಯೂನಿಯರ್, ಅವನನ್ನು ತೆಗೆದುಕೊಂಡು ನಾನು ಏನು ಮಾಡಬೇಕು ಎಂದು ಚೀಫ್ ಸೆಕ್ರೆಟರಿ ಹೇಳುತ್ತಾನೆ. ಉದಾಹರಣೆಗ ಗುಲ್ಬರ್ಗವನ್ನೇ ತೆಗೆದುಕೊಳ್ಳಿ. ಡೈಪ್ಯುಟಿ ಕಮೀಷನರ್ ಜ್ಯೂನಿಯರ್. ಚೀಫ್ ಎಗ್ಸಿಕ್ಯೂಟೀವ್ ಆಫೀಸರ್ ಅಂತ ಏನು ಹೇಳುತ್ತೇವೆ, ಅವನು ಸೀನಿಯರ್. ಸ್ವಾಭಾವಿಕವಾಗಿ ನ್ಯಾಚುರಲ್ ಕೆಲಾಮಿಟಿ ಮೀಟಿಂಗನ್ನು ಡಿ.ಸಿ. ಕರೆದರೆ ಅವರು ಅಷ್ಟು ಇವರ ಮಾತಿಗೆ ಗಮನ ಕೊಡುವುದಿಲ್ಲ. ಅವನು ಏನು ಏಕೆ ಹೋಗಲಿ ಅಂತ ಹೇಳಿ ಕೆಲವು ಕಡೆ ಹೊಂದಾಣಿಕೆ ಇಲ್ಲ. ಇದಕ್ಕಾಗಿ ಇದನ್ನೆಲ್ಲಾ ತಾವು ಸರಿಪಡಿಸಬೇಕು. ಇದರ ಬಗ್ಗೆ ಸ್ಪಷ್ಟವಾದ ತಮ್ಮ ನಿಲುವು, ಎಕ್ಸಪೆಂಡಿಚರ್, ಮತ್ತು ಹೊಸದಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಎಷ್ಟು ಹಣ ಬಿಡುಗಡೆ ಮಾಡುತ್ತೀರಿ? ಎನ್ನತಕ್ಕಂತಹದನ್ನು ತಿಳಿಸಬೇಕು ಎಂದು ತಮ್ಮನ್ನು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀಆರಗಂ ಜ್ಞಾನೇಂದ್ರ (ತೀರ್ಥಹಳ್ಳಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನಾನು ಮಲೆನಾಡಿನ ಪ್ರದೇಶದಿಂದ ಆಯಕೆಯಾಗಿ ಬಂದಿರತಕ್ಕಂತಹವನು. ಈ ದೇಶದ ೨ನೇ ಚಿರಾಪುಂಜಿಯೆಂದೇ ಹೆಸರನ್ನು ಗಳಿಸಿದಂತಹ ಒಂದು ಸ್ಥಳ ಆಗುಂಬೆಯನ್ನು ಹೊಂದಿದಂತಹ ಅತ್ಯಂತ ಹೆಚ್ಚು ಮಳೆಯಾಗತಕ್ಕಂತಹ ಒಂದು ಪ್ರದೇಶದಿಂದ ಆಯ್ಕೆಯಾಗಿ ಶಾಸಕನಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಬಂದ ಹೊಸದರಲ್ಲೇ ದುರಾದೃಷ್ಟವಶಾತ್, ಈ ಒಂದು ಅಭಾವ ಕಾಮಗಾರಿಯ ಬಗ್ಗೆ ನಾನೂ ಕೂಡ ಪ್ರಸ್ತಾಪ ಮಾಡುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಕೃತಿ ಮುನಿದು, ಇಡೀ ರಾಜ್ಯದಾದ್ಯಂತ ಜನ ಕಂಗಾಲಾಗುವಂತಹ, ಜನ ಆಕಾಶದ ಕಡೆ ನೋಡುವಂತಹ ಈ ಪರಿಸ್ಥಿತಿಯಲ್ಲಿ ಒಂದು ನಾಗರೀಕ ಸರ್ಕಾರ, ಜನರಿಂದ ಆಯ್ಕೆಯಾಗಿರತಕ್ಕ ಸರ್ಕಾರ, ಜನರಿಗೆ ಏನು ಅಶ್ವಾಸನೆಯನ್ನು ಕೊಡಬೇಕಾಗಿತ್ತೋ, ಏನು ಭರವಸೆಯನ್ನು ಕೊಡಬೇಕಾಗಿತ್ತೊ, ಯಾವ ರೀತಿಯಲ್ಲಿ ಅವರಿಗೆ ಸಹಾಯಕ್ಕೋಸ್ಕರ ಧಾವಿಸಬೇಕಾಗಿತ್ತೋ, ಈ ನಿಟ್ಟಿನಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಜನ ಈ ಸರ್ಕಾರದ ಇದುವರೆಗಿನ ಕಾರ್ಯಕ್ರಮದಿಂದ, ಇದುವರೆಗಿನ ಭರವಸೆಯಿಂದ ನಿರಾಶಿತರಾಗಿದ್ದಾರೆಂಬುದನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ಮಲೆನಾಡಿನಲ್ಲಿ ಈ ಸಂದರ್ಭದಲ್ಲಿ ೩ ತಿಂಗಳು ಸೂರ್ಯನನ್ನು ನೋಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಮ್ಮ ಹಳ್ಳಿಗಳಲ್ಲೆಲ್ಲಾ, ಹೊಳೆ ಹಳ್ಳಗಳು ಕಟ್ಟಿಕೊಂಡು, ನಾವು ೩-೪ ತಿಂಗಳಿಗೆ ಆಗುವಷ್ಟು ಅಕ್ಕಿ-ದವಸ ದಾನ್ಯಗಳನ್ನು ದಾಸ್ತಾನು ಮಾಡುತ್ತಾ ಇದ್ದೆವು. ಆದರೆ ಇವತ್ತು ಯಾವ ಹಳ್ಳ ಮತ್ತು ನದಿಗಳಲ್ಲೂ ಕೂಡ ನೆರೆ ಎನ್ನುವಂತಹದ್ದು ಬರಲೇ ಇಲ್ಲ, ಅದು ಬೇರೆ. ನೀರು ಕೆಂಪಾಗಿ ಹರಿಯಲಿಲ್ಲ. ಮಳೆಯೇ ಬರಲಿಲ್ಲ. ಇಷ್ಟೊತ್ತಿಗೆ ಅಂತರ್ಜಲ ಮೇಲೆ ಬಂದು ಬುಗ್ಗೆಯಾಗಿ ಮೇಲೆ ಬರುತ್ತಾ ಇತ್ತು. ರಸ್ತೆಯ ಮೇಲೆಲ್ಲಾ, ಜಲದ ಬುಗ್ಗೆಗಳು ಏಳುತ್ತಿದ್ದವು ನಮ್ಮ ಮಲೆನಾಡಿನ ಪ್ರದೇಶದಲ್ಲಿ. ಇವತ್ತು ಹೋದರೆ ಭೂಮಿ ಒಣಗಿದೆ. ಅಲ್ಲಿ-ಇಲ್ಲಿ ಸ್ವಲ್ಪ ಕೆಳಮಟ್ಟದ

ಜಮೀನಿನಲ್ಲಿ ಏನು ನಾಟಿ ಮಾಡಿದ್ದರು, ಆ ನಾಟಿ ಮಾಡಿರತಕ್ಕ ಸ್ಥಳವೂ ಕೂಡ, ಆ ಜಮೀನವರೂ ಕೂಡ ಪದೆ ಬಿಟ್ಟು ಪಾಳು ಪಾಳಾಗಿದೆ. ತಮಗೆ ಗೊತ್ತಿದೆ, ಮಾನ್ಯ ಜಾಲಪ್ಪನವರೂ ಕೂಡ ರೈತನ ಮಗ ಇದ್ದಾರೆ. ಒಮ್ಮೆ ಹದ ಮಾಡಿ ನಾಟಿ ಮಾಡಿದ ನಂತರ ಒಂದು ಸಾರಿ ಪಾಳು ಬಿಟ್ಟಂತಹ ಜಮೀನು ಮತ್ತೆ ಬರುವುದಿಲ್ಲ. ಹಸಿರಾಗಿತ್ತು ಸ್ವಲ್ಪ ಹಾಗೂ ಹೀಗೂ, ಹಳ್ಳದಲ್ಲಿ ಹರಿಯುತ್ತಿರತಕ್ಕಂತಹ ನೀರನ್ನು ಬಿಡುಗಡೆ ಮಾಡಿಕೊಂಡು ಸ್ವಲ್ಪ ಮಾಡಿದ್ದರು. ಆದರೆ ಇವತ್ತು ಎತ್ತರದ ಮಕ್ಕಿಗದ್ದೆ ಪ್ರದೇಶ ಅಂತ ಏನು ಹೇಳುತ್ತೇವೆ, ಆ ಪ್ರದೇಶದಲ್ಲಿ ಮಲೆನಾಡಿನ ಯಾವುದೇ ಪ್ರದೇಶದಲ್ಲಿ ನಾಟಿ ಮಾಡಿಲ್ಲ. ನಾವು ಆ ರೀತಿಯಲ್ಲಿ ಹೆಚ್ಚು ಮಳೆ ಬಂದು, ಜಲದ ಬುಗ್ಗೆಗಳು ಎದ್ದು ಅಂತರ್ಜಲ ಮೇಲೆ ಬಂದರೆ ಮುಂದಿನ ಬೇಸಿಗೆ ತುಂಬಾ ಅನುಕೂಲವೆಂದು ನಾವು ಭಾವಿಸುತ್ತೇವೆ. ಆದರೆ ಇವತ್ತು ನಾವು ಯೋಚನೆ ಮಾಡುವುದಾದರೆ, ಬರುವಂತಹ ಮುಂದಿನ ಬೇಸಿಗೆ, ಬಹಳ ಭಾರುಣವಾಗಿರತಕ್ಕಂತಹ ಸ್ಥಿತಿಯನ್ನು ನಾವು ಹೆದರಿಸುತ್ತೇವೆಯೇನೋ ಎನ್ನುವ ಸ್ಥಿತಿ ನಮಗೆಲ್ಲಾ ನಿರ್ಮಾಣ ಆಗಿದೆ. ಯಾವೆಲ್ಲಾ ಮಳೆಗಳು ಸಾಕಷ್ಟು ಬೀಳಬೇಕಾಗಿತ್ತೋ, ದೊಡ್ಡ ದೊಡ್ಡ ಮಳೆಗಳು ಅವುಗಳೆಲ್ಲಾ ಪಾಸಾಗಿ ಹೋಗಿವೆ, ಮಳೆ ಬರಲಿಲ್ಲ. ಸಾಮಾನ್ಯ ಪರಿಸ್ಥಿತಿಯಲ್ಲಿ ಸರ್ಕಾರ ಏನು ಮಾಡುತ್ತದೆ ಎಂಬುದು ಮುಖ್ಯ ಅಲ್ಲ. ಇಂತಹ ಒಂದು ದಯನೀಯವಾದಂತಹ ಪರಿಸ್ಥಿತಿಯಲ್ಲಿ ಈ ಒಂದು ಅನಾನುಕೂಲವಾಗಿರತಕ್ಕ ಪರಿಸ್ಥಿತಿಯಲ್ಲಿ, ಸರ್ಕಾರ ಜನತೆಗೆ, ಏನು ಸಹಾಯ ಮಾಡುತ್ತದೆ ಎನ್ನುವಂತಹದ್ದು ಮುಖ್ಯ ಆಗುತ್ತದೆ. ಏನೂ ಇಲ್ಲ ಎಂದು ಹೇಳುವಹಂತಹ ಕಾಲದಲ್ಲಿ ಏನು ಮಾಡದಿದ್ದರೂ ಅದು ನಡೆದು ಹೋಗುತ್ತದೆ ಅಥವಾ ಅದಕ್ಕೊಂದು ಸರ್ಕಾರ, ಮಂತ್ರಿಗಳು ಇರಬೇಕೆಂದೇನೂ ಇಲ್ಲ. ಸಾಮಾನ್ಯವಾಗಿ ವ್ಯವಸ್ಥೆ ನಡೆದುಕೊಂಡು ಹೋಗತ್ತದೆ. ಅಲ್ಲಿ ಎಲ್ಲೊ ಒಂದು ರಸ್ತೆ ಮಾಡುವುದು ಏನೋ ಮಾಡುವುದು ಅದು ನಡೆದುಕೊಂಡು ಹೋಗತ್ತದೆ. ಆದರೆ ಒಂದು ಸರ್ಕಾರ ಜನತೆಯ ಪಾಲಿಗೆ ಇದೆ ಎನ್ನುವುದನ್ನು ತೋರಿಸುವದಕ್ಕೆ ಇದೊಂದು ಸದಾವಕಾಶ. ನಾವು ಇದ್ದೇರೆ ನಿಮ್ಮ ಪಾಲಿಗೆ ನೀವು ಹೆದರುವ ಅವಶ್ಯಕತೆಯಿಲ್ಲ, ನಾವು ಎಲ್ಲವನ್ನು ಶಮನ ಮಾಡುತ್ತೇವೆನ್ನುವ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಇದೆಯೆಂದು ತೋರಿಸುವುದಕ್ಕೆ ಇಡೀ ರಾಜ್ಯದಲ್ಲಿ ಹೆಚ್ಚಿನ ಹಣವನ್ನು ಶಿವಮೊಗ್ಗ ಜಿಲ್ಲೆಗೆ ಒದಗಿಸಿರುವುದು. ನೋಡಿ ದಯವಿಟ್ಟು. ನಿಮಗೆ ಡಬಲ್ ಕೊಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಡಬಲ್ ಬಗ್ಗೆ ಮಾನ್ಯ ಹಿರಿಯ ನಾಯಕರಾದ ಖರ್ಗೆಯವರು ಹೇಳಿದರು ಡಬಲ್ ಯಾವ್ಯಾವುದು ಎಂದು ಹೇಳಿ. ನಾನು ಖೋಟ್ ಮಾಡುತ್ತೇನೆ, ನಾನು ಅದಕ್ಕೆ ಮುಂದೆ ಬರುತ್ತೇನೆ. ಸರ್ಕಾರ ತತಕ್ಷಣ ಇಂತಹ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ. ತಾವು ೨೫೭ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ರೂಪಿಸಿ ನಮಗೆ ಅಷ್ಟು ಹಣ ಬೇಕೆಂದು ಕೇಂದ್ರಕ್ಕೆ ಮನವಿ ಮಾಡುಕೊಂಡಿದ್ದೀರಿ. ಕೇಂದ್ರದಿಂದ ಎಷ್ಟು ಹಣ ಬಿಡುಗಡೆಯಾಗಿದೆಯೆಂದು ತಾವು ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಹಿಂದೆ ಒಂದು ಸಾರಿ ಇಲ್ಲಿ ಚರ್ಚೆಯಾದಗ, ನಾವು ಹೇಳಿದ್ದೇವೆ.

ಕೇಂದ್ರಸರ್ಕಾರಕ್ಕೆ ಕೋರಿಕೆಯನ್ನು ಸಲ್ಲಿಸಿದ್ದೇವೆ. ಬಹುಶಃ ರಾಷ್ಟ್ರದಲ್ಲಿ ಯಾರಿಗೂ ಅಡಿಷನಲ್ ಆಗಿ ಕೊಡುತ್ತಿಲ್ಲ ನಮಗೂ ಕೊಡುತ್ತಿಲ್ಲ, ನಾವು ಕೇಳಬೇಕಾಗಿತ್ತು ಕೇಳಿದ್ದೇವೆ. ಪ್ರಧಾನ ಮಂತ್ರಿಗಳು ನಮಗೆ ಏನು ಹೇಳಿದರು ಅಂದರೆ, ಇಲ್ಲ ನಾವು ಅಡಿಶನಲ್ ಆಗಿ ಕೊಡುವುದಕ್ಕೆ ಬರುವುದಿಲ್ಲ. ಆದರೆ ಎಂಪ್ಲಾಯಿಮೆಂಟ್ ಸ್ಕೀಮನಲ್ಲಿ ನೀವು ಎಷ್ಟಾದರೂ ಹಣ ಖರ್ಚುಮಾಡಿ ನಾವು ರೀಇಂಬರ್ಸ ಮಾಡುತ್ತೇವೆ. ೨೦ ಭಾಗ ರಾಜ್ಯಸರ್ಕಾರದ್ದು ೮೦ ಭಾಗ ಕೇಂದ್ರಸರ್ಕಾರದ್ದು ಎಷ್ಟಾದರೂ ಮಾಡಿಯೆಂದು ಹೇಳಿದ್ದಾರೆ. ಕೇಂದ್ರದಿಂದ ಸಹಾಯವನ್ನು ಮೊಯಿಲಿಯವರು ಇದ್ದಾಗ ಕೇಳಿದ್ದಾರೆ ಬಂಗಾರಪ್ಪನವರು ಇದ್ದಾಗ ಕೇಳಿದ್ದಾರೆ. ಎಲ್ಲರಿಗೂ ಬಂದಿವೆ, ಯಾರು ಜೀವ ಕಳೆದುಕೊಂಡಿದ್ದರು ಅವರಿಗೆ ಪ್ರಧಾನಮಂತ್ರಿಗಳು ಫಂಡನಿಂದ ೫೦, ೫೦ ಸಾವಿರ ಕೊಟ್ಟಿದ್ದಾರೆ. ನಮಗೊಬ್ಬರಿಗಲ್ಲ, ನಮಗೇನು ಮಲತಾಯಿ ಧೋರಣೆ ತೋರಿಸಿದ್ದಲ್ಲ. ಈ ವಿಷಯದಲ್ಲಿ ನಾನು ಅದನ್ನು ಹೇಳುವುದಕ್ಕೆ ತಯಾರಾಗಿಲ್ಲ. ಎಲ್ಲ ರಾಜ್ಯಗಳಿಗೂ ಕೂಡ ಫೈನಾನ್ಸ ಕಮೀಷನರವರು ಏನು ಫಿಕ್ಸ ಮಾಡಿದ್ದಾರೆ, ಅಷ್ಟು ಮಾತ್ರ ಹಣವನ್ನು ಒದಗಿಸುತ್ತಾರೆ. ಬೇಕಾದರೆ ಅಡ್ವಾನ್ಸ ಪೇಮೆಂಟ್ ಕೊಡುತ್ತಾರೆ. ವರ್ಷದಲ್ಲಿ ಮೊದಲೇ ರಿಲೀಸ್ ಮಾಡಿಯೆಂದರೆ ಮಾಡುತ್ತಾರೆ. ಆದರೆ ವೇಸ್ ಅಂಡ್ ಮೀನ್ಸನಲ್ಲಿರುವಂತಹ ಹಣ ಬಿಡುಗಡೆ ಮಾಡಿ, ಅದರಲ್ಲಿ ಅಡ್ಜೆಸ್ಟ ಮಾಡಿಕೊಳ್ಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರ ಈವೊಂದು ಸಂಕಷ್ಟದ ಸಂದರ್ಭದಲ್ಲಿ ಇನ್ನಾವುದೋ ಕಥೆಯನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ನಾವು ನೋಡುತ್ತೇವೆ, ಕರ್ನಾಟಕದ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುವುದಿಲ್ಲವೆಂದು ನೀವು ಹೇಳುತ್ತೀರಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ ಆಗಬೇಕು. ಮಾನ್ಯ ಉಪಾಧ್ಯಕ್ಷರೆ, ಒಂದು ತಪ್ಪು ಅಭಿಪ್ರಾಯ ಈ ಸದನದಿಂದ ಒಡಮೂಡುತ್ತಿದೆ. ಏಕೆಂದರೆ ಮಾನ್ಯ ಸದಸ್ಯರು ಹೊಸಸದಸ್ಯರಾಗಿದ್ದಾರೆ. ಅವರು ರಾಜ್ಯಸರ್ಕಾರ, ಕೇಂದ್ರಸರ್ಕಾರದ ಸಂಬಂಧ ಮತ್ತು ಫೈನಾನ್ಸ ಕಮೀಷನ್, ಪ್ಲಾನಿಂಗ್ ಕಮೀಷನ್ ಯಾವರೀತೀಯಲ್ಲಿ ಕೆಲಸ ಮಾಡುತ್ತದೆಂದು ಬಹುಶಃ ನಮಗೆ ಇನ್ನು ಅನುಭವವಾಗಬೇಕಾಗುತ್ತದೆ. ತಮಗೆ ಗೊತ್ತಿದೆ, ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಫೈನಾನ್ಸ ಕಮೀಷನ್ ಎಂದು ಹೇಳಿ ೫ ವರ್ಷಕ್ಕೊಂದು ಮಾಡುತ್ತಾರೆ. ಆ ಡೆವಲೂಷನ್ ಫಂಡ್ಸ ಯಾವರೀತಿಯಲ್ಲಿ ರಾಜ್ಯಸರ್ಕಾರಕ್ಕೆ ಬೇಕಾಗುತ್ತದೆ ಇದನ್ನೆಲ್ಲ ನಿರ್ಣಯ ಮಾಡಿಕೊಂಡು ಎಲ್ಲರ ಹತ್ತಿರ ಪ್ರತಿ ರಾಜ್ಯ ಸರ್ಕಾರಕ್ಕೆ ಹೋಗಿ, ಆ ಫೈನಾನ್ಸ ಕಮೀಷನರವರು, ವಿಚಾರಿಸಿ ಬೇರೆ ಬೇರೆ ಪಕ್ಷದವರನ್ನೂ ಕೂಡ ಕರೆಸುತ್ತಾರೆ. ಅವರನ್ನೂ ಕರೆದ ಮೇಲೆ ಒಂದು ನಿಷ್ಕರ್ಷೆಯಾಗುತ್ತದೆ. ಹಿಂದಿನ ಫೈನಾನ್ಸ ಕಮೀಷನ್ ಪ್ರಕಾರ ೨೭ ಕೋಟಿ ರೂ.ಒಟ್ಟು ಅದರಲ್ಲಿ ೨೨ ೧/೨ ಕೋಟಿ ಕೇಂದ್ರ ಸರ್ಕಾರ ಕೊಡಬೇಕು. ಉಳಿದದ್ದು ರಾಜ್ಯ ಸರ್ಕಾರ ಇದು ಕೆಲಾಮಿಟಿ ಫಂಡ್. ಆಮೇಲೆ ಈ ವರ್ಷ ಈ ಫೈನಾನ್ಸ ಕಮೀಷನನಲ್ಲಿ ಅದನ್ನು ೩೯ ಕೋಟಿ ಒಟ್ಟು ಅಂತ ಮಾಡಿದ್ದಾರೆ....

ಶ್ರೀ ಆರ್.ಎಲ್. ಜಾಲಪ್ಪ : ೩೯ ಕೋಟಿ ೪೬ ಲಕ್ಷ.

ಶ್ರೀ ಎಂ. ವೀರಪ್ಪಮೊಯಿಲಿ : ೩೯ ಕೋಟಿ ೪೬ ಲಕ್ಷ. ಅದರದ್ದು ರಾಜ್ಯದ ಪಾಲು ಎಷ್ಟು?

ಶ್ರೀ ಆರ್.ಎಲ್. ಜಾಲಪ್ಪ : ೧/೪ ಭಾಗ.

ಶ್ರೀ ಎಂ. ವೀರಪ್ಪಮೊಯಿಲಿ : ಆ ೧/೪ ರಾಜ್ಯದ್ದು, ಉಳಿದಿದ್ದು, ಕೇಂದ್ರ ಸರ್ಕಾರದ ಪಾಲು ಇದು ಕೆಲಾಮಿಟಿ ಫಂಡ್ ಅಂತ ಹೇಳಿ; ಇಂತಹದ್ದೆಲ್ಲಾ ಅನಾಹುತ ಬಂದಾಗ, ಆ ಹಣವನ್ನು ನಾವು ಖರ್ಚು ಮಾಡಬೇಕು. ಖರ್ಚು ಮಾಡಿದ ಮೇಲೆ ಒಂದು ವೇಳೆ ಹೆಚ್ಚು ಆದರೆ, ಕೇಂದ್ರಸರ್ಕಾರ ಕೆಲವು ಸಾರಿ ಬರುವ ವರ್ಷದ್ದೂ ಕೂಡ ಈ ವರ್ಷಕ್ಕೆ ಅಡ್ವಾನ್ಸ ಆಗಿ ಕೊಡುತ್ತಾರೆ. ಆದರೆ ಈಗ ಅನೇಕ ಕಾರ್ಯಕ್ರಮಗಳು, ಜವಾಹರ್ ರೋಜಗಾರ್ ಕಾರ್ಯಕ್ರಮ, ಇ.ಎ.ಎಸ್. ಕಾರ್ಯಕ್ರಮ, ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಹಿಂದೆ ಕೂಡ ಅಡ್ವಾನ್ಸ ಕೊಡಬೇಕಾದರೆ, ಕೇಂದ್ರಸಮಿತಿ ಬಂದು ಏನು ಮಾಡುತ್ತಿದ್ದರು ಅಂದರೆ ಅಡ್ವಾನ್ಸ ಪೇಮೆಂಟ್ ಎಂದು ಮಾಡುತ್ತಿದ್ದರು. ಅದು ಬಾಕಿ ಕಾರ್ಯಕ್ರಮಗಳಲ್ಲಿ ಅಡ್ವಾನ್ಸಪ್ಲಾನ್ ಅಸಿಸ್ಟೆಂಟ್ ಅಂತ. ಅದೂ ಕೂಡ ವರ್ಷದ ಕೊನೆಯಾಗುವಾಗ ಅಥವಾ ಬರುವ ವರ್ಷ ಅದು ರೀಅಡ್ಜೆಸ್ಟ ಆಗುವುದು. ಆದರೆ ಈಗ ಅಡ್ವಾನ್ಸಪ್ಲಾನ್ ಅಸಿಸ್ಟೆಂಟ್ ಬದಲಿಗೆ ಏನಾಗಿದೆ ಅಂದರೆ, ಅನೇಕ ಎಂಪ್ಲಾಯಿಮೆಂಟ್ ಪ್ರೋಗ್ರಾಮಗಳಿವೆ. ಕೋಟ್ಯಾಂತರ ರೂಪಾಯಿ ಕೊಡುತ್ತಾರೆ. ಅವರು ಹೇಳಿದರು. ಈಗ ಬರಗಾಲಕ್ಕೆ ಏನು ಬೇಕಾಗಿದೆ ಕುಡಿಯುವ ನೀರು ಬೇಕಾಗುತ್ತದೆ. ಎಂಪ್ಲಾಯಿಮೆಂಟ್ ಬೇಕಾಗುತ್ತದೆ. ಅದಕ್ಕೆ ಬೇರೆ ಬೇರೆ ಕಾರ್ಯಕ್ರಮಗಳು ರೂರಲ್ ಡೆವಲಪಮೆಂಟ್ ಡಿಪಾರ್ಟಮೆಂಟನಲ್ಲಿದೆ. ಅದಕ್ಕೆ ಕೇಂದ್ರಸರ್ಕಾರದವರು ನೀವು ಅಂತಹ ಕಾರ್ಯಕ್ರಮಗಳನ್ನು ಎಷ್ಟು ಬೇಕಾದರೂ ತೆಗೆದುಕೊಳ್ಳಿಯೆಂದು ಹೇಳುತ್ತಾರೆ. ಬರುವ ತೀರ್ಥ ಶಂಕದಿಂದಲೇ ಬರಬೇಕಾಗಿಲ್ಲ ಬೇರೆ ಬೇರೆ ರೂಪದತಲ್ಲಿ ನೀರು ಬರಬಹುದು. ಅದೇಪ್ರಕಾರ ನಿಮಗೆ ೩೯ ಕೋಟಿ, ೪೦ ಕೋಟಿ, ೫೦ ಕೋಟಿ ಅಥವಾ ೨೫೦ ಕೋಟಿ ರೂಪಾಯಿ ಇದರಿಂದ ಬರಲಿದ್ದರೂ ಕೂಡ ಕೆಲಮಿಟಿ ರಿಲೀಫ್ ಫಂಡ್, ಆ ಫಂಡ್ ಮುಖಾಂತರ ಬರದಿದ್ದರೂ ಕೂಡ ಬೇರೆ ಬೇರೆ ಕಾರ್ಯಕ್ರಮಗಳ ಮುಖಾಂತರ ೧೦೦ ಕೋಟಿ ೨೦೦ ಕೋಟಿ ಕೇಂದ್ರಸರ್ಕಾರ ಕೊಡಲಿಕ್ಕೆ ಸಿದ್ದವಿದೆ. ಆದ್ದರಿಂದ ತಾವು ಮಾತನಾಡುವಾಗ ತಮ್ಮಹಕ್ಕಿಗೆ ಅಡ್ಡಿ ಬರುವುದಿಲ್ಲ. ಆದರೆ ಕೆಲವು ಫೈನಾನ್ಸಿಯಲ್ ಸಿಸ್ಟಮ್ ಏನಿದೆ ಅದನ್ನು ಮಾಡಬೇಕು. ಅವರು ಹೇಳುತ್ತಿದ್ದಾರೆ, ಅನೇಕ ಎಂಪ್ಲಾಯಿಮೆಂಟ್ ಪ್ರೋಗ್ರಾಮ್ ಇನ್ನಿತರ ಕಾರ್ಯಕ್ರಮಗಳಿಗೆ ಪ್ರಧಾನಿಗಳು ಒಪ್ಪಿದ್ದಾರೆ, ನೀವು ಕಾರ್ಯಕ್ರಮಗಳನ್ನು ಹೆಚ್ಚು ತೆಗೆದುಕೊಳ್ಳಿಯೆಂದು ಹೇಳಿದ್ದಾರೆ ಅದು ಹಿಂದೆ ಕೂಡ ಕೊಟ್ಟಿದ್ದಾರೆ ಇವತ್ತು ಕೂಡ ಕೊಡುತ್ತಾರೆ. ಅಂತಹ ಕಾರ್ಯಕ್ರಮಗಳನ್ನು ರೂಪಿಸಿ ಮಾಡುತ್ತಾರೆ, ಆದ್ದರಿಂದ ಇದರ ಬಗ್ಗೆ ಒಂದು ರಾಜಕೀಯವಾಗಿ ಯಾವ್ಯಾವ ಪೊಲಿಟಿಕಲ್ಸ ಪಾರ್ಟಿಗಳಿವೆ ಅವು ಮಾತನಾಡಲೇಬೇಕು. ಆದರೆ ಈ ಫೈನಾನ್ಸಿಯಲ್ ಡೆವಲೂಷನ್ ಬಗ್ಗೆ ಸ್ವಲ್ಪ ಇತಿಮಿತಿಯನ್ನು ನಾವು ತಿಳಿದುಕೊಂಡು ಮಾತನಾಡಿದರೆ ಇದಕ್ಕೆ ಹೆಚ್ಚು ಮಹತ್ವ ಬರುತ್ತದೆಂದು ಹೇಳಿ ನಾನು ತಿಳಿಸಲಿಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹೇಳಿದರು. ನನಗೆ ಸಂಪೂರ್ಣ ಗೊತ್ತಿಲ್ಲದಿದ್ದರೂ ಕೂಡ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವಂತಹ ಪ್ರಯತ್ನ ನಾನು

ಮಾಡುತ್ತೇನೆ. ಅವರು ಸರ್ವೀಸ್ ತುಂಬಾ ದೊಡ್ಡದು. ಅವರ ಬಗ್ಗೆ ನನಗೆ ಗೌರವವಿದೆ. ನಾನು ಕೂಡ ಸಾರ್ವಜನಿಕ ಜೀವನದಲ್ಲಿ ಸಣ್ಣಪುಟ್ಟ ಸಂಗತಿಗಳನ್ನು ತಿಳಿದುಕೊಂಡು ಸಾಸಕನಾಗುವ ಪ್ರಯತ್ನ ಮಾಡಿದ್ದೇನೆ. ಒಳ್ಳೆಯ ಶಾಸಕನಾಗಿ ಇದನ್ನು ಪ್ರಸ್ತಾಪ ಮಾಡ ಬೇಕೆಂದು ಹೇಳಿ ಕೂಡ ನಾನು ಅಧ್ಯಯನ ಮಾಡಿದ್ದೇನೆ. ನನಗೆ ಗೊತ್ತಿದೆ ಸೆಂಟ್ರಲ್ ಕೆಲಮಿಟಿ ರಿಲೀಫ್ ಫಂಡನಲ್ಲಿ ಎಷ್ಟು ಭಾಗ ರಾಜ್ಯದ್ದು ಎಷ್ಟು ಭಾಗ ಸೆಂಟ್ರಲದು ಎಂದು. ನಾನು ಇದನ್ನು ಏಕೆ ಪ್ರಸ್ತಾಪ ಮಾಡಿದೆ ಅಂದರೆ, ಮಾನ್ಯ ಮಾಜಿ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ನಾನು ರಾಜಕೀಯವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇದರಲ್ಲಿ ರಾಜಕೀಯ ಮಾಡಿ ರಾಜಕೀಯದಿಂದ ಒಬ್ಬರ ಮೇಲೆ ಒಬ್ಬರು ಆರೋಪ ಹೊರಿಸುವುದರೊಳಗೆ ಅರ್ಥವಿಲ್ಲ. ಇದು ಪ್ರಕೃತಿ ಮುನಿದು ಬಿಟ್ಟಿದೆ. ಯಾವುದೋ ಒಂದು ರಾಜಕೀಯ ಪಕ್ಷದವರು ನೀವು ಮಾಡಿದ್ದೀರಿ ಅಥವಾ ಕಾಂಗ್ರೆಸನವರು ಇದ್ದಾಗ ಹಾಗೆ ಆಯಿತು ನೀವು ಇದ್ದಾಗ ಹೀಗಾಯಿತು ಎಂದು ನಾನು ಹೇಳಲಿಕ್ಕೆ ಬರಲಿಲ್ಲ. ಆದರೆ ನಮ್ಮ ಮನುಷ್ಯ ಪ್ರಯತ್ನ ಏನಿದೆ, ಕೇವಳ ನಾವು ಒಂದು ಫಂಡನ್ನು ಕ್ರಿಯೇಟ್ ಮಾಡಿ ಇಟ್ಟಿದ್ದೇವೆ ಅದರಲ್ಲಿ ತೆಗೆದುಕೊಳ್ಳಿ. ಅಥವಾ ಇನ್ನಾವುದೋ, ನಮಗೆ ಮಾಹಿತಿಯನ್ನು ಕೊಡುವಾಗ ಕೇಂದ್ರಸರ್ಕಾರದಿಂದ ಇದಕ್ಕೆ ಬೇರೆ ಬೇರೆ ಲೇಬರ್ ಪ್ರೋಗ್ರಾಮಗೆ ಎಷ್ಟು ಹಣ ಬರಬೇಕು ಎಷ್ಟು ಹಣವನ್ನು ತೆಗೆದುಕೊಳ್ಳಲಿಕ್ಕೆ ಏನು ಪ್ರಾಜೆಕ್ಟನ್ನು ಮಾಡಿದ್ದೇವೆ ಅನ್ನುವಂತಹ ಮಾಹಿತಿಯನ್ನು ಮಾನ್ಯ ನಮ್ಮ ಕಂದಾಯ ಸಚಿವರು ಕೊಡಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಆಯಿತು. ಬರಗಾಲ ಸಮಿತಿಯ ಅಧ್ಯಕ್ಷರು, ತಮಗೆ ಏನು ನಾವು ಡಿಫರೆಂಟ್ ಯೋಜನೆಗಳಲ್ಲಿ ಹಣವನ್ನು ಒದಗಿಸಿದ್ದೇವೆ. ಅದನ್ನು ಖರ್ಚುಮಾಡಿ, ಖರ್ಚುಮಾಡಿದ್ದೇವೆ. ಹಣ ಕೊಡಿಯೆಂದು ಕೇಳಿ. ತಮ್ಮ ಕೈಯಲಿದೆ ಈಗ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ದಿವಸ ಒಂದು ಲಿಸ್ಟನ್ನು ಕೇಳಿದ್ದಾರೆ. ಯಾರ್‍ಯಾರು ತಾಲ್ಲೂಕು ಸಮಿತಿಯಲ್ಲಿರಬೇಕೆಂದು, ಪಟಿ ಕೇಳಿದ್ದಾರೆ. ನಾವು ಕಾರ್ಯಕ್ರಮ ಕೊಟ್ಟಿದ್ದೇವೆ. ಕಾರ್ಯಕ್ರಮಗಳು ಇನ್ನೂ ಪ್ರಾರಂಭವಾಗಲಿಲ್ಲ. ಅಧಿಕಾರಿಗಳು ತಮಗೆ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೆಲಸಗಳು ಪ್ರಾರಂಭವಾಗಲಿಲ್ಲ ಯಾವುದೇ ಬೋರವೆಲಗಳನ್ನು ಕಳೆದ ಜೂನ್ ತಿಂಗಳಿನಿಂದ ತೆಗೆಯಲಿಲ್ಲ. ನಾನು ತಾಲ್ಲೂಕು ಸಮಿತಿಯ ಸದಸ್ಯನಾಗಿ ಹೇಳುತ್ತಿದ್ದೇನೆ. ಬೋರವೆಲಗಳನ್ನು ತೆಗೆಯಲಿಲ್ಲ. ನಾವು ಕೊಟ್ಟಂತಹ ಕಾರ್ಯಕ್ರಮಗಳಿಗೆ ಒಂದು ಪೈಸೆ ಹಣವನ್ನು ಖರ್ಚು ಮಾಡಲಿಲ್ಲ. ನನ್ನ ಮತದಾರ ಕ್ಷೇತ್ರದ ಬಗ್ಗೆ ಹೇಳುತ್ತಿದ್ದೇನೆ. ರಾಜ್ಯದ ಬಹಳಷ್ಟು ಶಾಸಕರನ್ನು ಕೇಳಿದರೂ ಬಹಳಷ್ಟು ಶಾಸಕರ ಅಭಿಪ್ರಾಯ ಇದೇ ಇರಬಹುದು. ನೀವು ಏನು ಇಲ್ಲಿ ಕೊಡುತ್ತೀರಿ ಫಿಗರ್ಸ ಅದಕ್ಕೂ ಅಲ್ಲಿ ಮಾಡುವಂತಹ ಕೆಲಸಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಅಧಿಕಾರಿಗಳು ನಿಮಗೆ ಯಾವರೀತಿ ಮಾಹಿತಿಯನ್ನು ಕೊಡುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಈ ಬರಗಾಲ ಪರಿಹಾರ ಪರಿಮೀಕ್ಷಣೆ ಸಮಿತಿಯನ್ನು ರಚಿಸಬೇಕು ಎಂದು ಸರ್ಕಾರದವರು ಏನು ಡೆಪ್ಯೂಟಿ ಕಮೀಷನರವರಿಗೆ ಆದೇಶ ಕೊಟ್ಟಿದ್ದಾರೆ, ಅದು ನಮಗೆ ಬಂದಿದ್ದು ೧೮ನೇ ಆಗಸ್ಟ, ಇದೇ ತಿಂಗಳು ೧೮ನೇ ತಾರೀಖಿಗೆ ಸಮಿತಿ

ರಚನೆಯಾಗಿದೆ ಎಂದು ಬಂದದ್ದು. ಆ ಸಮಿತಿ ಇರುವುದು ಬರಗಾಲ ಪರಿಹಾರ ಪರಿವೀಕ್ಷಣೆ ಮಾಡಲಿಕ್ಕೆ. ನಾವು ಯಾವುದೇ ಪರಿಹಾರ ಕಾರ್ಯಕ್ರಮವನ್ನು ಕೈಗೊಳ್ಳಲಿಕ್ಕೆ ಅಧಿಕಾರ ಇಲ್ಲ. ತಾಲ್ಲೂಕು ಪಂಚಾಯಿತಿಯಿಂದಾಗಲೀ, ಗ್ರಾಮ ಪಂಚಾಯಿತಿಯಿಂದಾಗಲೀ ಮತ್ತು ಬೇರೆ ಬೇರೆ ಡಿಪಾರ್ಟಮೆಂಟಿನಿಂದ ಏನಾದರೂ ಅವರು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದರೆ, ಅದನ್ನು ಪರಿವೀಕ್ಷಣೆ ಮಾಡುವುದಷ್ಟೇ ನಮ್ಮ ಕೆಲಸ. ಇದರ ಸಲುವಾಗಿ ನಮಗೆ ಸೆಪರೇಟ್ ಏನೂ ಫಂಡ್ಸ ಸರ್ಕಾರದವರು ಕೊಟ್ಟಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಅಲ್ಲಿ ಹೇಳಿರುವುದು ತಮ್ಮ ಅಧ್ಯಕ್ಷತೆಯಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು, ಅವುಗಳು ಯಾವ ರೀತಿ ನಡೆಯುತ್ತಿದೆ, ಇವೆರಡನ್ನೂ ನೋಡಿಕೊಳ್ಳಿ ಎಂದು. ಮಾನಿಟರಿಂಗ್ ಮತ್ತು ಸೂಪರವಿಷನ್; ಇವೆರಡನ್ನೂ ತಮಗೆ ವಹಿಸಿ ಕೊಟ್ಟಿದ್ದೇವೆ. ನಾವು ನಿಮ್ಮನ್ನು ಬರೀ ಸೂಪರವಿಷನಗಾಗಿ ನಾಮಿನೇಟ್ ಮಾಡಬೇಕಾದುದು ಅನಾವಶ್ಯಕ. ನೀವು ಹೋಗಿ ಯೋಜನೆಗಳು ಆಗುತ್ತಿವೆಯೋ, ಇಲ್ಲವೋ ನೋಡಿಕೊಂಡು ಬನ್ನಿ ಎಂದು ಹೇಳುವುದು, that is not our intention. ಅವತ್ತು ನಾವು ಇದನ್ನು ಒಪ್ಪಿಕೊಂಡಿದ್ದೇವೆ. ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳನ್ನು ಕರೆದಿದ್ದಾಗ, ಬಹುಶಃ ೧೫ನೇ ತಾರೀಖು ಅಥವಾ ೧೭ನೇ ತಾರೀಖು ತೀರ್ಮಾನ ತೆಗೆದುಕೊಂಡಿದ್ದುದು. ಅವತ್ತು ಸಾಯಂಕಾಲವೇ ಇದನ್ನು ಕಮ್ಯುನಿಕೇಟ್ ಮಾಡಿದ್ದೇವೆ. ಬರೀ ಸೂಪರವಿಷನಗೆ ಅಲ್ಲ. ತಪ್ಪು ಅಭಿಪ್ರಾಯ ಇದ್ದರೆ, ಏನಾದರೂ ಇದ್ದರೆ ಸರಿ ಮಾಡಲಿಕ್ಕೆ ತಯಾರು ಆಗಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅದರ ಒಕ್ಕಣೆ ಅದೇ ರೀತಿ ಇದೆ. ಅದರ ಒಕ್ಕಣೆಯನ್ನು ಬೇರೆ ರೀತಿಯಲ್ಲಿ ನಾವು ಅರ್ಥಮಾಡಿಕೊಂಡು, ನಮ್ಮ ಪಾಡಿಗೆ ನಾವು ಕೆಲಸ ಮಾಡುತ್ತಿದ್ದೇವೆ. ಅದರ ಒಕ್ಕಣೆ ಆ ರೀತಿ ಇದೆ. ಯಾರಾದರೂ ಪ್ರಶ್ನೆ ಮಾಡಿದರೆ, ಆ ಆದೇಶದ ಪ್ರಕಾರ ಪ್ರಶ್ನೆ ಮಾಡಿದರೆ, ನಾವು ಬರೀ ಪರಿವೀಕ್ಷಕರು ಮಾತ್ರ ಆಗುತ್ತೇವೆ, ಮೇಲ್ವಿಚಾರಣೆ ಮಾತ್ರ ನಮಗೆ ಬರುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ತಾವು ಅದರ ಬಗ್ಗೆ ಡೆಪ್ಯುಟಿ ಕಮೀಷನರವರಿಗೆ ಇನ್ನೊಂದು ಆದೇಶ ಕೊಟ್ಟರೆ ಒಳ್ಳೆಯದು. ಏಕೆಂದರೆ ನಾವು ನಿಮ್ಮ ಆದೇಶ ಬಂದ ಕೂಡಲೇ ಸಂಬಂಧಿಸಿದ ಅಧಿಕಾರಿಗಳನ್ನು ಕೇಳಿದಾಗ, ನಾವು ಆ ಗ್ರಾಮ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯವರು ಮತ್ತು ಪಿ.ಡಬ್ಲ್ಯೂ.ಡಿ. ಡಿಪಾರ್ಟಮೆಂಟಿನವರು ಏನು ಮಾಡುತ್ತಾರೆ, ಆ ಮಾಹಿತಿ ತರಿಸಿಕೊಳ್ಳುತ್ತೇವೆ, ಅದನ್ನು ನೋಡೋಣ. ಅವರು ಎಲ್ಲಿ ಪ್ರಪೋಸ್ ಮಾಡುತ್ತಾರೆ, ಅದನ್ನೇ ಮಾಡಬೇಕಾಗುತ್ತದೆ ಎನ್ನುವಂಥ ಅಭಿಪ್ರಾಯವನ್ನು ಕೊಟ್ಟರು. ನೀವು ದಯವಿಟ್ಟು ಡಿ.ಸಿ.ಗಳಿಗೆ, ತಹಶೀಲ್ದಾರರಿಗೆ ಮತ್ತು ಆ ತಾಲ್ಲೂಕು ಪಂಚಾಯಿತಿಯ ಕಾರ್ಯದರ್ಶಿಗಳಿಗೆ ಇದರ ಬಗ್ಗೆ ಮಾಹಿತಿ ಕೊಟ್ಟರೆ ಒಳ್ಳೆಯದು. We can initiate some programme. Otherwise, as it is, we have no power to initiate the programmes.

ಶ್ರೀ ಆರ್.ಎಲ್. ಜಾಲಪ್ಪ : ಇದು ಏನಾಗಿದೆ ಎಂದರೆ ಆಕ್ಷನ್ ಪ್ಲಾನ್ ಈಗಾಗಲೇ ಮಾಡಿಬಿಟ್ಟಿದ್ದರು. ಈಗ ಆಕ್ಷನ್ ಪ್ಲಾನ್ ಬಿಟ್ಟು, ಬೇರೆ ಕೆಲಸ ತೆಗೆದುಕೊಳ್ಳಬೇಕಾದರೆ, ಆಕ್ಷನ್ ಪ್ಲಾನನೊಳಗೆ ಇರುವುದನ್ನು ತಾವು ಮುಗಿಸಿ, ಬೇರೆ ಕೆಲಸಗಳನ್ನು ಪ್ರಪೋಸ್ ಮಾಡಬೇಕಾಗುತ್ತದೆ. ಆಗ ಅಡಿಷನಲ್ ಫಂಡ್ಸ್ ಕೂಡ ನಮಗೆ ಕೇಂದ್ರ ಸರ್ಕಾರದವರು ಕೊಡುತ್ತಾರೆ. ಇದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಸ್ಟ ತಿಂಗಳು ಕಳೆಯುತ್ತಾ ಇದೆ. ನೀವು ಆಕ್ಷನ್ ಪ್ಲಾನನ್ನು ರೆಡಿ ಮಾಡಿ, ಆಗ ಕೆಲಸ ಪ್ರಾರಂಭ ಮಾಡಬೇಕಾದರೆ ಯಾವಾಗ ಮುಗಿಸುವುದು. ಇದುವರೆವಿಗೂ ನಾವು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದರೆ ಎಲ್ಲಾ ಕೆಲಸಗಳು ಪ್ರಾರಂಭ ಆಗುತ್ತಿತ್ತು, ಅಡ್ಮಿನಿಸ್ಟ್ರೇಟೀವ್ ಅಪ್ರೂವಲೆ ತೆಗೆದುಕೊಂಡು ಎಲ್ಲಾ ಮಾಡುತ್ತಿದ್ದರು. ನೀವು ಇನ್ನೂ ಆಕ್ಷನ್ ಪ್ಲಾನನ್ನೇ ರೆಡಿ ಮಾಡಿಲ್ಲ. ಆ ಎಲ್ಲಾ ಫಾರ್ಮಾಲಿಟೀಸ್ ಮುಗಿಯುವುದಕ್ಕೆ ಇನ್ನೂ ಒಂದು ತಿಂಗಳು ಬೇಕು. ಅಷ್ಟು ಹೊತ್ತಿಗೆ ಮಳೆಯೂ ಇಲ್ಲ, ಜೆಲ್ಲಿ ಹಾಕಿ ರಸ್ತೆಯನ್ನು ಮಾಡುವ ಹಾಗೆ ಇಲ್ಲ. ಇವತ್ತು ರಸ್ತೆಗಳ ಸ್ಥಿತಿ ಏನಾಗಿದೆ. ತಾಲ್ಲೂಕು ಪಂಚಾಯತಿಗಳ, ಜಿಲ್ಲಾ ಪಂಚಾಯತಿಗಳ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ೧೭೫ ತಾಲ್ಲೂಕುಗಳಲ್ಲಿ ಯಾವುದಾದರ ಒಂದು ತಾಲ್ಲೂಕಿನಲ್ಲಿ ಹೊಸದಾಗಿ ನಾಲ್ಕೈದು ಕೆಲಸ ಪ್ರಾರಂಭವಾಗಿದೆ ಯಡಿಯೂರಪ್ಪನವರೇ ಎಂದು ಒಂದು ತಾಲ್ಲೂಕಿನ ಉದಾಹರಣೆ ಕೊಡಿ.

ಶ ಎಂ.ಪಿ. ಪ್ರಕಾಶ್ : ಮಾನ್ಯ ಶಾಸಕರು ಹೇಳುವ ಕೆಲವು ವಿಷಯಗಳಲ್ಲಿ ಪೂರಕವಾಗಿ ಹೇಳುವುದಾಗಿದ್ದರೆ, ವೀರಪ್ಪಮೊಯಿಲಿಯವರು, ಮಾನ್ಯ ಮಾಜಿ ಮುಖ್ಯಮಂತ್ರಿಗಳು ಸದನಕ್ಕೆ ಸರಿಯಾದಂಥ ಒಂದು ಮಾರ್ಗದರ್ಶನ ಮಾಡಿದ್ದರು. ಬರಗಾಲ ಕಾಮಗಾರಿಗಳು ಅಂದ ತಕ್ಷಣವೇ ಬರಗಾಲ ಎಂದು ಘೋಷಿಸಲ್ಪಟ್ಟ ಮೇಲೆ, ಪ್ರಕೃತಿ ವಿಕೋಪ ನಿಧಿಯಿಂದಲೇ ಹಣ ಖರ್ಚು ಮಾಡಬೇಕು ಎಂದೇನೂ ಅಲ್ಲ, ಉದ್ಯೋಗವನ್ನು ಒದಗಿಸಿ ಕೊಡತಕ್ಕಂಥಾದ್ದು, ಅದಕ್ಕೆ ಬೇರೆ ಬೇರೆ ಕಾರ್ಯಕ್ರಮಗಳು ಇದ್ದರೆ, ಆ ಕಾರ್ಯಕ್ರಮಗಳನ್ನು, ಹಣದ ಮೂಲಕವಾಗಿಯೂ ಕೂಡ ಅಲ್ಲಿ ಉದ್ಯೋಗವನ್ನು ಒದಗಿಸಿ ಕೊಡತಕ್ಕಂಥ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದರು. ಅಲ್ಲಿ ಮಾನ್ಯ ಶಾಸಕರಾದಂಥ ಮಾನ್ಯ ಡಿ.ಆರ್. ಪಾಟೀಲರವರು ಕೇಳಿದಂತೆ ಎಲ್ಲೆಲ್ಲಿ ಮುಕ್ಕಾಲುವಾಸಿ ಭಾಗಗಳಲ್ಲಿ ಕ್ರಿಯಾ ಯೋಜನೆಯನ್ನು ಈಗಾಗಲೇ ಒಪ್ಪಲಾಗಿದೆ. ಉದ್ಯೋಗ ಭರವಸೆ ಯೋಜನೆಯ ಕೆಳಗೆ ಸುಮಾರು ೬೮ರಿಂದ ೭೦ ಲಕ್ಷಗಳಷ್ಟು ಕ್ರಿಯಾ ಯೋಜನೆಗೆ ಒಪ್ಪಿಗೆ ಮಾಡಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ, ಎಲ್ಲೆಲ್ಲಿ ಉದ್ಯೋಗ ದೃಢೀಕರಣ ಯೋಜನೆಗಳು ಇವೆ, ಅಲ್ಲಿ ಒಂದು ಕೋಟಿ ರೂಪಾಯಿಯವರೆಗೂ ಕೂಡ ಖರ್ಚು ಮಾಡತಕ್ಕಂಥ ಅವಶ್ಯಕತೆ ಇದೆ ಮತ್ತು ಅವಕಾಶವೂ ಇದೆ. ಅದರಲ್ಲಿ ಉಳಿದಿರತಕ್ಕಂಥ ಯೋಜನೆಗಳನ್ನು ತಾವು ರೂಪಿಸಬಹುದು. ಮತ್ತು ತಾವು ಈಗ ಬಂದಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಖರ್ಚು ಮಾಡಿದ್ದೇವೆ ಎನ್ನತಕ್ಕಂಥಾದ್ದರ ಮಾಹಿತಿಯನ್ನು ಕೂಡ ಮಾನ್ಯ ಕಂದಾಯ ಸಚಿವರು ತಮಗೆ ಕೊಟ್ಟಿದ್ದಾರೆ. ಎಷ್ಟು ಖರ್ಚು ಮಾಡಿದ್ದೇವೆ, ಎಷ್ಟು ಹಣ ಬಿಡುಗಡೆಯಾಗಿದೆ, ಅನುಷ್ಠಾನ ಮಾಡುವಂಥ ಅಧಿಕಾರಿಗಳ ಕೈಯಲ್ಲಿ ಎಷ್ಟು ಹಣ ಇದೆ, ಎನ್ನತಕ್ಕಂಥಾದ್ದು ಕೂಡ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ನಾನು ಏನೂ ಹೇಳಬೇಕಾಗಿಲ್ಲ. ಈ ಬರಗಾಲದ ಛಾಯೆ ೧೫-೨೦ ವರ್ಷಗಳಿಹಂದ ಕಾಣದೇ ಇರುವಂಥಾದ್ದು, ಮೇ ಕೊನೆಯಿಂದಲೇ ಪ್ರಾರಂಭವಾಯಿತು. ಜೂನ್, ಜುಲೈ, ಆಗಸ್ಟ ಮುಗಿಯುತ್ತಾ ಬಂತು. ನಿಮ್ಮ ಹತ್ತಿರ ದುಡ್ಡು ಇದೆ. ಒಂದು ಕೋಟಿ ರೂಪಾಯಿ ಕ್ರಿಯಾ ಯೋಜನೆಯೊಳಗೆ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಎಲ್ಲಾ ಇದೆ. ಆದರೆ ನೀವಾಗಲೀ, ಸನ್ಮಾನ್ಯ ಜಾಲಪ್ಪನವರಾಗಲೀ ಉತ್ತರ ಕೊಡುವಂಥ ಕಾಲದಲ್ಲಿ, ಈ ಬರಗಾಲ ಕಾಮಗಾರಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ, ಕೃಷಿ ಕಾರ್ಮಿಕರಿಗೆ ಉದ್ಯೋಗ ಸಿಗುವ ದೃಷ್ಟಿಯಿಂದ ಯಾವುದೇ ಯೋಜನೆ ಇರಬಹುದು, ಒಂದು ತಾಲ್ಲೂಕಿನಲ್ಲಿ ಈ ನಿಮಿಷದವರೆಗೆ ಭೀರರ ಬರಗಾಲ ಎದುರಿಸುತ್ತಿರುವಂಥ ಕಡೆಯೂ ಸಹ ಹೊಸದಾಗಿ, ೧೦-೨೦ ಕೆಲಸಗಳು ಪ್ರಾರಂಭ ಆಗಿಲ್ಲ ನಿಮ್ಮದು ಏನು ನೂರೆಂಟು ಕಾರ್ಯಕ್ರಮ ಇದೆ ಎಂದು ಹೇಳುತ್ತೀರಾ, ಅದರಲ್ಲೂ ಆಗಲಿಲ್ಲ. ಈ ಕೆಲಾಮಿಟಿ ಫಂಡಿನಿಂದ ಒಂದು ರೂಪಾಯಿಯೂ ಖರ್ಚು ಮಾಡಿಲ್ಲ. ನಾನು ಈಗ ತಾನೇ ಡಿ.ಸಿ.ಗೆ ಫೋನ್ ಮಾಡಿ ಇಲ್ಲಿ ಬಂದಿದ್ದೇನೆ, ಈಗ ಜಿಲ್ಲಾಧಿಕಾರಿ ಹತ್ತಿರ ಮಾತನಾಡಿಕೊಂಡು ಬಂದೆ. ಶಿಕಾರಿಪುರ ಹೋಬಳಿಯಲ್ಲಿ ಬರ ಇದೆ. ಹೋದವಾರ ನಾನು ನಿಮ್ಮ ಅಧಿಕಾರಿಗಳ ಜೊತೆ ಟೂರ್ ಮಾಡಿಕೊಂಡು ಬಂದೆ. ತಾವು ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದ್ದೇನೆ ಎಂದು ಹೇಳುತ್ತೀರಾ, ಆದರೆ ಅಲ್ಲಿ ಕೆಲಸ ಪ್ರಾರಂಭವಾಗಿರುವುದಿಲ್ಲ. ನಾನು ಡಿ.ಸಿ.ಯರಿಗೆ ಹೇಳಿದೆ. ಇದು ನಿಮ್ಮ ಕರ್ತವ್ಯ ಇದು ಯಡಿಯೂರಪ್ಪನವರ ಕೆಲಸ ಅಲ್ಲ ಎಂದು. ಮಂಜೂರು ಮಾಡಿದ್ದರೂ ಏಕೆ ಬರಗಾಲ ಕೆಲಸ ಪ್ರಾರಂಭ ಆಗಿಲ್ಲ, ಇದನ್ನು ನೋಡಿಕೊಳ್ಳಬೇಕಾದುದು ನಿಮ್ಮ ಕೆಲಸ ಎಂದು ಈಗತಾನೇ ಹೇಳಿ ಅಲ್ಲಿಂದ ಇಲ್ಲಿಗೆ ನಾನು ಬರುತ್ತಿದ್ದೇನೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ದಯಮಾಡಿ, ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ, ನೀವು ಏನು ಮಾಡುತ್ತೀರೋ? ಮಾಡಿ. ಆದರೆ ಯಾವ ಸಮಯದಲ್ಲಿ ಉದ್ಯೋಗ ಕೊಡಲಿಲ್ಲ. ಈಗ ಮಳೇಯೂ ಇಲ್ಲ, ಕೆರೆಕಟ್ಟೆಗಳೆಲ್ಲಾ ಬತ್ತಿ ಹೋಗಿವೆ. ಈಗಲೂ, ಸದನ ನಡೆಯುವಂಥ ಈ ಸಂದರ್ಭದಲ್ಲಿ ನೀವು ಆಮೇಲೆ ಉತ್ತರ ಕೊಡಿ ಪರವಾಗಿಲ್ಲ, ಯಡಿಯೂರಪ್ಪನವರೇ ಇಂಥ ಕಾರ್ಯಕ್ರಮ, ಭೀಕರ ಬರಗಾಲ ಇರುವಂಥ ಕಡೆ ಇಂಥಿಂಥಾದ್ದರಲ್ಲಿ ಇಷ್ಟು ಜನ ಲೇಬರರ್ಸ್‌ಗೆ ನಾವು ಉದ್ಯೋಗ ಕೊಟ್ಟಿದ್ದೇವೆ ಎನ್ನುವ ಅಂಕಿಅಂಶ ಕೊಟ್ಟರೆ, ವಾಸ್ತವ ಸ್ಥಿತಿ ಏನು ಎಂದು ನಿಮಗೆ ಗೊತ್ತಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಆಕ್ಷನ್ ಪ್ಲಾನ್ ಆಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ಆಕ್ಷನ್ ಪ್ಲಾನ್ ಇಲ್ಲದೇ ಕ್ಷೇತ್ರದಲ್ಲಿ ಏನೇನು ಕೆಲಸ ಆಗಬೇಕೋ ಅದನ್ನು ಬೇಗನೆ ಪ್ರಾರಂಭ ಮಾಡಬೇಕು ಎಂದು ಹೇಳಿದರು. ಈ ಎರಡರೊಳಗೆ ಯಾವುದು ಸತ್ಯ ಎಂದು ದಯಮಾಡಿ ನಮಗೆ ತಿಳಿಸಬೇಕು.

ಶ್ರೀ ಬಿ. ನಂಜಾಮರಿ : ಸನ್ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ಕಂದಾಯ ಸಚಿವರು ಕಳೆದ ತಿಂಗಳಲ್ಲಿ ಎಲ್ಲಾ ಸದಸ್ಯರ ಸಭೆಯನ್ನು ಕರೆದು, ನಮಗೆ ಕುಡಿಯುವ ನೀರಿನ ಹಣಕ್ಕೆ ತೊಂದರೆ ಇಲ್ಲ, ಎಷ್ಟು ಬೇಕಾದರೂ ಕುಡಿಯುವ ನೀರಿಗೆ ಹಣ

ಕೊಡುತ್ತೇವೆ ಮತ್ತು ಒಂದೊಂದು ಕ್ಷೇತ್ರಕ್ಕೆ ೨೫ ಲಕ್ಷದ ಹಾಗೆ ಬರಗಾಲದ ಹಣ ಕೊಟ್ಟು, ಕಾಮಗಾರಿ ಶುರು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು, ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಸದಸ್ಯರು, ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಸದಸ್ಯರು ಮತ್ತು ಕ್ಷೇತ್ರದ ಶಾಸಕರುಗಳನ್ನು ಕರೆಸಿ ಹೇಳಿದರು. ಆದರೆ ಏಪ್ರಿಲನಿಂದ ಇಲ್ಲಿಯವರೆಗೂ ೧೫ ಬೋರವೆಲ್ ಮಾತ್ರ ನಮ್ಮ ತಿಪಟೂರು ಕ್ಷೇತ್ರದಲ್ಲಿ ಬಂದಿವೆ. ಆದರೆ ನೂರಾರು ಹಳ್ಳಿಗಳಲ್ಲಿ ಬೋರವೆಲಗೆ ತೊಂದರೆ ಇದೆ. ಇವತ್ತು ಅಲ್ಲಿ ಮಳೆ ಇಲ್ಲದೇ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಇದುವರೆಗೆ ೧೫ ಬೋರವೆಲಗಳ ಮೇಲೆ ಕೊಟ್ಟಿಲ್ಲ ಮತ್ತು ೨೫ ಲಕ್ಷ ಏನು ಕೊಡುತ್ತೇವೆ ಎಂದು ಹೇಳಿದರು, ಅದನ್ನು ಇದುವರೆಗೂ ಕೊಟ್ಟಿಲ್ಲ, ಯಾವಾಗ ಕೊಡುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಇಲ್ಲಿ ನಮಗೆ ಏನು ಹೇಳಿಕೆ ಸರ್ಕ್ಯುಲೇಟ್ ಮಾಡಿದ್ದೀರಿ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅದಕ್ಕೂ ಇದಕ್ಕೂ ಒಳ್ಳೆಯ ತಾಳೆ ಬರುತ್ತದೆ. ಏಕೆಂದರೆ ಏನೂ ಕೆಲಸ ಪ್ರಾರಂಭ ಆಗಿಲ್ಲ. ಏಕೆಂದರೆ, ಅನೆಕ್ಷರ್- ೨ ರಲ್ಲಿ, ತಾವು ದಯಮಾಡಿ ಸ್ವಲ್ಪ ನೋಡಿ, ತಾವು ಹಣ ರಿಲೀಸ್ ಮಾಡಿರಬಹುದು. ಶಿವಮೊಗ್ಗ ಜಿಲ್ಲೆಯಲ್ಲಿ ಎಂಪ್ಲಾಯಮೆಂಟ್ ಜನರೇಷನನಲ್ಲಿ ಎಕ್ಸಪೆಂಡಿಚರ್ ಜೀರೋ ಆಗೇ ಇಲ್ಲ. ನಾನು ಹೇಳುವುದು ಬಹಳ ಬರಗಾಲ ಪೀಡಿತವಾದಂಥ ಪ್ರದೇಶಗಳು, ಚಿತ್ರದುರ್ಗದಲ್ಲಿ ಕೂಡ ಜೀರೋ. ಆಮೇಲೆ ಮೈಸೂರು ಜೀರೋ, ಮಂಡ್ಯ ಜೀರೋ, ನಂತರ ಧಾರವಾಡಕ್ಕೆ ಹೋದರೆ if we take calamity only, I am referring to that, ಕಮಿಟಿಯಲ್ಲಿ ಇಲ್ಲ ಎಂದರೆ ಬಾಕಿಯಲ್ಲಿ ಕೂಡ ಇದೆ ಎಂದು ಹೇಳುವುದಕ್ಕೆ ಇಲ್ಲಿ ಆ ವಿವರ ಕೊಟ್ಟಿಲ್ಲ, ಎಲ್ಲಿದೆ ಆ ವಿವರ? ಏಕೆಂದರೆ ಧಾರವಾಡದಲ್ಲಿ ಕೂಡ ಜೀರೋ. ಹಾಗಾದರೆ ಕೆಲಾಮಿಟಿಯಲ್ಲಿ ಇಲ್ಲ ಎಂದು ಅರ್ಥವೇ? ನೀವು ಅದರಲ್ಲಿ ಹಣ ರಿಲೀಸ್ ಮಾಡಿದ್ದೀರೋ? ಈಗ ನೋಡಿ, ಎಂಪ್ಲಾಯಮೆಂಟ್ ಜನರೇಷನಗೆ ಕೂಡ ತಾವು ಏನು ಮಾಡಿದ್ದೀರಿ, ನಮ್ಮ ಲೆಕ್ಕದ ಪ್ರಕಾರ ಶಿವಮೊಗ್ಗಕ್ಕೆ ಎಂಪ್ಲಾಯಮೆಂಟಗೆ ಹಣವಿಲ್ಲ. ಅದರಲ್ಲಿ ಕಾಣಿಸಲಿಲ್ಲ, ನನಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಮಾತಿನಲ್ಲಿ ಹೇಳಬೇಕೆಂದರೆ, ನಾವು ಶಾಸಕರು ಈ ಸದನ ಮುಗಿದ ಮೇಲೆ ನಿಮ್ಮ ಜಿಲ್ಲಾ ಮಂತ್ರಿಗಳ ರಕ್ಷಣೆಯಲ್ಲಿ ನಿಮ್ಮ ಹಿಂದುಗಡೆಯಲ್ಲಿ ಹಳ್ಳಿಗಳಿಗೆ ಹೋಗಬೇಕಾಗಿದೆ. ಶಾಸಕರಾದ ನಾವುಗಳು ಒಬ್ಬೊಬ್ಬರೇ ಯಾವುದೇ ತಾಲ್ಲೂಕಿಗೆ ಹೋಗಿ ವಾಪಸ್ಸು, ಬರುವಂಥ ಸ್ಥಿತಿಯಲ್ಲಿ ನಾವಂತೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವೀರಪ್ಪ ಮೋಯಿಲಿಯವರು ಹೇಳಿದಂತೆ, ಈ ಪ್ರಕೃತಿ ವಿಕೋಪ ನಿಧಿಯಿಂದ ಹಣ ಬಿಡುಗಡೆ ಆಗಿರತಕ್ಕಂಥಾದ್ದು ಇಲ್ಲಿಯವರೆಗೆ ೨೦ ಕೋಟಿ ರೂಪಾಯಿಗಳು. ಅದರಲ್ಲಿ ಬೇರೆ ಬೇರೆ ತಾಲ್ಲೂಕುಗಳಿಗೆ ಮೇವಿಗಾಗಿ, ಕುಡಿಯುವ ನೀರಿಗಾಗಿ ಮತ್ತು ದೋಣಿಗಳನ್ನು ಕೊಂಡುಕೊಳ್ಳಲಿಕ್ಕೆ, ಬೆಂಕಿ ಅನಾಹುತಕ್ಕಾಗಿ ಮತ್ತು ಅನುಕೂಲಗಳನ್ನು ಮಾಡುವುದಕ್ಕಾಗಿ ೨೦ ಕೋಟಿ ರೂ.ಗಳು ಮಾತ್ರ ಮಾಡಲ್ಪಟ್ಟಿದೆ. ಅದರಲ್ಲಿ ಕೇಂದ್ರ ಸರ್ಕಾರದಿಂದ ಕೇವಲ ೧೫ ಕೋಟಿ ರೂಯಗಳು ಮಾತ್ರ ೨ ಕಂತುಗಳಲ್ಲಿ ಬಿಡುಗಡೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖರ್ಚು ಎಷ್ಟಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ೨೦ ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆದರ ವಿವರ ಇದೆ. ನಿಮಗೆ ಅನೆಕ್ಷರನಲ್ಲಿ ನಾವು ಕೊಟ್ಟಿದ್ದೇವೆ.

೧.೩೦ ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟು ಬಿಡುಗಡೆ ಮಾಡಿದ್ದೀರಿ? ೨೦ ಕೋಟಿಯಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ತಿಳಿಸಿ.

ಶ್ರೀ ಎಂ.ಪಿ. ಪ್ರಕಾಶ್ : ಇದರಲ್ಲಿ ಸದನದಲ್ಲಿ ಮುಚ್ಚಿಡುವುದರ ಅಗತ್ಯವಾದರೂ ಏನಿದೆ? ೨೦ ಕೋಟಿ ರೂಪಾಯಿಗಳನ್ನು ವಿವಿಧ ಜಿಲ್ಲೆಗಳಿಗೆ, ಬೇರೆ ಬೇರೆ ಬಾಬ್ತುಗಳಿಗೆ ಹಂಚಲಾಗಿದೆ. ಇದರ ಜೊತೆಜೊತೆಯಲ್ಲಿ ರೋಜಗಾರ್ ಯೋಜನೆಯಲ್ಲಿ, ಉದ್ಯೋಗ ದೃಢೀಕರಣ ಯೋಜನೆಯಲ್ಲಿ, ಕುಡಿಯುವ ನೀರಿನ ಬಾಬತು ಬೇರೆಬೇರೆ ಕಡೆಗೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಯಾವ್ಯಾವ ಇಲಾಖೆಗೆ ಯಾವ್ಯಾವ ಸಂದರ್ಭದಲ್ಲಿ ಹಣ ಬಿಡುಗಡೆ ಮಾಡಿದ್ದೇವೆ, ಎಷ್ಟು ಖರ್ಚಾಗಿದೆ ಎನ್ನುವುದನ್ನು ಕೂಡ ಅವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಒಂದು ನಿಮಿಷ. ತಾವು ಉತ್ತರ ಕೊಡುವುದಕ್ಕೆ ಸುಲಭವಾಗುತ್ತದೆ ಎಂದು ಹೇಳುತ್ತೇನೆ. ಏಕೆಂದರೆ ಕೆಲಾಮಿಟಿ ರಿಲೀಫ್ ಫಂಡನಲ್ಲೇ ಎಂಪ್ಲಾಯಮೆಂಟ್ ಜನರೇಶನನಲ್ಲಿ ಅನೇಕ ಬಾಬುಗಳಲ್ಲಿ, ಅನೇಕ ಜಿಲ್ಲೆಗಳಲ್ಲಿ ತಾವು ಬಿಡುಗಡೆ ಮಾಡಿದ ಹಣ ಖರ್ಚಾಗಿದ್ದುದು ಕಾಣಿಸುತ್ತಿಲ್ಲ. ಆಲರೈಟ್, ಅದು ಕೆಲಮಿಟಿ ರಿಲೀಫ್ ಫಂಡ್ ಆಯಿತು. ಎಂಪ್ಲಾಯಮೆಂಟ್ ಪ್ರೋಗ್ರಾಮನಲ್ಲಿ, ಜವಾಹರ್ ರೋಜಗಾರ್ ಕಾರ್ಯಕ್ರಮದಲ್ಲಿ ಜಿಲ್ಲಾವಾರು, ಯಾವ್ಯಾ ಪ್ರೋಗ್ರಾಮನಲ್ಲಿ ಈ ಬಾಬ್ತಿನಲ್ಲಿ ಎಷ್ಟು ಹಣ ರಿಲೀಸ್ ಮಾಡಿದ್ದೀರಿ, ಎಷ್ಟು ಹಣ ಖರ್ಚಾಗಿದೆ? ಈ ಟೇಬಲನ್ನು ಕೊಟ್ಟಿಲ್ಲ. ರೆವಿನ್ಯೂ ಮಂತ್ರಿಗಳು ಅವರಿಗೆ ಸಂಬಂಧ ಪಟ್ಟಿದ್ದು ಕೆಲಾಮಿಟಿ ರಿಲೀಫ್ ಫಂಡನಿಂದ ಕೊಟ್ಟಿರಬಹುದು. ಆದರೆ ಎಂಪ್ಲಾಯಮೆಂಟಗೆ ಸಂಬಂಧ ಪಟ್ಟಿರತಕ್ಕಂಥಾದ್ದು ನೀರಾವರಿ ಇಲಾಖೆ ಇರಬಹುದು, ಎಂಪ್ಲಾಯಮೆಂಟ್ ಜನರೇಶನ್ ಕಾರ್ಯಕ್ರಮ ಇರಬಹುದು, ಇ.ಎ.ಎಸ್. ಕಾರ್ಯಕ್ರಮ ಇರಬಹುದು, ಆಯಾಯ ಜಿಲ್ಲೆಗಳಲ್ಲಿ ಈ ಬಾಬತ್ತುಗಳಲ್ಲಿ ಸಂಬಂಧ ಪಟ್ಟಂತೆ ಸ್ವಲ್ಪ ಅಡಿಶನಲಿಟೀಸ್ ಇರಬೇಕಿತ್ತು. ಈಗ ನೀವು ಪ್ರತಿವರ್ಷ ಖರ್ಚಾಗಿದ್ದಷ್ಟು ಮಾತ್ರವೇ ಬಾಮಾಂಶದಲ್ಲಿ ಖರ್ಚು ಮಾಡಿದರೆ - that is not an indication of your desire and sincerity to implement the programme.

ಇದಕ್ಕೆ ಹೋದವರ್ಷದ್ದೂ ಕೊಡಬೇಕು. ಈ ವರ್ಷ ಕೂಡ ಆಯಾಯ ಜಿಲ್ಲೆಗಳಿಗೆ ಇವತ್ತಿನವರೆಗೆ ಏಪ್ರಿಲನಿಂದ ಇವತ್ತಿನವರೆಗೆ ಎಷ್ಟು ಹಣ ರಿಲೀಸ್ ಮಾಡಿದ್ದೀರಿ ಮತ್ತು ಎಷ್ಟು ಹಣ ಖರ್ಚಾಗಿದೆ? ಕಂಪಾರೇಟಿವ್ ಫಿಗರ್ಸನ್ನು ತಾವು ಕೊಡಬೇಕು. ಕಳೆದ ವರ್ಷದ್ದು ಕೊಡಬೇಕು ಅಂದರೆ ಏಪ್ರಿಲ್ ೯ ಳರಿಂದ ಜುಲೈ ೯೫ರವರೆಗ ಕೊಡಬೇಕು. ಈ ವರ್ಷದ್ದು ಕೂಡ ಏಪ್ರಿಲ್ ನಿಂದ ಜುಲೈ ೩೧ವರೆಗೆ

ಕೊಟ್ಟರೆ ಸರಿಯಾದ ಚಿತ್ರ ಸಿಗುತ್ತದೆ. Then the clear picture will emerge. By that you can rebut the argument of the leader of the opposition. In the absence of that, ಎಂಪ್ಲಾಯಮೆಂಟಗೆ ಇವತ್ತು ಚರ್ಚೆ ಇಟ್ಟು ಬರಗಾಲಕ್ಕೆ ಯಾವುದು ಎಂಪ್ಲಾಯಮೆಂಟಕೊಡುತ್ತೇವೆ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಲಿಲ್ಲ. It is a serious allegation made by the Hon'ble leader of the Opposition. ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಶಿವರಾಮ್ ಹತ್ತಿರ ಒಂದು ಗವರ್ನಮೆಂಟ್ ಆರ್ಡರನ್ನು ನಾನು ನೋಡಿದ್ದೇನೆ. ಆ ಗವರ್ನಮೆಂಟ್ ಆರ್ಡರನಲ್ಲಿ ಜವಾಹರ್ ರೋಜಗಾರ್ ಕಾರ್ಯಕ್ರಮದಲ್ಲಿ ೩ ಕೋಟಿ ೫೦ ಲಕ್ಷ ರೂಪಾಯಿಗಳು ರಿಲೀಸ್ ಆಗಿದೆ. ಬರಗಾಲಕ್ಕೆ ಪ್ರತ್ಯೇಕವಾಗಿ ರಿಲೀಸ್ ಮಾಡಿದ್ದೀರಾ ಎಂದು ನೋಡಿದರೆ ಅದು ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರಕ್ಕೆ, ಅವರಿಗೆ ಸಂಬಂಧಪಟ್ಟವರ ಕ್ಷೇತ್ರಕ್ಕೆ, ಮಂತ್ರಿಗಳ ಕ್ಷೇತ್ರಕ್ಕೆ ಮಾತ್ರ ಈ ಮೂರುವರೆ ಕೋಟಿ ರೂಪಾಯಿ ರಿಲೀಸ್ ಆಗಿದೆ. ಉದಾಹರಣೆಗೆ ಕಾರ್ಕಳ ತಾಲ್ಲೂಕಿನಲ್ಲಿ ಕಾರ್ಕಳ ಕ್ಷೇತ್ರಕ್ಕೆ ಇಲ್ಲ. ಮೂಡುಬಿದ್ರಿ ಕ್ಷೇತ್ರಕ್ಕೆ ಬರಗಾಲಕ್ಕೆ ಸಂಬಂಧಪಟ್ಟಂತೆ, ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಬರಗಾಲ ಪರಿಸ್ಥಿತಿ ಇಲ್ಲ. ಆದರೆ ಮುಂದೆ ಬರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಸನದಲ್ಲಿ, ಹೊಳೆನರಸಿಪುರದಲ್ಲಿ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ರಾಮನಗರಕ್ಕೆ ಮಾಡಿದ್ದಾರೆ. ನಾವೇನೂ ಅಡ್ಡಬರುವುದಿಲ್ಲ. ಆದರೆ ಇಂತಹ ಸ್ಪೆಶಲ್ ಆರ್ಡರ್ ಏಕೆ? ಇಡೀ ರಾಜ್ಯವೇ ಬರಗಾಲವನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ತಾವು ಈ ರೀತಿ ಹಣವನ್ನು ಮಾಡತಕ್ಕಂಥ ಕೆಲಸ ಏನಿದೆ, that will amount to nepotism.

ಆ ಗವರ್ನಮೆಂಟ್ ಆರ್ಡರನ್ನು ತಾವು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕೇಂದ್ರಸರ್ಕಾರಕ್ಕೆ ಈ ಗವರ್ನಮೆಂಟ್ ಆರ್ಡರನ್ನು ಕೊಟ್ಟರೆ ಇನ್ನೂ ಹಣ ರಿಲೀಸ್ ಮಾಡತಕ್ಕದ್ದು ಏನಿದೆ, ಅದಕ್ಕೆ ಅವರು ಹಿಂದುಮುಂದು ನೋಡುತ್ತಾರೆ. That will affect the funding pattern of the State. We will send a copy of the G.O.

ನೀವು ಮಾಡಿಲ್ಲ. ಆದರೆ ದಯವಿಟ್ಟು ಆ ಗವರ್ನಮೆಂಟ್ ಆರ್ಡರನ್ನು ತರಿಸಿ. ಅದನ್ನು ಪರಿಶೀಲನೆ ಮಾಡಿ ಒಮ್ಮೆಲೆ ಉತ್ತರ ಕೊಡುವುದಕ್ಕೆ ಹೋಗಬೇಡಿ. ಇದು ಬರಗಾಲವನ್ನು ಎದುರಿಸತಕ್ಕ ಮಾದರಿ ಅಲ್ಲ. ಇದು ಯಾವುದೋ ಒಂದು ಕ್ಷೇತ್ರಕ್ಕೆ ಪಕ್ಷಪಾತ ಮಾಡಿಕೊಂಡು ಹಣವನ್ನು ರಿಲೀಸ್ ಮಾಡಿರತಕ್ಕದ್ದು ಇದೆ. ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ, ಶಿಕಾರಿಪುರಕ್ಕೆ ಏನೂ ಮಾಡಿಲ್ಲ ಎಂದು. ಅಲ್ಲಿ ಕೆಲಸವನ್ನು ನಡೆಸುತ್ತಿಲ್ಲ, ಅವರು ಡೆಪ್ಯುಟಿ ಕಮೀಷನರ್ ಅವರ ಹತ್ತಿರ ಮಾತನಾಡಿಕೊಂಡು ಬಂದಿದ್ದೇನೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಗಂಭೀರವಾಗಿ ತಾವು ಇವತ್ತು ಆಲೋಚನೆ ಮಾಡುತ್ತಿಲ್ಲ. ಯಾವುದೇ ರಾಜಕೀಯಕ್ಕೋ ಏನೋ ಎನ್ನುವ ರೀತಿಯಲ್ಲಿ, ಯಾರಿಗೋ ಸಹಾಯ ಮಾಡುವ ರೀತಿಯಲ್ಲಿ ಇದೇನು ನಡೆಯುತ್ತಿದೆ, ನಾನು ನಿಮ್ಮ ಮೇಲೆ ಆರೋಪಣೆ ಮಾಡುತ್ತಿಲ್ಲ. ಕೆಲಾಮಿಟಿ ರಿಲೀಫ್ ಫಂಡನಲ್ಲಿ ತಾವು ಮಾಡಿದ್ದೀರಿ. ನಾನು ಹೇಳುವುದು

ಎಂಪ್ಲಾಯಮೆಂಟ್ ಕಾರ್ಯಕ್ರಮ ಏನಿದೆ, ಇದನ್ನು ತಾವು ಬಹುಶಃ ಸ್ಟಡಿ ಮಾಡಿಕೊಂಡುಬಂದು ಹೇಳಿ. ಆ ಗವರ್ನರ್ಮೆಂಟ್ ಆರ್ಡರ್ ಕಾಪಿ ಎಕ್ಸಟ್ರಾ ಇದ್ದರೆ ಅವರು ನಿಮಗೆ ಒಂದು ಪ್ರತಿಯನ್ನು ಕಳಿಸಿಕೊಡುತ್ತಾರೆ.

ಆದರೆ ತಾವು ಇಂತಹ ಗವರ್ನರ್ಮೆಂಟ್ ಆರ್ಡರನ್ನು ಪಾಸ್ ಮಾಡಿಬಿಟ್ಟರೆ ಏನಾಗುತ್ತದೆ ಎಂದು ಹೇಳಿದರೆ, ಸಂಪೂರ್ಣವಾಗಿ ಅಧಿಕಾರವನ್ನು ದುರುಪಯೋಗ ಮಾಡಿದಹಾಗೆ ಆಗುತ್ತದೆ ಹೊರತು ಬೇರೇನೂ ಆಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ಬಿಜಾಪುರ ತಾಲ್ಲೂಕಿನಲ್ಲಿ ಇ.ಎ.ಎಸ್.ನಲ್ಲಿ ೨೦ ಲಕ್ಷ ರೂಪಾಯಿಗಳನ್ನು ಏಪ್ರಿಲನಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ. ಅಲ್ಲಿ ಒಂದೇ ತಾಲ್ಲೂಕಿನಲ್ಲಿ ಬಿಜೆಪಿ ಶಾಸಕರು ಇದ್ದಾರೆ, ನಾನು ಜನತಾದಳದಲ್ಲಿದ್ದೇನೆ, ಕಾಂಗ್ರೆಸನಿಂದ ಬಿ.ಎಸ್. ಪಾಟೀಲ್ ಮನಗೋಳಿಯವರು ಇದ್ದಾರೆ. ನಾವು ಮೂರು ಜನ ಈಗಾಗಲೇ ಸೇರಿಕೊಂಹಡು ಕ್ರಿಯಾ ಯೋಜನೆಗೆ ಮಂಜೂರಾತಿ ಕೊಟ್ಟು ೫೦ ಪರ್ಸೆಂಟಗಿಂತಲೂ ಹೆಚ್ಚಿಗೆ ಖರ್ಚುಮಾಡಿ ತೋರಿಸಿದ್ದೇವೆ. ಇದೊಂದು ಉದಾಹರಣೆಯನ್ನು ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಬರಗಾಲಕ್ಕೆ ನೇರವಾಗಿ ಹಣ ಬಿಡುಗಡೆಯಾಗಿಲ್ಲ. ಬರಗಾಲ ಸಮಿತಿ ರಚನೆ ಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದರೆ, ಇಲ್ಲಿಯವರೆಗೆ ಕೂಡ ಅವರ ಅಧ್ಯಕ್ಷತೆಯಲ್ಲಿ ಒಂದೇ ಒಂದು ಸಭೆ ಕೂಡ ನಡೆದಿಲ್ಲ. ಈ ಒಂದು ಸಮಿತಿಯನ್ನು ರಚನೆ ಮಾಡುವಂಥ ಉದ್ದೇಶ ಏನು? ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ ಎಂದು ಹೇಳುವುದಕ್ಕೋಸ್ಕರ ಇದನ್ನು ಮಾಡಿದ್ದೀರೋ? ಅಥವಾ ಬರಗಾಲ ಕಾಮಗಾರಿ ವ್ಯವಸ್ಥಿತವಾಗಿ ಜರುಗಲಿ ಎಂದು ಹೇಳುವ ವ್ಯವಸ್ಥೆಯೇ? ಸರ್ಕಾರದ ಉದ್ದೇಶ ಏನು, ಇದರ ಹಿನ್ನೆಲೆ ಏನು? ಸಮಿತಿಯನ್ನು ರಚನೆ ಮಾಡಿದಮೇಲೆ ನೇರವಾಗಿ ಯಾವ್ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ? ಇವತ್ತಿನವರೆಗೂ ಇದರ ಬಗ್ಗೆ ಚರ್ಚೆ ಇಲ್ಲ. ಅದಕ್ಕೋಸ್ಕರ ನೇರವಾಗಿ ಹಣ ಬಿಡುಗಡೆಯಾಗಿಲ್ಲ, ಇವತ್ತಿನವರೆಗೆ ಯಾವುದೇ ಅಧಿಕಾರಿ ಕೂಡ ಪ್ರಸ್ತಾಪ ಮಾಡಿಲ್ಲ. ಆದ್ದರಿಂದ ನಾನು ಕೇಳುತ್ತೇನೆ ಸರ್ಕಾರದ ಉದ್ದೇಶ ಏನು? ಇದರ ಹಿನ್ನೆಲೆ ಏನು? ಬರಗಾಲಕ್ಕೋಸ್ಕರ ಹಣ ಬಿಡುಗಡೆ ಮಾಡಿದ್ದೀರೋ ಎಂದು ಸ್ಪಷ್ಟೀಕರಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು : ಚರ್ಚೆಯ ದಿಕ್ಕು ಬೇರೆ ಆಗುತ್ತಿದೆ. ಇದು ಸರಿಯಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಇದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಸಂಪೂರ್ಣವಾಗಿ ಉತ್ತರವನ್ನು ಕೊಡುತ್ತಾರೆ. ಕೆಲವರು ಮಧ್ಯೆ ಮಧ್ಯೆ ಬಂದು ವಿಷಯದ ಪೂರ್ವಾಪರ ಮತ್ತು ಹಿನ್ನೆಲೆ ಗೊತ್ತಿಲ್ಲದೆ ನಮಗೆ ಹಣ ಬಿಡುಗಡೆಯಾಗಿಲ್ಲವೆಂದು ಹೇಳಿದರೆ, ಇದರಲ್ಲಿ ಬಿಡುಗಡೆ ಆಗಿಲ್ಲವೆಂದರೆ ಇಂಟರವೀನಿಂಗ್ ಆಗಿ ನಾವು ಎಲ್ಲ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮಗೆ

ನೇರವಾಗಿ ಜಿಲ್ಲಾವಾರು ಮಾಹಿತಿ ಬೇಕಾದರೆ ಕೊಡುತ್ತಾರೆ, ತಾಲ್ಲೂಕುವಾರು ಮಾಹಿತಿ ಬೇಕಾದರೆ ಅದನ್ನು ಕೂಡ ಮಾನ್ಯ ಕಂದಾಯ ಮಂತ್ರಿಗಳು ಕೊಡುತ್ತಾರೆ. ಆದರೆ ನಾನು ಮಾನ್ಯ ಮಾಡಿ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅದೇನೆಂದರೆ, ಅವರ ಸದನದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ವಿಚಾರವನ್ನು ಗ್ರಹಿಸಲಿಲ್ಲ. ಪ್ರಾಯಶಃ ಅವರು ಇದ್ದಾಗ, ಈ ಮಾತನ್ನು ಒಪ್ಪದೇ ಇರತಕ್ಕಂಥಾದ್ದು ಕೂಡ ಇದೆ. ಮಾನ್ಯ ಬಿ.ಜೆ.ಪಿ. ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ಒಂದು ಮಾರ್ಗಸೂಚಿಯನ್ನು ಮಾಡಿದರು. ಇದರಲ್ಲಿ ಯಾವುದೇ ಸ್ಥಳವನ್ನು ಬರಗಾಲಕ್ಕೆ ಸೀಮಿತವಾದ ಪ್ರದೇಶವೆಂದು ಘೋಷಣೆ ಮಾಡಿಲ್ಲ. ಪ್ರಕೃತಿ ವಿಕೋಪ ಮತ್ತು ಬರಗಾಲ ಕಾಮಗಾರಿಗಳಲ್ಲಿ ಕೈಗೊಳ್ಳಬೇಕಾದ ವಿವಿಧ ಯೋಜನೆಗಳಿಗೆ ಕೇವಲ ೨೦ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಉದ್ಯೋಗ ಒದಗಿಸಿಕೊಡತಕ್ಕದ್ದು, ಕುಡಿಯುವ ನೀರು ಕೊಡುವಂಥಾದ್ದು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಬಗ್ಗೆ, ಮೇವು ಕೊಡುವುದರ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು, ಆಧ್ಯತೆ ಮೇರೆಗೆ ಕೆಲಸ ಮಾಡಬೇಕೆಂದು ಕಾರಣ ಇರುವುದರಿಂದ, ರೋಜಗಾರ್ ಯೋಜನೆಯಲ್ಲಿ, ಎರಡನೇ ರೋಜಗಾರ್ ಯೋಜನೆಯಲ್ಲಿ ಮತ್ತು ಉದ್ಯೋಗ ದೃಢೀಕರಣ ಯೋಜನೆಗಳಲ್ಲಿ ಕೈಗೊಂಡಿರತಕ್ಕಂಥ ಕೇಂದ್ರ-ರಾಜ್ಯ ವಲಯಗಳಲ್ಲಿ ಖರ್ಚು ಮಾಡಿದ್ದನ್ನು ಅನುಬಂಧದಲ್ಲಿ ಈಗಾಗಲೇ ಕೊಟ್ಟಿದ್ದೇವೆ. ಹೆಚ್ಚಿನ ವಿವರಗಳನ್ನು ಮಾನ್ಯ ಕಂದಾಯ ಸಚಿವರು ಈ ಚರ್ಚೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಒದಗಿಸಿಕೊಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಯಾವ್ಯಾವುದರಲ್ಲಿ ಏನು ಖರ್ಚುಮಾಡಿದ್ದೇನೆ, ಅದನ್ನು ತಿಳಿಸಲು ಹೇಳಿದ್ದಾರೆ. ಶಿವಮೊಗ್ಗಜಿಲ್ಲೆಯಲ್ಲಿ ೧.೪.೯೫ನೇ ಇಸವಿಯಲ್ಲಿ ಪ್ರಾರಂಭಿಕ ಶಿಲ್ಕು ೫೭.೬೭೯ ಲಕ್ಷ ಇತ್ತು. ಆದ್ದರಿಂದ ೯೫-೯೬ರಲ್ಲಿ ಆಯವ್ಯಯದಲ್ಲಿ ಕೊಟ್ಟಿರತಕ್ಕಂಥಾದ್ದು ಅನುದಾನ ೮೭೩.೭೭ಲಕ್ಷ ಇದೆ. ಅದರೊಳಗೆ ಬಿಡುಗಡೆ ಮಾಡಿರತಕ್ಕಂಥಾದ್ದು ಹಣ ೨೧೮.೧೬ ಲಕ್ಷ. ಇದರಲ್ಲಿ ಶಿವಮೊಗ್ಗ ಜಿಲ್ಲಾ ಪಂಚಾಯತಿಯಲ್ಲಿ ಈ ಯೋಜನೆಯ ಕೆಳಗಡೆ ಅವರ ಹತ್ತಿರ ಇರತಕ್ಕಂಥ ಒಟ್ಟು ಮಾತ್ರ ೨೭೫.೮೩೭ ಲಕ್ಷ. ೩೧.೭.೯೫ ವರೆಗೆ ಅವರು ಖರ್ಚುಮಾಡಿರತಕ್ಕಂಥಾದ್ದು ೧೧.೧೭೫ಲಕ್ಷ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ, ನನಗೆ ಆಶ್ಚರ್ಯವಾಗುತ್ತದೆ. ಸನ್ಮಾನ್ಯ ಪ್ರಕಾಶರವರಂಥ ಸಚಿವರು, ಗ್ರಾಮೀಣಾಭಿವೃದ್ಧಿಯನ್ನು ನೋಡಬೇಕಾದರೆ, ಮಾನ್ಯ ಜಾಲಪ್ಪನವರು ಕಂದಾಯ ಇಲಾಖೆಯನ್ನು ನೋಡುತ್ತಾ ಇರುವ ಕಾಲದಲ್ಲಿ, ರಾಜ್ಯಕ್ಕೆ ನ್ಯಾಯ ಸಿಗದಿದ್ದರೆ, ಪರಿಹಾರ ಸಿಗದಿದ್ದರೆ ಇನ್ನು ಯಾರ ಕಾಲದಲ್ಲಿ ಸಿಗಬೇಕು? ತಾವೇ ಕೊಟ್ಟಿರುವ ಅಂಕಿಗಳು. ೮೭೩ ಲಕ್ಷದಲ್ಲಿ ೨೧೮ ಲಕ್ಷ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿದ್ದೀರಿ. ಇದರಲ್ಲಿ ಖರ್ಚು ಮಾಡಿರುವುದು, ನೀವು ಹೇಳುವ ಪ್ರಕಾರ ೧೧ ಲಕ್ಷ ರೂಪಾಯಿಗಳು.

Sri M.P. Prakash : Eleven Lakh Mandays has been created.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಒಂದು ಕೆಲಸ ಏನು ಮಾಡುತ್ತೀರಿ ಅಂದರೆ, ನೀರು ಆಮೇಲೆ ಉತ್ತರ ಕೊಡಿ, ನಾವೇನೂ ಅವಸರ ಮಾಡುವುದಿಲ್ಲ. ನಮಗೆ ಏನು ಅಂಕಿ ಅಂಶ ಬೇಕೆಂದರೆ,

ಇಡೀ ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲ ಬಿದ್ದಿದೆ. ನಮ್ಮ ಜ್ಞಾನೇಂದ್ರ ಅವರು ವಿವರಗಳಿಗೆ ಹೋಗುತ್ತಾರೆ. ಪ್ರತಿ ತಾಲ್ಲೂಕಿನಲ್ಲಿಯೂ ಸಹ ಯಾವಯಾವ ಯೋಜನೆಗಳಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಎಷ್ಟು ಖರ್ಚಾಗಿದೆ ಎನ್ನುವ ವಿವರಗಳನ್ನು ಕೊಟ್ಟರೆ ಸಾಕು. ಆರ್.ಎಲ್.ಜಿ.ಪಿ., ಎನ್.ಆರ್.ಇ.ಪಿ. ಮುಂತಾದ ಎಲ್ಲಾ ಯೋಜನೆಗಳೂ ವರ್ಷದ ೩೬೫ ದಿನಗಳಲ್ಲೂ, ಕಳೆದ ಹತ್ತಾರು ವರ್ಷಗಳಿಂದ ಈ ಯೋಜನೆ ಪ್ರಾರಂಭವಾದಾಗಿನಿಂದ ನಡೆಯುತ್ತಿರತಕ್ಕ ಕೆಲಸ. ಈ ಹಣವನ್ನೂ ಸಹಿತ ಭೀಕರ ಬರಗಾಲ ಇರುವಂಥ ಸಂದರ್ಭದಲ್ಲಿ ಸಕಾಲಕ್ಕೆ ಬಿಡುಗಡೆ ಮಾಡಿ, ಕೆಲಸ ಪ್ರಾರಂಭವಾಗಿಲ್ಲ ಎನ್ನುವಂಥಾದ್ದು ಮತ್ತು ಈ ನಾಡಿನ ಜನರಿಗೆ ಅನ್ಯಾಯವಾಗಿರುವುದಕ್ಕೆ ನಿಮ್ಮ ಸರ್ಕಾರದ ಅಕ್ಷಮ್ಯ ಅಪರಾಧವಾಗುತ್ತದೆ ಎನ್ನುವುದನ್ನು ತಿಳಿದುಕೊಂಡು, ಈಗಲಾದರೂ ಸರಿಪಡಿಸುವ ಕಡೆ ಗಮನಕೊಡಬೇಕೇ ಹೊರತು, ಹಣ ಬಿಡುಗಡೆ ಮಾಡಿದ್ದೇವೆಂದು ಅಂಕಿಅಂಶ ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ಇದನ್ನು ನಿಮ್ಮ ಬಾಯಿಂದ ಏಕೆ ಹೇಳುತ್ತಾ ಇಲ್ಲ, ನಿಮ್ಮ ನಾಲಿಗೆ ಏಕೆ ತಡೆಯುತ್ತಾ ಇದೆ. ನೀವು ಬಿಡುಗಡೆ ಮಾಡಿರುವುದನ್ನು ಹೇಳುತ್ತಿದ್ದೀರೇ ಹೊರತು ಖರ್ಚುಮಾಡಿರುವುದನ್ನು ಹೇಳುತ್ತಾ ಇಲ್ಲ. ಇದುವರೆಗೂ ಬರಗಾಲದ ಕಾಲದಲ್ಲಿ ಉತ್ತರ ಕೊಡಬೇಕಾದರೆ, ಮಾನ್ಯ ಮೊಯಿಲಿಯವರು ಇದ್ದ ಕಾಲದಲ್ಲಿ ನೋಡಿದ್ದೇವೆ, ಅಥವಾ ಬಂಗಾರಪ್ಪನವರು ಇದ್ದ ಕಾಲದಲ್ಲಿ ನಾವು ನೋಡಿದ್ದೇವೆ. ಇಂತಹ ಹಣ, ಇಷ್ಟು ಬಿಡುಗಡೆ ಮಾಡಿದ್ದೇವೆ, ಇಂಥಿಂಥ ತಾಲ್ಲೂಕಿನಲ್ಲಿ ಇಷ್ಟು ಕಾಮಗಾರಿ ಕೆಲಸಗಳು ನಡೆಯುತ್ತಿವೆ ಎಂದು ಹೇಳುತ್ತಾ ಇದ್ದರು. ಆದರೆ, ಇವತ್ತು ಹಿಂದೆ ನಡೆಯುತ್ತಾ ಇದ್ದಂಥ ಕೆಲಸಗಳು ಮುಂದುವರಿಸುತ್ತಿದ್ದೇವೆಂದು ಹೇಳುವುದನ್ನು ಬಿಟ್ಟರೆ, ಹೊಸದಾಗಿ ಯಾವುದೇ ತಾಲ್ಲೂಕಿನಲ್ಲಿ ಕೆಲಸ ಕಾರ್ಯಗಳು ಪ್ರಾರಂಭವಾಗಿಲ್ಲ. ಇದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ವಿಷಯಗಳನ್ನು ಊಹೆ ಮಾಡಿ ಕೊಡುತ್ತಿದ್ದಾರೆ. ಬರಗಾಲ ಕಾಮಗಾರಿಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ನಂತರ, ನಾವು ಉತ್ತರ ಕೊಡತಕ್ಕಂಥ ಸಂದರ್ಭ ಇದೆ. ಈ ಸನ್ನಿವೇಶದಲ್ಲಿ ಕ್ರಿಯಾ ಯೋಜನೆಗಳನ್ನು ರೂಪ ಮಾಡಿಕೊಂಡಾಗ, ಹಿಂದೆ ಚುನಾವಣೆಯ ಸಂದರ್ಭದೊಳಗೋ ಅಥವಾ ಒತ್ತಡಗಳ ಮೂಲಕವೋ ಹತ್ತನೇ ಒಂದು ಭಾಗ ಇದ್ದಾಗ, ಕೂಡ ಅನೇಕ ಹೊಸ ಯೋಜನೆಗಳನ್ನು ಹಿಂದಿನ ವರ್ಷ ಪ್ರಾರಂಭ ಮಾಡಿ ಬಿಟ್ಟಿದ್ದಾರೆ. ಅವು ಉಳಿದಿರತಕ್ಕಂಥ ಕೆಲಸಕಾರ್ಯಗಳು. ಈ ಸ್ಪಿಲ್ ಓವರ್ ಕೆಲಸಗಳನ್ನು ನಾವು ಮಾಡುವುದಿಲ್ಲವೆಂದಾದರೆ, ಅವು ಕೆಲಸಗಳಲ್ಲವೇ ? ಯಾವುದೇ ಆಗಿರಬಹುದು. ನಿಮ್ಮನೀತಿನಿಯಮಗಳ ಪ್ರಕಾರ, ಮೂರನೇ ಒಂದು ಅಂಶದಷ್ಟು ಹಣವನ್ನು ಆಯವ್ಯಯದಲ್ಲಿ ತೋರಿಸಿದಿದ್ದರೆ, ಈ ಕೆಲಸಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ, ಚುನಾವಣೆಗಳ ಒತ್ತಡ ಇರಬಹುದು, ಸಾರ್ವಜನಿಕರ ಒತ್ತಡಗಳು ಇರಬಹುದು. ಹತ್ತನೆಯ ಒಂದು ಅಂಶ ಇದ್ದಾಗ ಕೂಡ, ಅನೇಕರು ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಿದ್ದಾರೆ, ಇವು ಉಳಿದಿರತಕ್ಕಂಥ, ಬಾಕಿ ಉಳಿದಿರತಕ್ಕಂಥ ಕೆಲಸಕಾರ್ಯಗಳು ಎಂದು ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಯವರು ವಿವಿಧ ಯೋಜನೆಗಳ ಕೆಳಗೆ, ಈ ಕಾಮಗಾರಿಗಳಿಗೆ ಹಣವನ್ನು ಕೊಟ್ಟು,

ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಿದ್ದಾರೆ. ನೀವು ಹೇಳುವಂಥಾದ್ದು, ಈ ವರ್ಷದಲ್ಲಿ ಹೊಸ ಕಾಮಗಾರಿಗಳು ಯಾವು ಇವೆಯೆಂದರೆ, ಅಂದರೆ ಉಳಿದಿರತಕ್ಕಂಥ ಕೆಲಸಕಾರ್ಯಗಳನ್ನು ಮುಂದುವರಿಸುತ್ತಾ, ಲಭ್ಯವಾಗಿರತಕ್ಕಕಂಥ ಹಣದಲ್ಲಿಯೂ ಕೂಡ ಕೆಲಸಕಾರ್ಯಗಳಾಗಿದೆ. ನೀವು ಹೇಳಿದಂಥ ರೀತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಕಾರ್ಯಗಳು ಆಗಬೇಕಾಗಿತ್ತು, ಅದು ಆಗಿಲ್ಲ. ಅದರಲ್ಲಿ, ಈಗಲೂ ಅನುಷ್ಠಾನ ಮಾಡುವುದಕ್ಕೆ ಅಧಿಕಾರಿಗಳು ಹಣ ಇದೆ. ಕುಡಿಯುವ ನೀರಿಗೆ ಸೆಪ್ಟೆಂಬರವರೆಗೆ ತ್ರೈಮಾಸಿಕ ಹಣ ಬಿಡುಗಡೆಯಾಗಿದೆ. ಈ ಎಲ್ಲಾ ಕೆಲಸಕಾರ್ಯಗಳ ಬಗ್ಗೆ ಪ್ರತ್ಯೇಕ, ಪ್ರತ್ಯೇಕವಾಗಿ ಮಾನ್ಯ ಕಂದಾಯ ಸಚಿವರು ಉತರ ಕೊಡುತ್ತಾರೆ. ನಮ್ಮ ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ಹಣ ಬಿಡುಗಡೆಯಾಗಿರುವುದನ್ನು ನಾವು ತೋರಿಸಿಕೊಡತ್ತೇವೆ. ಇದರಲ್ಲಿ ಮುಚ್ಚುಮರೆ ಮಾಡುವುದು ಏನೂ ಇಲ್ಲ. ಆದರೆ, ಹಣ ಇಲ್ಲವೆನ್ನತಕ್ಕ ಮಾತೇನಿದೆ, ಇದು ಸುಮ್ಮನೆ ಗೂಬೆ ಕೂಡಿಸತಕ್ಕ ಒಂದು ತಂತ್ರವಾಗತ್ತದೆಯೇ ವಿನಹ, ಇದು ವಾಸ್ತಾವಾಂಶವನ್ನು ಬಗೆಹರಿಸುವುದಕ್ಕೆ ಮಾಡಿರತಕ್ಕ ಕೆಲಸವಲ್ಲ.

ಶ್ರೀ ಸಿ.ಹೆಚ್. ವಿಜಯಶಂಕರ್ : ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲವೆಂದು ಹೇಳಿದರು. ಸರ್ಕಾರಕ್ಕೆ ಬರಪೀಡಿತ ಪ್ರದೇಶವೆಂದು ಗೊತ್ತಿದ್ದರೂ ಕೂಡ, ಆ ಪ್ರದೇಶವನ್ನು ಬರಪೀಡಿತ ಪ್ರದೇಶವೆಂದು ಏಕೆ ಘೋಷಣೆ ಮಾಡಲಿಲ್ಲ?

ಶ್ರೀ ಆರ್.ಎಲ್. ಜಾಲಪ್ಪ : ನೀವು ಹೊಸದಾಗಿ ಬಂದಿದ್ದೀರಿ, ಎಲ್ಲಾ ವಿಷಯಗಳನ್ನೂ ತಿಳಿದುಕೊಂಡಿಲ್ಲವೆಂದು ಸನ್ಮಾನ್ಯ ಮೊಯಿಲಿಯವರು ಹೇಳಿದ್ದು ಇದಕ್ಕೆ. ಬರಗಾಲಪೀಡಿತ ಪ್ರದೇಶವೆಂದು ಎಲ್ಲೂ ಡಿಕ್ಲೇರ್ ಮಾಡುವುದಿಲ್ಲ. ಯಾವಾಗ ಬೆಳೆ ೬ ಅಣೆಗಿಂತ ಕಡಿಮೆ ಇದ್ದಾಗ, ಆಣೆವಾರಿ ಎಂದು ಮಾಡಿ, ಅಲ್ಲಿ ಕೆಲವು ರಿಯಾಯಿತಿ ಕೊಡುವುದಕ್ಕೆ ಅವಕಾಶವಿದೆ. ತಕಾವಿ ಸಾಲಗಳು, ಅಲ್ಪಾವಧಿ ಸಾಲವನ್ನು, ದೀರ್ಘಾವಧಿ ಸಾಲವಾಗಿ ಪರಿವರ್ತನೆ ಮಾಡುವುದು ಇವೆಲ್ಲಾ ಬರುತ್ತದೆ. ಬರಗಾಲ ಪೀಡಿತ ಪ್ರದೇಶ ಎಂದು ಡಿಕ್ಲೇರ್ ಮಾಡುವುದಕ್ಕೆ ಎಲ್ಲೂ ಅವಕಾಶವಿಲ್ಲ, ಕಾನೂನಿನಲ್ಲೂ ಅವಕಾಶವಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಬರಪರಿಹಾರ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದಕ್ಕೆ ತಾಲ್ಲೂಕು ಮಟ್ಟದಲ್ಲಿ, ಶಾಸಕರ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಸಮಿತಿ ಮಾಡಿ ಆದೇಶ ಹೊರಡಿಸಿದೆ. ಹಾಸನ ಜಿಲ್ಲಾ ಪಂಚಾಯಿತಿಯಲ್ಲಿ ಆ ದಿವಸ ಮಾನ್ಯ ಮಂತ್ರಿಗಳ ಗಮನಕ್ಕೆ ತಂದೆ. ಜಿಲ್ಲಾಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕೂಡ, ಇದಕ್ಕೆ ಇನ್ನಷ್ಟು ಹೆಸರುಗಳನ್ನು ಸೇರಿಸಿ ಒಂದು ಆದೇಶ ಹೊರಡಿಸಿದ್ದಾರೆ. ಇದು ಅವರಿಗೆ ಸರಿಯೇ? ಈ ರೀತಿಯ ಆದೇಶ ಹೊರಡಿಸುವುದಕ್ಕೆ ಅವರಿಗೆ ಅಧಿಕಾರ ಇದೆಯೇ? ಏಕೆಂದರೆ, ಅಲ್ಲಿ ಗೊಂದಲ ಶುರುವಾಗಿದೆ. ಅವರಿಗೆ ಈ ರೀತಿಯ ಅಧಿಕಾರವಿಲ್ಲವೆಂದು ಹೇಳಿದರೆ, ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ? ಬರಪರಿಹಾರ ಕಾಮಗಾರಿಗಳನ್ನು ಅನುಷ್ಠಾನಮಾಡುವುದಕ್ಕೆ ಸರ್ಕಾರ ಒಂದು ಸಮಿತಿ ಮಾಡಿ ಆದೇಶ ಹೊರಡಿಸಿದೆ. ಈ ಸಮಿತಿಗೆ ಇನ್ನಷ್ಟು ಜನರ ಹೆಸರುಗಳನ್ನು ಸೇರಿಸಿ, ಜಿಲ್ಲಾಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಒಂದು ಆದೇಶ ಹೊರಡಿಸಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಒಂದು ಸಮಯ ಹಾಗೆ ಸೇರಿಸಿದ್ದರೆ, ಅದರಿಂದ ಏನು ತೊಂದರೆಯಾಗುತ್ತದೆ. ನಿಮಗೆ ಏನಾದರೂ ತೊಂದರೆಯಾಗುತ್ತದೆಯೇ. ನಿಮಗೆ ಬೇಕಾಗಿರುವುದು ಕೆಲಸ, ನಿಮಗೆ ಬೇಕಾಗಿರುವುದು ಹಣ. ಒಬ್ಬಬ್ಬರು ಜಾಸ್ತಿಯಾದರೆ ಏನು ತೊಂದರೆಯಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಸಮಿತಿ ಸದಸ್ಯರಾಗಿ ನಾವು ಯಾರನ್ನು ಕರೆಯುವುದು? ಜಿಲ್ಲಾಪಂಚಾಯಿತಿಯವರು ಸೇರಿಸುತ್ತಾರೆ, ತಾಲ್ಲೂಕು ಪಂಚಾಯಿತಿಯವರೂ ಸ್ವಲ್ಪಜನರನ್ನು ಸೇರಿಸುತ್ತಾರೆ, ಎಲ್ಲರನ್ನೂ ಕರೆಯುವುದೇ? ತಾವು ಸ್ಪಷ್ಟವಾಗಿ ಉತ್ತರವನ್ನು ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ನಾವು ಕೊಟ್ಟಿರತಕ್ಕ ಆಜ್ಞೆಯ ನಂತರ, ಅಲ್ಲಿಯ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಏನು ಸುತ್ತೋಲೆ ಕಳುಹಿಸಿಕೊಟ್ಟಿದ್ದಾರೆ, ಅದು ನಮ್ಮ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರಾದ ರಾಮಸ್ವಾಮಿಯವರ ಹತ್ತಿರ ಇದ್ದರೆ, ದಯಮಾಡಿ ನಮಗೆ ಕಳುಹಿಸಿಕೊಡಿ. ಯಾರನ್ನು ಸೇರಿಸಿದ್ದಾರೆ ಎಂಬುದನ್ನು ನೋಡುತ್ತೇನೆ ಮತ್ತು ಅದರ ವ್ಯಾಪ್ತಿ ಏನು ಎನ್ನುವುದನ್ನೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಶಿವರಾಂ : ೧೬.೭.೯೫ಕ್ಕೆ ಸರ್ಕಾರ ಆದೇಶ ಕಳುಹಿಸಿ, ಬರಗಾಲದ ಸಮಿತಿ ಮಾಡಿದೆ. ಇದಾದಮೇಲೆ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ಪತ್ರವನ್ನು ೨೨.೭.೯೫ಕ್ಕೆ ಬರೆಯುತ್ತಾರೆ. ಬರಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಕೂಡಲೇ ಸಮಿತಿಯನ್ನು ಕರೆದು, ತಾವು ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು. ಆ ರೆಫರೆನ್ಸಗೆ ತಕ್ಕಂತೆ ೨೪.೭.೯೫ಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಒಂದು ಸುತ್ತೋಲೆಯನ್ನು ಬಿಡುಗಡೆ ಮಾಡುತ್ತಾರೆ. ಆ ಸುತ್ತೋಲೆಯಲ್ಲಿ ಇವರು ಬೇರೆ ಹೆಸರುಗಳನ್ನು ಸೇರಿಸುವುದನ್ನೂ ಮಾಡುತ್ತಾರೆ. ಅಭಾವ ಪರಿಸ್ಥಿತಿ ಇರತಕ್ಕ ಕಡೆಗಳಲ್ಲಿ ಕಾಮಗಾರಿ ಕೆಲಸಗಳ ಬಗ್ಗೆ, ಆಯಾ ಕ್ಷೇತ್ರದ ಶಾಸಕರು, ಜಿಲ್ಲಾಪಂಚಾಯ್ತಿ ಸದಸ್ಯರು ಮತ್ತು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರನ್ನೊಳಗೊಂಡಂತೆ ಬರಪರಿಹಾರ ಸಮಿತಿಯ ಸಭೆ ಕರೆಯಿರಿ ಎಂದು ಅವರು ಹೇಳುತ್ತಾರೆ. ಇದರಿಂದ ಏನು ತೊಂದರೆಯಾಯಿತು ಎಂದು ಮಾನ್ಯ ಕಂದಾಯ ಮಂತ್ರಿಗಳು ಕೇಳುತ್ತಾರೆ. ತೊಂದರೆಯಾಗಿರುವುದು ಇಷ್ಟೆ. ತಹಶೀಲ್ದಾರರವರು, ನೀವು ಯಾವರೀತಿ ಇವರೆಲ್ಲರನ್ನೂ ಸೇರಿಸಿ ಸಭೆ ಕರೆಯುವುದು ಎಂದು, ಬಿ.ಡಿ.ಓ. ನನಗೆ ಸಭೆ ಕರೆಯುವುದಕ್ಕೆ ಅಧಿಕಾರವಿಲ್ಲವೆಂದೂ ಹೇಳುತ್ತಿದ್ದಾರೆ. ಇಷ್ಟಾದರೂ ನಾವು ಒತ್ತಾಯ ಮಾಡಿ, ಜಿಲ್ಲಾಪಂಚಾಯಿತಿಯ ಪಟ್ಟಿ ಬಿಟ್ಟು, ೧೧ನೇ ತಾರೀಖಿಗೆ ಸಭೆ ಕರೆದಿದ್ದೇವೆ. ಕಂದಾಯ ಇಲಾಖೆಯ ಸರ್ಕಾರದ ಆದೇಶ ಏನಿದೆ, ಅದರ ಪ್ರಕಾರ ಕರೆದರೆ, ಆ ಸಭೆಗೆ ಯಾರೂ ಬರಲೇ ಇಲ್ಲ. ಇದಾದಮೇಲೆ ೧೬ನೇ ತಾರೀಖಿಗೆ ಮತ್ತೆ ಚೀಫ್ ಸೆಕ್ರೆಟರಿಯವರ ಆದೇಶ ಪ್ರಕಾರ ಸಭೆ ಕರೆಯುತ್ತಾರೆ, ಆಗ ಸಭೆ ಆಗುತ್ತದೆ. ಇದು ಗೊಂದಲ. ನಾವು ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ಸಭೆ ಮಾಡಿ, ಪ್ರಮುಖವಾಗಿ ಪ್ರಾರಂಭವಾಗಬೇಕಾದ ಕಾಮಗಾರಿಗಳನ್ನು ಪಟ್ಟಿಮಾಡಿ ಕಳುಹಿಸಿಕೊಟ್ಟೆವು. ಆದರೆ, ಇಲ್ಲಿಯವರೆಗೂ ಆ ಕಾಮಗಾರಿಗಳನ್ನು ಏನಾದರೂ ಮಂಜೂರುಮಾಡುವಂಥಾದ್ದು ಅಥವಾ ನಿಮ್ಮ ಸೆಲ್ಫ ಅಫಪ್ರಾಜೆಕ್ಟ, ಮತ್ತೆ ಏನೇನು ಮಾಡಿದ್ದೀರಿ, ಹಣ ಇತ್ಯಾದಿ ಎಲ್ಲಾ ಕೆಲಸಗಳು ತೆಗೆದುಕೊಳ್ಳುವುದನ್ನು ಮಾಡಿದ್ದೀರಾ?

ಶ್ರೀ ಎಂ.ಪಿ. ಪ್ರಕಾಶ್ : I you are unnecessarily mixing up certain issues which are not there. ಈ ಚರ್ಚೆ ಬೇರೆ ದಿಕ್ಕಿಗೆ ಹೋಗುತ್ತಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸರ್ಕಾರಿ ಆದೇಶವನ್ನು ಮೀರಿ ಸುತ್ತೋಲೆ ಯಾವುದನ್ನು ಮಾಡಿದ್ದೀರಿ, ಏನೇನು ಅನುಷ್ಠಾನ ಮಾಡಿದ್ದೀರಿ ಎಂದು ಮಾತನಾಡುವುದಾದರೆ, ನಾವಿನ್ನು ಮಾನ್ಯಸದಸ್ಯರಿಗೆ ಉತ್ತರವನ್ನೇ ಕೊಟ್ಟಿಲ್ಲ.

ಶ್ರೀ ಬಿ. ಶಿವರಾಂ : ನಾನು ಹೇಳಿದ್ದನ್ನು ದಯಮಾಡಿ ಪೂರ್ತಿ ಕೇಳಿದ್ದರೆ, ತಾವು ಸರಿಯಾಗಿ ಹೇಳುತ್ತಿದ್ದಿರಿ. ಕಂದಾಯ ಇಲಾಖೆಯವರು ಮಾಡಿದ್ದ ಸಮಿತಿ. ಅಥವಾ ಜಿಲ್ಲಾಪಂಚಾಯಿತಿಯವರು ಮಾಡಿದ್ದೇ ಸಮಿತಿ ಎಂದು ಹೇಳಿದೆ. ಕಂದಾಯ ಇಲಾಖೆಯವರ ಪ್ರಕಾರ ನಾವು ಮಾಡಿಕೊಟ್ಟ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ಹೇಳುತ್ತಿದ್ದೇನೆ. ನಾನು ಈ ಇಷ್ಯೂ ಕನಫ್ಯೂಷನ್ ಮಾಡುತ್ತಾ ಇಲ್ಲ. ಅಷ್ಟಕ್ಕೇ ಸೀಮಿತವಾಗಿ ಹೇಳುತ್ತಿದ್ದೇನೆ. ಇದನ್ನು ಏಕೆ ಹೇಳಿದೆಯೆಂದರೆ, ಕಂದಾಯ ಇಲಾಖೆ ಆದೇಶದ ಪ್ರಕಾರ, ಮಾಡಿಕೊಟ್ಟ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಾದ್ದು ಮಾಡಲಿಲ್ಲ. ಇದನ್ನು ಆರ್.ಡಿ.ಪಿ.ಆರ್.ಮಂತ್ರಿಗಳ ಗಮನಕ್ಕೆ ಮತ್ತು ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ, ನೀವು ಈ ಗೊಂದಲವನ್ನು ಪರಿಹಾರ ಮಾಡಿ; ಸ್ಪಷ್ಟವಾಗಿ ಯಾರು ಮಾಡಬೇಕು? ತಹಶೀಲ್ದಾರರವರು ಮಾಡಬೇಕೇ ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆದೇಶದ ಪ್ರಕಾರ ಬಿ.ಡಿ.ಓ.ರವರು ಮಾಡಬೇಕೇ. ಏಕೆಂದರೆ, ಜಿಲ್ಲಾಪಂಚಾಯಿತಿ ಸದಸ್ಯರುಗಳನ್ನು ತಹಶೀಲ್ದಾರ್ ಕರೆಯುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಮತ್ತು ಆರ್.ಡಿ.ಪಿ.ಆರ್ ಮಂತ್ರಿಗಳು ಜೊತೆಯಲ್ಲೂ ಚರ್ಚೆ ಮಾಡಿದ್ದೇನೆ; ಕಾಮಗಾರಿಗಳನ್ನು ತೆಗೆದುಕೊಂಡಿಲ್ಲವೆನ್ನುವುದನ್ನೂ ಹೇಳಿದ್ದೇನೆ. ತಾವು ಸ್ಪಷ್ಟವಾಗಿ ಬರೆದಿದ್ದೀರಿ, ಆ ರೀತಿ ಬರೆದಿದ್ದರೂ ತೆಗೆದುಕೊಂಡಿಲ್ಲವೆನ್ನುವುದನ್ನು ತಮಗೆ ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸದಸ್ಯ ಕಾರ್ಯದರ್ಶಿ ತಹಶೀಲ್ದಾರ್ ಆಗಿರುವುದರಿಂದ, he is a member Secretary according to law. There is no question of Tahsildar violating the circular instructions.

ಸದಸ್ಯ ಕಾರ್ಯದರ್ಶಿಯಾಗಿರುವುದರಿಂದ, ಆತ ಸಭೆಯನ್ನು ಕರೆಯಬೇಕಾಗುತ್ತದೆ. ಇವರನ್ನು ಏಕೆ ಕರೆಯಬೇಕು, ಅವರನ್ನು ಏಕೆ ಕರೆಯಬೇಕು, ನನಗೆ ಸಂಬಂಧವಿಲ್ಲ ಎನ್ನುವ ಪ್ರಶ್ನೆ ಅಲ್ಲ. ಪ್ರಾಯಶಃ ಸೀಮಿತಗೊಂಡಿರತಕ್ಕ ಕೆಲಸ ಆಗಿರಲೇಬೇಕು.

ಒಬ್ಬ ಮಾನ್ಯ ಸದಸ್ಯರು : ಅವರು ಹೇಳುವುದು ಇಷ್ಟೆ. ಕಂದಾಯ ಮಂತ್ರಿಗಳು, ಅವರ ಕಾರ್ಯದರ್ಶಿಗಳ ಮೂಲಕ ಹೊರಡಿಸಿರತಕ್ಕ ಆದೇಶ ಇದೆ....

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ದಯಮಾಡಿ, ಮುಖ್ಯವಾದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ : ಸರ್ಕಾರ ಒಂದು ಆದೇಶ ಹೊರಡಿಸಿದೆ. ಇದು ಬಹಳ ಪ್ರಮುಖವಾಗಿದೆ. ಬರಗಾಲ ಸಮಿತಿ ಅಂತ ಹೇಳಿ ಅದಕ್ಕೆ ತದ್ವಿರುದ್ಧವಾಗಿ ಜಿಲ್ಲಾ ಪರಿಷತ್ತಿನಿಂದ

ಇನ್ನೊಂದು ಅಷ್ಟು ಜನರ ಹೆಸರುಗಳನ್ನು ಸೇರಿಸಿ ಆದೇಶ ಹೊರಡಿಸಿದೆ ಯಾವುದನ್ನು ಕಾರ್ಯನಿರ್ವಹಣೆ ಮಾಡಬೇಕು. ಅವರನ್ನು ಕೇಳಬಾರದು ಅಂತ ಏನೂ ಇಲ್ಲ ಸರಿ ಎಲ್ಲರನ್ನು ಕೇಳೋಣ. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಇನ್ನೊಂದು ಅಷ್ಟುಜನರನ್ನು ಸೇರಿಸಿ ಆದೇಶ ಹೊರಡಿಸುವುದಕ್ಕೆ ಅಧಿಕಾರ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವರು ಎರಡನೇ ಸುತ್ತೋಲೆಯನ್ನು ಮೊದಲನೇ ಸುತ್ತೋಲೆಯನ್ನು ಹೆಚ್ಚು ಮಾಡಿ ಅಥವಾ ವ್ಯತಿರಿಕ್ತವಾಗಿ ಒಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ ಎನ್ನತಕ್ಕಂಥ ಮಾತು ಇದ್ದರೆ, ನನ್ನ ಗಮನಕ್ಕೆ ಇದುವರೆಗೂ ಬಂದಿಲ್ಲ, ಮಾನ್ಯ ಕಂದಾಯ ಸಚಿವರ ಗಮನಕ್ಕೂ ಇದುವರೆಗೂ ಬಂದಿಲ್ಲ. ದಯಮಾಡಿ ತಾವು ಆ ಸುತ್ತೋಲೆಯನ್ನು ಕಳುಹಿಸಿಕೊಡಿ ಕಾನೂನು ವ್ಯಾಪ್ತಿಯನ್ನು ಮೀರಿ ಆ ಅಧಿಕಾರಿ ನಡೆದುಕೊಂಡಿದ್ದಾನೆಯೋ ಇಲ್ಲವೋ ಎನ್ನುವುದನ್ನು ಸ್ವಲ್ಪ ನಂತರ ನಾವು ನಿಮಗೆ ಹೇಳುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಈ ಸದನದಲ್ಲಿಯೇ ನಾನು ತಮಗೆ ಒಂದು ವಾರದ ಹಿಂದೆ ಹೇಳಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಶಾಸಕರು ನನ್ನ ಜೊತೆಯಲ್ಲಿ ಖಾಸಗೀಯಾಗಿ ಮಾತನಾಡುವಾಗ ಹೇಳಿದರು.

ಶ್ರೀ ಎ.ಟಿ. ರಾಮಸ್ವಾಮಿ : ಜಿಲ್ಲಾ ಪರಿಷತ್ತಿನಿಂದ ಒಂದು ಆದೇಶ ಹೊರಡಿಸಿದೆ, ಆ ಆದೇಶ ಹೊರಡಿಸಲು ಅವರಿಗೆ ಅಧಿಕಾರ ಇದೆಯೇ, ಇಲ್ಲವೇ ಎನ್ನುವುದನ್ನು ತಿಳಿಸಲು ಪರಿಶೀಲನೆ ಮಾಡಬೇಕೇ?

ಶ್ರೀ ಎಂ.ಪಿ. ಪ್ರಕಾಶ್ : ನಿಮಗೆ ಉತ್ತರ ಬೇಕಾಗಿದ್ದರೆ ಮಾನ್ಯ ಸದಸ್ಯರೇ ದಯಮಾಡಿ ತಾವು ಮಾನ್ಯ ಉಪಾಧ್ಯಕ್ಷರ ಮೂಲಕ ಆ ಸುತ್ತೋಲೆಯನ್ನು ಕಳುಹಿಸಿಕೊಡಿ. ಅದು ವ್ಯತಿರಿಕ್ತವಾಗಿದೆಯೋ ಅಥವಾ ಕಾನೂನು ಬಾಹಿರವಾಗಿದೆಯೋ ಎನ್ನುವುದನ್ನು ನಾವು ಮುಚ್ಚಿಟ್ಟುಕೊಳ್ಳುವಂತಹ ಪ್ರಯತ್ನ ಇಲ್ಲ ನಾವು ಉತ್ತರವನ್ನು ಕೊಡುತ್ತೇವೆ.

ಉಪಾಧ್ಯಕ್ಷರು : ಕಳುಹಿಸಿ ಕೊಡಿ.

ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೇ, ಜಿ.ಆರ್.ವೈ. ವಿಚಾರದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆವು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಸಮಿತಿಗಳನ್ನು ರಚನೆ ಮಾಡುವುದು ಕಂದಾಯ ಇಲಾಖೆ. ಈಗ ನಾವು ಏನು ಸೂಚನೆಯನ್ನು ಕೊಟ್ಟಿದ್ದೇವೆ, ಅದು ರೆವಿನ್ಯೂ ಡಿಪಾರ್ಟಮೆಂಟನಿಂದ ಅದನ್ನು ಯಾವುದಾದರೂ ಅಧಿಕಾರಿ ವೈಲೇಟ್ ಮಾಡಿದ್ದರೆ ನಾನು ಆಗಲೇ ಸುಮ್ಮನೇ ಲಘುವಾಗಿ ಹೇಳಿದ ನಿಮಗೇನು ತೊಂದರೆ ಅಂತ. ದರೆ ಅದು ಆ ರೀತಿ ಅಲ್ಲ. ನಾವು ಕೊಟ್ಟ ಸೂಚನೆಯನ್ನು

ವೈಲೇಟ್ ಮಾಡಿ ಸಿ.ಇ.ಓ. ಬೇರೆಯವರ ಹೆಸರುಗಳನ್ನು ಸೇರಿಸುವುದಕ್ಕೆ ಅಧಿಕಾರ ಇಲ್ಲ. ಆ ರೀತಿ. ಅಧಿಕಾರ ಏನಾದರೂ ಅವರು ಚಲಾಯಿಸಿದ್ದರೆ, ನಾವು ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಆ ವಿವರಗಳನ್ನು ಕಳುಹಿಸಿಕೊಡಲಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಬಗ್ಗೆ ನಾನು ಹೇಳುತ್ತಾಹೋದಾಗ ಉದಾಹರಣೆಗೆ ಹೇಳುವುದಾದದರೆ ವಿರೋಧಪಕ್ಷದ ನಾಯಕರಾಗಿರತಕ್ಕಂಥ ಶ್ರೀಮಾನ್ ಯಡಿಯೂರಪ್ಪನವರ ನೇತೃತ್ವದಲ್ಲಿ ಒಂದು ಮನವಿಯನ್ನು ಕೊಟ್ಟೆವು. ಸುಮಾರು ೨೫೦ ಕೋಟಿ ರೂಪಾಯಿಗಳು ಬೇಕೆಂದು ತಾವು ಕೂಡ ಒಂದು ಇದಕ್ಕೆ ಕೇಂದ್ರ ಸರ್ಕಾರ ಸ್ಪಂಧಿಸಬೇಕು. ಪ್ರಧಾನ ಮಂತ್ರಿಗಳು, ನಾವು ಹೋದಾಗ, ಇಲ್ಲಾ ಯಾರನ್ನಾದರೂ ಕಳುಹಿಸುತ್ತೇವೆ. ಸರ್ವೆಮಾಡಿಸುತ್ತೇವೆ ನಾವು ಕೂಡ ವೀಕ್ಷಣೆ ಮಾಡುತ್ತೇವೆ ಎಂದು ಹೇಳಿದರು.

ಶ್ರೀ ಆರ್.ಎಲ್. ಜಾಲಪ್ಪ : ಸುಮ್ಮನೇ ಮಾತನಾಡುವುದು ಬೇಡ. ನಾವು ಈಗಾಗಲೇ ಕೇಂದ್ರ ಸರ್ಕಾರದ ನಿಲುವನ್ನು ಹೇಳಿದ್ದೇನೆ. ಎಂಪ್ಲಾಯಮೆಂಟ್ ಅಪರಮೇಶನ್ ಸ್ಕೀಮನಲ್ಲಿ ನೀವು ಎಷ್ಟಾದರೂ ಖರ್ಚುಮಾಡಿ ನಾವು ಕೊಡುತ್ತೇವೆ ಎಂದು ನಾನು ಮತ್ತು ಮುಖ್ಯ ಮಂತ್ರಿಗಳು ಹೋದಾಗ ಪ್ರಧಾನ ಮಂತ್ರಿಗಳೇ ನಮಗೆ ಭರವಸೆ ಕೊಟ್ಟಿದ್ದಾರೆ. ನೀವು ಒಂದು ಮನವಿಯನ್ನು ಕೊಟ್ಟಿದ್ದೀರಿ ಆದಕ್ಕೆ ದುಡ್ಡು ಕೊಡಲಿಲ್ಲ ಅಂತ ಹೇಳಿದರೆ, ಅದರಲ್ಲಿ ಏನಾದರೂ ಅರ್ಥ ಇದೆಯೆ? ಆದ್ದರಿಂದ ಅದರ ಬಗ್ಗೆ ಮಾತನಾಡುವುದು ಬೇಡ. ಇಲ್ಲಿ ನಮ್ಮ ಲ್ಯಾಪಸಸ್ ಏನು ಇವೆ ಹೇಳಿ ಅದನ್ನು ನಾವು ಸರಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಅರಗಂ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾವು ಕೊಟ್ಟಿದ್ದಕೋಸ್ಕರ ಅಥವಾ ನೀವು ಕೊಟ್ಟಿದ್ದಕ್ಕೋಸ್ಕರ ಅಂತ ಅಲ್ಲ. ನಾವು ಕೂಡ ಭಾರತದ ಒಂದು ಅವಿಭಾಜ್ಯ ಅಂಗ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಭಾರತದಲ್ಲಿ ಒಂದು ಅವಿಭಾಜ್ಯ ಅಂಗ ಅಲ್ಲ ಅಂತ ಯೋಚನೆ ಮಾಡುತ್ತಿದ್ದೀರಿ; ಆ ವಿಷಯ ಬೇರೆ. ಆದರೆ ನಾವು ನೀವು ಭಾರತದಲ್ಲಿ ಅವಿಭಾಜ್ಯ ಅಂಗ ಅಂತ ತಿಳಿದುಕೊಂಡಿರುವುದು. ನಾವು ಮನವಿ ಕೊಟ್ಟಿದ್ದೇವೆ ನೀವು ಮನವಿ ಕೊಟ್ಟಿದ್ದೀರಿ ಇಬ್ಬರ ಮನವಿಯೂ ಒಂದೇ ಸ್ವಾಮಿ, ಅವರು ಹೇಳಿದ್ದಾರೆ ಬೇರೆ ಹಣ ಈ ತರಹ ಒದಗಿಸುವುದಕ್ಕೆ ಆಗುವುದಿಲ್ಲ, ಪ್ರಾವಿಜನ್ಸ ಇಲ್ಲ. ನಾನು ಕ್ಲಾರಿಫೈ ಮಾಡಿದ್ದೇನೆ ಮೊಯ್ಲಿಯವರು ಕ್ಲಾರಿಫೈ ಮಾಡಿದ್ದಾರೆ. ಅವರು ಒಪ್ಪಿಕೊಂಡಿದ್ದಾರೆ ನೀವು ಎಷ್ಟೇ ಹಣವನ್ನು ಖರ್ಚು ಮಾಡಿ ಎಂಪ್ಲಾಯಮೆಂಟ್ ಅಪರಮೇಶನ್ ಸ್ಕೀಮನಲ್ಲಿ ನಾವು ರೀ ಇಂಬರ್ಸಮೆಂಟ್ ಮಾಡುತ್ತೇವೆಂದು ಹೇಳಿದ ಮೇಲೆ ಕೇಂದ್ರ ಸರ್ಕಾರದ ಸುದ್ದಿ ಎಲ್ಲಿ ಬರುತ್ತದೆ ಇಲ್ಲಿ.

ಶ್ರೀ ಅರಗಂ ಜ್ಞಾನೇಂದ್ರ : ಕಳೆದಸಲ ನೆರೆ ಬಂದಿದೆ ಅತಿವೃಷ್ಟಿ ಆಗಿದೆ ಎಂದು ನಮ್ಮ ರಾಜ್ಯ ಸರ್ಕಾರ ಮನವಿ ಕೊಟ್ಟಿತ್ತು. ಕೇಂದ್ರ ಸರ್ಕಾರದವರು ಬಂದು ವೀಕ್ಷಣೆ ಮಾಡಿ ಹೋದರು. ನನಗೆ ಗೊತ್ತಿರುವ ಹಾಗೆ ಫ್ಲಡ್ ರಿಲೀಫ್ ಫಂಡ್ ಕೂಡ ಕೇಂದ್ರದಿಂದ ಏನೂ ಬಿಡುಗಡೆ ಆದಂತೆ ಕಾಣಲಿಲ್ಲ.

ಏಕೆ ಹೇಳುತ್ತಿದ್ದೇನೆ ಅಂದರೆ, ಈ ರೀತಿ ಆದಂತಹ ಒಂದು ವಿಶೇಷ ಸಂದರ್ಭದಲ್ಲಿ ಒಂದಿಷ್ಟು ಹಣವನ್ನು ಕೊಟ್ಟು, ಜನರಿಗೆ ಭರವಸೆಯನ್ನು ಕೊಡುವಂತಹ ಕೆಲಸವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಬೇಕಾಗುತ್ತದೆ. ಇಲ್ಲಿ ಯಾವಾಗ ಹಣ ಬಿಡುಗಡೆ ಆಗಬೇಕೋ ಆಗ ಹಣ ಬಿಡುಗಡೆ ಆಗದೇ ಹೋದರೆ, ಪ್ರಯೋಜನ ಎನು ಆಗುತ್ತದೆ ಹೇಳಿ. ಮೊನ್ನೆ ನೀವೇ ಕೊಟ್ಟಂತಹ ಹೇಳಿಕೆ ಪ್ರಕಾರ ೧.೪.೯೫ರಿಂದ ೩೦.೬.೯೫ರವರೆಗೂ ರಿಲೀಜ್ ಆಗಿರತಕ್ಕಂಥ ಪ್ಲಡ್ ರಿಲೀಫ್ ಫಂಡ್ ಮಾರ್ಚಿ ತಿಂಗಳಲ್ಲಿ. ಕಳೆದ ವರ್ಷ ಬಂದಿರತಕ್ಕಂಥ ಅತಿವೃಷ್ಟಿಗೆ ಹಣ ಬಿಡುಗಡೆ ಆಗುತ್ತಿರುವುದು ಮಾರ್ಚಿ ತಿಂಗಳ ನಂತರ. ಇದರ ಅರ್ಥ ಏನು? ಯಾವಾಗ ಕೆಲಸಗಳನ್ನು ಮಾಡಬೇಕು ಯಾವಾಗ ಕಾಮಗಾರಿಗಳನ್ನು ಮಾಡಬೇಕು. ಯಾವಾಗ ಜನರಿಗೆ ರಕ್ಷಣೆ ಕೊಡಬೇಕು ಅದನ್ನು ಮಾಡದೇ ಹೋದರೆ ಈ ಕೆಲಸಕ್ಕೆ ಅರ್ಥ ಉಳಿಯುವುದಿಲ್ಲ. ನಾವು ಹಣವನ್ನು ಕ್ರೋಢೀಕರಣ ಮಾಡಿ ಯಾವ ಹಣವನ್ನು ಯಾವಾಗ ಉಪಯೋಗಿಸಿಕೊಳ್ಳಬೇಕು ಎಂದು ಹೇಳಿ.

ಶ್ರೀ ಆರ್.ಎಲ್. ಜಾಲುಪ್ಪ : ನಾವು ಕಳೆದ ವರ್ಷ ಕೆಲಸ ಮಾಡಿದ್ದಕ್ಕೆ ಈ ವರ್ಷ ಬಿಲ್ ಪೇಮೆಂಟ್ ಮಾಡಿದ್ದೇವೆ. ಕೆಲಸ ಆಗಿದೆ ಲೇಬರ್ಸ್‌ಗೆ ದುಡ್ಡು ಸಿಕ್ಕಿದೆ. ಅದನ್ನು ಬೇರೆ ಬೇರೆ ಫಂಡ್ಸ್‌ನಿಂದ ಪ್ರವೈಡ್ ಮಾಡಿದ್ದೆವು. ಉದಾಹರಣೆಗೆ ಮಾರ್ಕೆಟಿಂಗ್ ಫೆಡರೇಷನನಿಂದ ಸುಮಾರು ೨೦ಲಕ್ಷ ರೂಪಾಯಿಗಳ ಕಿಟ್ಸನ್ನು ತೆಗೆದುಕೊಂಡು ಹಿಂದಿನ ಸರ್ಕಾರದವರು ಡಿಸ್ಟ್ರಿಬ್ಯೂಟ್ ಮಾಡಿದ್ದರು. ಅದರ ಹಣ ಕೊಟ್ಟಿರಲಿಲ್ಲ. ಆ ಹಣವನ್ನು ನಾವು ಕೊಟ್ಟಿದ್ದೇವೆ. ಆಗ್ರಿಕಲ್ಚರ್ ಕಿಟ್ಸ ಮಿನಿ ಕಿಟ್ಸ, ಫರ್ಟಿಲೈಜರ್ಸ ಕಿಟ್ಸ ಅವೆಲ್ಲಾ ಫಾರ್ಮರ್ಸ್‌ಗೆ ಹಿಂದಿನ ಸರ್ಕಾರದವರು ಕೊಟ್ಟಿದ್ದರು.

ಶ್ರೀ ಅರಗಂ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈಗ ನಾನು ನನ್ನ ಕ್ಷೇತ್ರದ್ದು ಉದಾಹರಣೆಗೆ ಹೇಳುತ್ತೇನೆ. ಒಂದು ಸೇತುವೆ ಬ್ರೀಚ್ ಆಗಿ ಹೋಗಿತ್ತು. ಕಳೆದ ಜೂನನಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಈ ವಿಷಯಗಳನ್ನೆಲ್ಲಾ ತಾವು ಸಂಬಂಧಪಟ್ಟ ಬಜೆಟ್ ಮೇಲೆ ಮಾತನಾಡಬಹುದು. ಈಗ ಬರಗಾಲಕ್ಕೆ ಮಾತ್ರ ನಾವು ಸೀಮಿತವಾಗೋಣ. ಬರಪರಿಹಾರದ್ದು ಎಷ್ಟು ಕೆಲಸ ಆಗಿದೆ ಅಷ್ಟು ಮಾತ್ರ ಹೇಳಿ. ಉಳಿದಿದ್ದು ಬಜೆಟ್ ಬಂದಾಗ ಮಾತನಾಡಿ.

(ಶ್ರೀ ಜಿ.ಬಿ. ಶಿವಕುಮಾರ್ ಅವರು ಅಧ್ಯಕ್ಷ ಪೀಠಕ್ಕೆ ಬಂದರು.)

ಛೇರ್ಮನ್ : ಮಾನ್ಯ ಸದಸ್ಯರು ಸ್ವಲ್ಪ ಕೇಳಿ. ಮಾನ್ಯ ಸಚಿವರು ಹೇಳತಕ್ಕಂಥಾದ್ದರಲ್ಲಿ ಅರ್ಥ ಇದೆ, ಬರಗಾಲಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ತಾವು ಅವರ ಗಮನವನ್ನು ಸಾಕಷ್ಟು ಸೆಳೆದಿದ್ದೀರಿ. ತಮಗೆ ವಿವಿಧ ಇಲಾಖೆಗಳ ಬಜೆಟ್ ಮೇಲಿನ ಚರ್ಚೆ ಬಂದಾಗ, ಮಾತನಾಡುವುದಕ್ಕೆ ಅವಕಾಶ ಇರುವುದರಿಂದ ಬರಗಾಲಕ್ಕೆ ಸೀಮಿತವಾಗಿರತಕ್ಕಂಥ ವಿಚಾರದಲ್ಲಿ ತಾವು ಸರ್ಕಾರಕ್ಕೆ ಏನು ಸಲಹೆ ಕೊಡುತ್ತೀರಿ ಕೊಡಿ.

ಶ್ರೀ ಅರಗಂ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ವಿಷಯ ಬಿಟ್ಟು ಬೇರೆ ಕಡೆ ಹೋಗಲಿಲ್ಲ. ಅವರು ಕೊಟ್ಟಂತಹ ಪಟ್ಟಿಪ್ರಕಾರವೇ ಮಾತನಾಡುತ್ತಿದ್ದೇನೆ. ಅವರೇ ಕೊಟ್ಟಿರತಕ್ಕಂಥ ಅಂಕಿಅಂಶ

ಇದು. ಇಲ್ಲಿ ಸರ್ವೆ ಕಾರ್ಯ ತಾವು ಮಾಡಿದ್ದೀರಿ. ಯಾವ ರೀತಿಯಲ್ಲಿ ಸರ್ವೆ ಕಾರ್ಯ ಮಾಡಿದ್ದೀರಿ. ನೂರಾರು ತಾಲ್ಲೂಕಿನಲ್ಲಿ ಬರ ಇದೆ ಎಂದು ಹೇಳುತ್ತಿದ್ದೀರಿ. ಇತ್ತೀಚೆಗೆ ಕೆಲವು ತಾಲ್ಲೂಕುಗಳಲ್ಲಿ ಮಳೆ ಬಿದ್ದಿದೆ ಎಂದು ಹೇಳುತ್ತಿದ್ದೀರಿ. ಸರ್ವೆ ಕಾರ್ಯ ಯಾವ ರೀತಿ ಮಾಡಿದ್ದೀರಿ ಎನ್ನುವುದಕ್ಕೆ ಒಂದು ಚಿಕ್ಕ ಉದಾಹರಣೆ ಕೊಡುತ್ತೇನೆ. ನಾನು ಇಡೀ ಕರ್ನಾಟಕರಾಜ್ಯದ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಹತ್ತಿರವೇ ಅಂಕಿಅಂಶಗಳು ಇವೆ. ಲಿಂಗನಮಕ್ಕಿ ಜಲಾಶಯದಲ್ಲಿ ಎಷ್ಟು ನೀರು ಬಂದಿದೆ. ಮಾಣಿ ಡ್ಯಾಮನಲ್ಲಿ ಎಷ್ಟು ನೀರು ಬಂದಿದೆ. ಕ್ಯಾಚಮೆಂಟ್ ಏರಿಯಾ ಹೊಸನಗರ ತಾಲ್ಲೂಕು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನನ್ನ ಅನುಭವದಲ್ಲಿ ಕ್ರಾಪ್ಸಗೆ ಎಷ್ಟು ಮಳೆ ಬೇಕೋ ಅಷ್ಟೇ ಮಳೆ ಬಂದರೆ ಪ್ರಾಜೆಕ್ಟಗಳು ಏನೂ ತುಂಬುವುದಿಲ್ಲ. ಪ್ರಾಜೆಕ್ಟಗಳು ತುಂಬಲಿಲ್ಲ ಅಂತ ಮಳೆಯೇ ಬಂದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಒಂದು ಕೆರೆಯಲ್ಲಿಯಾ ಹಕ್ಕಿ ಕುಡಿಯುವುದಕ್ಕೆ ನೀರು ಇಲ್ಲ. ಆದರೆ ಕ್ರಾಪ್ಸ ಮಾತ್ರ ಬಹಳ ಚೆನ್ನಾಗಿದ. ಅಲ್ಲಿ ಲಿಂಗನಮಕ್ಕಿ ತುಂಬಲಿಲ್ಲ, ಅಲ್ಲಿ ಬೆಳೆಯೇ ಬರುವುದಿಲ್ಲ ಎಂದು ತಾವು ನಮಗೆ ಸಲಹೆ ಮಾಡುತ್ತಿದ್ದೀರಿ. ಏಕೆಂದರೆ ತಾವು ಸರಿಯಾಗಿ ಸರ್ವೆ ಮಾಡಿಲ್ಲ ಎಂದು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ. ಕಳೆದ ವರ್ಷ ಕೂಡ ಬಹಳಷ್ಟು ಕಡೆ ಕೆರೆಗಳು ತುಂಬಲಿಲ್ಲ. ಸಣ್ಣ ಸಣ್ಣ ಕೆರೆಗಳಿಗೂ ನೀರು ಬರಲಿಲ್ಲ. ಆದರೆ ಖುಷ್ಕಿ ಬೆಳೆ ಚೆನ್ನಾಗಿ ಆಯಿತು ಕಳೆದ ವರ್ಷ. ಇವತ್ತು ಸ್ಟ್ಯಾಂಡಿಗ್ ಕ್ರಾಪ್ಸ ಕೆಲವು ಜಿಲ್ಲೆಗಳಲ್ಲಿ ಬಹಳ ಚೆನ್ನಾಗಿದೆ. ಯಾವುದೇ ಪ್ರಾಜೆಕ್ಟಗಳಲ್ಲಿ ಆಗಲಿ ಕೆರೆಗಳಲ್ಲಿ ಆಗಲಿ ನೀರು ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಹೇಳುತ್ತಿರುವ ಪಾಯಿಂಟ್ ಬೇರೆ ತಾವು ಹೇಳುತ್ತಿರುವ ಪಾಯಿಂಟೇ ಬೇರೆ. ಅವರು ಏನು ಹೇಳುತ್ತಾರೋ ಅದಕ್ಕೆ ಅವಕಾಶ ಕೊಡಿ. ಅವರು ಏನೇ ಹೇಳಿದರೂ ತಾವು ಮಧ್ಯ ಮಧ್ಯೆ ಬಾಯಿ ಹಾಕಿದರೆ ಹೇಗೆ?

೨.೦೦ ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಳೆ ಬರಲಿಲ್ಲವೆಂದರೆ ಅನೇಕ ಇಲಾಖೆಗಳ ಮೇಲೆ ಅದರ ಪರಿಣಾಮವಾಗುತ್ತದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಲಿಂಗನಮಕ್ಕಿ ತುಂಬುವಷ್ಟು ಬಂದಿಲ್ಲ, ತುಂಗಭದ್ರ ತುಂಬುವಷ್ಟು ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಹಳ ಮೆಂಬರ್ಸ ಕಡಿಮೆ ಇದ್ದಾರೆ. ಏನಾದರೂ ಆಂಧ್ರದಂತೆ ಇಲ್ಲೂ ಪರಿಣಾಮವಾಗುತ್ತದೇನು? ನೋಡಿ ನೀವೇ ನೋಡಿ.

ಚೇರ್ಮನ್ : ವಿಷಯಾಂತರವಾಗುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಕಂದಾಯ ಸಚಿವರು ಒಂದು ಹೇಳಿಕೆ ಕೊಟ್ಟರು, ಆದೇ ರೀತಿ

ಗ್ರಾಮೀಣಾಭಿವೃದ್ಧಿ ಸಚಿವರೂ ಒಂದು ಹೇಳಿಕೆ ಕೊಟ್ಟು ಯಾವ್ಯಾವ ಯೋಜನೆಯಲ್ಲಿ ಎಷ್ಟೆಷ್ಟು ಹಣ ಖರ್ಚುಮಾಡಿದ್ದೇವೆಂದು ಅಂಕಿ ಅಂಶಗಳನ್ನು ಸಭೆಗೆ ಒದಗಿಸಿದ್ದಾರೆ. ಇದರ ಜೊತೆಗೆ ಮಳೆ ಎಷ್ಟು ಬಂದಿದೆ, ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟಾಗಿದೆ ಎನ್ನುವ ಅಂಶವನ್ನೂ ಒದಗಿಸಿದ್ದರೆ ಬಹುಶಃ ಇಷ್ಟೊಂದು ಇಂಟರಫಿಯರ್ ಮಾಡುವ ವಿಷಯ ಇರಲಿಲ್ಲ. ಅದಕ್ಕೋಸ್ಕರ್, ಚರ್ಚೆಯೇನು ಇವತ್ತೇ ಪೂರ್ಣವಾಗುತ್ತದೆಂದು ನನಗೆ ನಂಬಿಕೆ ಇಲ್ಲ. ಆದ್ದರಿಂದ ಇವತ್ತಾದರೂ ಅಂಕಿ ಅಂಶ ಒದಗಿಸಿದರೆ ಚರ್ಚೆಗೆ ಸುಲಭಾವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಈಗಾಗಲೇ ಎರಡು ಗಂಟೆಯಾಯಿತು, ನಮಗಂತೂ ಹಸಿವಾಗುತ್ತಿದೆ ಜಾಲಪ್ಪನವರಿಗೆ ಹಸಿವಾದ ಹಾಗೆ ಕಾಣಲಿಲ್ಲ.

ಚೇರ್ಮನ್ : ನಿಮ್ಮ ಸ್ಥಿತಿಯಲ್ಲೇ ನಾನೂ ಇದ್ದೇನೆ. ಈಗ ಜಯಚಂದ್ರರು ಕೇಳಿದ ಪ್ರಶ್ನೆಗೆ ನಮಗೆ ಸೂಚನೆ ಬಂದಿದೆ. ಇಲ್ಲಿ ಲಂಚ್ ವಿರಾಮ ಇಲ್ಲ. ಸದಸ್ಯರುಗಳಿಗೆ ತಡೆಯಲಾರದ ಪರಿಸ್ಥಿತಿ ಬಂದಾಗ ಹೋಗಿಬರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಸಿ.ವಿ. ರಾಮನ್ ರಸ್ತೆಗೆ ಯಾರ್‍ಯಾರು ಹೋಗಿದ್ದಾರೆ ಎಲ್ಲರನ್ನೂ ಕರೆಸಿರಿ. ಸ್ಟ್ರೆಂಗ್ತ ಸಿಗುತ್ತದೆ. ಅಲ್ಲಿ ಹರೇ ಕೃಷ್ಣ ಇಲ್ಲಿ ರಾಮಕೃಷ್ಣ.

ಶ್ರೀ ಕೆ.ಎಸ್. ಈಶ್ವರಪ್ಪ : ಬರದ ಬಗ್ಗೆ ಚರ್ಚೆ ನಡೆದಿರುವಾಗ ಒಳ್ಳೆಯ ಆಡಳಿತ ಕೊಡುತ್ತೇವೆನ್ನುವ ಸರ್ಕಾರದ ಆಡಳಿತಕ್ಕೆ ಬರ ಬಂದಿದೆಯೇ?

ಚೇರ್ಮನ್ : ಅಂಥ ಪರಿಸ್ಥಿತಿ ನಿರೀಕ್ಷೆ ಮಾಡಬೇಡಿ. ಕೃಷ್ಣಮೂರ್ತಿಯವರೇ ನಿಮಗೂ ಅವಕಾಶ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಇಡೀ ಬಿಜಾಪುರ ಜಿಲ್ಲೆಯೇ ಸಂಪೂರ್ಣವಾಗಿ ಬರದಿಂದ ನರಳುತ್ತಿರುವಾಗ ಕೇವಲ ೪ ಜಿಲ್ಲೆಯಲ್ಲಿ ಮಳೆಯಾಗಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ. ವಿಶೇಷವಾಗಿ ಬಿಜಾಪುರ ಮುದ್ದೇಬಿಹಾಳ ಬಸವನಬಾಗೇವಾಡಿ ಇಲ್ಲಿ ಸಂಪೂರ್ಣ ಬರ ಬಂದಿದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ : ಅವರು ಬಿಜಾಪುರ ಜಿಲ್ಲೆಯಲ್ಲಿ ೪ ತಾಲ್ಲೂಕುಗಳು ಮಾತ್ರ ಬರಗಾಲಕ್ಕೆ ಒಳಗಾಗಿದೆ ಎಂದು ಹೇಳಿದ್ದಾರೆ, ಇಡೀ ಜಿಲ್ಲೆಯೇ ತುತ್ತಾಗಿದೆ. ಅತಿ ಬರಗಾಲಕ್ಕೆ ತುತ್ತಾಗಿರುವ ಅನೇಕ ತಾಲ್ಲೂಕುಗಳಿವೆ.

ಚೇರ್ಮನ್ : ಸದಸ್ಯರು ಈಗಾಗಲೇ ಸಲಹೆ ಮಾಡಿದ್ದೀರಿ, ಸಂಪೂರ್ಣವಾಗಿ ಸಮೀಕ್ಷೆ ಮಾಡಿ ಸೇರಿಸಬೇಕಾಗಿರುವ ಪ್ರದೇಶಗಳು ಇನ್ನು ಹಲವಾರಿವೆ ಎಂದು ನಾನು ಒತ್ತಿಹೇಳಿದ್ದೇನೆ.

ಶ್ರೀ ಅಯನೂರು ಮಂಜುನಾಥ್ : ಸ್ವಾಮಿ, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕನಲ್ಲಿ, ಕಳೆದ ಬಾರಿ ಶೇಕಡ ೧೯೬ ಪರ್ಸೆಂಟ್ ಮಳೆಯಾಗಿದ್ದರೆ, ಈ ಸಾರಿ ೨೭ ಪರ್ಸೆಂಟ್ ಮಳೆಯಾಗಿದೆ, ಅಜಗಜಾಂತರ. ಸಾಗರ ತೀರ್ಥಹಳ್ಳಿ ಶಿವಮೊಗ್ಗ ತಾಲ್ಲೂಕುಗಳಲ್ಲಿ ಕಳೆದ ಬಾರಿ ಬಿದ್ದಂತ ಮಳೆ ಇಲ್ಲ.

ಹೊಸನಗರ ಕ್ಷೇತ್ರ ನನ್ನದು. ಆ ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಮಳೆಯಾಗಿದೆ. ಆದರೂ ಅದು ಬರಗಾಲ ಪ್ರದೇಶವಲ್ಲವೆಂದು ಘೋಷಣೆ ಮಾಡಿದ್ದಾರೆ. ಇಡೀ ಜಿಲ್ಲೆಯ ೬ ತಾಲ್ಲೂಕುಗಳಲ್ಲಿ ಬರಗಾಲ. ಹೊಸನಗರ ತಾಲ್ಲೂಕೊಂದರಲ್ಲೇ ಬರಗಾಲವಿಲ್ಲವೆಂದು ಏಕೆ ಘೋಷಣೆ ಮಾಡುತ್ತಾರೆ? ದಯಮಾಡಿ, ಅವರು ಅದನ್ನು ಪುನರವಿಮರ್ಶೆ ಮಾಡಬೇಕು. ಎರಡನೆಯ ಪ್ರಶ್ನೆ. ಈ ಬರಗಾಲ ಏನಾದರೂ ವಿರೋಧಪಕ್ಷದವರಿಗೆ ಮಾತ್ರ ಸಂಬಂಧಪಟ್ಟಿದೆಯೋ ಆಡಳಿತ ಪಕ್ಷದವರಿಗೂ ಸಂಬಂಧಿಸಿದೆಯೋ? ಹಾಗಿದ್ದರೆ ಉಳಿದ ಮಂತ್ರಿಗಳೆಲ್ಲಿ? ಸದಸ್ಯರೆಲ್ಲಿ? ನಾವೇನಾದರೂ ಈಗ ಊಟಕ್ಕೆದ್ದರೆ ಕೋರಂ ಇಲ್ಲಿ ಉಳಿಯುತ್ತದೆಯೇ? ಬರಗಾಲದ ಬಗ್ಗೆ ಆಡಳಿತ ಪಕ್ಷದವರಿಗೇನೂ ಕಾಳಜಿ ಇಲ್ಲ. ಮಂತ್ರಿಗಳು ಕಾಟಾಚಾರದ ಉತ್ತರ ಕೊಡುತ್ತಿದ್ದಾರೆ. ವಿರೋಧಪಕ್ಷದವರಿಗೆ ಮಾತ್ರ ಬರಗಾಲ ಬಂದಿರುವುದು. ಆದರೆ ವಿರೋಧಪಕ್ಷದ ಸದಸ್ಯರ ಕ್ಷೇತ್ರ ಬರಗಾಲಪೀಡಿತವಲ್ಲವೆಂದು ಘೋಷಣೆ ಮಾಡುತ್ತೀರಿ? ವಿರೋಧಪಕ್ಷದವರು ಎದ್ದು ಹೊರಟರೆ ಈ ಸಭೆ ನಡೆಯುತ್ತದೆಯೇ? ಕೋರಂ ಎಷ್ಟಿದೆ ಅವರದು? ನಾವ್ಯಾರಾದರೂ ವಿಚಾರ ಮಂಡನೆ ಮಾಡಿದರೆ, ನಮ್ಮನ್ನು ಕೆಡುವುದಕ್ಕೋಸ್ಕರ....

ಚೇರ್ಮನ್ : ನೀವು ಕುಳಿತುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ನಾವಿರುತ್ತೀವೋ ಇಲ್ಲವೋ ಆ ವಿಷಯ ಬೇರೆ. ಉತ್ತರ ಕೊಡಲು ನಾವಿಲ್ಲಿದ್ದೇವೆ, ಕೋರಂ ಇದೆ ಹೌಸನಲ್ಲಿ, ಅಧ್ಯಕ್ಷರಿದ್ದಾರೆ ಹೇಳಿ ಸ್ವಾಮಿ ನೀವು ಏನು ಹೇಳುತ್ತೀರೋ?

ಚೇರ್ಮನ್ : ಮಂಜುನಾಥ್ ರವರೇ ನೀವು ಕುಳಿತುಕೊಳ್ಳಿ, ನಿಮ್ಮ ಅವಕಾಶ ಬಂದಾಗ ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೇ, ನನಗೆ ಇನ್ನೂ ಸ್ವಲ್ಪ ಸಮಯ ಕೊಟ್ಟರೆ, ಈ ಸದನದಲ್ಲಿ ಎಲ್ಲಾ ಸದಸ್ಯರು ಇದ್ದರೆ, ಈ ಪರಿಹಾರಕಾರ್ಯ ಹೇಗೆ ನಡೆದಿದೆ ಎಂದು ನಾನೂ ಹೇಳುತ್ತೇನೆ, ಪಕ್ಷದ, ಆಡಳಿತ ಪಕ್ಷದ ಸದಸ್ಯರೂ ಹೇಳುತ್ತಾರೆ. ಏಕೆ ಹೇಳುತ್ತಿದ್ದೇನೆಂದರೆ ನಿಮ್ಮ ಸರ್ವೆ ಕಾರ್ಯಪ್ರಾಮಾಣಿಕವಾಗಿ, ಸರಿಯಾದ ರೀತಿಯಲ್ಲಿ ಜವಾಬ್ದಾರಿಯುತವಾಗಿ ನಡೆದಿಲ್ಲ. ಶರಾವತಿಯಲ್ಲಿ ನೀರು ತುಂಬಿದ ಕಲಾದಲೇ ಹೊಸ ನಗರದಲ್ಲಿಬೆಳೆ ಆಗುವುದಿಲ್ಲವೇ? ತಾವು ಈ ಬಯಲುಪ್ರದೇಶದ ರೈತರು. ನಮ್ಮ ಕಡೆ ನೀವು ಪ್ರವಾಸ ಮಾಡಿದ್ದೀರಿ, ಆ ಭಾಗದಲ್ಲಿ ನಿಮಗೆ ಬಂಧುಗಳೂ ಇದ್ದಾರೆ. ಅಲ್ಲಿನ ಮಣ್ಣಿನ ಗುಣ ನೀವು ಅರ್ಥಮಾಡಿಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ಒಂದು ಮಳೆ ಹೊಡೆದರೆ ಒಂದು ತಿಂಗಳು ತಡೆದುಕೊಳ್ಳುತ್ತದೆ ನಿಮ್ಮ ಸಾಯಿಲ್. ನಿಮ್ಮ ಮಣ್ಣಿನ ಗುಣ ಆ ರೀತಿ ಇದೆ, ಬಿಟ್ಟುಕೊಡುವುದಿಲ್ಲ. ಮಲೆನಾಡಿನಲ್ಲಿ ಸಾರೋಧ್ಧಾರ ವಾಗಿ ಒಂದು ತಿಂಗಳು ಮಳೆಯಾಗಿ ೮ ದಿನ ಬಿಸಿಲು ಬಂದರೆ ನೆಲ ಒಣಗಿ ಪದೆ ಬೀಳುತ್ತದೆ. ಪರಿಸ್ಥಿತಿ ಇದು? ಈ ಸಂದರ್ಭದಲ್ಲಿ ಲಿಂಗನಮಕ್ಕಿಯಲ್ಲಿ ಕಳೆದ ವರ್ಷ ಗೇಟನ್ನು ಖುಲ್ಲಾ ಮಾಡಿ ಬಿಟ್ಟಿದ್ದರು ಅಧ್ಯಕ್ಷರೇ ಈ ಸಲ ತುಂಬುವ ಪರಿಸ್ಥಿತಿಯಲ್ಲಿ. ಮಾನೆ ಡ್ಯಾಂ ಕೂಡ ಅಷ್ಟೆ. ಅಂದರೆ ಕ್ಯಾಚ್ಮೆಂಟ್ ಏರಿಯಾದಲ್ಲಿ ಮಳೆಯಾಗಿಲ್ಲ, ಅಲ್ಲಿನ ರೈತರೂ ಕೂಡ ಯಾವ ಸ್ಥಿತಿಯಲ್ಲಿದ್ದಾರೆಂದು ನೀವು ನೋಡಬಹುದು. ನಿಮ್ಮಲ್ಲಿ ಕೆರೆ ತುಂಬದಿದ್ದರೂ ಫಸಲು ಹಸಿರಾಗಿದೆ

ಎಂದು ಹೇಳಲು ಕಾರಣ ಇದೇನೆ. ನಿಮ್ಮ ಮಣ್ಣಿನ ಗುಣ, ನಿಮ್ಮ ಫಸಲು ನೀವು ಜೋಳ ಬೆಳೆಯುತ್ತೀರಿ, ನಮ್ಮ ಬತ್ತಕ್ಕೆ ಖಾಯಂ ಆಗಿ ಒಂದಿಂಚು ನೀರು ನಿಲ್ಲದೇಹೋದರೆ ಬತ್ತ ಬೆಳೆಯುವುದು ಹೇಗೆ? ನೀವು ಒಬ್ಬ ರೈತರ ಮಗ ತಾನೇ? ಅದನ್ನು ಡ್ರೈ ಮಾಡಿದರೆ ಬತ್ತ ಬೆಳೆಯುತ್ತದೇನು? ಅಲ್ಲಿ ನೀರು ನಿಂತಿರಬೇಕಾಗತ್ತದೆ, ಇಂತಹ ಸಂದರ್ಭದಲ್ಲಿ ಹೊಸನಗರದ ಮಲೆನಾಡಿನ ಭಾಗ ಏನಿದೆ ಬೇರೆ ಯಾವುದೇ ಬೆಳೆ ಬೆಳೆಯುವಂತಹ ಹ್ಯಾಬಿಟಿಲ್ಲ ಹವಾಗುಣಕ್ಕೆ ಬೇರೆ ಬೆಳೆ ಬರುವುದಿಲ್ಲ. ಹಾಗಾಗಿ ಕೆಲವು ತಗ್ಗುಪ್ರದೇಶಗಳನ್ನು ಬಿಟ್ಟರೆ ಅಲ್ಲಿ ಬೆಳೆ ಸಂಪೂರ್ಣವಾಗಿ ಹೋಗಿದೆ. ಮುಂಗಾರು ನೋಡಿ ಕೆಲವರು ಬಿತ್ತನೆ ಮಾಡಿದರು. ನಾವು ಮಳೆಯನ್ನೇ ಅವಲಂಬಿಸಿ ಕೊಂಡಿದ್ದೆವು, ತಾವು ಪಟ್ಟಿ ಕೊಟ್ಟಿದ್ದೀರಿ. ಬಿತ್ತನೆ ಮಾಡಿದ ಮೇಲೆ ಪರಿಸ್ಥಿತಿ ಏನಾಯಿತು? ಮಧ್ಯದಲ್ಲಿ ನಿಂತು ಹೋಯಿತು, ನಿಮ್ಮ ಘಗರನಲ್ಲಿ ಹದಮಳೆಯಾಗಿ ಬೀಜ ಬಿತ್ತನೆ ಮಾಡಿ, ಆಮೇಲೆ ಉಳಿದಿರುವ ಪ್ರದೇಶವೆಷ್ಟು? ನೀವು ಅಲ್ಲಿ ಇಲ್ಲಿ ಕೆಲವು ತಾಲ್ಲೂಕುಗಳನ್ನು ಕೊಟ್ಟರೆ ಇದು ಸರಿಯಾಗುವುದಿಲ್ಲ. ವಿದ್ಯುತ್ ಬಗ್ಗೆ ಮೊನ್ನೆ ಅನೇಕ ಹಿರಿಯ ಸದಸ್ಯರು ಹೇಳಿದರು. ಸದಸ್ಯರೊಳಗೆ ನಿನ್ನೆ ಸಾಕಷ್ಟು ವಿಚಾರವೂ ಆಯಿತು. ೫೦ ಪರ್ಸೆಂಟ್ ಕಡಿತ ಮಾಡುತ್ತೇನೆ, ಪಂಪಸೆಟಗಳಿಗೆ ವಿದ್ಯುತ್ ಕೊಡುವುದಿಲ್ಲ, ಪಂಪಸಟ್ಟನ್ನು ನಂಬಿ ಬೆಳೆ ಇಟ್ಟಂತಹ ರೈತರ ಪರಿಸ್ಥಿತಿ ಏನು ಮಾಡಿದಿರಿ ? ಇದು ನಾನು ಏಕೆ ಹೇಳುತ್ತಿದ್ದೇನೆಂದರೆ ಯಾವುದೇ ಸರ್ಕಾರ ಇರಬಹುದು.

ಶ್ರೀ ಆರ್.ಎಲ್. ಜಾಲಪ್ಪ : ನಾವು ಇನ್ನೂ ಆಸೆ ಇಟ್ಟುಕೊಂಡಿದ್ದೇವೆ, ದೈವೇಚ್ಛೆ ನೋಡೋಣ. ಈಗ ಪವರ್ ಇಲ್ಲ, ನಾವು ಯಾವರೀತಿ ಪವರ್ ಒದಗಿಸಬಹುದು ಅಂತ ತಾವು ದಯವಿಟ್ಟು ಹೇಳಿ.

ಶ್ರೀ ಅರಗದ ಜ್ಞಾನೇಂದ್ರ : ಸ್ವಾಮಿ, ಬರ ಎಂಬುದು ಇದೊಂದೇ ವರ್ಷ ಬಂದಿಲ್ಲ. ೮೫ರಲ್ಲಿ ಬಂದಿತ್ತು, ನಮ್ಮ ಉತ್ತರಕರ್ನಾಟಕ ಪ್ರದೇಶದಲ್ಲಿ ಪದೇ ಪದೇ ನಮ್ಮನ್ನು ಬಾಧಿಸುತ್ತಿದೆ. ಸರ್ಕಾರ ದೂರಾಲೋಚನೆ ಇಟ್ಟುಕೊಂಡು ಯೋಜನೆಗಳನ್ನು ಹಾಕಿಕೊಳ್ಳಬೇಕು. ಒರಿಸ್ಸಾದಲ್ಲಿ ೩೦೦ ಮೆಗಾವಾಟ್ ಪವರ್ ಎಕ್ಸಸ್ ಇದೆ, ನಾನು ಮೊನ್ನೆ ಒಂದು ಕಡೆ ಓದುತ್ತಿದ್ದೆ, ಆದರೂ ಸಹ ೧೦ ಸಾವಿರ ಮೆಗಾವಾಟ್ ಮುಂದಿನ ವರ್ಷಗಳಲ್ಲಿ ಉತ್ಪಾದನೆ ಮಾಡಲು ಬೇಕಾದ ಯೋಜನೆಗಳನ್ನು ಅವರು ತಯಾರು ಮಾಡಿತ್ತಿದ್ದಾರೆ. ನಾವೆಷ್ಟು ಚರ್ಚೆ ಆಯಿತು, ೧೯೮೩ರಲ್ಲಿ ರಾಮಕೃಷ್ಣ ಹೆಗಡೆಯವರು ಇಂದಿರಾಗಾಂಧಿಯವರಿಗೆ ಲೆಟರ್ ಬರೆದಿದ್ದಾರೆ, ವಿದ್ಯುತ್ ಅಭಾವ ಇದೆ ನಮ್ಮ ರಾಜ್ಯದಲ್ಲಿ ದಯಮಾಡಿ ಸೆಂಟ್ರಲ್ ಗ್ರಿಡನಿಂದ ವಿದ್ಯುತ್ ಕೊಡಿ ಎಂದು.

ಶ್ರೀ ಆರ್.ಎಲ್. ಜಾಲಪ್ಪ : ವಿದ್ಯುತ್ ಡಿಮಾಂಡ್ ಬರುತ್ತದಲ್ಲ ಆಗ ಅಡ್ವೈಸ್ ಮಾಡಿಸ್ವಾಮಿ.

ಚೇರ್ಮನ್ : ಅವರು ಹೇಗೆ ಪರಿಹಾರ ಮಾಡಬೇಕು ಅಂದಿದ್ದಕ್ಕೆ ಜ್ಞಾನೇಂದ್ರ ಅವರೇ ನೀವು ಉದಾಹರಣೆ ಕೊಟ್ಟು ಹೇಳಿದಿರಿ. ನಾನೂ ವಿಷಯ ಸಮಿತಿಯಲ್ಲಿದ್ದು ನನಗೂ ಅದರ ಚಿತ್ರ ಅಷ್ಟೋ ಇಷ್ಟೋ ಗೊತ್ತಿದೆ. ಇದನ್ನು ಇಲಾಖಾ ದಿಮಾಂಡ್ ಬಂದಾಗ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಚಿವರು ಯಾವರೀತಿ ಪವರ್ ತರಬೇಕು ಎಂದು ಪ್ರಶ್ನೆ ಕೇಳಿದರು ಉತ್ತರ ಹೇಳಿದರೆ ಕೇಳುವುದಿಲ್ಲವಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಒರಿಸ್ಸಾದ ಉದಾಹರಣೆ ಹೇಳುತ್ತಿದ್ದಾರೆ, ಮಹಾರಾಷ್ಟ್ರ ಮತ್ತು ಕರ್ನಾಟಕದ ಹಿಂದಿನ ಸರ್ಕಾರಗಳು - ಅಲ್ಲಿ ಎನ್ರಾನ್ ಇಲ್ಲಿ ಕೊಜೆಂಟ್ರಿಕ್ಸ್, ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ, ತಾವೂ ಪ್ರಾಕ್ಟೀಸ್ ಮಾಡಿ ಅಂತ ಅವರಿಗೆ ಹೇಳಿ. ಮಹಾರಾಷ್ಟ್ರದಲ್ಲಿ ಮತ್ತು ಇಲ್ಲಿ ಅಡ್ಡಗಾಲು ಹಾಕುವುದನ್ನು ಬಿಟ್ಟರೆ.....

(ಗೊಂದಲ)

ಶ್ರೀ ಎ. ರಾಮದಾಸ್ : ಭಾರತೀಯ ಜನತಾ ಪಕ್ಷ ರಾಜ್ಯದ ಪ್ರಗತಿಗೆ ಯಾವುತ್ತೂ ಅಡ್ಡಗಾಲು ಹಾಕುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಹಾರಾಷ್ಟ್ರ ಸರ್ಕಾರ ನಾವೂ ಕಳ್ಳತನಕ್ಕೆ ಅವಕಾಶ ಕೊಡೋದಿಲ್ಲ ಎಂದು ಹೇಳಿ, ಕಳ್ಳತನ ನಿಲ್ಲಿಸಿದ್ದಾರೆ. ಆದರೆ ಇವರು ದಾರಿ ತಪ್ಪಿಸುತ್ತಿದ್ದಾರೆ.

ಶ್ರೀ ಚಂದ್ರಕಾಂತ ಬೆಲ್ಲದ : ರಾಜ್ಯದ ಹಿತದೃಷ್ಟಿಯಿಂದ ಬಿಜೆಪಿಯವರು ಸಹಾಯ ಮಾಡುತ್ತಿದ್ದೇವೆ. ಒಳ್ಳೆಯ ಯೋಜನೆಗಳನ್ನು ತೆಗೆದುಕೊಂಡು ಬರಲಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಹೇಳಿದ್ದುದು ಏಕೆಂದರೆ ಅಲ್ಲಿ ಒರಿಸ್ಸಾದಲ್ಲಿ ಅಡ್ವಾನ್ಸಾಗಿ ಮಾಡುತ್ತಿದ್ದಾರೆಂದು ಅವರು. ಇಲ್ಲಿ ಅಡ್ವಾನ್ಸಾಗಿ ಮಾಡುವುದಕ್ಕೆ ಬಂದರೆ ಇಲ್ಲಿ ರಿಕಾರ್ಡ ಆಗಿದೆಯಲ್ಲ.

ಚೇರ್ಮನ್ : ನೀವಿಬ್ಬರು ಹೇಳುವುದರಲ್ಲೂ ಅರ್ಥವಿಲ್ಲ. ಅದರರ್ಥವೇನೆಂದರೆ ೩೦೦ ಮೆಗಾವಾಟ್ ಎಕ್ಸಸ್ ಇದ್ದರೂ ದೂರದೃಷ್ಟಿ ಇಟ್ಟುಕೊಂಡು ಮಾಡುತ್ತಿದ್ದಾರೆ, ನಮ್ಮ ರಾಜ್ಯದಲ್ಲಿ ಆ ದೂರದೃಷ್ಟಿ ಇಟ್ಟುಕೊಂಡಿಲ್ಲವೆಂಬದು ಅರ್ಥಪೂರ್ಣವಾದ ಮಾತು. ಹಿಂದೆ ಯಾವುದೇ ಸರ್ಕಾರ ಇದ್ದರೂ ವಿದ್ಯುದುತ್ಪಾದನೆಗೆ ಬಂದಂತಹ ಹಲವಾರು ತೊಡರುಗಳನ್ನು ಮನಸಿನಲ್ಲಿಟ್ಟುಕೊಂಡು ಕಾರ್ಯವಿಳಂಬ ಮಾಡಿಕೊಂಡು ಬಂದಿದ್ದರಿಂದ ಈ ದುಸ್ಥಿತಿಗೆ ಬಂದಿದ್ದೇವೆ ಎಂದು ಅವರು ಹೇಳಿದರು. ದಯಮಾಡಿ ಇಲ್ಲಿಗೆ ವಿದ್ಯುತ್ ಬಗ್ಗೆ ಬಿಡಿ. ವಿದ್ಯುತ್ ಇಲಾಖೆ ಚರ್ಚೆ ಬಂದಾಗ ನಿಮಗೆ ನಾನೂ ಬೆಂಬಲ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಎಲ್ಲರಿಗೂ ಉಪದೇಶ ಮಾಡುತ್ತಿದ್ದಾರೆ....

(ಗೊಂದಲ)

ಶ್ರೀ ಅರಗಂ ಜ್ಞಾನೇಂದ್ರ : ಅಧ್ಯಕ್ಷರೇ, ವಿದ್ಯುತ್ತನ್ನು ನಂಬಿದ ಪಂಪಸೆಟ್ ಬಳಕೆದಾರರಿಗೆ ನೀವೇನು ಆಶ್ವಾಸನೆ ಕೊಡುವುದು? ನೀವು ಪಂಪಸೆಟ್ ಹಾಕಿ ಬೆಳೆ ಬೆಳೆದಿದ್ದೀರಿ, ಅದನ್ನು ರಕ್ಷಣೆ ಮಾಡಲಿಕ್ಕೆ ನಾವು ಸೆಂಟ್ರಲ್ ಗ್ರಿಡನಿಂದ ಇಷ್ಟು ತರುತ್ತೇವೆ, ಇಂತಹ ಒಂದು ಧೈರ್ಯವನ್ನು ರೆವಿನ್ಯೂ ಸಚಿವರಾದ ತಾವು ತಮ್ಮ ಹೇಳಿಕೆಯಲ್ಲಿ ನಮ್ಮ ರೈತರಿಗೆ ಕೊಡಬೇಕಾಗುತ್ತದೆ.

(ಗೊಂದಲ)

ಚೇರ್ಮನ್ : ರೆವಿನ್ಯೂ ಸಚಿವರು ವಿದ್ಯುತ್ ಬಗ್ಗೆ ನನ್ನನ್ನು ಭರವಸೆ ಕೇಳಿದರೆ, ನಾನು ಹೇಗೆ ಕೊಡಲಿ ತಟಾರನೆ ಅಂತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬರಗಾಲ ಪರಿಸ್ಥಿತಿಯ ಬಗ್ಗೆ ಹೇಳುವಾಗ, ಕಂದಾಯ ಮಂತ್ರಿಗಳು ಏನು ಇದ್ದಾರೆ ಅವರು ಎಲ್ಲಾ ಇಲಾಖೆಗೂ ಸಂಬಂಧಪಟ್ಟವರು. ಮಧ್ಯಮ ಮತ್ತು ದೊಡ್ಡ ನೀರಾವರಿ ಇಲಾಖೆ ಬಗ್ಗೆ ನಮ್ಮಲ್ಲಿ ಇಷ್ಟು ಹಣ ಇದೆ ಇಷ್ಟು ಖರ್ಚು ಮಾಡಿದ್ದೇವೆಂದು ಹೇಳಿದರು. ಅದನ್ನು ಏಕೆ ಕೊಟ್ಟರು. ಪಿಹೆಚ್ಇ ಇಲಾಖೆಯಿಂದ ಇಷ್ಟು ಬಾವಿಗಳನ್ನು ತೆರೆದಿದ್ದೆವೆ. ಇಷ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರು. ಎಲ್ಲಾ ಇಲಾಖೆಯನ್ನು ಕ್ರೋಢೀಕರಿಸಿ, ಇವರು ಲೀಡ್ ತೆಗೆದುಕೊಂಡು ಮಾಡಬೇಕಾದ ಪರಿಸ್ಥಿತಿ ಇಲ್ಲಿ ಬರುತ್ತದೆ. ಅನೇಕ ಸಲ ಕುಡಿಯುವ ನೀರಿಗೆ ಪಂಪಸೆಟಗೆ ವಿದ್ಯುತ್ ಕನೆಕ್ಷನ್ ಬೇಕು, ಆಗ ಸಭೆ ಕರೆದು ಎಕ್ಸಿಕ್ಯುಟಿವ್ ಇಂಜಿನಿಯರಿಗೆ ಎಲ್ಲೆಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು ಅದಕ್ಕೆ ಮೊದಲು ಆದ್ಯತೆ ಕೊಡಿ ಕರೆಂಟ್ ಸಪ್ಲೈ ಮಾಡಿ ಎಂದು ಹೇಳುತ್ತೀರಿ. ಅದೇ ರೀತಿ ಪಂಪಸೆಟಗೂ ಮಾಡಬೇಕಾಗುತ್ತದೆ. ಇದು ಎಲ್ಲಾ ಇಲಾಖೆಗೂ ಸಂಬಂಧಪಟ್ಟ ಬೇಡಿಕೆ. ಇದರಲ್ಲಿ ಹೆಲ್ತ್, ಎಲೆಕ್ಟ್ರಿಸಿಟಿ ಬರುತ್ತದೆ. ಬರಗಾಲದಲ್ಲಿ ಕನೆಕ್ಟೆಡ್ ಸಬ್ಜೆಕ್ಟ ಎಲ್ಲಾ ಮೆಮೊರ್‍ಯಾಂಡಮನಲ್ಲಿ ಏನೇನು ಇದೆ ಮಕ್ಕಳಿಗೆ ಪೌಷ್ಠಿಕ ಆಹಾರ, ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ಕೇಳಿದ್ದೇವೆ ಮೆಡಿಸನ್ ಬಗ್ಗೆ ಕೇಳಿದ್ದೀರಿ, ಫಾಡರ್ ಬಗ್ಗೆ ಕೇಳಿದ್ದೀರಿ. ಕುಡಿಯುವ ನೀರಿನ ಬಗ್ಗೆ ಇದೆಲ್ಲಾ ಇಲ್ಲಿ ಬರುತ್ತದೆ. ತಾಳ್ಮೆಯಿಂದ ಕೇಳಿ ನಂತರ ಏನು ಹೇಳಬೇಕೋ ಹೇಳಿ.

ಚೇರ್ಮನ್ : ಮಾನ್ಯ ಜ್ಞಾನೇಂದ್ರ ಅವರೇ ಇನ್ನೂ ಹಲವಾರು ಜನರು ಮಾತನಾಡುವವರಿದ್ದಾರೆ ಬೇಗನೆ ಮುಗಿಸಿ.

(ಗೊಂದಲ)

ಶ್ರೀ ಅರಗಂ ಜ್ಞಾನೇಂದ್ರ : ಕಡತ ತೆಗೆದು ನೋಡಿ ನಾನು ಎಷ್ಟು ಹೊತ್ತು ಮಾತನಾಡಿದ್ದೇನೆ ಎಂದು. ನನ್ನ ಸಮಯವನ್ನು ನನಗಿಂತ ಹೆಚ್ಚಿಗೆ ಮಂತ್ರಿಗಳೇ ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಪ್ರಕಾಶರವರೂ ಮಾತನಾಡಿದ್ದಾರೆ.

ಚೇರ್ಮನ್ : ನೀವು ಯೀಲ್ಡ್ ಆಗಬಾರದು. ಸಂಬಂಧಪಟ್ಟ ಉತ್ತರ ಕೊಟ್ಟಿದ್ದಾರೆ.

ಶ್ರೀ ಅರಗಂ ಜ್ಞಾನೇಂದ್ರ : ವಿದ್ಯುತ್ ಬಗ್ಗೆ ಸರಿಯಾದಂತಹ ಮಾಹಿತಿ ಇಲ್ಲ, ಇದನ್ನು ನಂಬಿ ಬೆಳೆ ಬೆಳೆಯುವಂತಹ ರೈತರಿಗೆ ಧೈರ್ಯ ಕೊಡುವ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಲಿಲ್ಲ. ರೈತರು ಇವರನ್ನು ನೆಚ್ಚಿಕೊಂಡು ಹೇಗೆ ಆ ಬೆಳೆಯನ್ನು ಬೆಳೆಯಬೇಕು. ಇವತ್ತು ಪರಿಸ್ಥಿತಿ ಏನು ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಅಂತಹ ಭಯಂಕರವಾದ ಸ್ಥಿತಿಯಲ್ಲಿ ರೈತರು ಇದ್ದಾರೆ. ಸರ್ವೆ ಕಾರ್ಯದ ಬಗ್ಗೆ ಹೇಳುವುದಾದರೆ ಸರ್ವೆ ಕಾರ್ಯ ಸಂಪೂರ್ಣವಾಗಿ ತಪ್ಪು ತಪ್ಪಾಗಿದೆ ಇದನ್ನು ಪುನರ್ ಪರಿಶೀಲನೆ ಮಾಡಿ ನಿಮ್ಮ ಅಧಿಕಾರಿಗಳನ್ನು ಗ್ರಾಮ ಸೇವಕರನ್ನು ಹಳ್ಳಿ ಹಳ್ಳಿಗೆ ಕಳುಹಿಸಿ ಆಣೆವಾರು ಲೆಕ್ಕ ಹಾಕಿ. ಇದು ರೈತರ, ಗ್ರಾಮೀಣ ಜನರ ಸಾವು ಬದುಕಿನ ಪ್ರಶ್ನೆ. ತಪ್ಪು ತಪ್ಪಾಗಿ ಮಾಹಿತಿ ಕೊಡುವುದು ಅದರಲ್ಲೂ ಸರಕಾರಕ್ಕೆ ಕೊಡತಕ್ಕಂತಹ ಮಾಹಿತಿ ಯೋಗ್ಯ ರೀತಿಯಿಂದ ಇರಬೇಕು. ಜನ ಇವರ ಮೇಲೆ ಅವಲಂಬಿಸಿಕೊಂಡಿದ್ದಾರೆ. ಇದನ್ನು ಅವಲಂಬಿಸಿಕೊಂಡು ಬೇರೆ ಬೇರೆ ಯೋಜನೆಗಳನ್ನು

ತಯಾರು ಮಾಡುತ್ತಾರೆ. ಒಂದು ಸುಸೂತ್ರವಾದ ಮಾಹಿತಿ ಕೊಡಬೇಕಾಗುತ್ತದೆ. ೯ನೇ ತಾರೀಖು ಇದಕ್ಕೆ ಬಿಡುಗಡೆ ಮಾಡಿರತಕ್ಕಂತಹ ಹಣದ ಬಗ್ಗೆ, ನೋ ಕಾನಫಿಡೆನ್ಸ ಮೋಷನಗೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ೩.೭೫ ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಇಲ್ಲಿ ರೆಕಾರ್ಡಾಗಿದೆ. ಆಗಸ್ಟ ೧೫ನೇ ತಾರೀಖು ಅಂದರೆ ಪತ್ರಿಕೆ ೧೪ರ ರಾತ್ರಿ ಪ್ರಿಂಟ್ ಆಗುತ್ತದೆ.

೧೪ರ ಬೆಳಿಗ್ಗೆ ಇಲ್ಲವೇ ೧೩ ರಂದು ಪತ್ರಿಕೆಗೆ ಮಾಹಿತಿ ಕೊಟ್ಟಿರಬಹುದು. ಪತ್ರಿಕೆಯಲ್ಲಿ ಬಂದದ್ದು ಮಾಹಿತಿಯಾಗುವುದಿಲ್ಲವೆಂದು ಒಂದು ಅಂಶ ಇದೆ. ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆ ಮೂಲಕ ಜಾಹಿರಾತನ್ನು ಎಲ್ಲಾ ಪತ್ರಿಕೆಗಳಿಗೆ ಕೊಟ್ಟಿದ್ದೀರಿ ಅದರಲ್ಲಿ ಬರ ಪರಿಹಾರ ಕಾಮಗಾರಿ ಬಗ್ಗೆ ನಿಮ್ಮ ಎಲ್ಲಾ ಸಾಧನೆಗಳ ಬಗ್ಗೆ ಹೇಳಿಕೊಂಡಿದ್ದೀರಿ. ನೂರಾರು ತಾಲ್ಲೂಕಿನಲ್ಲಿ ಬರ ಇದೆ. ೬೦ ರಿಂದ ೭೦ ರಷ್ಟು ಜಮೀನಿನಲ್ಲಿ ಕೃಷಿ ಕಾರ್ಯ ಇನ್ನೂ ಆರಂಭವಾಗಿಲ್ಲ. ಇದುವರೆಗೆ ಬರ ಪರಿಹಾರ ಕಾರ್ಯಕ್ರಮಗಳಿಗೆ ಸರಕಾರ ಇಲ್ಲಿಯವರೆಗೆ ಮಾಡಿರುವ ವೆಚ್ಚ ೪೪.೬೮ ಕೋಟಿ. ಇದು ಯಾವ ಸ್ಪೀಡಿನಲ್ಲಿ ಹೋಗುತ್ತಿದೆ, ಯಾವ ಮಾಹಿತಿ ನಂಬ ಬೇಕು ಗೊತ್ತಿಲ್ಲ. ೧೫ನೇ ತಾರೀಖು ೪೪.೮೬ ಕೋಟಿ ಖರ್ಚಾಗಿದ್ದದ್ದು ಎಂದು ಹೇಳಿದ್ದೀರಿ. ಇವತ್ತು ೨೦ ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೀರಿ. ರಾಜ್ಯದ ಜನ ಯಾವುದನ್ನು ನಂಬುವುದು. ಸರಕಾರ ಕೊಡತಕ್ಕಂತಹ ಉತ್ತರವನ್ನು ಜನರು ಹೇಗೆ ನಂಬುತ್ತಾರೆ ಯಾವುದು ಇದರಲ್ಲಿ ಸತ್ಯ. ಮಾನ್ಯ ಜಾಲಪ್ಪನವರು ಹಿರಿಯ ಮಂತ್ರಿಗಳು ಅವರಿಗೆ ನಾನು ಹೇಳುತ್ತೇನೆ. ಜ್ಞಾನೇಂದ್ರ ಅವರೇ ನೀವು ಇನ್ನೂ ಹೊಸಬರು ನಿಮಗೆ ರಾಜಕಾರಣ ಗೊತ್ತಿಲ್ಲ. ಸ್ವಾತಂತ್ರ್ಯ ದಿನಾಚರಣೆ ನಾಡಿನ ಹಬ್ಬ ಹಬ್ಬದ ದಿವಸ ಜನರನ್ನು ನಾವು ಖುಷಿಯಲ್ಲಿ ಇಡಬೇಕಾದದ್ದು ಸರಕಾರದ ಕರ್ತವ್ಯ ಇದನ್ನು ರಾಜಕಾರಣದಲ್ಲಿ ಮಾಡಬೇಕಾದ್ದು ಎಂದು ಮಾನ್ಯ ಜಾಲಪ್ಪನವರು ಹೇಳಿದರೆ ನಾನು ಒಪ್ಪುತ್ತೇನೆ. ನಾನು ಒಪ್ಪಿ ಸುಮ್ಮನಿರುತ್ತೇನೆ. ತಾವು ಬಹಳ ಹಿರಿಯರಿದ್ದೀರಿ ನಾನು ಬಹಳ ಚಿಕ್ಕವನು ಮೊದಲನೇ ಸಲ ಇಲ್ಲಿಗೆ ಬಂದಿದ್ದೇನೆ. ತಾವೇಕೆ ಹೀಗೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ. ಹಣ ಇಲ್ಲದಿದ್ದರೆ ಹಣವಿಲ್ಲವೆಂದು ಹೇಳಿ. ನಮ್ಮನು ಪಾರದರ್ಶಕ ಸರಕಾರ ಕುಡಿಯುವ ನೀರಿಗೆ ಇಷ್ಟು ಹಣ ಇದೆ ಹಣಕ್ಕೆ ಕೊರತೆ ಇಲ್ಲವೆಂದು ನೀವೆಲ್ಲರೂ ಹೇಳಿದ್ದೀರಿ. ಆದರೆ ಇಂತಹ ದ್ವರರ್ಥ ಹೇಳಿಕೆಯನ್ನು ಏಕೆ ಕೊಡುತ್ತೀರಿ. ೧೯ನೇ ತಾರೀಖಿನವರೆಗೆ ೨೦ ಕೋಟಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಆಗಸ್ಟ ೧೫ ರಂದು ೪೪ ಕೋಟಿ ಖರ್ಚಾಗಿದೆ ಎಂದು ಹೇಳುತ್ತೀರಿ. ನೀವು ಕೊಡುವುದರಲ್ಲಿ ಯಾವುದು ಸರಿ ಎಂದು ಸಮರ್ಥಿಸಿಕೊಳ್ಳುತ್ತೀರಿ. ಈ ಸಮರ್ಥನೆಗೆ ಅರ್ಥವೇನು ಇದೆ. ಇಂತಹ ತಪ್ಪು ಮಾಹಿತಿ ಕೊಟ್ಟು ಕಂಗಾಲಾಗಿರತಕ್ಕಂತಹ, ಕಣ್ಣೀರಿನಲ್ಲಿ ಕೈ ತೊಳೆಯತಕ್ಕಂತಹ ರೈತರನ್ನು ಹಾದಿ ತಪ್ಪಿಸುವ ಕೆಲಸವನ್ನು ಈ ರಾಜ್ಯ ಸರಕಾರ ಮಾಡಬಾರದು, ಅದು ನಿಮಗೆ ಭೂಷಣವಲ್ಲ. ನಿಮ್ಮ ಸರಕಾರಕ್ಕೆ ಒಳ್ಳೆ ಹೆಸರು ತರಲಿಕ್ಕೆ ಸಾಧ್ಯವಿಲ್ಲ. ಇದನ್ನು ತಾವು ಆಲೋಚನೆ ಮಾಡಬೇಕು. ಕೇಂದ್ರ ಸರಕಾರಕ್ಕೆ ೨೫೬ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಬೇಡಿಕೆ ಸಲ್ಲಿಸಿದ್ದಾರೆ. ಇವರಿಗೆ ಬಿಡುಗಡೆ ಮಾಡಿರುವಂತಹ ಹಣ ಕೇವಲ ೨೦ ಕೋಟಿ. ಅಂದರೆ ೧೦ ಪರ್ಸೆಂಟ್ ಹಣವನ್ನು ಬಿಡುಗಡೆ ಮಾಡಿದ್ದಾರೆ. ಸಣ್ಣ ಮಕ್ಕಳಿಗೆ ೫ ಪೈಸೆ ಕೊಟ್ಟು

ಮಜಾ ಮಾಡು ಎಂದು ಹೇಳಿದ ಹಾಗೆ. ಆದರಲ್ಲಿ ಏನು ಸಿಗುತ್ತದೆ ಎಲ್ಲದರ ಬೆಲೆ ಜಾಸ್ತಿಯಾಗಿದೆ. ಕೃಷಿ ಕಾರ್ಮಿಕರ ದಿನಗೂಲಿ ಎಷ್ಟು, ಎಷ್ಟು ಮಾನವ ದಿನಗಳನ್ನು ಇದರಲ್ಲಿ ಸರಕಾರ ನಿರ್ಮಾಣ ಮಾಡಬಹುದು. ಈ ರೀತಿ ಕಷ್ಟದಾಯಕವಾದ ಪರಿಸ್ಥಿತಿಯಲ್ಲಿ ರಾಜ್ಯವಿರುವಾಗ ನೀವು ರಾಜ್ಯದ ಜನರಿಗೆ ತುಟಿಗೆ ತುಪ್ಪ ಹಚ್ಚಿಸುವ ಕೆಲಸ ಮಾಡಬೇಡಿ. ಕ್ರೀಡಾ ಗ್ರಾಮ ಮಾಡುತ್ತೇವೆ, ಮಾಸ್ ರ್‍ಯಾಪಿಡ್ ಟ್ರಾನ್ಸಪೋರ್ಟ ನಿರ್ಮಾಣ ಮಾಡುತ್ತೇವೆಂದು ಎಕ್ಸಪ್ರೆಸ್ ಮಾಡುತ್ತೀರಿ ಇದಕ್ಕೆ ಯಾವುದು ಹಣ. ಏತಕ್ಕಾಗಿ ಇದನ್ನು ಮಾಡುತ್ತೀರಿ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುತ್ತೇವೆಂದು ಹೇಳುತ್ತೀರಿ. ಹೊಟ್ಟೆಗೆ ಹಿಟ್ಟಿಲದ್ದ ಜನರಿಗೆ ಜುಟ್ಟಿಗೆ ಮಲ್ಲಿಗೆ ಹೂವು ಹಾಕಲಿಕ್ಕೆ ಹೋಗಿದ್ದೀರಿ. ಈ ರೀತಿಯ ಕಾರ್‍ಯಕ್ರಮಗಳನ್ನು ಬಿಡಿ. ಸಂಕಷ್ಟದಲ್ಲಿರುವ ಜನರನ್ನು ಮೇಲೆತ್ತಲಿಕ್ಕೆ ಪ್ರಾಮಾಣಿಕವಾಗಿರುವ ಕರ್ತವ್ಯವನ್ನು ನೀವು ನಿರ್ವಹಿಸಬೇಕು. ಅನೇಕ ದೂರಗಾಮಿತ್ವದ ಕೆಲಸವನ್ನು ಮಾಡಿದಾಗ ಮಾತ್ರ, ಬರವನ್ನು ಎದುರಿಸಲಿಕ್ಕೆ ಸರಕಾರ ಸಮರ್ಥವಾಗುತ್ತದೆ. ಯಾರೋ ರಾಜ ಮಹಾರಾಜರುಗಳು ಕಾಲದಲ್ಲಿ ಕೆರೆ ಕಟ್ಟೆಗಳ ನಿರ್ಮಾಣ ಮಾಡಿದ್ದಾರೆ. ಇವತ್ತು ನಾವು ಆ ಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ ಆಗುವುದಿಲ್ಲ. ಎಷ್ಟು ವರ್ಷಗಳಿಂದ ಕೆರೆಗಳನ್ನು ಡೀ ಸಿಲ್ಟ ಮಾಡಿಲ್ಲ. ಡೀ ಸಿಲ್ಟಿಂಗಗೆ ನಾವು ಎಷ್ಟು ವೆಚ್ಚ ಮಾಡಿದ್ದೇರೆ. ಬಯಲು ಸೀಮೆ ಪ್ರದೇಶದಲ್ಲಿರುವ ರೈತರಿಗೆ ಹೇಳುತ್ತೀರಿ. ಅಲ್ಲಿರುವ ಮಣ್ಣನ್ನು ತೆಗೆದುಕೊಂಡು ಹೋಗಿ ಇಟ್ಟಿಗೆ ಮಾಡಿ ಎಂದು. ಕೆರೆಗಳಲ್ಲಿ ನೀರನ್ನು ನಿಲ್ಲಿಸದೇ ಹೋದರೆ ಬಂದಿರುವ ಜಲವೂ ಕೂಡ ಹೀರಿ ಅಂತರ್ಜಲ ಮೇಲೆ ಬರಲಿಕ್ಕೆ ಸಾಧ್ಯವಾಗುವ ಕಾರ್‍ಯಕ್ರಮ ರೂಪಿಸದಿದ್ದರೆ ಬರವನ್ನು ಹೇಗೆ ಎದುರಿಸುತ್ತೀರಿ. ಡೀ ಸಿಲ್ಟಿಂಗ್ ಮಾಡಲಿಲ್ಲ. ಲಕ್ಷಗಟ್ಟಲೆ ಕೆರೆಗಳು ಇಂದು ಒಣಗಿ ಬಿದ್ದರೆ, ಮಣ್ಣು ತುಂಬಿದ ಅಲ್ಲಿ ಹೂಳು ತೆಗೆದಿಲ್ಲ. ಇದಕ್ಕೆ ನಿಮ್ಮ ಕಾರ್‍ಯಯೋಜನೆಗಳು ಏನು? ಬೇಸಿಗೆಯಲ್ಲಿ ಈ ಕೆಲಸ ಮಾಡಿದರೆ ಮಳೆಗಾಲದಲ್ಲಿ ಮಳೆಯನೀರನ್ನು ನಿಲ್ಲಿಸಲಿಕ್ಕೆ ಖಂಡಿತ ಸಾಧ್ಯವಾಗುತ್ತದೆ. ಈ ರೀತಿಯದೂರಗಾಮಿತ್ವದ ಕೆಲಸ ಮಾಡಿದಾಗ ಈ ರಾಜ್ಯದ ಜನರ ಗ್ರಾಮೀಣ ಜನರ ಒಂದು ಹಿತವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಎಲೆಕ್ಟ್ರಿಕ್ ಪ್ರಾಜೆಕ್ಟಗಳ ಬಗ್ಗೆ ನಾನು ಅಡ್ಡ ಹೋಗುವುದಿಲ್ಲ. ಮೊನ್ನೆ ಕೂಡ ಬಂದು ಪ್ರಶ್ನೆ ವಿದ್ಯುತ್ ಯೋಜನೆಗಳ ಬಗ್ಗೆ ಬಂದಿತ್ತು.

೨.೩೦ ಪಿ.ಎಂ

ನೀವು ಕೊಡಗಿನಲ್ಲಿ ಹೋಗಿ ನೋಡಿ ತಲಕಾವೇರಿಯಲ್ಲಿ ವಿದೇಶಿ ವಿಂಡ್ ಮಿಲಗಳಿಂದ ಬಂದಂಥ ಸುಮಾರು ಒಂದು ಕೋಟಿಗಿಂತ ಹೆಚ್ಚಿಗೆ ಅಲ್ಲಿ ಇನವೆಸ್ಟಮೆಂಟ್ ಮಾಡಿ ತಂದಿರುವಂಥ ವಸ್ತುಗಳನ್ನು ಗುಂಡಿ ತುಂಬಾ ಬಿದ್ದವೆ. ವಿದೇಶದಿಂದ ಆಮದು ಮಾಡಿರುವ ನಿಮ್ಮ ವಸ್ತುಗಳು, ಪಾರ್ಟ್ಸಗಳು. ದುರ್ದೈವವಶಾತ್ ಒಬ್ಬ ವಾಚಮೆನನ್ನು ಕೂಡ ಅಲ್ಲಿಟ್ಟಿಲ್ಲ. ಮಂತ್ರಿಗಳದ್ದೋ ಅಥವಾ ನನ್ನ ಮನೆ ಸ್ವತ್ತಾಗಿದ್ದರೆ ಹಾಗೆ ಬಿಡುತ್ತಿದ್ದೆವಾ? ಯಾರದು ಹಣ? ಅದೇ ಸಂದರ್ಭದಲ್ಲಿ ತಮಿಳುನಾಡಿನಲ್ಲಿ, ತಿರುಪತಿಯಲ್ಲಿ ಇವತ್ತು ಆ ಯೋಜನೆಯಿಂದ ನೂರಾರು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವಂಥ ಸಂದರ್ಭದಲ್ಲಿ, ನಮ್ಮ ಸರಕಾರದವರು ಮೊನ್ನೆ ಸರ್ವೆಮಾಡುತ್ತಿದ್ದೇವೆಂದು ಉತ್ತರವನ್ನು ಕೊಡುತ್ತಾರೆ.

ಛೇರ್ಮನ್ : ಮಾನ್ಯ ಸದಸ್ಯರು ಯಾವುದ್ಯಾವುದನ್ನು ವಿವರಣೆ ಕೊಡುತ್ತೀರೋ ಅದನ್ನು ಸ್ವಾಗತಿಸುತ್ತೇವೆ; ಆದರೆ ಇಲಾಖೆಯ ಬಗ್ಗೆ ಬೇಡಿಕೆ ಬಂದಾಗ ತಾವು ಪ್ರಸ್ತಾರ ಮಾಡಬಹುದು.

ಶ್ರೀ ಅರಗಂ ಜ್ಞಾನೇಂದ್ರ : ಬರ ಬಂದಾಗ, ಪ್ರಥಮವಾಗಿ ಕುಡಿಯುವ ನೀರು, ಮೇವು ಮತ್ತು ರೈತರಿಗೆ ಬೇಕಾಗಿರುವ ಬೀಜ, ಗೊಬ್ಬರ ಇವುಗಳ ಆದ್ಯತೆಗೆ ಆಮೆ ಗತಿಯ ಕಾರ್ಯಕ್ಷಮತೆ ಪ್ರಯೋಜನಕ್ಕೆ ಬರುವುದಿಲ್ಲ. ಯಾವ ಜಿಲ್ಲೆಯಲ್ಲಿ ನೀವು ನೇಮಕ ಮಾಡಿರುವ ಬರ ಕಾಮಗಾರಿ ಸಮಿತಿ ಕೆಲಸ ಮಾಡಿದೆ. ನನಗೆ ತಾಲ್ಲೂಕು ಸಮಿತಿಯಲ್ಲಿ ಗೊತ್ತಾಯಿತು. ಶಾಸಕನಾಗಿ ನಾನು ಎಲ್ಲಾ ಅಧಿಕಾರಿಗಳನ್ನು ಕರೆದೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಕೂರಿಸಿ ಮೀಟಿಂಗ್ ಮಾಡಿದೆವು. ಕಾರ್ಯಕ್ರಮವನ್ನು ರೂಪಿಸಿದೆವು ಇಂಥ ಇಂಥ ಕಾರ್ಯಗಳನ್ನು ತೆಗೆದುಕೊಳ್ಳಬೇಕು ಎಂದು ಜಿಲ್ಲೆಗೆ ಕಳುಹಿಸಿದರೆ ಅವರು ಹೇಳುತ್ತಾರೆ ಜಿಲ್ಲಾ ಮಂತ್ರಿಗಳ ಬರುವುದಕ್ಕೆ ಪುರುಷೊತ್ತು ಇಲ್ಲವಂತೆ, ಜಿಲ್ಲಾ ಮಟ್ಟದ ಒಂದು ಸಮಿತಿ ಅದನ್ನು ಆಪ್ರೂವ್ ಮಾಡಿದನಂತರ ಇವೆಲ್ಲ ಕೆಲಸ ಪ್ರಾರಂಭ ಮಾಡುತ್ತಾರಂತೆ. ನೀವು ಬೇಕಾದರೆ ಕೇಳಿ ಶಿವಮೊಗ್ಗ ಜಿಲ್ಲೆಯಲ್ಲಿ. ಏತಕ್ಕೆ ಪ್ರಾರಂಭ ಮಾಡುವುದಿಲ್ಲ? ಜಿಲ್ಲಾ ಮಂತ್ರಿಗಳೇ ಹೋಗಿಜಿಲ್ಲಾ ಮಟ್ಟದಲ್ಲಿ ಬರಕಾಮಗಾರಿ ಬಗ್ಗೆ ಒಂದು ಮೀಟಿಂಗನ್ನು ಕರೆಯುವುದಕ್ಕೆ ಆಗಿಲ್ಲ. ಆ ಒಂದು ಅಧಿಕಾರಿಗಳನ್ನು ಕರೆಯಿಸಿ ಎಲ್ಲ ಏನಾಗಿದೆ ಎಂದು ಕೇಳುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ ಎಂದಾದರೆ ನೀವು ಬರದ ಬಗ್ಗೆ ಯಾವ ರೀತಿಯಾಗಿ ಯೋಚನೆ ಮಾಡುತ್ತಿದ್ದೀರಿ. ನಿಮ್ಮ ಹೃದಯದಲ್ಲಿ ನಿಮಗೆಷ್ಟು ಕಳಕಳಿ ಇದೆ. ಇದನ್ನು ನಾವು ಕೇಳಬೇಕಾಗುತ್ತದೆ. ಮನ್ಯ ಅಧ್ಯಕ್ಷರೇ, ನಾನು ಹೇಳುತ್ತಿದ್ದೇನೆ, ಬಹುಶಃ ನಮಗೆ ಬಂದಿರುವ ಮಳೆ ಕೂಡ ಉಪಕಾರ ಆಗದಿದ್ದರೂ ಕೂಡ ಮಲೇರಿಯಾ ರೋಗ. ಮಲೇರಿಯಾ ರೋಗದಿಂದ ಇಪ್ಪತ್ತು ಜನರು ಸತ್ತುಹೋಗಿದ್ದಾರೆ. ವ್ಯಾಪಕವಾಗಿರುವ ಮಲೇರಿಯಾ ರೋಗ. ಏಕೆಂದರೆ ಸರಾಗವಾಗಿ ಮಳೆ ಬರದೆ ಅಲ್ಲಿ ಇಲ್ಲಿ ತುಂತುರು ಬಂದು, ಎಲ್ಲೊ ಹಳ್ಳಕೊಳ್ಳಗಳಲ್ಲಿ ನೀರು ನಿಂತು ಬೇಸಾಯಕ್ಕೆ ಅನುಕೂಲವಾಗದಿದ್ದರೂ ಕೂಡ ಈ ರೀತಿ ಉಪದ್ರವಕಾರಿಯಾಗಿದೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಈ ಬರಗಾಲದ ಬಗ್ಗೆ ಚರ್ಚೆ ಮಾಡಲಿಕ್ಕೆ ಎಂದು ಕರೆದಂಥ ಅಧಿವೇಶನ ಹಲವಾರು ಕಾರಣಗಳಿಂದ ಐದಾರು ದಿವಸ ಬೇರೆ ವಿಷಯಗಳಿಗೆ ಹೋಗಿ ನಿಜವಾದ ಸಮಸ್ಯೆಯನ್ನು ಚರ್ಚೆ ಮಾಡತಕ್ಕಂಥ ಸಂದರ್ಭ ಇವತ್ತಷ್ಟೇ ಬಂದಿದೆ. ಬರಗಾಲ ಎಂದ ತಕ್ಷಣ ಸರ್ಕಾರಗಳಿಗೆ ಒಂದು ಪೂರ್ವಗ್ರಹಪೀಡಿತವಾದ ಅಭಿಪ್ರಾಯ ಇದೆ. ಬರಗಾಲ ಎಂದ ತಕ್ಷಣವೇ ಮಳೆ ಹೋಗಿದೆ. ಆದ್ದರಿಂದ ಬರಗಾಲ ಬಂದಿದೆ ಎಂದು ನನ್ನದು ಅಭಿಪ್ರಾಯ ಎಲ್ಲಾ ಸರ್ಕಾರಗಳಿಗೆ ಇರುತ್ತದೆ. ಆದರೆ ಆ ಅಭಿಪ್ರಾಯ ಸರಿಯಲ್ಲ. ಬರಗಾಲ ಎಂದು ಹೇಳಿದರೆ ಬರೀ ಮಳೆ ಬರದೇ ಇರುವುದು ಒಂದೇ ಕಾರಣಕ್ಕೋಸ್ಕರವೇ ಅಲ್ಲ ಬರಗಾಲ ಬರುವುದು, ಹಲವಾರು ಸಮಸ್ಯೆಗಳಲ್ಲಿ ಒಟ್ಟಾರೆ ಸೇರಿಕೊಂಡಿರುತ್ತದೆ. ಮತ್ತೆ ಈ ಬರಗಾಲ ಮಾನವ ನಿರ್ಮಿತವಾದ ಬರಗಾಲವೋ ಅಥವಾ ಪ್ರಕೃತಿ ವಿಕೋಪದಿಂದ ಆಗಿರುವ ಬರಗಾಲವೋ ಇವೆರಡು ರೀತಿಯಾದ ಬರಗಾಲಗಳ ಪ್ರಶ್ನೆ ಇದೆ. ನಮ್ಮಲ್ಲಿ ಬರುವ ಬರಗಾಲ ಸಹಜವಾಗಿ ಮಾನವ ನಿರ್ಮಿತವಾದ ಬರಗಾಲಗಳು. ಅದರ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ನಾವು ಪ್ರಕೃತಿಯನ್ನು ಯಾವ ರೀತಿಯಲ್ಲಿ

ಬಳಸಿಕೊಳ್ಳುತ್ತಿದ್ದೇವೆ, ಬಳಸಿಕೊಂಡಿದ್ದೇವೆ, ಈ ಹಿನ್ನೆಲೆಯಲ್ಲೇ ನಾವು ಬರಗಾಲ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ. ಆಗ ವಾಸ್ತವವಾಗಿ ಈ ಬರಗಾಲಕ್ಕೆ ಶಾಶ್ವತವಾದಂಥ ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇವತ್ತಿನ ಈ ಸರ್ಕಾರ ಬರಗಾಲದ ಬಗ್ಗೆ ತಮಗೆ ಇರುವ ಈ ಪೂರ್ವಗ್ರಹಪೀಡಿತವಾದಂಥ ಅಭಿಪ್ರಾಯವನ್ನು ಬಿಟ್ಟು, ವಾಸ್ತವಿಕ ಅಂಶಗಳ ಮೇಲೆ ಬರಗಾಲದ ನಿಜವಾದ ಕಾರಣವನ್ನು ಹುಡುಕಿ ಒಂದು ಸಮಗ್ರವಾದ, ಶಾಶ್ವತವಾದಂಥ ಪರಿಹಾರವನ್ನು ಹುಡುಕಬೇಕಾಗುತ್ತದೆ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಈ ಸರ್ಕಾರವೇ ಕೊಟ್ಟಿರುವ ಕೆಲವು ಮಾಹಿತಿಗಳು ಇವೆ. ಜುಲೈ ೧೫ನೇ ತಾರೀಖು ಈ ಸರ್ಕಾರ ಎಲ್ಲಾ ವಿರೋಧಪಕ್ಷಗಳನ್ನು ಸಭೆ ಕರೆಯಿತು. ಅದರಲ್ಲಿ ಈ ಬರಗಾಲದ ಬಗ್ಗೆ ಒಂದು ಮಾಹಿತಿಯನ್ನು ತೆಗೆದುಕೊಳ್ಳುತ್ತದೆ. ಏನು ಮಾಹಿತಿಯೆಂದರೆ ಇಡೀ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಮಳೆಯಾಗಿದೆ ಜುಲೈ ೧೫ರ ಸಂದರ್ಭದಲ್ಲಿ. ಆ ಮಳೆ ಎಷ್ಟು ಆಗಿದೆ ಎನ್ನುವ ಆಧಾರದಮೇಲೆ ಇಡೀ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಇದೆಯೋ ಇಲ್ಲವೋ ಎಂದು ತೀರ್ಮಾನ ಮಾಡಿದೆ. ಆ ಮಾಹಿತಿಯನ್ನು ಕೊಟ್ಟಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮಳೆಯಾಗಿದೆ, ಎಲ್ಲಿ ತೀರಾ ಕಡಿಮೆ ಮಳೆ ಬಿದ್ದಿದೆ, ಸಿನಿಯರ್ ಡೆಫಿಸಿಟ್ ಮತ್ತು ಮಾಡರೇಟ್ ಡೆಫಿಸಿಟ್ ಎಂದು ಹೇಳುವ ರೀತಿಯಲ್ಲಿ ಒಂದು ಮಾಹಿತಿಯನ್ನು ತರಿಸಿದ್ದಾರೆ. ಅದರ ಪ್ರಕಾರ ಇವರಿಗೆ ಇರುವುದು ೧೭೫ ತಾಲ್ಲೂಕುಗಳ ಬಗ್ಗೆ ೧೦೬ ತಾಲ್ಲೂಕುಗಳಲ್ಲಿ ಡೆಫಿಸಿಟ್ ಮಳೆಯಾಗಿದೆ ಎನ್ನುವ ಮಾಹಿತಿಯನ್ನು ಇದರಲ್ಲಿ ಕೊಟ್ಟಿದ್ದಾರೆ. ಆದರೆ ಇವತ್ತೊಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಆ ಮಾಹಿತಿ ಕೊಟ್ಟಿರುವುದರಲ್ಲಿ ಅರ್ಥಾಂಶ ಇಲ್ಲ. ಅಂದರೆ ಜುಲೈ ೧೫ನೇ ತಾರೀಖು ೧೦೬ ತಾಲ್ಲೂಕುಗಳಲ್ಲಿ ಮಳೆ ಅಭಾವ ಇದೆ ಎಂದು ಹೇಳುವ ತೀವ್ರ ರೀತಿಯಾದಂಥ ಅಭಾವ ಇದೆ ಎಂದು ಹೇಳಿದ ಸರ್ಕಾರ ಇವತ್ತು ಅದನ್ನು ಸ್ವಲ್ಪ ಬದಲಾವಣೆ ಮಾಡಿದೆ. ಅಂದರೆ ಇವರ ದೃಷ್ಟಿಯಲ್ಲಿ ಏನಾಗಿದೆ ಎಂದರೆ, ಉಳಿದ ಸಂದರ್ಭದಲ್ಲಿ ಈ ಕಾಲ ಘಟ್ಟದಲ್ಲಿ ಮಳೆಯಾಗಿದೆ, ಆದ್ದರಿಂದ ಕೆಲವು ತಾಲ್ಲೂಕುಗಳಲ್ಲಿ ಆ ಬರಗಾಲದ ಪರಿಸ್ಥಿತಿ ಇಲ್ಲ ಎಂದು ಹೇಳಿ. ಅದಕ್ಕೆ ನಾನು ಪ್ರಾರಂಭದಲ್ಲಿ ಹೇಳಿದ್ದು. ಬರಗಾಲದ ಬಗ್ಗೆ ಇವರಿಗಿರುವ ಅಭಿಪ್ರಾಯವೇ ಸರಿಯಿಲ್ಲ ಎಂದು.

ಯಾವುದೇ ಒಂದು ತಾಲ್ಲೂಕಿನಲ್ಲಿ ಬೆಳೆಗಳು ಇಟ್ಟಿದ್ದರೆ, ಅದು ಮೊಳಕೆ ಆಗಿದ್ದರೆ ಅಥವಾ ಬೆಳೆದಿದ್ದರೆ ಅಲ್ಲಿ ಬರಗಾಲ ಇಲ್ಲ ಎನ್ನತಕ್ಕ ಅಭಿಪ್ರಾಯ. ಮಾನ್ಯ ಜಾಲಪ್ಪನವರು ಅವರದೇ ಆದ ತಾಲ್ಲೂಕಿನ ಉದಾಹರಣೆ ಕೊಟ್ಟು ಆಗಲೇ ಹೇಳುತ್ತಿದ್ದರು. ಅದು ಬರಗಾಲ ಇಲ್ಲ ಎಂದು ಹೇಳತಕ್ಕ ತೀರ್ಮಾನಕ್ಕೆ ಬಂದ ತಕ್ಷಣ, ಸರ್ಕಾರದ ಧೋರಣೆ ಅದರ ಬಗ್ಗೆ ಬದಲಾವಣೆ ಆಗಿಬಿಡುತ್ತದೆ. ಆದ್ದರಿಂದ ನಾನು ಹೇಳುತ್ತಿರತಕ್ಕದ್ದು ಬಿತ್ತನೆ ಹಾಕಲಿಕ್ಕೆ ಅವಶ್ಯಕತೆ ಇರುವಷ್ಟು ಮಳೆ ಬಂದ ತಕ್ಷಣ ಆ ತಾಲ್ಲೂಕಗಳಲ್ಲಿಯೇ ಆಗಲಿ ಅಥವಾ ಆಯಾಯ ಜಿಲ್ಲೆಯಲ್ಲಿ ಆಗಲಿ ಬರಗಾಲ ಇಲ್ಲ ಎಂದು ಹೇಳತಕ್ಕ ಅಭಿಪ್ರಾಯಕ್ಕೆ ಬರುವುದು ತಪ್ಪು. ಬಿತ್ತನೆ ಹಾಕಿಬಿಟ್ಟು ಅದು ಬೆಳೆದರೆ, ಇದು ಬರೀ ಬೆಳೆಯ ಪ್ರಶ್ನೆ ಆಯಿತು. ಮನುಷ್ಯರ ಪ್ರಶ್ನೆ ಇದೆ, ದನಕರುಗಳ ಪ್ರಶ್ನೆ ಇದೆ. ಕುಡಿಯುವ ನೀರಿನ ಪ್ರಶ್ನೆ ಇದೆಯ ಹಾಗಾದರೆ ಈ ಎಲ್ಲಾ ಪ್ರಶ್ನೆಗಳು ಏನು. ಈ ಪ್ರಶ್ನೆಗಳು ಮೂಲಭೂತವಾದಂತಹ ಪ್ರಶ್ನೆಗಳು. ಬಿತ್ತನೆ

ಆಗಿದೆ ಕೆಲವು ಕಡೆ ನಿಜ ಒಪ್ಪಿಕೊಳ್ಳೋಣ. ಆದರೆ ಮೂಲಭೂತವಾಗಿರತಕ್ಕಂಥ ಪ್ರಶ್ನೆ ಏನು ಇದೆ, ಜನರ ಜೀವನದ ಪ್ರಶ್ನೆ ಅದರಲ್ಲೂ ಮುಖ್ಯವಾಗಿ ಕುಡಿಯುವ ನೀರಿನ ಪ್ರಶ್ನೆ, ಕೆಲಸದ ಪ್ರಶ್ನೆ. ದನಕರುಗಳಿಗೆ ಕುಡಿಯುವ ನೀರಿನ ಪ್ರಶ್ನೆ, ಮೇವಿನ ಪ್ರಶ್ನೆ. ಈ ಮುಖ್ಯವಾದಂತಹ ಸಮಸ್ಯೆಗಳು ಬಿತ್ತನೆ ಆದ ತಕ್ಷಣ ಪರಿಹಾರ ಆಯಿತೇ? ಖಂಡಿತ ಆಗಲಿಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಬರಗಾಲ ೧೦೬ ತಾಲ್ಲೂಕುಗಳಲ್ಲಿ ಏನು ಇದೆ ಎಂದು ಹಿಂದೆ ಕೊಟ್ಟಿದ್ದರೋ, ಅದಕ್ಕಿಂತ ತೀವ್ರವಾಗಿಯೇ ಆಗಿದೆ ಎನ್ನತಕ್ಕದನ್ನು ನಾವು ಗಮನಿಸಬೇಕು. ಏಕೆಂದರೆ, ಇವತ್ತು ಬರಗಾಲದ ಪರಿಸ್ಥಿತಿ ಬಗ್ಗೆ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ, ಸರ್ಕಾರ ಆಲೋಚನೆ ಮಾಡುವುದು ಹೇಗೆ ಎಂದರೆ, ಎಲ್ಲೆಲ್ಲಿ ಬಿತ್ತನೆ ಆಗಿದೆಯೋ ಅಲ್ಲಿ ಕಾಮಗಾರಿಕೆಲಸಗಳ ಅವಶ್ಯಕತೆ ಇಲ್ಲ ಎಂದು ಹೇಳುವುದು. ನಾನು ಕೋಲಾರ ಜಿಲ್ಲೆಯದು ಒಂದು ಉದಾಹರಣೆ ಕೊಡುತ್ತೇನೆ. ಜೂನ್ ೧೫ನೇ ತಾರೀಖು ಅವರು ಕೊಟ್ಟಂತಹ ಮಾಹಿತಿ ಪ್ರಕಾರ ಅರು ತಾಲ್ಲೂಕುಗಳಲ್ಲಿ ತೀವ್ರ ಅಭಾವ ಇದೆ ಎಂಬ ಬಗ್ಗೆ ಅವರು ಮಾಹಿತಿ ಕೊಟ್ಟಿದ್ದಾರೆ. ಅದರಲ್ಲಿ

``As against the normal crop area of 2.71 lakh hectares under Khariff, the area sown is 0.155 lakh hectares only. Due to inadequate rainfall, the farmers have not sown in an area of 2.56 lakh hectares."

ಅವರು, ಕೋಲಾರ, ಮಾಲೂರು, ಶ್ರೀನಿವಾಸಪುರ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಎಂದು ಇಲ್ಲಿ ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಮಾಹಿತಿ ಪ್ರಕಾರ ಅದರಲ್ಲಿ ಕೆಲವು ತಾಲ್ಲೂಕುಗಳನ್ನು ಕೈಬಿಟ್ಟಿದ್ದಾರೆ. ಈಗ ಕೊಟ್ಟಿರತಕ್ಕ ಮಾಹಿತಿಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ಮಾಲೂರು, ಶಿಡ್ಲಘಟ್ಟ ಮಾತ್ರ ಹೇಳಿದ್ದಾರೆ. ಇನ್ನು ಎರಡು ತಾಲ್ಲೂಕಿನಲ್ಲಿ ಮಳೆ ಬಂದಿದೆ, ಬಿತ್ತನೆ ಆಗಿದೆ ಎನ್ನತಕ್ಕ ಅಭಿಪ್ರಾಯಕ್ಕೆ ಸರ್ಕಾರ ಬಂದು ಆರು ತಾಲ್ಲೂಕುಗಳಲ್ಲಿ ಎರಡು ತಾಲ್ಲೂಕನ್ನು ಬಿಟ್ಟು ನಾಲ್ಕು ತಾಲ್ಲೂಕುಗಳನ್ನು ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಅದೇ ರೀತಿ ಕೊಟ್ಟಿದ್ದಾರೆ. ಹಣ ಬಿಡುಗಡೆ ಮಾಡುವಾಗ, ಹಣ ಬಿಡುಗಡೆ ಮಾಡತಕ್ಕ ಪ್ರಶ್ನೆ ಬಂದಾಗ, ಏನು ಮಾಡಿದ್ದಾರೆ ಎಂದರೆ ಇವರು ಹಿಂದೆ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ ಧಾರವಾಡ ಜಿಲ್ಲೆಯ ೧೬ ತಾಲ್ಲೂಕುಗಳಲ್ಲಿ ಡಿಫಿಸಿಟ್ ಇದೆ ಎಂದು ಹೇಳತಕ್ಕ ಸರ್ಕಾರ, ೨೭೭.೭೧ ಲಕ್ಷ ಹಣವನ್ನು ಬಿಡುಗಡೆ ಮಾಡಿದೆ. ಬಿಜಾಪುರ ಜಿಲ್ಲೆಗೆ ೨೬೬ ಲಕ್ಷ ರೂಪಾಯಿ ಬಿಡುಗಡೆ ಮಾಡಿದೆ. ರಾಯಚೂರು ಜಿಲ್ಲೆಯಲ್ಲಿ ಮೂರೇ ತಾಲ್ಲೂಕುಗಳ ಬರಗಾಲ ಇದೆ ಎಂದು ಹೇಳಿದ ಸರ್ಕಾರ ೨೬೨.೫೫ ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿದೆ. ಕೋಲಾರ ಜಿಲ್ಲೆಯಲ್ಲಿ ಆರು ತಾಲ್ಲೂಕಿನಲ್ಲಿ ಡಿಫಿಸಿಟ್ ಇದೆ ಎಂದು ಹೇಳತಕ್ಕ ಸರ್ಕಾರ ಈಗ ೧೩೭ ಲಕ್ಷ ರೂಪಾಯಿ ಹಣ ಅಲ್ಲಿದೆ ಎಂದು ಹೇಳುತ್ತದೆ. ಇದರಲ್ಲಿ ನಾನು ಪ್ರಾರಂಭದಲ್ಲಿಯೇ ಹೇಳಿದೆ. ಇದನ್ನು ಬಿತ್ತನೆ ಪ್ರಶ್ನೆ ರೀತಿಯಲ್ಲಿ ಆಲೋಚನೆ ಮಾಡೋಣ. ಮನುಷ್ಯರಿಗೆ ಕುಡಿಯುವ ನೀರಿನ ಪ್ರಶ್ನೆ ಕೆಲಸದ ಪ್ರಶ್ನೆ. ಉದ್ಯೋಗ ಭರವಸೆ, ಕೃಷಿ, ಕಾರ್ಮಿಕರಿಗೆ ಉದ್ಯೋಗವನ್ನು ಕೊಡತಕ್ಕ ಪ್ರಶ್ನೆ ಬಂದಾಗ ಕುಡಿಯುವ ನೀರಿಗೆ ಇವರು ಕೋಲಾರ ಜಿಲ್ಲೆಗೆ ಹಣ ಕೊಟ್ಟಿರತಕ್ಕದ್ದು ಕೇವಲ ೮೦ ಲಕ್ಷ ರೂಪಾಯಿ

ಮಾತ್ರ. ಸರ್ಕಾರಕ್ಕೆ ಗೊತ್ತಿದೆ, ಇವತ್ತು ಒಂದು ಬೋರವೆಲ್ ತೋಡಲು ಕನಿಷ್ಟ ೧೫ರಿಂದ ೨೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಇವರು ಕೊಟ್ಟಿರತಕ್ಕ ೮೦ ಲಕ್ಷ ರೂಪಾಯಿಗಳಲ್ಲಿ ಎಷ್ಟು ಬೋರವೆಲಗಳನ್ನು ತೆಗೆಯಲು ಸಾಧ್ಯವಾಗುತ್ತದೆ? ಆರೇ ತಾಲ್ಲೂಕುಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಟ ೩೦೦ ಹಳ್ಳಿಗಳು ಇವೆ. ಅದರಲ್ಲಿ ಅರ್ಧಾಂಶ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅಂತಹ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ ಈ ಸರ್ಕಾರ ಬಿಡುಗಡೆ ಮಾಡಿರತಕ್ಕ ಹಣ ಮತ್ತು ಮೇವಿಗೆ ಬಿಡುಗಡೆ ಮಾಡಿರತಕ್ಕ ಹಣ ಈ ಎರಡನ್ನೂ ಗಮನಿಸಿದರೆ, ಸರ್ಕಾರ ಯಾವ ತೀರ್ಮಾನಕ್ಕೆ ಬಂದಿದೆ ಎಂದು ಹೇಳಿದರೆ; ಬಿತ್ತನೆ ಆದ ತಕ್ಷಣ ಬರಗಾಲ ಇಲ್ಲ ಎನ್ನತಕ್ಕ ತೀರ್ಮಾನಕ್ಕೆ ಬಂದಿದೆ. ಇದರ ಪರಿಣಾಮವಾಗಿ ಇವತ್ತು ಕುಡಿಯುವ ನೀರಿಗೆ ಕಡಿಮೆ ಹಣ ಬಿಡುಗಡೆ ಮಾಡಿರತಕ್ಕದ್ದು.

ಶ್ರೀ ಆರ್.ಎಲ್. ಜಾಲಪ್ಪ : ತಾವು ಏನು ಫಿಗರ್ಸ್ ಓದುತ್ತಿದ್ದೀರಿ, ಅದು ಕಲಾಮಿಟಿ ರಿಲೀಫ್ ಫಂಡನಲ್ಲಿ ಕೊಟ್ಟಿರುವುದು. ಜಿಲ್ಲಾ ಪರಿಷತ್ ಹಾಗೂ ಪಂಚಾಯತಿಯಿಂದ ಖರ್ಚು ಮಾಡಿರುವ ವಿವರ ಇದರಲ್ಲಿ ಇಲ್ಲ. ನೀವು ಓದಿದ್ದು ಸಿಆರ್‌ಎಫ್ ಫಂಡನಲ್ಲಿ ಕೊಟ್ಟಿರುವುದನ್ನು ಮಾತ್ರ. ಅದನ್ನೂ ತಾವು ಜೊತೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ನೀವು ಕೊಟ್ಟಿರತಕ್ಕ ಅಂಕಿ ಅಂಶಗಳು, ನಾವು ತೆಗೆದುಕೊಂಡು ಬಂದಿರತಕ್ಕಂತಹ ಅಂಕಿ ಅಂಶಗಳು ಅಲ್ಲ. ನೀವು ಏನು ಅಂಕಿ ಅಂಶ ಕೊಟ್ಟಿದ್ದೀರೋ ಅದನ್ನು ನೋಡಿ ನಾನು ಹೇಳುತ್ತಿರತಕ್ಕದ್ದು. ಆ ರೀತಿ ಇದ್ದರೆ ಎಲ್ಲಾ ಅಂಕಿ ಅಂಶಗಳನ್ನು ನೀವೇ ಕೊಡಬೇಕಾಗಿತ್ತು. ಜಿಲ್ಲಾ ಪರಿಷತ್ತನವರು ಇಷ್ಟು ಖರ್ಚು ಮಾಡಿದ್ದಾರೆ, ಸರ್ಕಾರ ಇಷ್ಟು ಖರ್ಚುಮಾಡಿದೆ. ಯಾವ್ಯಾವ ಯೋಜನೆಗಳಿಂದ ಎಷ್ಟೆಷ್ಟು ಹಣ ಬಂದಿದೆ ಎಂದು ಹೇಳತಕ್ಕದ್ದು, ಮತ್ತು ಕಾಮಗಾರಿಗಳ ಪ್ರಶ್ನೆಗೆ ಬಂದರೆ ಸರ್ಕಾರಕ್ಕೆ ಗೊತ್ತಿರಬೇಕು. ಜೂನತಿಂಗಳು, ಮೇ ಕೊನೆಯಿಂದ ಹಳ್ಳಿಗಾಡಿನಲ್ಲಿ ಜನಗಳು ಕೆಲಸ ಹುಡುಕತಕ್ಕಂಥದ್ದು ಪ್ರಾರಂಭ ಆಗುತ್ತದೆ. ಏಪ್ರಿಲ್ ಮೇ ತಿಂಗಳಲ್ಲಿ ಏನಾದರೂ ಮಳೆ ಬರದೇ ಹೋದದರೆ ಜನ ಊರುಗಳನ್ನು ಬಿಟ್ಟು ಬೇರೆ ಕಡೆ ಕೆಲಸಗಳನ್ನು ಹುಡುಕಲು ಹೋಗುತ್ತಾರೆ. ಹಾಗೆಯೇ ಹಲವಾರು ಜಿಲ್ಲೆಗಳಿಂದ ಊರುಗಳನ್ನು ಬಿಟ್ಟು ಜನ ಕೆಲಸಗಳನ್ನು ಹುಡುಕಿಕೊಂಡು ಹೋಗಿದ್ದಾರೆ. ಅವರಿಗೆ ಕೆಲಸವನ್ನು ಒದಗಿಸಬೇಕು ಎನ್ನತಕ್ಕದ್ದು ಸರ್ಕಾರದ ಮುಖ್ಯವಾದ ಉದ್ದೇಶ ಇರತಕ್ಕದ್ದು ಬರಗಾಲ ಪ್ರದೇಶದಲ್ಲಿ. ಅವರಿಗೆ ಕೆಲಸವನ್ನು ಕೊಡಲು ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ? ಇಲ್ಲಿ ನಿರ್ದಿಷ್ಟವಾಗಿ ಮ್ಯಾನ್ ಡೇಸ್ ಅನ್ನು ಕೊಟ್ಟಿದ್ದಾರೆ. ಎಷ್ಟು ಮಾನವ ದಿನಗಳಿಗೆ ಲೆಕ್ಕವನ್ನು ಕೊಟ್ಟಿದ್ದೇವೆ ಎಂದ ಹೇಳಿದ್ದಾರೆ. ಇದರಲ್ಲಿ ನೋಡುವುದಾದರೆ ಒಂದೊಂದು ವಿಭಾಗಕ್ಕೆ ಎಷ್ಟುಎಂಬ ವಿವರ ಕೊಟ್ಟಿದ್ದಾರೆ. ಬೆಂಗಳೂರು ವಿಭಾಗಕ್ಕೆ ಎಷ್ಟು? ಮೈಸೂರು ವಿಭಾಗಕ್ಕೆ ಎಷ್ಟು, ಗುಲ್ಬರ್ಗಾ ವಿಭಾಗಕ್ಕೆ ಎಷ್ಟು ಎಂದು ಹೇಳತಕ್ಕ ರೀತಿಯಲ್ಲಿ ಹಣ ಕೊಟ್ಟು, ಆ ಪ್ರಕಾರ ೩೧.೦೭.೯೫ಕ್ಕೆ ಆದಂತಹ ವೆಚ್ಚ ಮತ್ತು ಉತ್ಪಾಪಡಿಸಿದ ಮಾನವ ದಿನಗಳು ಲಕ್ಷಗಳಲ್ಲಿ ಎಂದು ಹೇಳುತ್ತಾರೆ. ಅದರಲ್ಲಿ ಲೋಕೋಪಯೋಗಿ ಇಲಾಖೆಯವರು ೮.೧೪ ಮಾನವ ದಿನಗಳನ್ನು ಉತ್ಪಾದನೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಅದೇ ರೀತಿ ಬೇರೆ ಬೇರೆ ನೀರಾವರಿ ಇಲಾಖೆ, ಮಧ್ಯಮ ಮತ್ತು ಸಣ್ಣ ನೀರಾವರಿ

ಅರಣ್ಯ ಇಲಾಖೆ. ಈ ರೀತಿಯಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದರ ಕೆಳಗಡೆ ಏನು ಹೇಳುತ್ತಾರೆ ಎಂದರೆ ಆಗಸ್ಟ ೧೭ರವರೆಗಿನ ಮಾಹಿತಿಯಂತೆ ಉತ್ತಮಗೊಂಡ ಮುಂಗಾರಿನಿಂದಾಗಿ, ಕೃಷಿ ಚಟುವಟಿಕೆಗಳು ಚೇತರಿಸಿಕೊಂಡಿದ್ದು ೫೬.೬೦ ಲಕ್ಷ ಹೆಕ್ಟೇರಗಳಲ್ಲಿ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ೪೮.೧೧ ಲಕ್ಷ ಹೆಕ್ಟೇರನಲ್ಲಿ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗಿತ್ತು, ವಿವರವನ್ನು ಅನುಬಂಧದಲ್ಲಿ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿ ಈ ತಿಂಗಳಲ್ಲಿ ಇದೇ ಸಮಯದಲ್ಲಿ ಇಷ್ಟು ಬಿತ್ತನೆ ಆಗಿದೆ ಎಂದು ಹೇಳತಕ್ಕ ಕಾರಣ ಏನು ಎಂದರೆ ಸರ್ಕಾರದ ಆತ್ಮ ಸಂತೃಪ್ತಿಗೋಸ್ಕರ.

ಶ್ರೀ ಕೆ. ರಮಾನಾಥ ರೈ : ಈಗಾಗಲೇ ಮೂರು ಗಂಟೆ ಆಗುವುದಕ್ಕೆ ಬಂದಿದೆ.

ಛೇರ್ಮನ್ : ನೀವು ಈಗಾಗಲೇ ಸುಮಾರು ಸಾರಿ ಹೊರಗೆ ಹೋಗಿ ಬಂದಿದ್ದೀರಿ. ಇನ್ನೂ ಅರ್ಧ ಗಂಟೆ ಶ್ರೀರಾಮರೆಡ್ಡಿಯವರು ಮಾತು ಮುಗಿಸಲಿ.

ಶ್ರೀ ಕೆ. ರಮಾನಾಥ ರೈ : ಸದನದಲ್ಲಿ ಯಾರು ಇಲ್ಲವಲ್ಲ, ಕೋರಂ ಇಲ್ಲ.

ಶ್ರೀ ಎನ್. ರಾಜಣ್ಣ : ಊಟಕ್ಕೆ ಬಿಡಲಿಲ್ಲವಲ್ಲ ಅಧ್ಯಕ್ಷರೆ,

ಛೇರ್ಮನ್ : ರಾಜಣ್ಣನವರು ನಿಯಮಗಳನ್ನು ತಿಳಿದುಕೊಳ್ಳಬೇಕು, ನಿಮ್ಮ ಸ್ಥಳದಲ್ಲಿ ಮಾತನಾಡಬೇಕು, ಬೇರೆಯವರ ಸ್ಥಳದಲ್ಲಿ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕೊಟ್ಟಿರತಕ್ಕ ಒಂದು ಮನವಿಯಲ್ಲಿ ವಿವರವಾದಂತಹ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯನ್ನು ಕೊಟ್ಟಿರತಕ್ಕಂತಹ ಸಂದರ್ಭದಲ್ಲಿ ಕೂಡ ಕೆಲವು ಅಂಕಿ ಅಂಶಗಳನ್ನು ರಾಜ್ಯ ಸರ್ಕಾರ ಇವತ್ತು ಏನನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದೆ ಎನ್ನತಕ್ಕದ್ದನ್ನು ಮನವಿಯಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ನಾನು ಎಲ್ಲವನ್ನೂ ವಿವರಣೆ ಕೊಡಲಿಕ್ಕೆ ಹೋಗುವುದಿಲ್ಲ. ನಾನು ಕೋಲಾರ ಜಿಲ್ಲೆಯನ್ನೇ ಉದಾಹರಣೆಗೆ ತೆಗೆದುಕೊಳ್ಳುತ್ತೇನೆ. ಕೇಂದ್ರ ಸರ್ಕಾರಕ್ಕೆ ಕೊಟ್ಟಿರತಕ್ಕ ವರದಿಯ ಪ್ರಕಾರ, ಕೋಲಾರ ಜಿಲ್ಲೆಯಲ್ಲಿ ೭೫೬ ಹಳ್ಳಿಗಳಲ್ಲಿರತಕ್ಕ ೧ ಲಕ್ಷ ೩೩ ಸಾವಿರ ಜನರಿಗೆ ಬರಗಾಲದ ಪರಿಣಾಮ ಬೀರಿದೆ. ಅಂದರೆ ಕುಡಿಯುವ ನೀರಿಗೆ ತೊಂದರೆ ಆಗಿದೆ ಎಂದು ಹೇಳತಕ್ಕದ್ದು, ಮತ್ತೆ ಬೆಳೆಗಳ ಪ್ರಶ್ನೆ ಬಂದಾಗ ಹೀಗೆ ಹೇಳಿದ್ದಾರೆ.

``As against the normal crop area of 2.71 lakh hectares under khariff, the area sown is 0.155 lakh hectares only. Due to inadequate rainfall the farmers have sown in an area of 2.56 lakh hectares."

ಇದರಲ್ಲಿ ಹೀಗೆ ಕೊಟ್ಟಿದ್ದಾರೆ. ಇದಕ್ಕೂ ಇದಕ್ಕೂ ಸಮಯದ ಅಂತರ ಎಷ್ಟು ಎಂದು ಹೇಳಿದರೆ ಬಹುಶಃ ೧೫-೨೦ ದಿವಸದ ಅಂತರ ಇರಬಹುದು. ಈಗ ತಯಾರು ಮಾಡಿರತಕ್ಕದ್ದರಲ್ಲಿ ಇಲ್ಲಿ ಆರು

ಪರ್ಸೆಂಟ್ ಮಾತ್ರ ಆಗಿದೆ ಎಂದು ಹೇಳುತ್ತಾರೆ. ಇದರಿಂದಾಗಿ ಒಟ್ಟಾಗಿ ಕಂಡು ಬರತಕ್ಕ ಅಂಶ ಎಂದರೆ ಬರಗಾಲದ ಪರಿಸ್ಥಿತಿಯ ಬಗ್ಗೆ, ಸರ್ಕಾರ ಹಾಕಿರತಕ್ಕ ಅಂದಾಜು ಮತ್ತು ತಯಾರು ಮಾಡಿರತಕ್ಕ ಮಾಹತಿ ಸಂಪೂರ್ಣವಾಗಿ ಸರಿಯಾಗಿಲ್ಲ. ತಪ್ಪು ಮಾಹಿತಿಯನ್ನು ಮತ್ತು ತಪ್ಪು ಅಂದಾಜನ್ನು ಬರಗಾಲದ ಬಗ್ಗೆ ಸರ್ಕಾರ ಮಾಡಿದೆ. ಈ ತಪ್ಪು ಅಂದಾಜು ಮತ್ತು ತಪ್ಪು ಮಾಹಿತಿಯ ಪರಿಣಾಮ ಏನಾಗಿದೆ ಎಂದರೆ, ಸರ್ಕಾರ ಆ ಬರ ಪರಿಹಾರಕ್ಕೆ ಯಾವ ರೀತಿ ಯೋಜನೆಗಳನ್ನು ರೂಪಿಸಬೇಕಾಗಿತ್ತು, ಎಷ್ಟು ಹಣವನ್ನು ಖರ್ಚು ಮಾಡಲಿಕ್ಕೆ ಸಾಧ್ಯತೆ ಇತ್ತೊ ಅಷ್ಟು ಹಣವನ್ನು ಖರ್ಚು ಮಾಡಲು ಸಾಧ್ಯತೆ ಇಲ್ಲ. ಏಕೆಂದರೆ ಅವರ ಹತ್ತಿರ ಯೋಜನೆಯೇ ಇಲ್ಲ. ಬರಗಾಲದ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವ ಸಂದರ್ಭದಲ್ಲಿ ಅದಕ್ಕೆ ಅಗತ್ಯವಾಗಿರುವ ಮಾಹಿತಿಯನ್ನು ಸಹ ಕೊಡುವುದಕ್ಕೆ ಸಾಧ್ಯವಿಲ್ಲ ಈಗ ಮಳೆಯ ಪ್ರಮಾಣವನ್ನು ಅಳತೆ ಮಾಡುವ ಒಂದು ವಿಧಾನದ ಉದಾಹರಣೆ ನಾನು ಹೇಳುತ್ತೇನೆ. ಮಳೆಯ ಪ್ರಮಾಣವನ್ನು ಯಾವ ಅಂದಾಜಿನ ಮೇಲೆ ಮಾಡುವುದು? ಮಳೆಯ ಪ್ರಮಾಣ ಅಳತೆ ಮಾಡಲು ಒಂದು 'ರೇನ್-ಗೇಜ್' ಇಟ್ಟುಕೊಂಡಿದ್ದು, ಅದರ ಆಧಾರದ ಮೇಲೆ ಲೆಕ್ಕ ಹಾಕುತ್ತಾರೆ. ರೇನ್-ಗೇಜನ್ನು ಒಂದು ತಾಲ್ಲೂಕಿನಲ್ಲಿ ಎಲ್ಲಿಯೋ ಒಂದೆರಡು ಕಡೆ ಇಟ್ಟಿರುತ್ತಾರೆ. ಆ ರೇನ್-ಗೇಜ್ ಇಟ್ಟಿರುವ ಸ್ಥಳದಲ್ಲಿ, ಕೆಲವು ಸಂದರ್ಭಗಳಲ್ಲಿ ಆಕಸ್ಮಿಕವಾಗಿ ಏನಾಗುತ್ತದೆ ಎಂದರೆ, ಆ ಪ್ರದೇಶದಲ್ಲಿ ಎಷ್ಟು ಮಳೆಯಾಗಿರುತ್ತದೋ, ಅಷ್ಟು ಪ್ರಮಾಣದಲ್ಲಿ ಇಡೀ ತಾಲ್ಲೂಕಿನಲ್ಲಿ ಮಳೆಯಾಗಿದೆಯೆಂದು ಇಡೀ ತಾಲ್ಲೂಕಿಗೆ ಸರಾಸರಿ ಅಳತೆ ಮಾಡಿ ತಹಶೀಲ್ದಾರವರು ಜಿಲ್ಲಾಧಿಕಾರಿಯವರಿಗೆ ವರದಿ ಕಳುಹಿಸಿಕೊಡುತ್ತಾರೆ, ನಂತರ ಅಲ್ಲಿಂದ ಸರ್ಕಾರಕ್ಕೆ ಮಾಹಿತಿ ಕೊಡುತ್ತಾರೆ. ಆದುದರಿಂದ, ಒಂದು ತಾಲ್ಲೂಕಿನಲ್ಲಿ ಅಥವಾ ಒಂದು ಜಿಲ್ಲೆಯ ಯಾವುದಾದರೊಂದು ಕಡೆ ಸ್ವಲ್ಪ ಪ್ರಮಾಣದಲ್ಲಿ ಮಳೆಯಾಗಿದ್ದರೆ ಇಡೀ ತಾಲ್ಲೂಕಿನಲ್ಲಿ ಅಷ್ಟೇ ಪ್ರಮಾಣದಲ್ಲಿ ಮಳೆಯಾಗಿದೆಯೆಂದು ಸರಾಸರಿ ಲೆಕ್ಕ ಹಾಕಿ ಸರ್ಕಾರಕ್ಕೆ ವರದಿ ಸಲ್ಲಿಸಿ, ಅದರ ಆಧಾರದ ಮೇಲೆ ಇಂತಹ ಕಡೆಯಲ್ಲಿ ಅಭಾವ ಇದೆಯೇ? ಇಲ್ಲವೇ? ಎನ್ನುವ ತೀರ್ಮಾನಕ್ಕೆ ಬಂದಿರುವ ಕಾರಣಕ್ಕೋಸ್ಕರ ಬರಗಾಲದ ಪರಿಸ್ಥಿತಿಯನ್ನು ಅಂದಾಜು ಮಾಡುವುದರಲ್ಲಿ ಸರ್ಕಾರದ ಆಡಳಿತ ಯಂತ್ರಾಂಗ ಸಂಪೂರ್ಣ ವಿಫಲವಾಗಿದೆ. ಅದಕ್ಕೋಸ್ಕರ ಸರ್ಕಾರಕ್ಕೆ ಇವೊತ್ತು ಬರಗಾಲದ ಬಗ್ಗೆ ಸ್ಪಷ್ಟವಾದ ಮತ್ತು ನಿಖರವಾದ ಮಾಹಿತಿಯಿಲ್ಲ. ನಿಖರವಾದ ಮಾಹಿತಿ ಇಲ್ಲದಿರುವ ಕಾರಣದಿಂದಾಗಿ ಇವೊತ್ತು ಸರ್ಕಾರ ಅತಿಮುಖ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗಿರುವುದು ಕುಡಿಯುವ ನೀರಿನ ಪ್ರಶ್ನೆ ಬಗ್ಗೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸರ್ಕಾರ ಹಮ್ಮಿಕ್ಕೊಳ್ಳಬೇಕಾಗಿರುವುದು ಯಾವುದೆಂದರೆ ಮತ್ತು ಜನರಿಗೆ ಉದ್ಯೋಗ ಕಲ್ಪಿಸಿಕೊಡುವ ಕಾರ್ಯಕ್ರಮ ಹಾಗೂ ದನ-ಕರುಗಳಿಗೆ ಮೇವು ಸೌಲಭ್ಯ ಸರಬರಾಜು ಮಾಡುವ ಕಾರ್ಯಕ್ರಮ. ಒಂದೆಡೆ ಮನುಷ್ಯರಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದರೆ, ಇನ್ನೊಂದು ದನ-ಕರುಗಳಿಗೂ ಈ ಸಮಸ್ಯೆ ಇದೆ, ಮತ್ತೊಂದೆಡೆ ದನ-ಕರುಗಳಿಗೆ ಮೇವಿನ ಸಮಸ್ಯೆ ಎದುರಾಗಿದೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ ಕುಮಾರರವರು ಪೀಠವನ್ನಲಂಕರಿಸಿದರು)

ಈ ಮೂರನ್ನು ಬಹಳ ಗಂಭೀರವಾದ ಪ್ರಶ್ನೆಗಳನ್ನಾಗಿ ಪರಿಗಣಿಸಿ, ಪರಿಹರಿಸಬೇಕಾಗಿದೆ. ಸರ್ಕಾರ ಕೂಡ ಬರಗಾಲ ಪರಿಸ್ಥಿತಿ ಬಗ್ಗೆ ಸರಿಯಾದ, ವೈಜ್ಞಾನಿಕವಾಗಿ, ನಿಖರವಾದ ಮಾಹಿತಿ ತಯಾರಿಸದೆ ತಪ್ಪು ಮಾಹಿತಿ ತಯಾರಿಸಿರುವುದರಿಂದ ಹಮ್ಮಿಕೊಂಡ ಕಾರ್ಯಕ್ರಮ ವಿಫಲವಾಗಿದೆ. ಜನರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಹಣ ಬಿಡುಗಡೆ ಮಾಡಿದೆ ಎಂದು ಹೇಳಿದ್ದು, ಈ ರೀತಿ ಬಿಡುಗಡೆಯಾದ ಹಣದಲ್ಲಿ ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಕೇಂದ್ರ ಸರ್ಕಾರ ಕೊಡುವ ಅನುದಾನದಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದೆ? ಯಾವ್ಯಾವ ಬಾಬ್ತುಗಳಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ? ಎನ್ನುವ ಅಂಕಿ-ಅಂಶಗಳನ್ನು ನೋಡಿದಾಗ ಹಣ ಬಿಡುಗಡೆ ಮಾಡಿರುವ ಪಟ್ಟಿ ಕೊಟ್ಟಿದ್ದಾರೆ. ಇದರಲ್ಲಿ ರಾಜ್ಯ ಸರ್ಕಾರ ಬರಗಾಲವನ್ನು ನಿಭಾಯಿಸುವುದಕ್ಕೆ ಪ್ರತ್ಯೇಕವಾಗಿ ನಿಗದಿಪಡಿಸಿರುವ ಹಣವೆಷ್ಟು? ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು? ಈಗ ಅವರು ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದಾರಲ್ಲದೆ ಉದ್ಯೋಗ ಭರವಸೆ ಯೋಜನೆ ಬಗ್ಗೆ ಏನು ಹೇಳುತ್ತಿದ್ದಾರೋ, ಅದು ಸದನದಲ್ಲಿ ಮೊನ್ನೆ ದಿವಸ ಕೂಡ ಪ್ರಸ್ತಾಪವಾಯಿತು. ಉದ್ಯೋಗ ಭರವಸೆ ಯೋಜನೆಯಡಿ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಸದರಿ ಯೋಜನೆಯಡಿ ಬರುವ ಹಣ ಕೇಂದ್ರ ಸರ್ಕಾರದ್ದಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲು ಶೇಕಡ ೨೦ರಷ್ಟಿರುತ್ತದೆ, ಉಳಿದ ಎಂಬತ್ತು ಭಾಗ ಕೇಂದ್ರ ಸರ್ಕಾರದ್ದು. ಪ್ರಸ್ತುತ ರಾಜ್ಯ ಸರ್ಕಾರ ಉದ್ಯೋಗ ಭರವಸೆ ಯೋಜನೆಯಡಿ ಖರ್ಚು ಮಾಡಿರುವ ಹಣ ಬಿಟ್ಟರೆ, ಬರ ಪರಿಹಾರ ನಿಧಿಯೆಂದು ಸರ್ಕಾರ ಪ್ರತ್ಯೇಕವಾಗಿ ಯಾವುದೇ ರೀತಿಯಲ್ಲೂ ಹಣ ಖರ್ಚು ಮಾಡಿಲ್ಲ. ಬದಲಾಗಿ ಉದ್ಯೋಗ ಭರವಸೆ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬರತಕ್ಕ ಹಣವನ್ನಷ್ಟೇ ಇವೊತ್ತು ಬಿಡುಗಡೆ ಮಾಡಿದ್ದಾರೆ. ಈಗಾಗಲೇ ಒದಗಿಸಿರುವ ಪಟ್ಟಿಯಲ್ಲಿ ಸಣ್ಣನೀರಾವರಿ, ಅರಣ್ಯ ಇಲಾಖೆ, ಇತ್ಯಾದಿ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಉದ್ಯೋಗ ಭರವಸೆ ಯೋಜನೆಯಡಿ ಕೇಂದ್ರ ಸರ್ಕಾರವೇ ಹಣವನ್ನು ನಿಗದಿಪಡಿಸುತ್ತದೆ. ಅದೇ ರೀತಿ ಅರಣ್ಯ ಇಲಾಖೆಗೆ, ಸಣ್ಣ ನೀರಾವರಿ ಇಲಾಖೆಗೆ, ಕಟ್ಟಡಗಳಿಗೆ, ರಸ್ತೆಗಳ ಕಾಮಗಾರಿಗಳಿಗೆ ಎಷ್ಟು ಹಣ ಕೂಡ ಬೇಕೆಂಬುದನ್ನು ಕೇಂದ್ರ ಸರ್ಕಾರವೇ ನಿಗದಿ ಮಾಡುತ್ತದೆ. ಆದರೆ, ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಮಾತ್ರ ಇದರಲ್ಲಿ ಹಣವನ್ನು ನಿಗದಿಪಡಿಸುವುದಿಲ್ಲ. ಕೇಂದ್ರ ಸರ್ಕಾರ ಉದ್ಯೋಗ ಭರವಸೆ ಯೋಜನೆಯಡಿ ಬಿಡುಗಡೆ ಮಾಡಿರುವ ಹಣದಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಅವಕಾಶ ಕಲ್ಪಿಸಿಲ್ಲವ, ಅಲ್ಲದೆ, ದನ-ಕರುಗಳಿಗೆ ಮೇವು ಒದಗಿಸಿರುವುದಕ್ಕೆ ಕೂಡ ಸದರಿ ಯೋಜನೆಯಡಿ ಬರುವ ಹಣವನ್ನು ಖರ್ಚು ಮಾಡಲು ಸಾಧ್ಯತೆಯಿಲ್ಲ. ಆದರೆ, ಬಿಡುಗಡೆ ಮಾಡಿರುವುದು ಕೇಂದ್ರ ಸರ್ಕಾರದಿಂದ ಉದ್ಯೋಗ ಭರವಸೆ ಯೋಜನೆಯಡಿ ಬಂದಿರುವ ಹಣ ಮಾತ್ರ. ರಾಜ್ಯ ಸರ್ಕಾರ ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಪ್ರತ್ಯೇಕವಾಗಿ ಬರಗಾಲ ಪರಿಹಾರ ನಿಧಿಯೆಂದು ಬಿಡುಗಡೆ ಮಾಡಿಲ್ಲ. ಇದರಿಂದಾಗಿ ಇವೊತ್ತು ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ, ಕೆಲವು ಜಿಲ್ಲೆಗಳಲ್ಲದೆ, ಇಡೀ ರಾಜ್ಯಾದ್ಯಂತ ಇದರ ಗಂಭೀರ ಪರಿಸ್ಥಿತಿ ಉದ್ಭವಿಸಿದೆ. ಇವೊತ್ತು ನಮ್ಮ ಕೋಲಾರಜಿಲ್ಲೆಯಲ್ಲಿ ೩೫೦ರಿಂದ ೪೦೦ ಅಡಿಗಳಷ್ಟು ಆಳದವರೆಗೂ ಬೋರ್ ಕೊರೆದರೂ ನೀರು ಸಿಗುತ್ತಿಲ್ಲ, ಇದಲ್ಲದೆ, ಹಲವಾರು

ಹಳ್ಳಿಗಳಲ್ಲೂ ೩-೪ ಬೋರವೆಲಗಳನ್ನು ಕೊರೆದಿದ್ದರೂ ಕೂಡ ನೀರು ಸಿಗುವ ಪರಿಸ್ಥಿತಿಯಿಲ್ಲ. ಹಾಗಾಗಿ ಈಗಲೂ ಕೂಡ ಕೋಲಾರ ಜಿಲ್ಲೆಯಲ್ಲಿ ನೀರಿನ ಅಭಾವದ ಪರಿಸ್ಥಿತಿಯುಂಟಾಗಿದೆ. ಇನ್ನು ದನ-ಕರುಗಳಿಗೆ ಕುಡಿಯುವ ನೀರಿನ ಪ್ರಶ್ನೆ ಇಡೀ ರಾಜ್ಯಾದ್ಯಂತ ಒಂದೇ ರೀತಿಯದಾಗಿದೆ. ನಮ್ಮ ಜಿಲ್ಲೆಯ ಒಂದೆರಡು ತಾಲ್ಲೂಕುಗಳನ್ನು ಹೊರತುಪಡಿಸಿದರೆ, ಬಹುತೇಕ ತಾಲ್ಲೂಕುಗಳಲ್ಲಿ ದನ-ಕರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಂತೂ ತುಂಬಾ ಗಂಭೀರವಾದುದಾಗಿದೆ. ಆದುದರಿಂದ, ದನ-ಕರುಗಳಿಗೆ ಕುಡಿಯುವ ನೀರು, ಮೇವು ಹಾಗೂ ಜನರಿಗೆ ಕುಡಿಯುವ ನೀರಿನ ಸೌಕರ್ಯ, ಈ ಮೂರು ಬಹಳ ಪ್ರಮುಖ ಅಂಶಗಳಾಗಿದ್ದು, ಇದರ ಕಾಮಗಾರಿಗಳನ್ನು ಸರ್ಕಾರ ತಕ್ಷಣ ಜಾರಿಗೊಳಿಸಬೇಕಾದರೆ ರಾಜ್ಯ ಸರ್ಕಾರದ ಹಣದಿಂದಲೇ ಬಿಡುಗಡೆ ಮಾಡಬೇಕು. ಉದ್ಯೋಗ ಭರವಸೆ ಯೋಜನೆಯಡಿ ಬಿಡುಗಡೆ ಮಾಡಿದಂಥ ಹಣವನ್ನು ಇದಕ್ಕೆ ಖರ್ಚು ಮಾಡುವುದಕ್ಕಾಗುವುದಿಲ್ಲ. ಅಲ್ಲದೆ, ಬೇರೆ ಉದ್ದೇಶಗಳಿಗಾಗಿ, ಈ ಹಣವನ್ನು ಖರ್ಚು ಮಾಡಬಾರದೆಂದು ಸ್ಪಷ್ಟವಾದ ಮಾರ್ಗದರ್ಶನವಿರುವುದರಿಂದ, ಮೇಲೆ ತಿಳಿಸಿದ ಮೂರು ಉದ್ದೇಶಗಳಿಗೆ ರಾಜ್ಯ ಸರ್ಕಾರ ತಕ್ಷಣ ಹಣ ಬಿಡುಗಡೆ ಮಾಡಬೇಕು. ಈಗ ಅವರು ಕೊಟ್ಟಿರುವ ಅಂಕಿ-ಅಂಶಗಳ ರೀತ್ಯ ಯಾವುದೇ ರೀತಿಯಾದ ಹಣ ಒದಗಿಸಿಲ್ಲ. ಬರಗಾಲದ ಬವಣೆಗೇಡಾಗಿರುವ ತಾಲ್ಲೂಕುಗಳು ಮತ್ತು ಜಿಲ್ಲೆಗಳಲ್ಲಿ ಈಗಾಗಲೇ ಸುಮಾರು ೧೫-೨೦ ದಿವಸಗಳಿಂದ ಮಳೆ ಬಿದ್ದಿಲ್ಲ. ಅಲ್ಲದೆ, ಶುದ್ಧವಾಗಿಟ್ಟಿರತಕ್ಕ ಬೆಳೆಗಳೂ ಕೂಡ ಒಣಗಿ ನಷ್ಟವಾಗವ ಪರಿಸ್ಥಿತಿಗೆ ಬರುತ್ತಿದೆ. ಅಂದರೆ, ಎಲ್ಲೆಲ್ಲಿ ಸ್ವಲ್ಪ ಮಳೆಯಾಗಿದೆಯೋ ಅಲ್ಲೆಲ್ಲಾ ರೈತರು ಸಾಲ-ಸೋಲ ಮಾಡಿ ಬಿತ್ತನೆ ಮಾಡಿ, ತೆಗೆದುಕೊಂಡ ಫಸಲು ಮಳೆ ಇಲ್ಲದಿರುವ ಕಾರಣದಿಂದ ಅವೆಲ್ಲವೂ ಒಣಗಿಹೋಗುವ ಪರಿಸ್ಥಿತಿಗೆ ಬಂದಿದೆ. ಒಂದು ಕಡೆ ಬಿತ್ತನೆ ಮಾಡಿದ ಬೆಳೆ ನಿಂತಿದ್ದರೆ, ಮತ್ತೊಂದೆಡೆ, ಕೈಗೆ ತೆಗೆದುಕೊಂಡ ಫಸಲು ಒಣಗಿಹೋಗತಕ್ಕ ಪರಿಸ್ಥಿತಿ ಉದ್ಭವಿಸಿದೆ. ಆದುದರಿಂದ, ರೈತರು ಎರಡು ರೀತಿಯಾದ ನಷ್ಟಕ್ಕೊಳಗಾಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತಕ್ಷಣ ಆಲೋಚಿಸಿ, ಮುಂದೆ ಉದ್ಭವಿಸಬಹುದಾದ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ಯಾವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪ್ರಯತ್ನಿಸಬೇಕಾಗುತ್ತದೆ. ಸರ್ಕಾರ ಈಗಾಗಲೇ ಇದರ ಬಗ್ಗೆ ಒಂದು ಅಧ್ಯಯನದ ವರದಿ ಕೊಟ್ಟಿದೆ. ಅಧ್ಯಯನ ಮಾಡಿ ವರದಿ ಕೊಟ್ಟಿದ್ದಾರೋ, ಏನೋ ಗೊತ್ತಿಲ್ಲ. ಒದಗಿಸಿರುವ ಮಾಹಿತಿಯಲ್ಲಂತೂ ಕೆಲವು ಅಂಕಿ-ಅಂಶಗಳಿದ್ದು, ನನ್ನ ಅಭಿಪ್ರಾಯದ ಪ್ರಕಾರ ಕೊಟ್ಟಿರುವ ಅಂಕಿ-ಅಂಶಗಳು ಸರಿಯಲ್ಲ, ಇದರ ಅಂದಾಜು ಕೂಡ ಸರಿಯಿಲ್ಲ, ಅಂದಾಜು ಸರಿಯಿಲ್ಲದಿರುವ ಕಾರಣ ಯೋಜನೆಯನ್ನು ಕೂಡ ಸರಿಯಾಗಿ ರೂಪಿಸಲು ಸಾಧ್ಯವಾಗಿಲ್ಲ. ಇನ್ನು ಮುಂದೆಯಾದರೂ ಬರಗಾಲದ ಪರಿಸ್ಥಿತಿ ಬಗ್ಗೆ ಸರ್ಕಾರ ತಕ್ಷಣ ಸರಿಯಾದ ಅಂದಾಜು ಮಾಡಬೇಕಾದರೆ ವೈಜ್ಞಾನಿಕವಾಗಿ, ನಿಖರವಾಗಿ, ಅಂದಾಜು ಮಾಡಿ ಬರತಕ್ಕಂಥ ಕಷ್ಟದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸರ್ಕಾರ ಸರ್ವ ರೀತಿಯಲ್ಲೂ ಸಿದ್ಧವಾಗಬೇಕೆಂದು ಹೇಳುತ್ತಾ ಇಷ್ಟನ್ನು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ. ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಾನು ಕೇಳುವುದೇನೆಂದರೆ, ಪ್ರಕೃತಿ ವಿಕೋಪದ ಪರಿಹಾರ ನಿಧಿಯನ್ನು ಯಾರು ಬಿಡುಗಡೆ ಮಾಡುತ್ತಾರೆಂಬುದನ್ನು

ಮಾನ್ಯ ಮಂತ್ರಿಗಳು ದಯಮಾಡಿ ತಿಳಿಸಬೇಕು. ನನ್ನ ತಿಳಿವಳಿಕೆ ಪ್ರಕಾರ ಬಹುಶಃ ಇದನ್ನು ಜಿಲ್ಲಾಧಿಕಾರಿಯವರು ಬಿಡುಗಡೆ ಮಾಡುತ್ತಾರೆಂದು ನನ್ನ ಗಮನಕ್ಕೆ ಬಂದಿದೆ. ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳು ಬರದ ಅಡಿಯಲ್ಲಿವೆಯೆಂದು ನಮಗೆ ಮಾಹಿತಿ ಕೊಟ್ಟಿದ್ದಾರೆ. ಅವು ಯಾವುವೆಂದರೆ, ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳು. ನನ್ನ ಕ್ಷೇತ್ರವಾದ ಮಾಗಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ. ಈ ಕುರಿತು ನಾನು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದಾಗ, ಅವರು ನನಗೊಂದು ಮಾತನ್ನು ಹೇಳಿದರು. ಏನೆಂದರೆ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಜಿಲ್ಲಾ ಪರಿಷತನವರು ಹಣವನ್ನು ಸರ್ಕಾರದಿಂದ ತೆಗೆದುಕೊಂಡು ಅವರ ವತಿಯಿಂದ ಈ ಕೆಲಸವಾಗುತ್ತದೆ ಎಂದು ತಿಳಿಸಿದರು.

೩.೦೦ ಪಿ.ಎಂ

ಅವರು, ೩೫ ಲಕ್ಷ ಹಣ ಕುಡಿಯುವ ನೀರಿಗೆ ಬಿಡುಗಡೆಯಾಗಿರುವ ಬಗ್ಗೆ ಮಾಹಿತಿ ಇದೆ, ಎಂದು ತಿಳಿಸಿದರು. ಆ ಹಣ ನಮಗೆ ಎಕೆ ಬಿಡುಗಡೆಯಾಗಿಲ್ಲ ಎಂದು ಕೇಳಿದಕ್ಕೆ ಈಗಿನ ಮಾಹಿತಿಯ ಪ್ರಕಾರ ಕೆಲವು ಕಡೆ ಮಳೆಯಾಗಿರುವುದರಿಂದ ಈ ಹಣ ಬಿಡುಗಡೆಯಾಗಿಲ್ಲ, ಎಂದು ನನಗೆ ತಿಳಿದು ಬಂದಿದೆ. ಆದ್ದರಿಂದ ಮಂತ್ರಿಗಳು ನನ್ನ ತಾಲ್ಲೂಕಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ಎಷ್ಟು ಹಣವನ್ನು ಬರಗಾಲ ನಿಧಿಯಿಂದ ಬಿಡುಗಡೆ ಮಾಡಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ, ನೆಲಮಂಗಲ ತಾಲ್ಲೂಕು ಏನಿದೆ, ನನ್ನ ತಾಲ್ಲೂಕಿನ ಒಂದು ಭಾಗ ನೆಲಮಂಗಲ ಕ್ಷೇತ್ರಕ್ಕೆ ಸೇರುತ್ತದೆ. ಆದ್ದರಿಂದ ನೆಲಮಂಗಲ ತಾಲ್ಲೂಕಿಗಿಂತ ಹೆಚ್ಚಿನದಾಗಿ ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು, ಆಕ್ಸಿಡೆಂಟಲ್ ಫೈಲ್‌ಗೆ ಹತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಬಹುಶಃ ಇದು ಯಾವುದಕ್ಕೆ ಉಪಯೋಗಮಾಡಬೇಕೆಂದು ತಿಳಿದುಬಂದಿಲ್ಲ. ಆದರೆ ಆ ಹಣವನ್ನು ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗೆ ಏನಾದರೂ ಪರಿವರ್ತನೆ ಮಾಡಬಹುದೆ ಎಂಬ ಬಗ್ಗೆ ದಯಮಾಡಿ ಮಂತ್ರಿಗಳು ಹೇಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಕರೆದ ಉದ್ದೇಶವೇ ಬರಗಾಲದ ಬಗ್ಗೆ ಚರ್ಚೆ ಮಾಡಬೇಕು ಎಂದು. ಆದರೆ, ಈ ಸದನ ಯಾವ ಉದ್ದೇಶದಿಂದ ಪ್ರಾರಂಭವಾಗಬೇಕಾಗಿತ್ತೋ, ಆದು ಆಗಿದೆ. ಕಳೆದ ಮೂರು-ನಾಲ್ಕು ದಿವಸಗಳಲ್ಲಿ ನಡೆದಂಥ ವಿಧ್ಯಾಮಾನಗಳನ್ನು ನೋಡಿದಂಥ ಸಂದರ್ಭದಲ್ಲಿ ಮತ್ತು ನಮ್ಮ ಪಕ್ಷದ ವತಿಯಿಂದ ಅಡ್ಜರ್ನಮೆಂಟ್ ಮೋಷನ್ ಮೂಲಕ ತಂದು, ಬರಗಾಲದ ಪರಿಸ್ಥಿತಿಯ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಬೇಕು ಎನ್ನತಕ್ಕ ನಿಲುವನ್ನು ತಮ್ಮ ಮುಂದಿಟ್ಟಾಗ, ತಾವು ನಮ್ಮ ಕೋರಿಕೆಯನ್ನು ಮನ್ನಣೆ ಮಾಡಿ ನಿಯಮ ೬೯ರ ಅಡಿಯಲ್ಲಿ ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೀರಿ, ಆದಕ್ಕಾಗಿ ಧನ್ಯವಾದಗಳು. ಇದರ ಬಗ್ಗೆ ಅನೇಕ ಜನ ಸದಸ್ಯ ಮಿತ್ರರು ಇಲ್ಲಿ ಮಾತನಾಡಿದ್ದಾರೆ, ಆದ್ದರಿಂದ ನಾನು

ಹೆಚ್ಚು ಮಾತನಾಡಲು ಹೋಗುವುದಿಲ್ಲ. ಬಹಳ ಪ್ರಮುಖವಾಗಿ ಸರ್ಕಾರದ ಮಟ್ಟದಲ್ಲಿ ಆಗಿರತಕ್ಕ ಲ್ಯಾಪ್ಸಸ್ ಬಗ್ಗೆ ಮಾತ್ರ ನಾನು ಗಮನಹರಿಸಬಯಸುತ್ತೇನೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಿರತಕ್ಕದ್ದು ಡಿಸೆಂಬರ್ ತಿಂಗಳಿನಲ್ಲಿ, ಆ ಹಿಂದಿನ ವರ್ಷದಲ್ಲೂ ಸಹ ರಾಜ್ಯದ ಯಾವುದೇ ಭಾಗದಲ್ಲೂ ಸಹ ಮಳೆ ವ್ಯಾಪಕವಾಗಿ ಆಗದಿದ್ದಕಾರಣ, ಬೆಳೆಯಾಗಿದ್ದರೂ ಸಹ ಮಳೆಯಾಗಿರಲಿಲ್ಲ, ಕೆರೆಕಟ್ಟೆಗಳು ಅರ್ಧಭರ್ದವಾಗಿದ್ದ ಸಂದರ್ಭದಲ್ಲಿ, ಹೋದ ವರ್ಷವೇ ಸ್ವಲ್ಪ ಮಟ್ಟಿಗೆ ಬರಗಾಲಕ್ಕೆ ತುತ್ತಾಗುವಂಥ ಸಂದರ್ಭವಿತ್ತು. ಅನಂತರ, ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮಳೆಯು ಬಾರದಿರುವಂಥ ಸಂದರ್ಭದಲ್ಲಿ ಸರ್ಕಾರವೇನಾದರೂ ಮುನ್ನೆಚ್ಚರಿಕೆಯಾಗಿ ಕಾರ್ಯಕ್ರಮವನ್ನು ತೆಗೆದುಕೊಂಡಿತ್ತೇ ಎನ್ನತಕ್ಕದ್ದು ಇಲ್ಲಿ ಪ್ರಶ್ನೆ. ಮಳೆಯು ಬಾರದಿರುವ ಸಂದರ್ಭದಲ್ಲಿ, ಮಳೆಯು ತಡವಾಗಿ ಬರತಕ್ಕ ಸಂದರ್ಭದಲ್ಲಿ ಸರ್ಕಾರವೇನಾದರೂ ಕಾರ್ಯಕ್ರಮ ತೆಗೆದುಕೊಂಡಿತ್ತೆ? ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಹೆಚ್ಚಾಗಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಇವರು ಗಮನಹರಿಸಬೇಕಾಗಿತ್ತು, ಆ ಸಂದರ್ಭದಲ್ಲಿ ಅವರು ನಿಜವಾಗಿಯೂ ತೆಗೆದುಕೊಂಡಂಥ ಕಾರ್ಯಕ್ರಮಗಳೇನು? ಎಷ್ಟರಮಟ್ಟಿಗೆ ಜನರ ಸಂಕಷ್ಟಕ್ಕೆ ಸ್ಪಂಧಿಸಿದರು ಎನ್ನುವ ಬಗ್ಗೆ ನಾನು ಅಂಕಿ ಅಂಶಗಳೊಂದಿಗೆ ಹೇಳಬೇಕೆಂದರೆ, ನಾನೂ ಸಹ ಒಂದು ಕ್ಷೇತ್ರವನ್ನು ಒಂದು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೇನೆ. ನನ್ನ ಕ್ಷೇತ್ರ ಮತ್ತು ಜಿಲ್ಲೆಯಮಟ್ಟಿಗೆ ಹೇಳಬೇಕಾದರೆ, ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಒಂದೊಂದು ಕ್ಷೇತ್ರಕ್ಕೆ ಕೊಟ್ಟಿದ್ದುದು ೫ ಕೊಳವೆ ಬಾವಿಗಳು. ಅಂದರೆ ತುಮಕೂರಿನ ಇಡೀ ಜಿಲ್ಲೆಗೆ ಕೊಟ್ಟಿರತಕ್ಕದ್ದು ೬೫ ಕೊಳವೆ ಬಾವಿಗಳನ್ನು ಬಿಟ್ಟರೆ, ಒಂದು ಕೊಳವೆ ಬಾವಿಯನ್ನು ಹೆಚ್ಚಾಗಿ ಕೊಡತಕ್ಕ ಪ್ರಯತ್ನವಾಗಲಿಲ್ಲ. ನಾವು ಅನೇಕ ತರವಾಗಿ, ಪತ್ರಿಕಾ ಹೇಳಿಕೆಯ ಮೂಲಕ, ಸಭೆಗಳಲ್ಲಿ, ಸಮಾರಂಭಗಳಲ್ಲಿ ಸರ್ಕಾರದ ಗಮನಸೆಳೆಯಲು ಎಲ್ಲಾ ರೀತಿಯಲ್ಲು ಪ್ರಯತ್ನ ಮಾಡಿದರೂ ಸಹ ನಮ್ಮ ಗೋಳು ಸರ್ಕಾರಕ್ಕೆ ಮುಟ್ಟಲಿಲ್ಲ. ಅದಾದಮೇಲೆ, ಏಪ್ರಿಲ್ ಮತ್ತು ಮೇ ತಿಂಗಳಿನಲ್ಲೂ ಸಹ ಮಳೆ ಬರಲಿಲ್ಲ. ಜೂನ್‌ನಲ್ಲಿ ಮಳೆ ಬರುವಂಥ ಸಮಯದಲ್ಲಿ, ಆಗಲೂ ಸಹ ಸರ್ಕಾರದಿಂದ ರಿಲೀಸ್ ಮಾಡಿದ್ದುದು ಏನೆಂದರೆ ಕೇವಲ ೧೫ ಕೊಳವೇ ಬಾವಿಗಳನ್ನು ಬಿಟ್ಟರೆ, ಇನ್ನಾವ ರೀತಿಯಾದ ಕಾರ್ಯಕ್ರಮವನ್ನೂ ಸಹ ಹಾಕಲಿಲ್ಲ. ಆ ೧೫ ಕೊಳವೆ ಬಾವಿಗಳನ್ನಾದರೂ ಕೊರೆದರೇ ಎನ್ನುವ ಬಗ್ಗೆ ಹೇಳುವುದಾದರೆ ಅದೂ ಸಹ ಕೆಲವು ಕ್ಷೇತ್ರದಲ್ಲಿ ಕೊರೆದಿದ್ದಾರೆ, ಕೆಲವು ಕ್ಷೇತ್ರದಲ್ಲಿ ಕೊರೆದಿಲ್ಲ. ಇದು ಏಕೆ ಆಯಿತು ಎಂದರೆ, ಕಂದಾಯ ಸಚಿವರಾಗಿರುವ ಜಾಲಪ್ಪನವರು, ಗ್ರಾಮೀಣಾಭಿವೃದ್ಧಿ ಸಚಿವರಾಗಿರುವ ಪ್ರಕಾಶ್ ರವರು ನಮ್ಮ ಜಿಲ್ಲೆಗೆ ಬಂದಂಥ ಸಮಯದಲ್ಲಿ, ಎಲ್ಲಾ ವಿಷಯವನ್ನು ಶಾಸಕರ ಮೂಲಕ, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಸದಸ್ಯರ ಮೂಲಕ ಇವತ್ತು ಕಷ್ಟವೇನು ಎಂಬುದ್ನು ಮನಗಂಡರು ಸಹ, ನೀವು ಏನೆಲ್ಲಾ ಆಶ್ವಾಸನೆಯನ್ನು ಕೊಟ್ಟು ಹೋದರು ಸಹ, ಇವತ್ತು ಒಂದೇ ಒಂದು ಹೆಚ್ಚಿನ ಕೊಳವೆ ಬಾವಿಗಳನ್ನು ಕೊಡುವ ಪ್ರಯತ್ನವಾಗಲಿಲ್ಲ. ತಾವು ಆ ಸಭೆಯಲ್ಲೇನು ಅಶ್ವಾಸನೆಯನ್ನು ಕೊಟ್ಟು ಹೋದಿರಿ ಅದು ಅಶ್ವಾಸನೆಯಾಗಿಯೇ ಉಳಿಯಿತೆ ಹೊರ್ತತು, ಯಾವುದೂ, ಸಹ ಕಾರ್ಯರೂಪಕ್ಕೆ ಬರಲಿಲ್ಲ. ಎಲ್ಲಿ ಲ್ಯಾಪ್ಸಸ್ ಆಗಿದೆಯೆಂದರೆ, ಇವತ್ತು ಜಿಲ್ಲಾಧಿಕಾರಿಗಳು ಒಂದು ಕಡೆಯಾಗಿದ್ದಾರೆ.

ಜಿಲ್ಲಾ ಮುಖ್ಯ ಕಾರ್ಯದರ್ಶಿಯವರು ಒಂದು ಕಡೆಯಾಗಿದ್ದಾರೆ, ಅದರಲ್ಲಿ [illegible]ರಸ್ಯವಿಲ್ಲದಿರುವುದು ಬಹುಶಃ ತುಮಕೂರು ಜಿಲ್ಲೆ ಮಾತ್ರಕ್ಕೆ ಸೀಮಿತವಾಗಿದೆಯೆಂದು ನಾನು [illegible]ಂಡಿದ್ದೆ. ಆದರೆ ಇಲ್ಲಿ ಮಾತನಾಡಿ ಅನೇಕ ಸದಸ್ಯ ಮಿತ್ರರು ಹೇಳಿರುವುದನ್ನು ನೋಡಿದರೆ, [illegible] ರಾಜ್ಯದಲ್ಲಿ ಅವ್ಯವಸ್ಥೆಯಾಗಿದೆ ಎನ್ನತಕ್ಕ ಭಾವನೆ ಬರುತ್ತಿದೆ. ಇವತ್ತು ಯಾರು ಹಣವನ್ನು [illegible] ಮಾಡಬೇಕು ನಾವು ಯಾರ ಮುಂದೆ ಹೋಗಿ ಕೇಳಬೇಕು ಎಂಬ ಬಗ್ಗೆ ನಮಗೆ ಗೊತ್ತಾಗದಿರತಕ್ಕ ಸಂದರ್ಭವಿರುವುದರಿಂದ, ಈ ರೀತಿಯಾದ ತಾರಾತಮ್ಯವನ್ನು ಹೋಗಲಾಡಿಸಲು ಯಾವ ರೀತಿಯ ಕಾರ್ಯಕ್ರಮವನ್ನು ಹಾಕುತ್ತೀರಿ ಎನ್ನತಕ್ಕದ್ದು ಬಹಳ ಮುಖ್ಯ. ಒಂದು ಕಡೆ ಜಿಲ್ಲಾಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ, ಗ್ರಾಮಪಂಚಾಯಿತಿ ವ್ಯವಸ್ಥೆ ಬಂದರೂ ಸಹ, ಒಂದೇ ಒಂದು ಆಕ್ಷನ್ ಪ್ಲಾನ್ ಸಹ ಇಲ್ಲಿಯವರೆಗೆ ತಯಾರಾಗಿಲ್ಲ. ಅದಕ್ಕೆ ಹಣವು ಬಿಡುಗಡೆಯಾಗಿಲ್ಲ. ಅಂದರೆ ಏನು ಕೆಲಸ ಮಾಡಬೇಕು, ಯಾವ ರೀತಿಯಲ್ಲಿ ನಿಭಾಯಿಸಬೇಕು ಎನ್ನತಕ್ಕದ್ದು ಬಹಳ ಮುಖ್ಯವಾಗಿದೆ. ಅಧಿಕಾರಿಗಳ ಮಧ್ಯದಲ್ಲಿರತಕ್ಕ ಈ ತಾರಾತಮ್ಯದಿಂದಾಗಿ, ನೀವು ಹಣವನ್ನು ಕೊಟ್ಟಿರಬಹುದು, ಕೇಂದ್ರ ಸರ್ಕಾರದಲ್ಲಿ ಪ್ರಧಾನಮಂತ್ರಿಗಳನ್ನು ನೋಡಿದಂಥ ಸಂದರ್ಭದಲ್ಲಿ, ಎಷ್ಟು ಬೇಕಾದರೂ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿರಬಹುದು, ತಾವು ಸಹ ಒಪ್ಪಿಕೊಂಡಿದ್ದೀರಿ ಪತ್ರಿಕೆಯಲ್ಲಿ ಬಂದಿದೆ. ಆದರೆ ಬಂದಂಥ ಹಣ ಖರ್ಚಾಗುತ್ತಿಲ್ಲ, ತಾವು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಡತಕ್ಕ ಸಂದರ್ಭದಲ್ಲಿ, ೪೦ ಲಕ್ಷ ಜನ ಈ ರಾಜ್ಯದಲ್ಲಿ ಕೃಷಿ ಕಾರ್ಮಿಕರು ಇದ್ದಾರೆಂದು ಅಂಕಿಅಂಶವನ್ನು ಕೊಟ್ಟಿದ್ದೀರಿ. ನಾನು ಹೇಳುತ್ತೇನೆ, ೪೦ ಲಕ್ಷ ಜನ ಕೃಷಿ ಕಾರ್ಮಿಕರೆಂದು ಪ್ರಾಜೆಕ್ಟ್ ಮಾಡಿದಂಥ ಸಂದರ್ಭದಲ್ಲಿ, ಅವರಿಗೆ ಕೆಲಸವನ್ನು ಕೊಡತಕ್ಕ ಜವಾಬ್ದಾರಿ ತಮ್ಮದಾಗಿತ್ತು. ಏಪ್ರಿಲ್, ಮೇ, ಜೂನ್ ನಂತರ, ಮಳೆ ಬರಲಿಲ್ಲ, ಅವರಿಗೆ ಕೆಲಸ ಕೊಡಲೇ ಬೇಕಾಗಿತ್ತು. ಮೂರು ತಿಂಗಳೊಳಗಾಗಿ ನೀವು ಕೆಲಸವನ್ನು ಕೊಡಬೇಕಾಗಿದ್ದರೆ, ನೀವು ಖರ್ಚು ಮಾಡಿರುವ ಹಣದ ಬಗ್ಗೆ ಲೆಕ್ಕ ಹಾಕಿದರೆ ನೀವು ಯಾರಿಗೂ ಸಹ ಕೆಲಸವನ್ನು ಕೊಡಲೇ ಇಲ್ಲ. ಇವತ್ತು ನಿಮ್ಮ ಸಿ.ಆರ್.ಎಫ್. ಫಂಡ್ಸನಲ್ಲಿ ರಾಜ್ಯಕ್ಕೆ ಖರ್ಚು ಮಾಡಿರತಕ್ಕಂಥ ಹತ್ತು ಕೋಟಿ ಮಾತ್ರ. ನೀವು ೨೦ ಕೋಟಿ ರಿಲೀಸ್ ಮಾಡಿದ್ದೀರಿ, ಖರ್ಚು ಆಗಿರುವುದು ಹತ್ತು ಕೋಟಿ ಮಾತ್ರ. ತಾವು ಹೇಗೆ ಖರ್ಚು ಮಾಡಿದ್ದೀರಿ ಎಂದು ಕೇಳುತ್ತೇನೆ. ಅದೇ ರೀತಿಯಲ್ಲಿ ನೀವು ಜೆ.ಆರ್. ವೈ ಯಲ್ಲಿ ಎಷ್ಟು ಖರ್ಚು ಮಾಡಿದ್ದೀರೆಂದರೆ, ಕುಡಿಯುವ ನೀರಿಗಾಗಿ ೪೨ ಕೋಟಿ ಬಿಡುಗಡೆ ಮಾಡಿದ್ದೀರಿ, ಉದ್ಯೋಗವನ್ನು ಕೊಡುವ ಯೋಜನೆಯ ಪ್ರಕಾರ ೧೧೨ ಕೋಟಿ ರೂಪಾಯಿಗಳನ್ನು....

ಶ್ರೀ ಆರ್. ಎಲ್. ಜಾಲಪ್ಪ : ೧೯ನೇ ತಾರೀಖು ಒಂದೇ ದಿನವೆ ೧೦ ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ರಿಲೀಸ್ ಮಾಡಿರುವ ಬಗ್ಗೆ ನಾನು ಆಕ್ಷೇಪವೆತ್ತುತ್ತಿಲ್, ನೀವು ರಿಲೀಸ್ ಮಾಡಿದ್ದೀರಿ, ೪೨ ಕೋಟಿ ಕುಡಿಯುವ ನೀರಿಗೋಸ್ಕರ ಇಲ್ಲಿಯವರೆಗೆ ಕೊಟ್ಟಿದ್ದೀರಿ. ೧೧೨ ಕೋಟಿ ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಬಿಡುಗಡೆ ಮಾಡಿದ್ದೀರಿ. ಸಿ.ಆರ್. ಎಫ್.

ಫಂಡ್ಸನ ಅಡಿಯಲ್ಲಿ ೨೦ ಕೋಟಿ ಬಿಡುಗಡೆ ಮಾಡಿದ್ದೀರಿ. ಅದರ ಬಗ್ಗೆ ನನ್ನ ಎರಡು ಮಾತಿಲ್ಲ. ಆದರೆ ಖರ್ಚು ಎಷ್ಟು ಆಯಿತು? ತಾವು ಬಿಡುಗಡೆ ಮಾಡಿದಂಥ ಹಣ ಪ್ರಯೋಜನವಾಯಿತೆ ಎಂಬ ಬಗ್ಗೆ ಯೋಚನೆ ಮಾಡಬೇಕು, ಅರ್ಥ ಮಾಡಿಕೊಳ್ಳಬೇಕು. ೪೦ ಲಕ್ಷ ಜನ ಕೃಷಿ ಕಾರ್ಮಿಕರು ಆಹಾರಕೋಸ್ಕರ, ಕೂಲಿಗೋಸ್ಕರ ಊರಿಂದ ಓಡಾಡತಕ್ಕ ಪರಿಸ್ಥಿತಿ ಬಂತು. ಬಹುಶಃ ಈ ಸಂದರ್ಭವನ್ನು ಹೇಳಿದರೆ, ಉತ್ಪ್ರೇಕ್ಷೆ ಮಾಡುತ್ತೇನೆಂದು ತಿಳಿಯಬಾರದು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ಹಳ್ಳಿಗಳಿವೆ, ನೂರಕ್ಕೆ ನೂರರಷ್ಟು ಹಿಂದುಳಿದ ವರ್ಗದ ಜನ, ಹರಿಜನರು, ಗಿರಿಜನರು ವಾಸಮಾಡತಕ್ಕ ಕೆಲವು ಹಳ್ಳಿಗಳಲ್ಲಿ ಇರತಕ್ಕ ಪರಿಸ್ಥಿತಿ ಹೇಳಿದರೆ ತಪ್ಪಾಗಲಾರದು. ನಾವು ಹಳ್ಳಿಗಳಿಗೆ ಹೋದಂಥ ಸಂದರ್ಭದಲ್ಲಿ, ಜನರಿಗೆ ಏನು ಹೇಳಬೇಕೆಂದು ಗೊತ್ತಾಗುತ್ತಿರಲಿಲ್ಲ. ಯಾವ ಊರಿಗೆ ಹೋದರೂ ಸಹ ಊರಿನ ಮುಂದೆ ಇರತಕ್ಕ ಮರದ ಅಡಿಯಲ್ಲಿ ಕುಳಿತು ಜನರಿಗೆ ಶಾಸಕರು ಬರುತ್ತಾರೆ, ಮಂತ್ರಿಗಳು ಬರುತ್ತಾರೆ, ಅಧಿಕಾರಿಗಳು ಬರುತ್ತಾರೆ ಕೆಲಸವನ್ನು ಕೇಳಬೇಕು ಎಂದು ಸಾವಿರಾರು ಜನರು ಕಾದು ಕುಳಿತಿರತಕ್ಕದನ್ನು ನೋಡಿದ್ದೇವೆ. ಆಗ ನಾವು ಅನೇಕ ಜನರಿಗೆ ಸರ್ಕಾರದ ಕೆಲಸ ಕಾರ್ಯಕ್ರಮಗಳು ಪ್ರಾರಂಭವಾಗುತ್ತದೆ, ಇನ್ನೇನು ಕೆಲಸವನ್ನು ಕೊಡುತ್ತಾರೆಂದು ಎಷ್ಟೇ ಆಶ್ವಾಸನೆಯನ್ನು ಕೊಟ್ಟರೂ ಸಹ ಜನರು ನಂಬುವಂಥ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ ಅವರ ಪರಿಸ್ಥಿತಿ ಏನಾಗಿತ್ತು ಎಂದರೆ, ಅವರು ಸುತ್ತಮುತ್ತ ಇರತಕ್ಕ ಕಾಡಿಗೆ ಹೋಗಿ, ಸೊಪ್ಪನ್ನು ತಿಂದು ಜೀವನ ಮಾಡುತ್ತಿರತಕ್ಕ ಪರಿಸ್ಥಿತಿಯನ್ನು ನೋಡಿದೆ. ಆ ಸೊಪ್ಪಾದರೂ ಸಹ ಸಾಕಾಗದ ಪರಿಸ್ಥಿತಿ ಇತ್ತು. ನನ್ನ ಕ್ಷೇತ್ರ ಮತ್ತು ಪಕ್ಕದಲ್ಲಿ ಇರತಕ್ಕಂತಹ ಹಿರಿಯೂರು ಕ್ಷೇತ್ರದಲ್ಲಿ ಇವತ್ತು ನಾನು....

ಅಧ್ಯಕ್ಷರು : ಸೊಪ್ಪನ್ನು ಬೆಂಗಳೂರಿನಲ್ಲಿ ಕೆಲವು ಹೋಟೆಲಗಳ್ಲಿ ಕೂಡ ಮಾಡಿ ಕೊಡುತ್ತಾರೆ.

ಶ್ರೀ ಟಿ.ಬಿ ಜಯಚಂದ್ರ : ನಮ್ಮ ಕಾಡಿನಲ್ಲಿ ಸಿಗತಕ್ಕಂತಹ ಸೊಪ್ಪು ಇದೆ ಅದು ಬರ ಬಂದಂತಹ ಸಂದರ್ಭದಲ್ಲಿ ಮಾತ್ರ ಜನ ತಿನ್ನುವುದಕ್ಕೆ ಉಪಯೋಗ ಮಾಡತಕ್ಕಂಥದ್ದು. ಸೊಪ್ಪು ಸಿಗದೆ ಇರತಕ್ಕಂತಹ ಪರಿಸ್ಥಿತಿ ಕೂಡ ಬಂದಿತ್ತು. ಅಂದರೆ ನಿಮ್ಮ ಕಾರ್ಯಕ್ರಮ ನೀವು ಬಿಡುಗಡೆ ಮಾಡಿದ ಹಣ ಎಲ್ಲಿ ಹೋಯಿತು ಎನ್ನುವುದು ತಾವು ಯೋಚನೆ ಮಾಡಬೇಕಾಗುತ್ತದೆ. ಹೋಗಲಿ, ಈಗಾಗಲೇ ಸ್ವಲ್ಪ ಮಳೆ ಬಂದಿದೆ. ಈಗಲಾದರೂ ಪರಿಸ್ಥಿತಿ ಸುಧಾರಣೆ ಆಗಿದೆಯೇ? ಅದೇ ಪರಿಸ್ಥಿತಿ ಇದೆ. ಕೆಲವು ಹಳ್ಳಿಗಳ ಪ್ಯಾಕೆಟಗಳು ಏನಿದೆ ಸುಮಾರು ೩೦-೪೦ ಹಳ್ಳಿಗಳನ್ನು ನೋಡಿದ್ದೇನೆ ಅದೇ ಸಂದರ್ಭ ಇದೆ. ಇವತ್ತು ನಾನು ಕಂದಾಯ ಸಚಿವರು ಬಂದಂತಹ ಸಂದರ್ಭದಲ್ಲಿ ಆಗಿರಬಹುದು, ಇದೇ ಮಾತನ್ನು ನಾನು ಆವತ್ತೂ ಕೂಡ ಹೇಳಿದೆ. ಇವತ್ತೂ ಕೂಡ ಹೇಳಿದೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇದ್ದಂತಹ ಸಂದರ್ಭದಲ್ಲಿ ನಮ್ಮ ಅನೇಕ ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿಯೂ ಕೂಡ ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಕೇವಲ ೪-೫ ದಿವಸದ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ತಾಲ್ಲೂಕಿಗೆ ಬಂದು, ಸ್ಥಳವನ್ನು ಪರಿಶೀಲನೆ ಮಾಡುವಂತಹ ಸಂದರ್ಭದಲ್ಲಿ ನಾನು ಅನೇಕ ಮನವಿಯನ್ನು ಮಾಡಿದೆ. ಅವರು ಸ್ಥಳದಲ್ಲಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಟ್ಟು ಕೆಲಸವನ್ನು ಪ್ರಾರಂಭ ಆಗದೆ ಇರುವುದನ್ನು ನೋಡಿದರೆ, ಬಹುಶಃ ನಿನ್ನೆ ಮೊನ್ನೆಯಿಂದ ಚರ್ಚೆ ಮಾಡಿರತಕ್ಕಂಥದ್ದರಲ್ಲಿ

ಏನು ಹಿನ್ನಲೆ ನಮಗೆ ಕಂಡುಬರುತ್ತದೆ, ಎಂದರೆ, ಲಿಖಿತ ಮೂಲಕವಾಗಿ ನೀವು ಕೊಡದೆ ಇದ್ದರೆ, ಯಾವ ಅಧಿಕಾರಿಗಳೂ ಯಾವ ಕೆಲಸವನ್ನೂ ಮಾಡುವುದಿಲ್ಲ ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗಿದೆ. ಮೌಖಿಕವಾಗಿ ಎಲ್ಲರಿಗೂ ಈ ತರಹ ಆದೇಶ ಕೊಟ್ಟದ್ದೀರಿ. ದಯಮಾಡಿ ಅಧ್ಯಕ್ಷರೆ ಈಗಿರತಕ್ಕಂತಹ ಸಮಸ್ಯೆ ನೀವು ಹಿಂದೆ ಜನಗಳಿಗೆ ಕೂಲಿಯನ್ನು ಅಗ್ರಿಕಲ್ಚರ್ ಲೇಬರರ್ಸ್ ಇರಬಹುದು ಇವರಿಗೆ ಕೂಲಿಯನ್ನು ನೀಡಿ, ಜೀವನ ಮಾಡತಕ್ಕಂತಹ ಜೀವಿಗಳಿಗೆ ನೀವು ಯಾವುದೇ ರೀತಿಯಾಗಿ ಸಹಾಯ ಮಾಡಲಿಲ್ಲ. ಮತ್ತು ಪ್ರಯೋಜನ ಕೂಡ ಆಗಲಿಲ್ಲ. ಮಳೆಬಂದಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿದ್ದೀರಿ.

ಮಳೆ ಎಲ್ಲಿ ಬಂದಿದೆ ಇವತ್ತು ವಿಚಿತ್ರವಾಗಿ ಕೆಲವು ಕಡೆ ಮಳೆ ಬಂದಿದೆ. ಮಳೆ ಬಂದಿರುವುದಕ್ಕೆ ಆಧಾರ ಏನು ತಾವು ಹೋಬಳಿ ಹೆಡ್ ಕ್ವಾರ್ಟರ್ ಗಳಲ್ಲಿ ಅಥವಾ ತಾಲ್ಲೂಕು ಹೆಡ್ ಕ್ವಾರ್ಟರಗಳಲ್ಲಿ ಇರತಕ್ಕಂತಹ ರೈನ್ ಗೇಜಸ್, ಅಂಕಿ ಅಂಶ ಇಟ್ಟುಕೊಡು ಇವತ್ತು ನೀವು ನಮ್ಮಲ್ಲಿ ಇಷ್ಟು ಮಳೆ ಆಗಿದೆ, ಅಷ್ಟು ಮಳೆ ಆಗಿದೆ ಎಂದು ಹೇಳತಕ್ಕಂಥದ್ದು ಅದು ನಿಜಸ್ಥಿತಿ. ನೀವು ವಿವರಣೆ ಕೊಟ್ಟಿರತಕ್ಕಂತಹ ಅಂಕಿ ಅಂಶಗಳಿನ್ನೂ ಅಲ್ಲಿ ವಾಸ್ತವವಾಗಿ ಇರತಕ್ಕಂತಹ ವಿಷಯಕ್ಕೆ ನೋಡಿದರೆ ಬಹಳಷ್ಟು ಅಂತರ ಇದೆ. ಮಳೆ ಯಾವ-ರೀತಿ ಆಗಿದೆ ಎಂದರೆ ಅಧ್ಯಕ್ಷರು ಕುಳಿತಿರತಕ್ಕಂತಹ ಪೀಠದಲ್ಲಿ ಮಳೆ ಬಂದರೆ, ಜಾಲಪ್ಪನವರು ಕುಳಿತಿರತಕ್ಕಂತಹ ಸ್ಥಳದಲ್ಲಿ ಮಳೆ ಆಗದೆ ಇರತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಈ ಮಟ್ಟಕ್ಕೆ ಇಳಿಯಬೇಕಾದರೆ, ಅವರು ಅಲ್ಲಿ ಕೊಡತಕ್ಕಂತಹ ರೈನ್ ಗೇಜಸ್ ಮಾಹಿತಿಯನ್ನು ಆಧರಿಸಿ ಇವತ್ತು ನೀವು ಏನಾದರೂ ಮಳೆಗಾಲ ಒಳ್ಳೆಯದಾಗಿದೆ ಎಂದು ಭಾವಿಸಿದರೆ, ಬಹುಶಃ ಅದು ಕೆಟ್ಟ ಪರಿಸ್ಥಿತಿ ಎಂದು ನಾನು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಕೂಡ ಮಳೆ ಆಗಿದೆ, ಎಂತಹ ಮಟ್ಟದಲ್ಲಿ ಎಂದರೆ ಅದು ತುಂತುರು ಮಳೆಯಾಗಿ ಬೆಳೆ ಇಡುವುದಕ್ಕೆ ಸೂಕ್ತವಾಗಿ ಅಲ್ಪ ಸ್ವಲ್ಪ ಮಳೆಯಾಗಿದೆ. ಆದರೆ, ಒಬ್ಬರ ಹೊಲದಿಂದ ಇನ್ನೊಬ್ಬರ ಹೊಲಕ್ಕೆ ನೀರು ಹರಿಯುವಂತಹ ಮಳೆ ಬರಲಿಲ್ಲ, ಇದುವರೆಗೂ ಯಾವ ಕೆರೆ ಕಟ್ಟೆಗಳಿಗೂ ಕೂಡ ನೀರು ಬರಲಿಲ್ಲ. ಅಂದಾಗ ಅಂಡರ್ ಗ್ರೌಂಡ್ ವಾಟರ್ ಸಪ್ಲೈ ಬಗ್ಗೆ ಇವತ್ತು ನಾವು ರಿ ಛಾರ್ಜ ಆಗದೆ ಇರತಕ್ಕಂತಹ ಸಂದರ್ಭದಲ್ಲಿ ನಾವು ಬೋರಗಳು ಕೆಲಸ ಮಡುತ್ತವೆ ಎನ್ನುವುದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಇಷ್ಟೆಲ್ಲಾ ಮಳೆ ಬಂದು ಕಳೆದ ಒಂದು ತಿಂಗಳು ಮಳೆ ನೋಡಿದರೂ ಕೂಡ ಯಾವುದೇ ಕೊಳವೆ ಬಾವಿಗಳಲ್ಲಿ ಕೂಡ ಇವತ್ತು ನೀರು ಹೆಚ್ಚಾಗಿರುವ ಸಂದರ್ಭ ನಾವು ನೋಡಲೇ ಇಲ್ಲ. ಅಧ್ಯಕ್ಷರೆ, ಎಂಪ್ಲಾಯಮೆಂಟ್ ಆಫರ್ಮೇಷನ್ ಸ್ಕೀಮ್ ಇರಬಹುದು, ಜೆ.ಆರ್. ವೈ, ಇರಬಹುದು, ಅಡಿಷನಲ್ ಜೆ.ಆರ್. ವೈ. ಇರಬಹುದು, ಅಥವಾ ಮಿಲಿಯನ್ ವೆಲ್ಸಸ್ಕೀಮ್ ಇರಬಹುದು, ನೀವು ಇಲ್ಲಿಯವರೆಗೆ ಬಿಡುಗಡೆ ಮಾಡಿರತಕ್ಕಂತಹ ಹಣ ಅದು ಎಲ್ಲಿ ಇದೆ, ಎನ್ನುವ ಮಾಹಿತಿ ಕೂಡ ನಮಗೆ ಗೊತ್ತಾಗದೇ ಇರತಕ್ಕಂತಹ ಸಂದರ್ಭ ಇದೆ. ಕೆ.ಡಿ.ಪಿ.ಸಭೆಗಳನ್ನು ಕರೆಯಿರಿ ಎಂಬ ಮಾತುಗಳನ್ನು ಹೇಳಿದಿರಿ

ನೀವು ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಆ ಹಣ ಯಾರ ವಶದಲ್ಲಿದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಒಂದು ಮಾತು ಸೂಕ್ಷ್ಮವಾಗಿ ನಾನು ಹೇಳುವುದು ನಿನ್ನೆ

ನಡೆದಂತಹ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಗೂ ಕೂಡ ಈ ಅಂಕಿ ಅಂಶ ಕೊಡದೆ ಇರತಕ್ಕಂತಹ ಒಂದು ಅಂಶ ತಿಳಿದುಬಂದಿದೆ. ಇವತ್ತು ಜಿಲ್ಲಾಧಿಕಾರಿಗಳಿಗೆ ನೀವು ಇಲ್ಲಿಯವರೆಗೆ ೯೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ೭೩ ಲಕ್ಷ ರೂಪಾಯಿ ಇವತ್ತು ಅವರ ಅಕೌಂಟನಲ್ಲಿ ಇದೆ. ವಿವಿಧ ಬಾಬುಗಳಲ್ಲಿ ಖರ್ಚಾಗಿರುವಂತಹ ಹಣ ಎಷ್ಟು ಅಂದರೆ, ಸುಮಾರು ೨೨ ಲಕ್ಷ ಚಿಲ್ಲರೆ ಖರ್ಚಾಗಿದೆ ಎನ್ನುವ ಮಾತನ್ನು ಹೇಳಿದಿರಿ. ನಿಮಗೆ ಕೂಡ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎನ್ನುವುದಕ್ಕೆ ಒಂದು ನಿದರ್ಶನ ನನಗೆ ಜ್ಞಾಪಕ ಬರುತ್ತದೆ. ಒಂದೂವರೆ ಲಕ್ಷ ರೂಪಾಯಿಗಳನ್ನು ಇವತ್ತು ಫಾಡರ್ ಡೆವಲಪಮೆಂಟಗೋಸ್ಕರ, ದನಗಳಿಗೆ ಮೇವನ್ನು ಸಾಗಿಸುವುದಕೋಸ್ಕರ ಖರ್ಚು ಮಾಡಲಾಗಿದೆ ಎನ್ನುವ ಅಂಕಿ ಅಂಶ ಇಟ್ಟಿದ್ದೀರಿ. ನಾನು ನಮ್ಮ ಜಿಲ್ಲಾಧಿಕಾರಿಗಳಿಗೆ, ಸಚಿವರ ಸಮ್ಮುಖದಲ್ಲಿ ಇವತ್ತು ಮನವಿ ಮಾಡಿ ನಮ್ಮ ತಾಲ್ಲೂಕಿಗೆ ಫಾಡರ್ ಡೆವಲಪಮೆಂಟಗೋಸ್ಕರ ಹಣ ಬೇಕಾಗುತ್ತದೆ, ಮೇವು ತರುವುದಕ್ಕೆ ಹಣ ಬೇಕಾಗುತ್ತದೆ, ಅಂದಾಗ, ಅವರು ನನಗೆ ಹೇಳಿದರು ಇಲ್ಲಿಯವರೆಗೆ ಯಾರಿಗೂ ಬಿಡುಗಡೆ ಮಾಡಲಿಲ್ಲ, ನೀವು ಬಿಡುಗಡೆ ಮಾಡಬೇಕೆಂದು ನಿಮ್ಮಿಂದ ಮನವಿಗಳು ಬಂದರೆ, ನಾನು ಬಿಡುಗಡೆ ಮಾಡುತ್ತೇನೆ ಎಂದು ಈಗಾಗಲೇ ಒಂದೂವರೆ ಲಕ್ಷ ಬಿಡುಗಡೆ ಆಗಿದೆ ಎನ್ನತಕ್ಕಂಥ ಅಂಕಿ ಅಂಶ ನೋಡಿದರೆ ಅಧಿಕಾರಿಗಳು ನಿಮಗೆ ಇವತ್ತು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ನಿಮ್ಮಕಾಲದಲ್ಲಿ ತಪ್ಪು ಆಗುತ್ತಿದೆ, ಎನ್ನುವ ಮಾತಲ್ಲ, ಇದು ಹಿಂದೆಯೂ ಕೂಡ ಆಗಿರಬಹುದು ಈಗಲೂ ಆಗುತ್ತಾ ಇರುವುದು, ಮುಂದೆಯೂ ಆಗಬಹುದು,ಏಕೆಂದರೆ ನಿಮ್ಮಂತಹ ನುರಿತಂತಹ ಸಚಿವರು ಇರಬೇಕಾದರೆ, ಅಧಿಕಾರಿಗಳು ಈ ರೀತಿ ಅಂಕಿ ಅಂಶಗಳನ್ನು ತೋರಿಸಿಕೊಂಡು ಆಟ ಆಡಬಾರದು ಎನ್ನುವ ದೃಷ್ಟಿಯಿಂದ ನಾನು ಈ ಮಾತು ಹೇಳುತ್ತೇನೆ. ನೀವು ಹಣ ಬಿಡುಗಡೆ ಮಾಡಿದ್ದರಲ್ಲಿ ನನ್ನ ಆಕ್ಷೇಪ ಇಲ್ಲ. ಹಣ ವ್ಯವಸ್ಥಿತವಾಗಿ ಎಲ್ಲೂ ಖರ್ಚು ಮಾಡಿಲಿಲ್ಲ. ಖರ್ಚು ಮಾಡತಕ್ಕಂತಹ ಪ್ರಯತ್ನ ಎಲ್ಲೂ ನಡೆದಿಲ್ಲ. ಖರ್ಚು ಮಾಡುವುದೂ ಇಲ್ಲ. ಏಕೆಂದರೆ ನಾನು ಈಗಾಗಲೇ ಸೂಕ್ಷ್ಮವಾಗಿ ಹೇಳಿದೆ, ಇವತ್ತು ಚೀಫ್ ಸೆಕ್ರೆಟರಿ ಮತ್ತು ಜಿಲ್ಲಾಧಿಕಾರಿಗಳ ಮಧ್ಯದಲ್ಲಿ ಇರತಕ್ಕಂತಹ ವಿರಸ ಎಷ್ಟರ ಮಟ್ಟಿಗೆ ಹೋಗಿದೆ ಎಂದರೆ ಅವರು ಯಾವ ಸಂದರ್ಭದಲ್ಲಿಯೂ ಕೂಡ ಹಣ ಖರ್ಚು ಮಾಡುವುದಕ್ಕೆ ತಯಾರಿಲ್ಲ. ಯಾವಾಗ ರೈತ ಹೋಗಿ ನಮಗೆ ಕುಡಿಯುವುದಕ್ಕೆ ನೀರಿಲ್ಲ, ನಮಗೆ ಒಂದು ಬಾವಿ ಬೇಕು, ನಮಗೆ ತೊಂದರೆ ಇದೆ ಎಂದು ಹೇಳಿದರೆ, ಉದ್ದೇಶ ಪೂರ್ವಕವಾಗಿ ಅದು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿದೆ ಎಂದು ಅವರು ಹೇಳುತ್ತಾರೆ. ಅವರ ಹತ್ತಿರ ಹೋದರೆ ಇವರ ಹತ್ತಿರ ಕಳುಹಿಸಿ ಕೊಡುತ್ತಾರೆ. ಈ ರೀತಿಯಾಗಿ ಗೊಂದಲವಾದ ಪರಿಸ್ಥಿತಿ ಇರುವುದರಿಂದ ಇವತ್ತು ನಮ್ಮಲ್ಲಿ ಹಣ ಖರ್ಚಾಗತಕ್ಕಂತಹ ನಂಬಿಕೆ ನನಗಂತೂ ಇಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅಧ್ಯಕ್ಷರೆ, ಮಳೆ ಬರಿಸತಕ್ಕದ್ದು, ಬಿಡತಕ್ಕದು ನಮ್ಮ ಕೈಯಲ್ಲಿ ಇಲ್ಲ. ಇವತ್ತಿನ ಸಧ್ಯದ ಪರಿಸ್ಥಿತಿಯಲ್ಲಿ ಬೆಳೆ ಸುಮಾರಾಗಿ ಇದೆ. ಆದರೆ, ಬೆಳೆಗಳು ಇಡುವಂತಹ ಸಂದರ್ಭದಲ್ಲಾದರೂ ಕೂಡ ನೀವು ಎಷ್ಟರ ಮಟ್ಟಿಗೆ ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಯಿತು? ನಮ್ಮಲ್ಲಿ ಕಡಲೆ ಕಾಯಿ ಹಾಕುವಂತಹ ಸಂದರ್ಭ, ಅದನ್ನು ಬಿಟ್ಟು ಈ ಸಾರಿ ಲೇಟ್ ರೈನ ಆಗಿದ್ದ ಕಾರಣ ಎಲ್ಲರೂ ರಾಗಿ ಹಾಕುವುದಕ್ಕೆ ಪ್ರಯತ್ನ ಪಟ್ಟರು. ಆದರೆ ಯಾವ ರೈತನಿಗೂ ಕೂಡ ಸಕಾಲಕ್ಕೆ ಇವತ್ತು ಬೀಜಗಳು ಸಿಗಲಿಲ್ಲ. ಇದರ ಜೊತೆಗೆ

ಅಗ್ರಿಕಲ್ಚರ್ ಕಿಟ್ಸ್ ಕೊಡುತ್ತೇವೆಂದು ಏನು ಹೇಳಿದಿರಿ ಅದೂ ಕೂಡ ಸಕಾಲಕ್ಕೆ ಅವರಿಗೆ ಸಿಗಲಿಲ್ಲ. ಅಂದಾಗ ಇವತ್ತು ಬೀಜಕೋಸ್ಕರ ಹೋರಾಡತಕ್ಕಂತಹ ಪರಿಸ್ಥಿತಿ ಬಂದು ಹೋಯಿತು. ಎಲ್ಲಿಯವರೆಗೆ ಹೋಯಿತು ಎಂದರೆ ನಮ್ಮ ಅಗ್ರಿಕಲ್ಚರ್ ಡಿಪಾರ್ಟಮೆಂಟನವರು ನಮಗೆ ಕೊಡಬೇಕಾಗಿರತಕ್ಕಂತಹ ಬೀಜವನ್ನು ಅಂಗಡಿಗಳ ಮುಖೇನ ಹೆಚ್ಚು ಬೆಲೆಗೆ ಮಾಡರತಕ್ಕಂತಹ ಪರಿಸ್ಥಿತಿ ಬಂದಿತು. ಇದನ್ನು ಈ ಸರ್ಕಾರದ ಗಮನಕ್ಕೆ ಅನೇಕ ಸಾರಿ ತಂದಿದ್ದೇನೆ. ಇದರ ಬಗ್ಗೆ ಯಾವುದೇ ತರಹದ ಕಾರ್ಯಕ್ರಮದ ಹಾಕಿಲ್ಲ. ಜಿಲ್ಲೆ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಏನಾಗುತ್ತಿದೆ ಎಂದರೆ ನಮ್ಮ ಪರಿಸ್ಥಿತಿ, ನಾವು ಕೊಡತಕ್ಕಂತಹ ಹಣ ಬಿಡುಗಡೆ ಆಗುತ್ತಿದೆಯೋ, ಸಮರ್ಪಕವಾಗಿ ಖರ್ಚಾಗುತ್ತಿದೆಯೋ, ವಿನಿಯೋಗ ಆಗುತ್ತಿದೆಯೇ ಎನ್ನುವಂತಹ ಉಸ್ತುವಾರಿ ಮಾಡತಕ್ಕಂತಹ ಜವಾಬ್ದಾರಿ ನಿಮ್ಮಲ್ಲಿ ಇಲ್ಲದೆ ಇರುವುದೇ ಈ ಅಭಾವಕ್ಕೆ ಕಾರಣವಾಗಿರುವುದು. ಈಗ ಸಧ್ಯಕ್ಕೆ ಕೆ.ಡಿ.ಪಿ. ಸಭೆಗಳನ್ನು ಮಾಡಿದಿರಿ, ಅಂತಿಮವಾಗಿ ನಾವು ಸಭೆ ಕರೆಯುವುದಕ್ಕೆ ಆಗುತ್ತದೆ, ಬಿಡುತ್ತದೆ ಎನ್ನುವುದು ಕಷ್ಟ. ನಮ್ಮ ಕ್ಷೇತ್ರಗಳಲ್ಲಿ ಇವತ್ತು ಹಣ ಬಿಡುಗಡೆ ಆಗುತ್ತಾ ಇರತಕ್ಕಂಥದ್ದು, ಮತ್ತು ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳು, ಆಗುತ್ತಾ ಇರತಕ್ಕಂಥದ್ದು, ನಮಗೆ ಮಾಹಿತಿ ಗೊತ್ತಾಗುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಇವತ್ತು ಕಷ್ಟದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ.

It is already cautiioning us. ನಾವು ಮುಂದೆ ಭೀಕರವಾಗ ಬರಗಾಲಕ್ಕೆ ತುತ್ತಾಗಬೇಕಾಗುತ್ತದೆ. ಈ ಕಾಲದಲ್ಲಿ ನಾವು ಅನುಭವಿಸುತ್ತಿರುವುದಕ್ಕಿಂತ ೧೦ ಪಟ್ಟು ಜಾಸ್ತಿ ಕಷ್ಟವನ್ನು ಅನುಭವಿಸತಕ್ಕಂತಹ ದಿನಗಳು ಬರುತ್ತವೆ. ಅದಕೋಸ್ಕರ ನೀವು ಮನ್ಸೂಚನೆಯಾಗಿ ಏನು ಕಾರ್ಯಕ್ರಮಗಳನ್ನು ಮಾಡಬೇಕೆಂಬುದಕ್ಕೆ ನನ್ನ ಸಲಹೆ, ನಮಗೆ ಪ್ರತಿಯೊಂದು ಗ್ರಾಮದಲ್ಲೂ ಕೂಡ, ಒಂದು ಹಳ್ಳಿಯಲ್ಲಿ ಒಂದು ಕೆರೆ ಇರತಕ್ಕಂಥದ್ದು, ಕೆರೆ ಮುಂದೆ ಒಂದು ಗೋ ಕಟ್ಟೆ ಇರತಕ್ಕಂಥದ್ದು. ನಮ್ಮ ಭಾದಗಲ್ಲಂತೂ ವಿಶೇಷವಾಗಿ ಇವೆ. ನಾಳೆ ಇ.ಎ. ಎಸ್. ಪ್ರೊಗ್ರಾಂನ ಪ್ರಕಾರ ಪ್ರತಿ ಊರಿನಲ್ಲೂ ಕೂಡ ಎಲ್ಲಾ ಗೋಕಟ್ಟೆಗಳಲ್ಲಿ ಊರಿನ ಮುಂದೆ ನೀರು ನಿಲ್ಲತಕ್ಕಂತಹ ಕೆರೆಗಳಲ್ಲಿ ಅದರ ಹೂಳನ್ನು ಎತ್ತಕ್ಕಂತಹ ಕೆಲಸವನ್ನು ಮಾಡುವುದರ ಮುಖೇನ, ನೀರು ನಿಲ್ಲಿಸುವುದಕ್ಕೆ ಅವಕಾಶ ಮಾಡಬಹುದು. ಅಲ್ಲ ಉದ್ಯೋಗ ಇಲ್ಲದೆ ಇರತಕ್ಕಂತಹ ಜನರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಕೊಡತಕ್ಕಂತಹ ಹಣ ಏನಿದೆ ಊರಿನ ಮುಂದಕ್ಕೆ ಆಗತಕ್ಕಂತಹ ಕೆಲಸಗಳಿಗೆ ಆದರೆ ಅದರ ದುರುಪಯೋಗ ಆಗತಕ್ಕಂತಹ ಅವಕಾಶ ಇರುವುದಿಲ್ಲ, ಅದರಲ್ಲಿ ಮೋಸ ಮಾಡುವುದಕ್ಕಾಗುವುದಿಲ್ಲ. ಕಂಟ್ರ್ಯಾಕ್ಟರಗಳು ದುಡ್ಡು ಹೊಡೆಯುವುದಕ್ಕೆ ಸಾಧ್ಯವಿಲ್ಲ, ಅಧಿಕಾರಿಗಳು ಹೊಡೆಯುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂತಹ ಪರಿಸ್ಥಿತಿ ಇರುವುದರಿಂದ ಈ ರೀತಿಯಲ್ಲಿಯೇ ಕೆಲಸಮಾಡಬೇಕು. ಇಡೀ ರಾಜ್ಯದಲ್ಲಿ ಎಲ್ಲಾ ಭಾಗದಲ್ಲಿ ವಿಶೇಷವಾಗಿ ಇದೇ ಪರಿಸ್ಥಿತಿ ಇದೆ ಎಂದು ನಾನು ಭಾವಿಸಿದ್ದೇನೆ. ಅದಕ್ಕೋಸ್ಕರ ಎಲ್ಲಾ ಕಡೆ ಕೂಡ ಗೋ-ಕಟ್ಟೆಗಳನ್ನು ಪ್ರಾರಂಭ ಮಾಡತ್ಕಕಂಥ ಕೆಲಸವಾಗಬೇಕು. ಹಾಗೆಯೇ ಹೂಳೆತ್ತುವ ಕೆಲಸವನ್ನು ಮೊದಲು ಮಾಡಬೇಕೆಂದು ಹೇಳುತ್ತೇನೆ. ಅದು ಮಾಡುವುದರ ಮುಖೇನ ಕೊಳವೆ ಬಾವಿಗಳಿಗೆ ಸ್ವಲ್ಪ ಮಟ್ಟಿಗೆ ನೀರು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಬಹಳ ಮುಖ್ಯವಾಗಿ, ನಮ್ಮ ಕ್ಷೇತ್ರ ಇರತಕ್ಕಂತಹ ಒಂದು ಬರಗಾಲ ಪ್ರದೇಶದಲ್ಲಿ. ಅದು ಸೆಂಟ್ರಲಿ ಸ್ಪಾನ್ಸರ್ಡ್ ಡ್ರಾಟ್ ಹಿಟ್

ಏರಿಯಾದಲ್ಲಿ ಇದೆ. ನಮ್ಮಲ್ಲಿ ಕುಡಿಯುವ ನೀರು ಕೆಲವು ಹಳ್ಳಿಗಳಲ್ಲಿ ಇದೆ. ಆದರೆ ಆ ನೀರು ಇದ್ದರೂ ಸಹ ಅದು ಕುಡಿಯುವುದಕ್ಕೆ ಯೋಗ್ಯವಾಗಿಲ್ಲದೆ ಇರುವಂತಹ ಪರಿಸ್ಥಿತಿ ಇದೆ. ಅಂದರೆ ಅದು ಉಪ್ಪು ನೀರು ಅಥವಾ ಮಿನರಲ್ ವಾಟರ್ ಆಗಿರುವಂತಾದ್ದು, ಇದೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಶಾಶ್ವತವಾಗಿ ಕುಡಿಯುವ ನೀರಿನ ಏನು ವ್ಯವಸ್ಥೆ ಮಾಡಬೇಕು ಎನ್ನುವುದರ ಬಗ್ಗೆ ನಾವು ಅನೇಕ ಸಂದರ್ಭದಲ್ಲಿ ವಿಚಾರವನ್ನು ಮಾಡಿದರೂ ಕೂಡ ಅದು ಸರ್ಕಾರದ ಗಮನಕ್ಕೆ ಬರಲಿಲ್ಲ. ಇವತ್ತು ಅದರ ಬಗ್ಗೆ ಕಾರ್ಯಕ್ರಮಗಳನ್ನು ಕೂಡ ಹಾಕುವುದಕ್ಕೆ ಹೋಗಲಿಲ್ಲ.

(ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ತಮಗೆ ನಾನು ಹೇಳುತ್ತೇನೆ, ಯಾವ ಊರಿನಲ್ಲಿ ಕುಡಿಯುವುದಕ್ಕೆ ನೀರು ಯೋಗ್ಯವಾಗಿಲ್ಲ ಎಂದು ತಾವು ಭಾವನೆ ಮಾಡುತ್ತೀರಿ, ಅದರ ಮಾಹಿತಿ ನಿಮ್ಮಲ್ಲಿ ಇದೆ. ಅದರ ಬಗ್ಗೆ ಅಂಕಿಅಂಶಗಳು ಸಿಗುತ್ತದೆ. ಅಂತಹ ಊರಿಗೆ ಸ್ವಲ್ಪ ದೂರದಿಂದ ಪೈಪ್ ಲೈನ್ ಮುಖಾಂತರ ನೀರು ಕೊಟ್ಟರೂ ಪರವಾಗಿಲ್ಲ, ಅಥವಾ ದೂರದಲ್ಲೇ ನೀರು ಕೊಟ್ಟರೂ ಪರವಾಗಿಲ್ಲ. ಇವತ್ತು ಕೆರೆಗಳು ಇದ್ದು ಅಲ್ಲಿ ಎಲ್ಲಿ ನೀರು ಬರುತ್ತದೆ, ಅದು ಒಂದು ಪರ್ಲಾಂಗ್, ಒಂದು ಕಿಲೋಮೀಟರ್ ದೂರದಲ್ಲಿ ಆದರೂ ಕೂಡ ಕೊಳವೆ ಬಾವಿಗಳನ್ನು ತೆಗೆದು ನೀರನ್ನು ಒದಗಿಸಬೇಕು. ಎಲ್ಲಿ ಪ್ರಾಬ್ಲಮೇಟಿಕ್ ವಿಲೇಜ್ ಇವೆ, ಎಲ್ಲಿ ಕೆಟ್ಟ ನೀರು ಬರತಕ್ಕಂಥ ಪ್ರದೇಶ ಇದೆ ಅಂತಹ ಕಡೆ ಹೋಗಿ ನೀರಿನ ವ್ಯವಸ್ಥೆಯನ್ನು ಒದಗಿಸುವ ಕೆಲಸವನ್ನು ನೀವು ಮಾಡಬೇಕು. ಇವತ್ತಿನವರೆಗೂ ನೀವು ಮಾಡಿರತಕ್ಕಂಥ ಸಾಧನೆ ಎಂದರೆ, ಅಲ್ಲಿ ಇಲ್ಲಿ ಕೆಟ್ಟು ಹೋಗಿರತಕ್ಕಂಥ ಕೊಳವೆ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದೀರಿ. ಅದಕ್ಕೆ ಸಾಕಷ್ಟು ಹಣ ಬೇಕಾಗಿತ್ತು. ಆ ಹಣದಿಂದ ಇವತ್ತು ಸ್ವಲ್ಪಮಟ್ಟಿಗೆ ಕೆಲಸವಾಗುತ್ತದೆ. ಆದರೆ, ಹೊಸದಾಗಿ ಕೊಳವೆ ಬಾವಿಗಳನ್ನು ಕೊಡತಕ್ಕಂಥ, ಹೊಸದಾಗಿ ಪೈಪಲೈನ್ ಹಾಕತಕ್ಕಂತಹ ವ್ಯವಸ್ಥೆ, ಇಲ್ಲಿಯವರೆಗೆ ಕೂಡ ಆಗಲಿಲ್ಲ. ಆ ಕೆಲಸ ಆಗಬೇಕಾಗಿದೆ. ತಮಕೂರು ಜಿಲ್ಲೆ ಒಂದಕ್ಕೆ ಸುಮಾರು ೫೭೬ ಮಿನಿ ವಾಟರ್ ಸಪ್ಲೈ ಆನ್ ಗೋಯಿಂಗ ಪ್ರಾಜೆಕ್ಟ ನಮ್ಮ ಹತ್ತಿರ ಇದೆ. ಇವತ್ತು ಜಿಲ್ಲಾ ಪಂಚಾಯತ್ ಅನುದಾನದಲ್ಲಿ ನಾವು ಎರಡು ಕೋಟಿ ೧೨ ಲಕ್ಷ ರೂಪಾಯಿಗಳನ್ನು ಈ ವರ್ಷದ ಕಾರ್ಯಕ್ರಮದಲ್ಲಿ ಇಟ್ಟುಕೊಂಡಿದ್ದೇವೆ. ನೀವು ಎರಡು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದರೂ ಸಹ, ಕೇವಲ ನೂರರಿಂದ ೧೫೦ ವಾಟರ ಸಪ್ಲೈ ಸ್ಕೀಮ್ ಅನ್ನು ಕಂಪ್ಲೀಟ್ ಮಾಡುವುದಕ್ಕೆ ಆಗುವುದಿಲ್ಲ. ಈ ಆನ್ ಗೋಯಿಂಗ್ ವರ್ಕ್ಸ ಏನಿದೆ ಕಮಿಟೆಡ್ ವರ್ಕ್ಸ ಕ್ಲಿಯರ್ಡ್ ಪ್ರಾಜೆಕಟ್ಸ್ ಏನಿದೆ ಅದು ಕಂಪ್ಲೀಟ್ ಆಗಬೇಕಾದರೆ ಕನಿಷ್ಟ ನಾಲ್ಕರಿಂದ ಐದು ವರ್ಷ ಬೇಕಾಗುತ್ತದೆ.

ಇನ್ನು ಮುಂದೆ ಕುಡಿಯುವ ನೀರಿನ ದೊಡ್ಡ ತೊಂದರೆಯನ್ನು ಅನುಭವಿಸುವಂತಹ ಸಂದರ್ಭ ಬರುವುದರಿಂದ, ಈಗಲೇ ನೀವು ಮುನ್ನೆಚ್ಚರಿಕೆ ಕಾರ್ಯಕ್ರಮವಾಗಿ ಮಿನಿ ವಾಟರ್ ಸಪ್ಲೈ ಅನ್ನು ಕಮಿಷನ್ ಮಾಡುವುದಕ್ಕೆ, ಕಂಪ್ಲೀಟ್ ಮಾಡತಕ್ಕಂತ ಪ್ರಯತ್ನ ಮಾಡಬೇಕು. ನೀವು ಕೇಂದ್ರ ಸರ್ಕಾರಕ್ಕೆ ಕೊಟ್ಟಂತಹ ಮಾಹಿತಿ ಪ್ರಕಾರ, ಎಲ್ಲಾ ವಾಟರ್ ಸಪ್ಲೈ ಅನ್ನು ಕಂಪ್ಲೀಟ್ ಮಾಡುತ್ತೇವೆ ಎನ್ನುವಂತಹ ಮಾತನ್ನು ಕೂಡ ತಾವು ಹೇಳಿದ್ದೀರಿ ಅದೇ ರೀತಿ ಎಆರ್ ಡಬ್ಲ್ಯೂಎಸ್ ಇರಬಹುದು, ಎನಆರ್ ಡಬ್ಲ್ಯೂಎಸ್ ಇರಬಹುದು, ಇನಕಂಪ್ಲೀಟ್ ವರ್ಕ್ಸ ಅನ್ನು ಮುಗಿಸತಕ್ಕಂಥ ಕೆಲಸಕ್ಕೆ ಹೆಚ್ಚಿನ ಆದ್ಯತೆ

ಕೊಡುವುದರ ಮುಖೇನ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸುವುದಕ್ಕೆ ಆಗುತ್ತದೆ ಎಂದು ಭಾವನೆ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಪ್ರಾಮುಖ್ಯವಾದಂತಹ ಪ್ರಶ್ನೆ ಏನೆಂದರೆ, ಯಾವುದೇ ಒಂದು ಊರಿನಲ್ಲಿ ನೋಡಿದರೆ ಕೊಳವೆ ಬಾವಿಗಳನ್ನು ಕೊರೆದಿರುವುದು ಉಂಟು. ನನ್ನ ಒಂದು ಕ್ಷೇತ್ರಕ್ಕೆ ಸೀಮಿತವಾಗಿ ಹೇಳುವುದಾದರೆ ೨೦ ಕೊಳವೆ ಬಾವಿಗಳು ಫೇಲ್ ಆಗಿವೆ. ಕೇವಲ ಒಂಭತ್ತು ಮಾತ್ರ ಸಫಲವಾಗಿವೆ. ಇದು ಏತಕ್ಕೋಸ್ಕರ ಎಂದರೆ, ಇದು ಯಾರಿಂದ ಈ ರೀತಿ ಸೃಷ್ಟಿ ಆಗುತ್ತದೆ ಎಂದರೆ ಕೊಳವೆ ಬಾವಿಗಳನ್ನು ನಾವು ೪೫೦ರಿಂದ ೫೦೦ ಅಡಿಗಳವರೆಗೂ ಕೊರೆಸುತ್ತಿದ್ದೇವೆ. ಇದಕ್ಕೆ ಸರ್ಕಾರಿ ರಿಗಗಳು ಸಾಲದು ಎಂದು, ಖಾಸಗಿಯವರಿಂದ ರಿಗಗಳನ್ನು ಬಾಡಿಗೆ ಮಾಡಿ ಕೊರೆಸತಕ್ಕಂಥ ಸಂದರ್ಭ ಇದೆ. ಆದರೂ ಸಹ ೪೫೦ ಅಡಿಗಳವರೆಗೆ ಕೊರೆಯಿಸಿ ಅಲ್ಲಿ ನೀರು ಬಂದ ತಕ್ಷಣ, ಪಕ್ಕದ ಜಮೀನಿನವರು ತನ್ನ ಜಮೀನಿನಲ್ಲಿ ಒಂದು ಕೊಳವೆ ಬಾವಿಯನ್ನು ಕೊರೆಸಿದ ಎಂದರೆ, ಮೊದಲು ಕೊರೆಸಿದವರಿಗೆ ಎಂಟು ದಿವಸದಲ್ಲಿ ಬತ್ತಿ ಹೋಗುತ್ತದೆ. ಅಂತಹ ಪರಿಸ್ಥಿತಿ ಇದೆ. ಇದಕ್ಕೆ ಏನಾದರೂ ಒಂದು ಕಾನೂನು ತರುವುದಕ್ಕೆ ಸಾಧ್ಯವಿದೆಯೇ ಎನ್ನುವುದರ ಬಗ್ಗೆ ನಾವು ಅನೇಕ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದರೆ ಅದರ ಬಗ್ಗೆ ಯಾವುದೇ ಕಾರ್ಯಕ್ರಮ ಆಗಿಲ್ಲ. ಆದುದರಿಂದ ದಯಮಾಡಿ ಊರಿನ ಪಕ್ಕದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವಂತಹ ಜಾಗದ ಪಕ್ಕದಲ್ಲಿ ಮತ್ತೊಂದು ಕೊಳವೆ ಬಾವಿಗಳನ್ನು ಹಾಕಬೇಕಾದರೆ ಇವೆರಡರ ಮಧ್ಯೆ ಇಷ್ಟು ಅಂತಹ ಕಾಪಾಡಬೇಕು ಎಂದು ಒಂದು ವಿಶೇಷವಾದ ಕಾನೂನನ್ನು ತಂದು, ಆ ಶೋಷಣೆಯನ್ನು ತಪ್ಪಿಸತಕ್ಕಂಥ ಕೆಲಸವನ್ನು ಮಾಡದೇಹೋದರೆ, ಇನ್ನು ನೀವು ಎಷ್ಟು ಸಾವಿರ ಕೊಳವೆ ಬಾವಿಗಳನ್ನು ಕೊಟ್ಟರೂ ಸಹ ನಾವು ನೀರಿಗೋಸ್ಕರ ಕೇಳುತ್ತಿರತಕ್ಕಂಥಾದ್ದು ನೀವು ದುಡ್ಡು ಕೊಡುವುದು ಮುಂದುವರೆದುಕೊಂಡೇ ಹೋಗುತ್ತದೆ. ಇದರ ಬಗ್ಗೆ ವಿಶೇಷವಾದಂತಹ ಗಮನವನ್ನು ಹರಿಸಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನೊಂದು ಪ್ರಾಮುಖ್ಯವಾದ ವಿಚಾರ, ಎಂಪ್ಲಾಯೆಮೆಂಟ್ ಅಫರಮೇಷನ್ ಸ್ಕೀಮನಲ್ಲಿ ಈಗಾಗಲೇ ಅನೇಕ ಸದಸ್ಯ ಮಿತ್ರರು ಮಾತನಾಡಿದ್ದಾರೆ. ಇವತ್ತು ಮೊದಲ ಹಂತದ ಹಣವನ್ನು ಖರ್ಚು ಮಾಡಿ ಎರಡನೆಯ ಹಂತಕ್ಕೆ ಬೇಡಿಕೆಯನ್ನು ಇಟ್ಟಿದ್ದೇವೆ ಎನ್ನುವಂತಹ ಮಾತನ್ನು ಕೆಲವರು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಏನಾಗಿದೆಯೆಂದರೆ, ಮೊದಲನೆ ಹಂತದ ಹಣ ಇದುವರೆಗೂ ಬಿಡುಗಡೆಯಾಗಿಲ್ಲ. ಮೊದಲನೆ ಹಂತಕ್ಕೆ ಇನ್ನು ಆಕ್ಷನ್ ಪ್ಲಾನ್ ಆಗಲಿಲ್ಲ.

ನಿನ್ನೆ ದಿವಸ ಒಂದು ಆಕ್ಷನ್ ಪ್ಲಾನನ ಒಂದು ಪಟ್ಟಿ ಸಾಯಂಕಾಲ ಬಂತು. ಅದರಲ್ಲಿ ೧೦ ಸಾವಿರ, ೧೫ ಸಾವಿರ, ೨೦ ಸಾವಿರ ಎಂದು ಕೆಲವೇ ಪಟ್ಟಿ ಮಾಡಿ ಕಳುಹಿಸಿದ್ದಾರೆ. ಇದನ್ನೆಲ್ಲಾ ನೋಡಿದರೂ ಕೂಡ ಕೇವಲ ೩೦-೪೦ ಲಕ್ಷ ರೂಪಾಯಿಗೆ ಒಂದು ಪ್ರೋಗ್ರಾಂ ಮಾಡಿ, ನೀವು ಇಷ್ಯೂ ಮಾಡುವುದಾದರೆ ನನಗೆ ಅನಿಸುತ್ತದೆ ಇದನ್ನು ಯಾವತ್ತು ಖರ್ಚು ಮಾಡತಕ್ಕಂಥಾದ್ದು. ನಿಮ್ಮಲ್ಲಿ ಹೇರಳವಾಗಿ ಹಣ ಇದೆ. ಇವತ್ತು ಕೇಂದ್ರ ಸರ್ಕಾರದವರು ಹಣ ಕೊಡುವುದಕ್ಕೆ ತಯಾರಾಗಿದ್ದಾರೆ. ಕೇಂದ್ರ ಸರ್ಕಾರದಿಂದ ನೇರವಾಗಿ ಬರತಕ್ಕಂಥ ಹಣ, ಅದು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವಂಥ ಹಣ, ಆ ಹಣವನ್ನು ಖರ್ಚು ಮಾಡುವುದಕ್ಕೆ ನಿಮ್ಮ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಗಳು ಯಾವುದೇ ತರಹದ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಇದ್ದರೆ, ನೀವು ಯಾವಾಗ ಕೆಲಸವನ್ನು ಪ್ರಾರಂಭ ಮಾಡುವುದು. ಕೆಲಸ ಯಾವಾಗ ಕೊಡುವುದು. ಜನರ ಕಷ್ಟವನ್ನು

ಯಾವರೀತಿ ನೀಗಿಸುತ್ತೀರೋ ನನಗಂತೂ ಅರ್ಥವಾಗುತ್ತಿಲ್ಲ. ಸ್ವಾಮಿ ತಾವು ದಯಮಾಡಿ ತಿಳಿಯಬೇಕು, ಮಳೆಯಾಗಿ ಇವತ್ತು ಬೆಳೆಯಾಗಿದ್ದರೂ ಸಹ ಉದ್ಯೋಗ ಹುಡುಕುತ್ತಿರುವಂತಹ ಪರಿಸ್ಥಿತಿ ಇದೆ. ಅದು ಯಾವುದೇ ರೀತಿಯಲ್ಲಿ ಕಡಿಮೆಯಾಗಿಲ್ಲ. ನಿಮ್ಮ ಅಂಕಿ ಅಂಶಗಳ ಪ್ರಕಾರ ೪೦ ಲಕ್ಷ ಜನರಲ್ಲಿ ೨೦ ಲಕ್ಷ ಜನರಿಗಾದರೂ ನೀವು ಉದ್ಯೋಗವನ್ನು ಕೊಡಿಸುವಂತಹ ಕೆಲಸವನ್ನು ಮಾಡಲೇ ಬೇಕಾಗಿದೆ. ದಯಮಾಡಿ ನಿಮ್ಮ ಅಧಿಕಾರಿಗಳಿಗೆ ನೀವು ನಿರ್ದೇಶನವನ್ನು ಲಿಖಿತ ಮೂಲಕ ಕೊಡುತ್ತೀರೋ, ಮೌಖಿಖವಾಗಿ ಕೊಡುತ್ತೀರೋ, ಒಟ್ಟು ಕೆಲಸವನ್ನು ಪ್ರಾರಂಭ ಮಾಡಿಸಿ. ಜೆಆರ್ ವೈನಲ್ಲಿ ಪಂಚಾಯತಗೆ ಬಿಡುಗಡೆಯಾದಂತಹ ಹಣ, ಇದಕ್ಕೂ ಕೂಡ ಆಕ್ಷನ್ ಪ್ಲಾನ್ ಅಪ್ರೂವ್ ಆಗಲಿಲ್ಲ. ಅದೇ ರೀತಿಯಾಗಿ ತಾಲ್ಲೂಕು ಪಂಚಾಯಿತಿಗೆ ಬಿಡುಗಡೆಯಾಗಿರತಕ್ಕಂಥ ಹಣವನ್ನು, ಖರ್ಚು ಮಾಡುವಂತಹ ಅವಕಾಶ ಕೂಡ ಅವರಿಗೆ ಇಲ್ಲದೆ ಇರುವಂತಹ ಸಂದರ್ಭದಲ್ಲಿ ಜಿಲ್ಲಾಪಂಚಾಯಿತಿಯವರು ಇದುವರೆಗೂ ಒಂದು ಆಕ್ಷನ್ ಪ್ಲಾನ್ ಅಪ್ರೂವ್ ಮಾಡದೇ ಹೋದರೆ, ಯಾವ ರೀತಿ ಖರ್ಚು ಮಾಡಬೇಕು. ಸ್ಥಳೀಯವಾಗಿ ಇರತಕ್ಕಂಥ ಅಧಿಕಾರಿಗಳು ಯಾವರೀತಿಯಾಗಿ ಕೆಲಸ ಮಾಡಬೇಕು ಎನ್ನುವಂಥಾದ್ದು ನಮಗೆ ಅರ್ಥವಾಗುತ್ತಾ ಇಲ್ಲ. ಮತ್ತೊಂದು ಪ್ರಾಮುಖ್ಯವಾದಂತಹ ವಿಚಾರ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಕೂಲಿಯಿಂದ ಜೀವನ ಮಾಡುತ್ತಿರುವವರು ಇದ್ದಾರೆ. ಅಲ್ಲಿ ಇಲ್ಲಿ ಸ್ವಲ್ಪ ಕೂಲಿ ಸಿಗತಕ್ಕಂಥ ಸಂದರ್ಭದಲ್ಲಿ, ರೇಷನ್ ಕಾರ್ಡಿಗೆ ಹೋಗಿ ಪಡಿತರ ವ್ಯವಸ್ಥೆಯಲ್ಲಿ ಅಕ್ಕಿಯನ್ನು ತರಬೇಕು ಎಂದರೆ ಅವರಿಗೆ ರೇಷನ್ ಕಾರ್ಡ್ ಇಲ್ಲ. ಒಂದು ಹೊಸ ಸಮಸ್ಯೆ ಹುಟ್ಟು ಹಾಕಿದಂತೆ ಆಗಿದೆ. ಸರ್ಕಾರ ಏನು ಆಗಿತ್ತು. ಹಿಂದೆ ಹಳೇ ಕಾರ್ಡುಗಳು ಇದ್ದವು. ಹಳೇ ಕಾರ್ಡುಗಳು ಕೊಟ್ಟದ್ದೇ ಕಡಿಮೆ. ಹಳೆ ಕಾರ್ಡು ತೆಗೆದು ಹೊಸ ಕಾರ್ಡ ಕೊಡುತ್ತೇವೆ ಎಂದು ಹೇಳಿ ಹಳಬರಿಗೆ ಕೊಡಲಿಲ್ಲ. ಇನ್ನು ಹೊಸಬರಿಗೆ ಕೆಲವು ಜನರನ್ನು ಸೃಷ್ಟಿ ಮಾಡಿ ಕೊಟ್ಟಿದ್ದಾರೆ. ಈಗ ಹಳೆಯ ಕಾರ್ಡು ಇರತಕ್ಕಂಥವರಿಗೆ ಆಹಾರ ಕೊಡುವುದಕ್ಕೆ ಆಗುವುದಿಲ್ಲ. ಹೊಸ ಕಾರ್ಡು ಇದುವವರಿಗೆ ಕೂಡ ಆಹಾರ ಕೊಡುವುದಕ್ಕೆ ಆಗುವುದಿಲ್ಲ. ಇದರಿಂದ ಯಾವ ಊರಿಗೆ ಹೋದರೂ ಸಂಘರ್ಷ, ಗಲಾಟೆಗಳಾಗಿ ಪಡಿತರ ವ್ಯವಸ್ಥೆಯಲ್ಲಿ ಇವತ್ತು ಎಫಪಿಡಿ ಇಟ್ಟುಕೊಂಡಿರತಕ್ಕಂಥ ಸೊಸೈಟಿ ಇರಬಹುದು, ಅಥವಾ ಒಬ್ಬ ಖಾಸಗಿ ವ್ಯಕ್ತಿ ಇರಬಹುದು, ಅವನು ನಾನು ಎಲ್ಲಾ ಮಾರಿದ್ದೇವೆ ಎಂದು ಹೇಳಿ, ಹಣ ಮಾಡಿಕೊಳ್ಳುವಂತಹ ಪರಿಸ್ಥಿತಿ ಎಲ್ಲಾ ಕಡೆ ಆಗುತ್ತಿದೆ. ಬಹಳ ಮುಖ್ಯವಾಗಿ ಹೇಳುತ್ತಿರುವುದು ಏನೆಂದರೆ ಇಂತಹ ಸಂದರ್ಭದಲ್ಲಿ ನಿಜವಾಗಿಯೂ ಜನರನ್ನು ಗುರುತಿಸಿ ಸಹಾಯವನ್ನು ಮಾಡಬೇಕಾಗಿತ್ತು. ಅದು ಯಾವುದೇ ಸರ್ಕಾರಗಳು ಆಗಿದ್ದರೂ ಸಹ ಮಾಡಬೇಕಾಗಿತ್ತು. ಆದರೆ ಆದಂತಹವರನ್ನು ಗುರುತಿಸುವುದಕ್ಕೆ ಆಗುವುದಿಲ್ಲ. ಸಹಾಯ ಮಾಡುವುದಕ್ಕೂ ಆಗುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಯವಿಟ್ಟು ಇದರ ಬಗ್ಗೆ ಹೆಚ್ಚು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇವತ್ತು ನೀವು ಕೊಡುತ್ತಿರತಕ್ಕಂಥಹಣ ಏನಿದೆ ಅದು ಏಕೆ ಖರ್ಚಾಗುತ್ತಿಲ್ಲ ಎನ್ನುವುದರ ಬಗ್ಗೆ ಕೂಡ ಗಮನ ಹರಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ, ನಮ್ಮಲ್ಲಿ ಬಹಳ ಮುಖ್ಯವಾಗಿ ಸನಫ್ಲವರ್ ಸೀಡ್ಸ ರೈತರು ಬಿತ್ತನೆ ಮಾಡುತ್ತಾರೆ. ಈಗಾಗಲೇ ರಾಗಿ ಹಾಕುವುದಕ್ಕೆ ತಡವಾಗಿ ಹೋಯಿತು. ಕಡಲೆಕಾಯಿ ಕೂಡ ಹಾಕುವುದಕ್ಕೆ ಆಗದೇ ಇರುವಂತಹ ಸಂದರ್ಭದಲ್ಲಿ ಈಗ ನಮಗೆ ಉಳಿದಿರತಕ್ಕಂಥಾದ್ದು ಉರುಳಿ ಮತ್ತ ಸನಫ್ಲವರ್ ಇದು ಎರಡೆ. ಸೂರ್ಯಕಾಂತಿ ಬೀಜ ಕೂಡ ಎಲ್ಲೂ ಸಿಗದೇ ಇರುವಂತಹ

ಪರಿಸ್ಥಿತಿ ಇದೆ. ಇದಕೋಸ್ಕರ ನಾವು ಸೀಡ್ಸ ಕಾರ್ಪೋರೇಷನ್ ನವರನ್ನು ಕಂಟ್ಯಾಕ್ಟ ಮಾಡಿಯಾಯಿತು. ಇಲ್ಲಿಯವರೆಗೂ ಅದು ಸಿಗುವಂತಹ ಕೆಲಸವಾಗಲಿಲ್ಲ ಎಂದು ನಾವು ಯಾವ ರೀತಿ ಹೇಳಬೇಕೋ, ಯಾರಿಗೆ ಹೇಳಬೇಕೋ ಎನ್ನುವಂತಹ ಸಂದರ್ಭ ಬಂದಿದೆ. ನಾನು ಒಂದು ಕೇಳುತ್ತಿರುವುದೇನೆಂದರೆ ಬೀಜ ಸಿಗತಕ್ಕಂಥ ವ್ಯವಸ್ಥೆಯನ್ನು ಬೇಗ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೂ ದನಗಳಿಗೆ ಮೇವಿನ ಪರಿಸ್ಥಿತಿ ಇದೆ. ಈಗ ಸ್ವಲ್ಪ ಮಳೆ ಬಂದಿರುವುದರಿಂದ ಅಲ್ಲಿ ಇಲ್ಲಿ ಹುಲ್ಲು ಚಿಗುರಿ ದನಗಳಿಗೆ ಮೇವಾಗುತ್ತದೆ. ಈಗ ಸ್ವಲ್ಪ ಮಳೆ ಬಂದಿರುವುದರಿಂದ ಅಲ್ಲಿ ಇಲ್ಲಿ ಹುಲ್ಲು ಚಿಗುರಿ ದನಗಳಿಗೆ ಮೇವಾಗುತ್ತದೆ. ಆದರೆ ಇದೇ ಪರಿಸ್ಥಿತಿ ಮುಂದುವರೆದರೆ ಹೇಗೆ? ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡತಕ್ಕಂಥಾದ್ದು ಏನೆಂದರೆ, ನಮ್ಮ ರಾಜ್ಯದಲ್ಲಿ ೩೯೨ ಅಗ್ರಿಕಲ್ಚರಲ್ ಫಾರಮ್ಸ ಇವೆ. ನನ್ನ ಕ್ಷೇತ್ರದಲ್ಲಿ ೫೦ ರಿಂದ ೧೬೦೦ ಎಕರೆ ಒಂದು ಫಾರಮ್ಸ ಇರುವಂತಹ ಸಂದರ್ಭದಲ್ಲಿ, ಅಲ್ಲಿಗೆ ಈಗಲೇ ಮುಂಜಾಗ್ರತೆ ಕ್ರಮವಾಗಿ ದನಗಳಿಗೆ ಮೇವನ್ನು ಬೆಳೆಸತಕ್ಕಂಥ ಕ್ರಮವನ್ನು ನೀವು ಹಾಕಿಕೊಂಡಿದ್ದೆ ಆದರೆ, ಇದಕೋಸ್ಕರ ನೀವು ವಿಶೇಷವಾಗಿ ಹಣ ಖರ್ಚು ಮಾಡಬೇಕಾಗಿಲ್ಲ. ಈಗಾಗಲೇ ಅಲ್ಲಿ ಸ್ವಲ್ಪ ಮಳೆ ಬಂದಿರುವುದರಿಂದ ನೀವು ಬೀಜವನ್ನು ಬಿತ್ತುವುದರ ಮುಖೇನ ದನಗಳಿಗೆ ಮೇವನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತದೆ. ಅಂಥ ಅವಕಾಶ ಕೂಡ ಇದೆ, ಅದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ನಮಗೆ ಒಂದು ಜಿಲ್ಲೆಗೆ ನಿರ್ಧಿಷ್ಟವಾಗಿ ಯಾರಾದರೂ ಒಬ್ಬರು ನೊಡೆಲ್ ಆಫೀಸರ್ ಅನ್ನು ಇಂತಹ ವಿಶೇಷವಾದಂತ ಸಂದರ್ಭದಲ್ಲಿ ಮಾಡಬೇಕು. ಅವರು ಡೆಪ್ಯೂಟಿ ಕಮಿಷನರ್ ಇರಬಹುದು, ಅಥವಾ ಜಿಲ್ಲಾ ಪಂಚಾಯತ್ ಚೀಫ್ ಸೆಕ್ರೆಟರಿ ಯಾರಾದರೂ ಇರಬಹುದು, ಒಬ್ಬರು ನೊಡೆಲ್ ಆಫೀಸರ್ ಎಂದು ಮಾಡಿ, ಅವರ ಮಾಹಿತಿ ಪ್ರಕಾರಸ ಅವರ ಸೂಚನೆ ಪ್ರಕಾರ ಸರ್ಕಾರದ ಎಲ್ಲಾ ಮಾರ್ಗದರ್ಶನವನ್ನು ಕೂಡ ಅವರ ಮುಖೇನ ಇಂಪ್ಲಿಮೆಂಟ್ ಆಗತಕ್ಕಂಥ ಒಂದು ವ್ಯವಸ್ಥೆಯನ್ನು ನೀವು ಕೊಡಿ. ಏಕೆಂದರೆ ಎಲ್ಲಾ ಕಡೆ ಜಿಜ್ಞಾಸೆ ಪ್ರಾರಂಭವಾಗಿ, ಕೆಲಸ ನಡೆಯದೆ ಇರತಕ್ಕಂಥ ಪರಿಸ್ಥಿತಿ ಇರುವುದರಿಂದ ಇದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ.

ಇವತ್ತು ಬರಗಾಲದ ಬಗ್ಗೆ, ನಾವು ರಾಜಕೀಯವಾಗಿ ಮಾತನಾಡತಕ್ಕಂಥದ್ದಲ್ಲ, ಈ ಸರ್ಕಾರ ಅಧಿಕಾರ ಬಂದ ಮೇಲೆ, ಮಳೆ ಹೋಯಿತು ಎಂದು ಜನರು ಏನು ಮಾತನಾಡುತ್ತಿದ್ದಾರೆ. ಇವತ್ತು ವ್ಯಾಪಕವಾಗಿ ಎಲ್ಲಾ ಜನರ ಮನಸ್ಸಿನಲ್ಲಿ ಇದು ಇರತಕ್ಕಂಥಹ ಭಾವನೆಯಾಗಿದೆ. ಈಗಲೇ ಹೀಗಾದರೆ, ಇನ್ನು ಮುಂದೆ ಮಳೆ ಬರುತ್ತದೆಯೋ ಇಲ್ಲವೋ ಎನ್ನುವಂತಹ ಭೀತಿ ಬರುವಂತಹ ಮಟ್ಟಕ್ಕೆ ಹೋಗಿದೆ. ಆದುದರಿಂದ ತಾವು ಜನಗಳ ಮುಂದೆ ಹೋಗಿ ಸಹಯಾ ಮಾಡುವುದಕ್ಕೆ ಅವಕಾಶವಿದೆ. ಜನಗಳ ಭಾವನೆಗಳಿಗೆ ಸ್ಪಂಧಿಸುವಂತಹ ಮತ್ತು ಅವರ ಸಂಕಷ್ಟಗಳಿಗೆ ಭಾಗಿಯಾಗುವಂತಹ ಅವಕಾಶವನ್ನು ದೇವರೆ ಒದಗಿಸಿದಂತಹ ಸಂದರ್ಭ ಇರುವಾಗ, ದಯಮಾಡಿ ನಿಮ್ಮ ಜಿಲ್ಲಾಧಿಕಾರಿಗಳನ್ನು, ಚೀಫ್ ಸೆಕ್ರಟರಿಗಳನ್ನು ನೀವು ಗಣನೆಗೆ ತೆಗೆದಕೊಳ್ಳಬೇಡಿ, ಹಳ್ಳಿಗಳಿಗೆ ಹೋಗಿ ಇವತ್ತು ಎಲ್ಲಿ ಕೆಲಸ ಇಲ್ಲ, ಎಲ್ಲಿ ಕೂಲಿಗೋಸ್ಕರ ಓಡಾಡುವಂತಹ ಪರಿಸ್ಥಿತಿ ಇದೆ, ಅಲ್ಲಿ ನೇರವಾಗಿ ಕೆಲಸ ಕೊಡಿ. ನಾವು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ಅನೇಕ ಸಾರಿ ತಂದರೂ, ಅವರು ಎಷ್ಟೇ ಮಾರ್ಗದರ್ಶನ ಕೊಟ್ಟರೂ,

ಒಂದೇ ಒಂದು ಕೆಲಸ ಕೂಡ ಪ್ರಾರಂಭವಾಗಿಲ್ಲ. ನಾವು ರಾಜಕೀಯವಾಗಿ ಮಾತನಾಡುವುದಲ್ಲಿ, ಇವತ್ತು ಇ.ಎ. ಎಸನಲ್ಲಿ ಜೆ.ಆರ್.ವೈನಲ್ಲಿ ಖರ್ಚು ಮಾಡದೇ ಉಳಿದಿರುವಂತಹ ಹಣ ಇದೆ. ನಾವು ವಿಧಾನಸೌಧಕ್ಕೆ ಹೋದಂತಹ ಸಂದರ್ಭದಲ್ಲಿ ಸೆಕ್ರೆಟರಿಯನ್ನು ಕೇಳಿದರೆ, ನಿಮಗೆ ಎನು ತೊಂದರೆಯಾಗಿದೆ, ನಮ್ಮ ಹತ್ತಿರ ಸಾಕಷ್ಟು ಹಣ ಇದೆ, ನೀವು ಖರ್ಚು ಮಾಡುತ್ತಾ ಇಲ್ಲವೆಂದು ಹೇಳುತ್ತಾರೆ. ಆಕ್ಷನ್ ಪ್ಲಾನ್ ಆಗದಿದ್ದರೆ ಏನು ಖರ್ಚು ಮಾಡುವಂಥಾದು. ಯಾವ ಅಧಿಕಾರಿಗಳಿಗೂ ಕೂಡ ಇವತ್ತು ಧೈರ್ಯವಾಗಿ ಕೆಲಸ ಮಾಡದೆ ಇರುವಂತಹ ಪರಿಸ್ಥಿತಿ ಇದೆ. ಮಾನ್ಯ ಸಿಂಧ್ಯಾರವರೆ, ವಿಶೇಷವಾಗಿ ತಮಗೆ ಗೊತ್ತಿರಬಹುದು. ಈಗ ಜಿಲಾಲ ಪಂಚಾಯತ್, ತಾಲ್ಲೂಕು ಪಂಚಾಯತ್ ವ್ಯವಸ್ಥೆ ಬಂತು. ಕಂಟ್ರಾಕ್ಟರ್ ಗಳು ಮಾಡುವಂತಹ ಕೆಲಸದಲ್ಲಿ ತೊಂದರೆಗಳಿ, ವ್ಯತ್ಯಾಸಗಳು ಇರುತ್ತವೆ. ಇದೆಲ್ಲವನ್ನು ನೋಡಿ ಅಧಿಕಾರಿಗಳು ಯಾರೂ ಕೂಡ ಕೆಲಸ ಮಾಡುವುದಕ್ಕೆ ಹೋಗುತ್ತಾ ಇಲ್ಲ. ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತದಲ್ಲಿ ನಾವೂ ಕಂಟ್ರಾಕ್ಟನ್ನು ಇವರಿಗೆ ಕೊಡಿ, ಅವರಿಗೆ ಕೊಡಿ ಎಂದು ಹೇಳುವಂತಹ ಪ್ರಶ್ನೆ ಬರುತ್ತದೆ. ಅದು ಏನೇ ಇದರೂ ಕೂಡ, ಎಲ್ಲದಕ್ಕೂ ಇತಿಶ್ರೀ ಹಾಡಿ, ನೀವು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆಯನ್ನು ಕೊಟ್ಟು ಕೆಲಸಗಳನ್ನು ನಾಳೆಯಿಂದಲೇ ಪ್ರಾರಂಭವಾಗಬೇಕು ಮತ್ತು ಇಷ್ಟೇ ದಿವಸಗಳಲ್ಲಿ ಮುಗಿಸಬೇಕೆಂದು ಹೇಳದಿದ್ದರೆ ಬಹುಶಃ ಕಷ್ಟವಾಗುತ್ತದೆಯೋ ಏನೋ? ಈ ಜನಗಳ ಕಷ್ಟ ಏನು ಎಂದು ವಿವರವಾಗಿ ಹೇಳುವಂತಹ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯು ಕೂಡ ಕಣ್ಣು ಮುಚ್ಚಿಕೊಂಡಿತ್ತು. ಈ ಸಂದರ್ಭದಗಲ್ಲಿ ಕೆಲವು ಮಾಹತಿಗಳನ್ನು ಹೇಳುವುದಕ್ಕೆ ಮಾತ್ರ ತಾವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ಮೂಲಭೂತವಾಗಿ ನಿಮ್ಮಲ್ಲಿ ಹಣವಿದೆ. ಕೇಂದ್ರಸರ್ಕಾರದವರು ಕೂಡ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಹಣವನ್ನು ಖರ್ಚು ಮಾಡುವಂತಹ ವ್ಯವಸ್ಥೆ ಇಲ್ಲಿ ಆಗಿಲ್ಲ. ಯಾವುದೇ ಸರ್ಕಾರ ಇರಲಿ, ನಾವು ಹಿಂದೆ ಕೂಡ ಇಂತಹ ಸಂದರ್ಭಗಳನ್ನು ನೋಡಿದ್ದೇವೆ. ಆದರೆ ಆಗಲೂ ಈಗಲೂ ನೋಡಿದರೆ ವ್ಯತ್ಯಾಸವಿರುತ್ತದೆ. ರಾಜಕೀಯವಾಗಿ ಮಾತನಾಡುವುದು. ವ್ಯತ್ಯಾಸವನ್ನು ನೋಡಿದರೆ, ಅಧಿಕಾರಿಗಳಲ್ಲಿ ಒಂದು ರೀತಿಯ ನಿರ್ಲಕ್ಷ್ಯ ಮನೋಭಾವನೆ ಬಂದಿದೆ. ಇದು ಏಕೆ ಬಂತೋ, ನನಗಂತೂ ಗೊತ್ತಾಗುತ್ತಾ ಇಲ್ಲ. ನೀವು ಇವತ್ತು ಅಧಿಕಾರಿಗಳ ತಲೆಯ ಮೇಲೆ ಈ ಕೆಲಸ ಮಾಡಬೇಕೆಂದು ಕೂರಿಸಬೇಕಾಗುತ್ತದೆ. ಸನ್ಮಾನ್ಯ ಸಿಂಧ್ಯಾರವರೆ ತಾವು ಹೇಳಿ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವ್ಯವಸ್ಥೆ ನಮಗೆ ಏಕೆ ಬೇಕಾಗಿತ್ತು. ಆದರ ಚುನಾವಣೆಗಳು ನಡೆದು ೮ ತಿಂಗಳುಗಳಾಯಿತು, ಇದುವರೆಗೂ ಕೂಡ ಒಂದು ಆಕ್ಷನ್ ಅಪ್ರೂವ್ ಆಗಿಲ್ಲ. ಇದನ್ನು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ನಾನೂ ಕೂಡ ತಾಲ್ಲೂಕು ಪಂಚಾಯತ್ ಸಮಿತಿಯ ಸದಸ್ಯನಾಗಿದ್ದೇನೆ. ನಾನು ಮೂರು ತಾಲ್ಲೂಕುಗಳಲ್ಲಿ ಇದ್ದೇನೆ. ಜಿಲ್ಲಾ ಪಂಚಾಯತ್ ನಲ್ಲೂ ಕೂಡ ಇದ್ದೇನೆ. ಪ್ರತಿ ಸಂದರ್ಭದಲ್ಲೂ ಕೂಡ ಇದನ್ನು ಬಿಟ್ಟರೆ ಬೇರೆ ಏನು ಆಕ್ಷನ್ ಅಪ್ರೂವ್ ಮಾಡಿಲ್ಲ, ಇದುವರೆಗೂ ಆ ಕೆಲಸಗಳನ್ನು ಮಾಡಿಲ್ಲ. ಆದುದರಿಂದ ದಯಮಾಡಿ ನಾನು ಹೇಳುವಂಥಾದ್ದು ಇಷ್ಟೇ, ನೇರವಾಗಿ ಪ್ರಜಾಪ್ರತಿನಿಧಿಗಳಾಗಿ ನಾವು ಏನು ಮಾಡುತ್ತೇವೆಂಬ ಬಗ್ಗೆ, ಮತ್ತು ಹಣಕಾಸನ್ನು ಖರ್ಚು ಮಾಡುವ ಬಗ್ಗೆ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಆಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ಪ್ರತಿ ಜಿಲ್ಲೆಯಲ್ಲಿ ನೀವು ಮಾಹಿತಿಗಳನ್ನು ತರಿಸಿಕೊಂಡು

ನೋಡಬೇಕು, ಇಲ್ಲದಿದ್ದರೆ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಜನರು ನಿಮಗೆ ಅಧಿಕಾರವನ್ನು ಕೊಟ್ಟಿದ್ದಾರೆ, ನಾವು ಏನು ತಪ್ಪು ಮಾಡಿದ್ದೇವೋ ಅದು ಪ್ರಶ್ನೆ ಬೇರೆ, ಪಾರ್ಲಿಮೆಂಟರಿ ಚುನಾವಣೆ ಬಂದಂತಹ ಸಂದರ್ಭದಲ್ಲಿ ನೀವು ಜನಗಳ ಮುಂದೆ ಹೋಗಬೇಕಾಗುತ್ತದೆ, ಮತ್ತು ಕೆಲಸವನ್ನು ಮಾಡಬೇಕಾಗುತ್ತದೆ, ನಾವು ಜನಗಳಿಂದ ಆಯ್ಕೆಯಾಗಿರತಕ್ಕಂಥಾದ್ದು ಮತ್ತು ನಾವು ಜನಗಳಿಗೋಸ್ಕರ ಇರತಕ್ಕಂಥವರು ಎಂದು ತೋರಿಸಬೇಕಾದರೆ ನೀವು ಈ ಕಾರ್ಯಕ್ರಮಗಳನ್ನು ಹಾಕಿ ಜನಗಳ ಭಾವನೆಗಳಿಗೆ ಮತ್ತು ಜನಗಳ ಸಂಕಷ್ಟಗಳಿಗೆ ಏನಾದರೂ ಸ್ಪಂಧಿಸದೆ ಹೋದರೆ ಬಹಳ ಕಷ್ಟವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, (ಈ ಸಂದರ್ಭದಲ್ಲಿ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು) ಉಪಾಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ, ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವನಗೌಡ ಸೋಮಣ್ಣಗೌಡ ಪಾಟೀಲ್ (ಬಸವನ ಬಾಗೇವಾಡಿ) : ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಬರಗಾಲ ಬಂದಂತಹ ಸಂದರ್ಭದಲ್ಲಿ ವಿಶೇಷವಾಗಿ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಸತತವಾಗಿ ಬರಪೀಡಿತವಾಗಿ, ಇವತ್ತು ಅನೇಕ ಸಮಸ್ಯೆಗಳನ್ನು ಎದುರಿಸುವಂತಹ ಈ ಸಂದರ್ಭದಲ್ಲಿ, ನಮ್ಮ ಜಿಲ್ಲೆಯ ಜನತೆ ಹಲವಾರು ವರ್ಷಗಳಿಂದ ಬೇರೆ ರಾಜ್ಯಗಳಿಗೆ ಹೋಗಿ ದುಡಿದು ತಿನ್ನುವಂತಹ ಪರಿಸ್ಥಿತಿ ಇದೆ. ಬಿಜಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ನೀರಾವರಿ ಯೋಜನೆಗಳು ಒಂದು ಪ್ರಾಮಾಣಿಕವಾದಂತಹ ರೀತಿಯಲ್ಲಿ ಆಗದೇ ಇರುವಂತಹ ಹಿನ್ನೆಲೆಯಲ್ಲಿ ಇವತ್ತು ಭೀಕರ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಬಿಜಾಪುರದಲ್ಲಿ ಕುಡಿಯುವ ನೀರಿನ ಅನೇಕ ಸಮಸ್ಯೆಗಳನ್ನು ನಾವು ನೋಡಿದಾಗ ಸರ್ಕಾರ ಬರಗಾಲದ ಪರಿಸ್ಥಿತಿ ಬಂದಾಗ, ಕೇವಲ ಕೊಳವೆ ಬಾವಿಗಳನ್ನು ಅಷ್ಟು ಹೊಡೆಸಿದ್ದೇವೆ, ಇಷ್ಟು ಹೊಡೆಸಿದ್ದೇವೆ ಎನ್ನುವಂತಹ ಅಂಕಿಸಂಖ್ಯೆಗಳನ್ನು ಕೊಡುವ ಮುಖಾಂತರ ನಮ್ಮ ಬಿಜಾಪುರು ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಬಿಜಾಪುರ ಜಿಲ್ಲೆಯಲ್ಲಿ ಅಂತರ ಜಲ ಬಹಳ ಕಡಿಮೆಯಾಗಿರುವಂತಹ ಹಿನ್ನೆಲೆಯಲ್ಲಿ ಇವತ್ತು ಶೇ. ೭೦ ರಷ್ಟು ಕೊಳವೆಬಾವಿಗಳು ವಿಫಲವಾಗಿರುವಂತಹ ಪರಿಸ್ಥಿತಿಯಲ್ಲಿ, ಸರ್ಕಾರ ಹಣವನ್ನು ಖರ್ಚು ಮಾಡುವಂತಹ ವ್ಯವಸ್ಥೆಯನ್ನು ನೋಡಿದಾಗ ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಿದಾಗ ಮಾತ್ರ, ನಮ್ಮ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಗೆ ಒಂದು ಪರಿಹಾರವಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಕಳೆದ ತಿಂಗಳಿಂದ ಬಿಜಾಪುರ ಜಿಲ್ಲೆಯ ನನ್ನ ಮತಕ್ಷೇತ್ರದಲ್ಲಿ ಸುಮಾರು ೬೦ ಕೊಳವೆ ಬಾವಿಗಳನ್ನು ಹೊಡೆದರು. ಆ ೬೦ ಕೊಳವೆ ಬಾವಿಗಳಲ್ಲಿ ಕೇವಲ ೭ ಕೊಳವೆ ಬಾವಿಗಳು ಮಾತ್ರ ಸಫಲವಾಗಿ, ಉಳಿದ ಎಲ್ಲಾ ಕೊಳವೆ ಬಾವಿಗಳು ವಿಫಲವಾಗಿವೆ. ಈ ರೀತಿ ಕುಡಿಯುವ ನೀರಿನ ಭೀಕರವಾದಂತಹ ಪರಿಸ್ಥಿತಿ ನಮ್ಮಲ್ಲಿ ಇರಬೇಕಾದರೆ, ನಾವು ಪ್ರಾಮಾಣಿಕವಾಗಿ ಶಾಶ್ವತವಾದಂತಹ ಕುಡಿಯವ ನೀರಾವರಿ ಯೋಜನೆಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಐದು ನದಿಗಳು ಹರಿಯುವಂತಹ ಜಿಲ್ಲೆ "ಪಂಚನದಿಗಳ ಪಂಜಾಬ್" ಎಂದು ಕೇವಲ ಪತ್ರಿಕೆಗಳಲ್ಲಿ, ಜನರಲ್ಲಿ ಆ ಭಾವನೆ ಇದ್ದರೂ ಸಹ ಈ ನದಿಗಳ ಮುಖಾಂತರ ಅಲ್ಲಲ್ಲಿ ಬ್ಯಾರೇಜಗಳನ್ನು ಕಟ್ಟಿ, ಸಮೀಪದ ಹಳ್ಳಿಗಳಿಗೆ ಈ ಒಂದು ಕುಡಿಯುವ ನೀರಿನ

ವ್ಯವಸ್ಥೆಯನ್ನು ಮಾಡಿದಾಗ ಮಾತ್ರ, ನಮ್ಮ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆ, ಎನ್ನುವಂತಹ ಮಾತನ್ನು ಈ ಪರಿಸ್ಥಿತಿಯಲ್ಲಿ ಹೇಳಬೇಕಾಗಿದೆ. ಇನ್ನು ಮೇವಿನ ಬಗ್ಗೆ ಬಿಜಾಪುರದಲ್ಲಿ ಬಹಳಷ್ಟು ಗಂಭೀರವಾದಂತಹ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಮಾನ್ಯ ಕಂದಾಯ ಸಚಿವರು ಮೇವನ್ನು ಪರ ರಾಜ್ಯಕ್ಕೆ ಸಾಗಾಟ ಮಾಡುವುದನ್ನ ನಿಷೇಧ ಮಾಡಿದ್ದೇವೆಂಬ ಹೇಳಿಕೆ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಆದರೂ ನಮ್ಮ ಜಿಲ್ಲೆಯಲ್ಲಿ ಜೋಳದ ಮೇವಿನ ಸಾಗಾಟ ಅವ್ಯಾಹತವಾಗಿ ನಡೆಯುತ್ತಿದೆ. ಇದನ್ನು ನಾನು ಅನೇಕ ಸಲ ಸಂಬಂಧಪಟ್ಟ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸಿದರೂ ಸಹ ಅದರ ಬಗ್ಗೆ ಬೇಜವಾಬ್ದಾರಿಯಿಂದ ಉತ್ತರ ಕೊಟ್ಟರು, ಕೆಲವೊಂದು ಸಮಯದಲ್ಲಿ ರಾತ್ರಿಯ ವೇಳೆ ನಾನು ಫೋನ್ ಮಾಡಿ ತಿಳಿಸಿದರೂ ಸಹ, ಆ ವಾಹನಗಳನ್ನು ಹಿಡಿಯುವಂತಹ ಒಂದು ಸಾಮಾನ್ಯವಾದಂತಹ ಕೆಲಸವನ್ನು ಅಧಿಕಾರಿಗಳು ಮಾಡುತ್ತಾ ಇಲ್ಲ. ಜಿಲ್ಲಾಧಿಕಾರಿಗಳು ಕೇವಲ ಒಂದೇರಡು ಮೂರು ವಾಹನಗಳನ್ನು ಹಿಡಿದು, ನಾವು ಮಹಾರಾಷ್ಟ್ರಕ್ಕೆ ಹೋಗುವಂತಹ ಮೇವಿನ ಸಾಗಾಟದ ಅಂಕಿಸಂಖ್ಯೆಗಳನ್ನು ಕೊಡುತ್ತಾರೆಯೇ ವಿನಃ ಇನ್ನು ಇವತ್ತಿನವರೆಗೂ ರಾತ್ರಿ ವೇಳೆಯಲ್ಲಿ ಮಹಾರಾಷ್ಟ್ರ ರಾಜ್ಯಕ್ಕೆ ನಮ್ಮ ಜಿಲ್ಲೆಯಿಂದ ಮೇವಿನ ಸಾಗಾಟ ನಡೆಯುವಂತಹ ಈ ಒಂದು ಪರಿಸ್ಥಿತಿಯಲ್ಲಿ, ಬರುವ ದಿವಸಗಳಲ್ಲಿ ನಾವು ಮೇವಿನ ಬಗ್ಗೆ ಬಹಳಷ್ಟು ಗಂಭೀರವಾದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ, ತೀವ್ರವಾದಂತಹ ಎಚ್ಚರಿಕೆಯನ್ನು ಕೊಟ್ಟು ಯಾವುದೇ ಪರಿಸ್ಥಿತಿಯಲ್ಲಿ ಈ ಮೇವಿನ ಸಾಗಾಣಿಯಾಗಬಾರದೆನ್ನುವಂತಹ ದೃಷ್ಟಿಯಿಂದ ಮುಂದಿನ ಭವಿಷ್ಯ ದೃಷ್ಟಿಯಿಂದ ಕೆಲಸ ಮಾಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ವಿಶೇಷವಾಗಿ ಮೇವಿನ ಅಭಾವದಿಂದ ನಮ್ಮ ಗೋ ಸಂಪತ್ತು, ದನದ ಸಂಪತ್ತು, ಮಹಾರಾಷ್ಟ್ರ ರಾಜ್ಯಕ್ಕೆ ಮಾಂಸದ ಸಲುವಾಗಿ ಹೋಗುವಂಥ ಒಂದು ಧಾರುಣ ಪರಿಸ್ಥಿತಿಯನ್ನು ನಮ್ಮ ಜಿಲ್ಲೆಯಲ್ಲಿ ನೋಡುತ್ತಿದ್ದೇವೆ. ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬರಗಾಲದ ಬಗ್ಗೆ ಒಂದು ಮಾಹಿತಿಯನ್ನು ಕೊಟ್ಟರು. ಆದರೆ ಅವರು ಕೊಟ್ಟಂಥ ಮಾಹಿತಿಯನ್ನು ನೋಡಿದಾಗ ಬಹಳ ದುಃಖ ಅನಿಸುತ್ತದೆ. ಬಿಜಾಪುರ ಜಿಲ್ಲೆ ಸಂಪೂರ್ಣವಾಗಿ ಮಳೆ ಇಲ್ಲದೆ ತೀವ್ರ ಅಭಾವವನ್ನು ಎದುರಿಸುತ್ತಿರುವಂಥ ಈ ಪರಿಸ್ಥಿತಿಯಲ್ಲಿ ಕೇವಲ ನಾಲ್ಕು ತಿಂಗಳು ಮಾತ್ರ ಕಡಿಮೆ ಮಳೆಯಾದಂಥ ಪ್ರದೇಶಗಳು ಎಂದು ಅವರು ತೋರಿಸಿದ್ದಾರೆ. ಆದರೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಾವು ಎಲ್ಲಾ ೧೨ರಷ್ಟು ಬಿತ್ತನೆಯಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಬರದ ಛಾಯೆ ಇದೆ. ಬಿಜಾಪರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸಲು ನಾವು ಅಗ್ರಹ ಮಾಡಿದ್ದೇವೆ. ಆದರೆ ಏಕೋ ಏನೋ ಈ ರೀತಿ ಕೇವಲ ಬಿಜಾಪರು ಜಿಲ್ಲೆಯಲ್ಲಿ ಕಡಿಮೆ ಮಳೆ ಬಿದ್ದ ಪ್ರದೇಶಗಳು ಬಾಗಲಕೋಟೆ, ಜಮಖಂಡಿ, ಮುದೋಳ, ಸಿಂಧಗಿ ಎನ್ನುವುದನ್ನು ತೋರಿಸಿ, ಉಳಿದ ಜಿಲ್ಲೆಗಳಲ್ಲಿ ಮಳೆಯಾಗಿದೆ ಎನ್ನುವಂಥ ಒಂದು ವಿಚಿತ್ರವಾದಂಥ ವರದಿಯನ್ನು ಏನು ಸಲ್ಲಿಸಿದರು ಇದು ಬಹಳ ದುಃಖದ ವಿಷಯ. ಏಕೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಬಸವನಬಾಗೆವಾಡಿ ತಾಲ್ಲೂಕಿನಲ್ಲಿ, ಮುದ್ದೇಬಿಹಾಳ ತಾಲ್ಲೂಕಿನಲ್ಲಿ, ಇಂಡಿ ತಾಲ್ಲೂಕಿನಲ್ಲಿ, ಬೀಳಗಿಯಲ್ಲಿ ವಿಶೇಷವಾಗಿ

ಹುನಗುಂದದಲ್ಲೂ ಸಹ ಒಂದು ಹನಿ ಮಳೆಯಾಗದೆ, ಮುಂಗಾರು ಬಿತ್ತನೆ ಸಹಿತ ಆಗಿಲ್ಲ. ಆದರೆ ಇದನ್ನು ನೋಡಿದಾಗ, ಅಧಿಕಾರಿಗಳು ತಪ್ಪುದಾರಿಗೆ ಎಳೆದು ನಮ್ಮನ್ನು ಬರಗಾಲ ಪೀಡಿತ ಪ್ರದೇಶಗಳಿಗೆ ಸಹಾಯಧನವನ್ನು ಕೊಡುವ ವ್ಯವಸ್ಥೆಯಿಂದ ನಮ್ಮನ್ನು ವಂಚನೆ ಮಾಡಿದ್ದಾರೆ, ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಂಗಾರಿನ ಬೆಳೆಗಳ ನಾಶದ ನಂತರ, ಹಿಂಗಾರು ಬೆಳೆಗಳು, ಇವತ್ತಿನ ದಿವಸ ರೈತ ಜೋಳ, ಹತ್ತಿ ಇನ್ನಿತರ ಬೆಳೆಗಳನ್ನು ಬೆಳೆಯುವಂಥ ಈ ಒಂದು ಪರಿಸ್ಥಿತಿಯಲ್ಲೂ ಮಳೆಯಾಗಿಲ್ಲ. ಇದನ್ನು ನಾವು ನೋಡಿದಾಗ, ಇನ್ನೂ ನಮ್ಮ ಪರಿಸ್ಥಿತಿ ಗಂಭೀರ ಆಗುತ್ತಿದೆ. ಮುಂಬರುವ ದಿವಸಗಳಲ್ಲಿ ನಾವು ಭೀಕರವಾದಂಥ ಪರಿಸ್ಥಿತಿಯನ್ನು ಎದುರಿಸುತ್ತೇವೋ ಏನೋ ಎನ್ನುವಂಥ ಭಯ ನಮ್ಮಲ್ಲಿ ಬರುತ್ತಿದೆ. ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿನಲ್ಲಿ ಯಾವುದೇ ನೀರಾವರಿ ಯೋಜನೆಗಳು ಇಲ್ಲ. ನಮಗೆ ಅನೇಕ ಐತಿಹಾಸಿಕ ಕೆರೆಗಳು ಇದ್ದರೂ ಸಹ, ಆ ಕೆರೆಗಳ ಹೂಳನ್ನು ತೆಗೆದು ಐದು ನದಿಗಳುಳ್ಳ ಈ ಒಂದು ಪ್ರದೇಶದ ಈ ಜಿಲ್ಲೆಗೆ ಬ್ಯಾರೇಜ್ ಗಳನ್ನು ಕಟ್ಟುವ ಮುಖಾಂತರ, ಮತ್ತು ಆ ಕೆರೆಗಳ ಹೂಳುಗಳನ್ನು ತೆಗೆದು ಹೊಸ ಹೊಸ ಕೆರೆಗಳನ್ನು ನಿರ್ಮಾಣ ಮಾಡಿದಾಗ ಮಾತ್ರ ನಮ್ಮ ಭಾಗದ ಜನತೆಗೆ ಅನುಕೂಲವಾಗುತ್ತದೆ. ಈ ಒಂದು ಬರಗಾಲ ಬಂದಿರುವ ಪ್ರದೇಶದಲ್ಲಿ ವಿಶೇಷವಾಗಿ ಕೆರೆಯ ಹೂಳನ್ನೆತ್ತುವ ಕಾಮಗಾರಿಗಳನ್ನು, ಹೊಸ ಕೆರೆಗಳ ನಿರ್ಮಾಣದ ಕಾರ್ಯಗಳನ್ನು ತೆಗೆದುಕೊಂಡಾಗ ಮಾತ್ರ, ಹೆಚ್ಚು ಜನರಿಗೆ ನಾವು ಉದ್ಯೋಗವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯ ಇದೆ. ಕೇವಲ ರಸ್ತೆಗಳು ಈ ಗೋ ಕಟ್ಟೆಗಳು ಎನ್ನುವಂಥ ಕೆಲವೊಂದು ವ್ಯವಸ್ಥೆ ಏನು ನಮ್ಮಲ್ಲಿದೆ, ಇವುಗಳು ಕೇವಲ ಅಧಿಕಾರಿಗಳಿಗೆ ಬ್ರಷ್ಟಾಚಾರಕ್ಕೆ ಅನುಕೂಲ ಮಾಡಿಕೊಡುವಂಥ ಒಂದು ವ್ಯವಸ್ಥೆ ಇದೆ. ಏಕೆಂದರೆ ಒಂದು ಗೋ ಕಟ್ಟೆಯ ಹೆಸರಿನಲ್ಲಿ ಸುಮಾರು ೭೦-೮೦ ಸಾವಿರದಷ್ಟು ಹಣವನ್ನು ಅಧಿಕಾರಿಗಳು ತರಿಸಿಕೊಳ್ಳುತ್ತಿದ್ದಾರೆ. ನಿಜವಾಗಿಯೂ ನಾವು ಈ ಗೋ ಕಟ್ಟೆಗಳನ್ನು ನೋಡಿದಾಗ, ಐದು ಸಾವಿರ ಹತ್ತು ಸಾವಿರ ಸಹ ಇವತ್ತು ಈ ಒಂದು ವೆಚ್ಚ ಬರುತ್ತದೆಯೋ ಇಲ್ಲವೋ ಏನ್ನುವ ಪರಿಸ್ಥಿತಿಯಲ್ಲಿ ಇದೆ. ಉದ್ಯೋಗವಕಾಶವನ್ನು ನಾವು ಹೆಚ್ಚು ಮಾಡಬೇಕಾದರೆ, ಹಳೆಯ ಕೆರೆಗಳು ಮತ್ತು ಹೊಸ ಕೆರೆಗೆ ಪ್ರಾತಿನಿಧ್ಯವನ್ನು ಕೊಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ನಮ್ಮ ಜಿಲ್ಲೆಗೆ ವಿಶೇಷವಾಗಿ ಎಲ್ಲಾ ಜಿಲ್ಲೆಗಳಿಗಿಂತ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡಬೇಕು. ಏಕೆಂದರೆ, ಬರುವಂಥ ದಿವಸಗಳಲ್ಲಿ ನಮ್ಮ ಜನ ಇಡೀ ನಮ್ಮ ಜಿಲ್ಲೆಯ ಕೃಷಿ ಕಾರ್ಮಿಕರು, ಬಡವರು ಇವತ್ತು ವಲಸೆ ಹೋಗುವಂಥ, ಭೀಕರ ಧಾರುಣ ಪರಿಸ್ಥಿತಿ ಏನು ನೋಡುತ್ತಿದ್ದೇವೆ. ಕೈಗಾರಿಕಾ ಪ್ರದೇಶಗಳಿಂದ ಹಿಂದುಳಿದಂಥ ಈ ಜಿಲ್ಲೆಗೆ, ಕೇವಲ ಶೇಕಡ ೮೦ ರಷ್ಟು ಕೃಷಿ ಆಧಾರಿತ ಜನ ನಮ್ಮ ಜಿಲ್ಲೆಯಲ್ಲಿ ಇರುವುದರಿಂದ, ತಾವು ಇವತ್ತು ಗಂಭೀರವಾಗಿ ಈ ಜಿಲ್ಲೆಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಸನ್ಮಾನ್ಯ ಸಚಿವರು ಸಂಪೂರ್ಣವಾದ ಪ್ರಾಮಾಣಿಕವಾದ ಒಂದು ವರದಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ತರಿಸಬೇಕಾಗಿದೆ. ಅನೇಕ ವರದಿಯ ಪ್ರಕಾರ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅತಿ ಗಂಭೀರ ಪರಿಸ್ಥಿತಿಯನ್ನು ಜನರು ಎದುರಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ಮತಕ್ಷೇತ್ರದ ಕೆಲವೊಂದು ಭಾಗಕ್ಕೆ ಹೋದಾಗ, ಅಂತಹ ಗಂಭೀರವಾದಂಥ ಪರಿಸ್ಥಿತಿ ಇಲ್ಲ. ನಿಜವಾಗಿಯೂಕುಡಿಯುವ ನೀರಿನ ಗಂಭೀರ ಪರಿಸ್ಥಿತಿಯನ್ನು ಅನುಭವಿಸತಕ್ಕ ಅನೇಕ

ಗ್ರಾಮೀಣ ಪ್ರದೇಶಗಳನ್ನು ಸಲ್ಲಿಸಿರುವಂಥ ವರದಿಯನ್ನು ಸಮಸ್ಯೆ ಇಲ್ಲ ಎಂದು ತಿಳಿಸಿರುತ್ತಾರೆ. ಈ ಪರಿಸ್ಥಿತಿಯಲ್ಲಿ, ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಜವಾಹರ್ ರೋಜಗಾರ್ ಯೋಜನೆಯ ಅಡಿಯಲ್ಲಿ ಹಣವನ್ನು ಉಪಯೋಗಿಸಿಲ್ಲ. ಜವಾಹರ್ ರೋಜಗಾರ್ ಯೋಜನೆಯಲ್ಲಿ ಹೆಚ್ಚಿನ ಹಣವನ್ನು ನಾವು ಬಿಡುಗಡೆ ಮಾಡುವುದಿಲ್ಲ ಎನ್ನುವಂಥ ವರದಿಯನ್ನು ಅಲ್ಲಿಯ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ನಮಗೆ ನೀಡುತ್ತಿದ್ದಾರೆ. ಕಳೆದ ವರ್ಷದ ಜವಾಹರ್ ರೋಜಗಾರ್ ಯೋಜನೆಯ ಹಣವನ್ನು ಸರಿಯಾಗಿ ಉಪಯೋಗ ಮಾಡಿಲ್ಲ ಎಂದು ದೃಷ್ಟಿಯಿಂದ, ನಮ್ಮ ಜಿಲ್ಲೆಗೆ ಬರುತ್ತಿರುವ ಹೆಚ್ಚಿನ ಜವಾಹರ್ ರೋಜಗಾರ್ ಹಣ ಬಂದಿಲ್ಲ. ಈ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಇವತ್ತು ನಿಂತು ಹೋಗಿದೆ. ಯಾವುದೇ ಬರಗಾಲ ಪರಿಸ್ಥಿತಿಯ ಕಾಮಗಾರಿಗಳು ನಡೆದಿಲ್ಲ. ವಿಶೇಷವಾಗಿ ಕೃಷ್ಣಾ ನೀರಾವರಿ ಯೋಜನೆಯಲ್ಲಿ ಅನೇಕ ಹಳ್ಳಿಗಳು ಮುಳುಗುವಂಥ ಪರಿಸ್ಥಿತಿಯಲ್ಲಿ, ಅಲ್ಲಿಯ ಭಾಗದ ಜನರಿಗೆ ಪುನರ್ ವಸತಿಯ ವ್ಯವಸ್ಥೆಯನ್ನು ನಾವು ಸಾಧಾರಣವಾಗಿ ನೋಡಿದಾಗ ಬಹಳ ದುಃಖ ಅನಿಸುತ್ತದೆ. ಕೇವಲ ೮-೧೦ ಪತ್ರಗಳ ಒಂದು ವ್ಯವಸ್ಥೆಯನ್ನು ಮಾಡಿ ರೈತರನ್ನು ಅಲ್ಲಿ ಅವರು ಜೀವನ ಮಾಡುವಂಥ ವ್ಯವಸ್ಥೆ ಮಾಡಿದ್ದು ನೋಡಿದರೆ, ಇದು ಕೇವಲ ಅಧಿಕಾರಿಗಳು ಬೇಜವಾಬ್ದಾರಿಯುತವಾದ ಕೆಲಸವಾಗಿದೆ ಎಂದು ಹೇಳಬಹುದು. ಈ ಯೋಜನೆಯಿಂದ ಭೂಮಿಯನ್ನು ಕಳೆದುಕೊಂಡಂಥ, ನಮ್ಮ ಜಿಲ್ಲೆಯ ಅನೇಕ ಫಲವತ್ತಾದ ಭೂಮಿಯನ್ನು ತ್ಯಾಗ ಮಾಡಿ, ಇವತ್ತು ಸಮೀಪದ ಜಿಲ್ಲೆಗಳಿಗೆ ನಾವು ಕೊಟ್ಟಿದ್ದೇವೆ. ಆದರ ಅದಕ್ಕೆ ತಕ್ಕಂತೆ ನಮಗೆ ಪರಿಹಾರ ಕಾಮಗಾರಿಗಳು, ಪುನರವಸತಿಯ ಕಾಮಗಾರಿಯ ನಡೆಯದೇ ಇರುವುದರಿಂದ, ಇವತ್ತು ಬೀಳಗಿ ತಾಲ್ಲೂಕಿನಲ್ಲಿ ರೈತರು ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ನಾನು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಗೆ ಹೆಚ್ಚಿನ ಒಂದು ಸಹಾಯವನ್ನು ಸರ್ಕಾರ ಮಾಡಿಕೊಡಬೇಕು. ಇನ್ನೂ ಹೆಚ್ಚಿನ ಉದ್ಯೋಗವಕಾಶಗಳನ್ನು ಒದಗಿಸಿಕೊಡಬೇಕು ಎನ್ನುವಂಥ ಕಳಕಳಿಯ ವಿನಂತಿಯನ್ನು ಮಾಡಿಕೊಂಡು ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮೊನ್ನೆಯಿಂದ ನಮ್ಮ ಸದನದಲ್ಲಿ ವಿವಿಧ ಕಲಾಪಗಳು ನಡೆಯುತ್ತರವಂಥ ಸಂದರ್ಭದಲ್ಲಿ ಸಾಕಷ್ಟು ಪ್ರತಿನಿಧಿಗಳು ಬರದ ಬಗ್ಗೆ ಮಾತನಾಡಬೇಕು, ಬರದ ಬಗ್ಗೆ ಮಾತನಾಡಬೇಕು ಎಂದು ಬಹಳ ಗಂಭೀರವಾದಂಥ ಪ್ರಶ್ನೆಯನ್ನು ಈ ಸದನದಲ್ಲಿ ಇಟ್ಟರು. ಆದರೆ, ಇವತ್ತು ಈ ಸದನದ ಕಾರ್ಯಕಲಾಪಗಳನ್ನು ಪ್ರಾಯಶಃ ನೋಡಿದಾಗ, ಎಷ್ಟು ಜನ ಜನಪ್ರತಿನಿಧಿಗಳು ಈ ರಾಜ್ಯದ ಜನರನ್ನು ಕಾಪಾಡುವಂಥ ಜನರಿದ್ದಾರೆ ಎಂಬುದನ್ನು...

ಒಬ್ಬ ಮಾನ್ಯ ಸದಸ್ಯರು : ವಿರೋಧಪಕ್ಷದಲ್ಲಿ ಮಾತನಾಡಬೇಕಾದವರೇ ಇಲ್ಲವಲ್ಲ...

(ಗೊಂದಲ)

ಶ್ರೀ ಮಂಜುನಾಥ ಸಿ.ಕುನ್ನೂರು : ತಾವು ಹಿರಿಯರಿದ್ದೀರಿ, ದಯವಿಟ್ಟು ನಾವು ಹೇಳುವುದನ್ನು ಕೇಳಿ. ಏಕೆಂದರೆ ಇದು ನಾವು ನೀವು ಎಂದು ಅಲ್ಲ. ಎಲ್ಲರೂ ಈ ರಾಜ್ಯದ ಸಮಗ್ರ ಜನತೆಯ ಚಿಂತನೆ ಮಾಡಬೇಕಾದ ವಿಚಾರ. ಮಂತ್ರಿಗಳಿಗಾಗಿ ತಾವು ಕೇವಲ ಏನೋ ಹೊಸ ಶಾಸಕರು ಬಂದಿದ್ದಾರೆ,

ಅವರನ್ನು ಕುಳಿತುಕೊಳ್ಳಿಸಬೇಕು ಎಂದು ಹೇಳುವಂಥ ಪ್ರಮೇಯ ಇಲ್ಲಿ ಮಾಡುವಂಥ ಅವಶ್ಯಕತೆ ಇಲ್ಲ ಎಂಬುದನ್ನು ಮಂತ್ರಿಗಳು ಇದನ್ನು ಗಂಭೀರವಾಗಿ ಚಿಂತನೆ ಮಾಡಬೇಕಾದಂಥ ವಿಚಾರ....

ಶ್ರೀ ವಾಟಾಳ್ ನಾಗರಾಜ್ : ತಾವು ಈಗ ಬಂದಿದ್ದೀರಿ, ಬೆಳಿಗ್ಗೆಯಿಂದ ತಾವು ಇರಲಿಲ್ಲ, ತಾವು ಸದನಕ್ಕೆ ಬಂದದ್ದು ಗೊತ್ತಾಯಿತು.

ಶ್ರೀ ಮಂಜುನಾಥ ಸಿ. ಕುನ್ನೂರು : ನಾವೆಲ್ಲಾ ಬರಪರಿಹಾರದ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಈ ರಾಜ್ಯದ ಅತ್ಯಂತ ಗಂಭೀರವಾದ ಸಮಸ್ಯೆ ....

(ಗೊಂದಲ)

ಶ್ರೀ ಡಿ.ವಿ. ಸದಾನಂದ ಗೌಡ : ಯಾರೂ ಸದನದಲ್ಲಿ ಇಲ್ಲವೆಂದು ತಾವು ಚಿಂತನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಸದನದಲ್ಲಿ ಅತ್ಯಂತ ಗಂಭೀರವಾದ ವಿಚಾರವನ್ನು ನಾವು ಪ್ರಸ್ತಾಪ ಮಾಡಿರುವಂತಹ ಸಂದರ್ಭದಲ್ಲಿ, ಇಡೀ ಕರ್ನಾಟಕದ ೧೭೫ ತಾಲ್ಲೂಕುಗಳು ಪೈಕಿ ೧೧೧ ತಾಲ್ಲೂಕುಗಳಲ್ಲಿ ಬರ ಇರುವಂತಹ ಸಂದರ್ಭದಲ್ಲಿ, ಈ ಬಗ್ಗೆ ಚಿಂತನೆ ಮಾಡುವಂತಹ ಜನ ಪ್ರತಿನಿಧಿಗಳು ಎಷ್ಟಿದ್ದಾರೆ? ಇದನ್ನು ಇವತ್ತು ನಾವು ಆಲೋಚನೆ ಮಾಡಬೇಕಾದ ಅವಶ್ಯಕತೆ ಇದೆ. ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ವಿ. ಸದಾನಂದ ಗೌಡ : ಕೇವಲ ಬರದ ಮೇಲೆ ಮಾತನಾಡುವಾಗ, ಅದನ್ನು ಪ್ರಸ್ತಾಪ ಮಾಡುವಂತಹ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಅಶೋಕ ಎಸ್. ಕಾಟ್ವೆ : ತಾವು ಸದನದಲ್ಲಿದ್ದೀರಿ. ಅವರು ತಮಗೆ ಹೇಳುತ್ತಿಲ್ಲ. ಯಾರು ಸದನದಲ್ಲಿ ಇಲ್ಲ, ಅವರಿಗೆ ಹೇಳುತ್ತಿದ್ದಾರೆ. 'ಕುಂಬಳಕಾಯಿ ಕಳ್ಳ' ಎಂದರೆ ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಕಳೆದ ಸುಮಾರು ೭-೮ ದಿವಸಗಳಿಂದ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ನಮ್ಮ ಸದಸ್ಯರು ಉತ್ಸಾಹದಿಂದ ಇದ್ದದ್ದು ಸಹಜ. ಆದರೆ ಅದಕ್ಕೆ ಅವಕಾಶವೇ ಕೊಡದೇ ಬೇರೆ ಕಡೆ ದಾರಿಯನ್ನು ತಪ್ಪಿ ಎಳೆದಂತಹವರು ನಮ್ಮ ವಿರೋಧಿ ಪಕ್ಷದ ಸದಸ್ಯರೇ. ಆದುದರಿಂದ ಬೇಸತ್ತು ನಮ್ಮ ಸದಸ್ಯರು ಹೊರಗೆ ಹೋಗಿದ್ದಾರೆ. ಆದುದರಿಂದ ನೀವು ಮೊದಲು ಚರ್ಚೆ ಮಾಡಿ. ಆಮೇಲೆ ಅವರನ್ನು ಸದನಕ್ಕೆ ಕರೆಯುವಿರಂತೆ.

(ಗೊಂದಲ)

ಶ್ರೀ ಎಸ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಈ ಬರದ ಮೇಲೆ ಚರ್ಚೆಯನ್ನು ಕೇಳುವುದಕ್ಕೆ ಬಹಳ

ಸದಸ್ಯರಿಗೆ ಆಸೆ ಇತ್ತು. ಹೇಳಿದ್ದೇ ಹೇಳಿಕೊಂಡು ಹೋಗುತ್ತಿದ್ದರೆ ಮಾನ್ಯ ಸದಸ್ಯರುಗಳಿಗೂ ಬೇಜಾರಾಗುತ್ತದೆ. ಒಬ್ಬರು ಹೇಳಿದ್ದನ್ನೇ ಇನ್ನೊಬ್ಬರು ಹೇಳುತ್ತಿದ್ದಾರೆ. ಈ ರೀತಿ ಆದರೆ ಸದಸ್ಯರುಗಳು ಎಲ್ಲಿಯವರೆಗೂ ಕೇಳುತ್ತಾರೆ. ಅವರಿಗೂ ಸಾಕಾಗಿ ಹೋಯಿತು. ಆದ್ದರಿಂದ ಹೊರಗಡೆ ಹೋಗಿದ್ದಾರೆ, ಅಷ್ಟೇ. ದಯವಿಟ್ಟು ಹೇಳಿದ್ದೇ ಹೇಳದೇ, ಕೇವಲ ವಿಷಯವನ್ನು ಪ್ರಸ್ತಾಪ ಮಾಡಿದರೆ ಸಾಕು.

(ಗೊಂದಲ)

ಶ್ರೀ ಅರಗಂ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದಂತೆ ಎಲ್ಲಾ ಜಿಲ್ಲೆಗಳಲ್ಲೂ ಬರ ಒಂದೇ ರೀತಿಯಾಗಿರುವುದಿಲ್ಲ. ಅದಕ್ಕಾಗಿ ನಾವು ನಮ್ಮ ನಮ್ಮ ಜಿಲ್ಲೆಯ ಬರದ ಬಗ್ಗೆ ಎಲ್ಲಾ ವಿವರವನ್ನೂ ಸದನದ ಮುಂದಿಡಬೇಕಾಗುತ್ತದೆ. ಒಂದು ಜಿಲ್ಲೆಯಲ್ಲಿ ಬರ ಯಾವ ತರಹ ಇದೆಯೋ, ಇನ್ನೊಬ್ಬರ ಜಿಲ್ಲೆಯಲ್ಲೂ ಬರ ಅದೇ ರೀತಿ ಇರಬೇಕೆಂದಿಲ್ಲ. ನಮ್ಮ ಜಿಲ್ಲೆಯಲ್ಲಿ ಬರ ಯಾವ ತರಹ ಇದೆ ಎಂಬುದನ್ನು ನಾವು ಸದನಕ್ಕೆ ಹೇಳಬೇಕಾಗಿಲ್ಲವೇ ? ನಮ್ಮಲ್ಲಿ ಬರದಿಂದಾಗಿ ನಾವು ಯಾವ ತರಹ ಬವಣೆ ಪಡುತ್ತಿದ್ದೇವೆ ಎಂಬುದನ್ನು ಹೇಳಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಂಜುನಾಥ ಸಿ.ಕುನ್ನೂರು (ಶಿಗ್ಗಾಂವ) : ಮಾನ್ಯ ಅಧ್ಯಕ್ಷರೇ, ಇಂದು ಬರಗಾಲ ಪರಿಸ್ಥಿತಿ ಬಗ್ಗೆ ತಡವಾಗಿಯಾದರೂ ಕೂಡ ಮಾತನಾಡಲು ನನಗೆ ತಾವು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ, ಮೊದಲನೆಯದಾಗಿ ತಮ್ಮನ್ನು ಅಭಿನಂದಿಸಿ, ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ಒಂದು ಬರಗಾಲ ಪರಿಸ್ಥಿತಿಯ ಬಗ್ಗೆ ನಾವು ಕನಿಷ್ಟ ಪಕ್ಷ ಜೂನ್ ತಿಂಗಳ ಕೊನೆಯ ವಾರದಲ್ಲಿ ಚರ್ಚೆ ಮಾಡಬೇಕಾಗಿತ್ತು. ಈ ಬಗ್ಗೆ ಒಂದು ವಿಶೇಷವಾದಂತಹ ತುರ್ತು ಸಭೆಯನ್ನು ಕರೆಯಬೇಕೆಂದು ಒಂದು ಮನವಿಯನ್ನು ನಮ್ಮ ಪಕ್ಷದ ನಾಯಕರು ಹಾಗೂ ಇನ್ನೂ ಅನೇಕರು ಸೇರಿಕೊಂಡು ರಾಜ್ಯಪಾಲರಿಗೆ ಸಲ್ಲಿಸಿದ್ದೆವರು. ಅದಾದ ನಂತರ ಸರ್ಕಾರದವರೂ ಕೂಡ ಇದರ ಬಗ್ಗೆ ಚಿಂತಿಸಿ ದಿನಾಂಕ ೭.೬.೯೫ ರಿಂದ ವಿಧಾನಮಂಡಲದ ಅಧಿವೇಶನವನ್ನು ಕರೆದರು. ೭.೮.೯೫ನೇ ತಾರೀಖು ನಾವು....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಬರಗಾಲ ಕುರಿತು ಚರ್ಚಿಸಲು ಮಾನ್ಯ ಮುಖ್ಯಮಂತ್ರಿಗಳು ಒಂದು ತಿಂಗಳ ಹಿಂದೆ ವಿರೋಧಿ ಪಕ್ಷಗಳ ನಾಯಕರುಗಳನ್ನೆಲ್ಲಾ ಸಭೆಗೆ ಕರೆದಿದ್ದರು. ಆಗ ಸರ್ಕಾರದ ಉನ್ನತಾಧಿಕಾರಿಗಳೆಲ್ಲಾ ಬಂದಿದ್ದರು. ಅಂದಿನ ಸಭೆಗೆ ಹಣಕಾಸಿನ ಇಲಾಖೆಯ ಕಾರ್ಯದರ್ಶಿ ಯವರು, ಪಿ.ಹೆಚ್.ಇ ಯವರು, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು, ನೀರಾವರಿ ಇಲಾಖೆಯ ಕಾರ್ಯದರ್ಶಿಯವರು, ಈ ರೀತಿ ಹೆಚ್ಚು ಕಡಿಮೆ ಎಲ್ಲಾ ಇಲಾಖೆಯ ಅಧಿಕಾರಿಗಳು ಅಂದಿನ ಸಭೆಗೆ ಬಂದಿದ್ದರು. ಆದರೆ ಬರಗಾಲದ ಬಗ್ಗೆ ಚರ್ಚೆ

ನಡೆಯುವಾಗ ಇವತ್ತಿನ ದಿವಸ ಸದನದಲ್ಲಿ ಕಂದಾಯ ಇಲಾಖಾ ಕಾರ್ಯದರ್ಶಿಯವರೊಬ್ಬರನ್ನು ಬಿಟ್ಟರೆ, ಬೇರೆ ಯಾವ ಇಲಾಖೆಯ ಅಧಿಕಾರಿಗಳೂ ಇಲ್ಲ.

ಬರಗಾಲದ ಬಗ್ಗೆ ಚರ್ಚೆ ನಡೆಯುವಾಗ ಕೇವಲ ಕಂದಾಯ ಇಲಾಖೆಯ ಅಧಿಕಾರಿಗಳು ಮಾತ್ರ ಇದ್ದರೆ ಸಾಕು ಎಂಬುದು ಸರಿಯಲ್ಲವೆಂದು ನನಗಿಸುತ್ತದೆ. ಬರಗಾಲದ ವಿಚಾರ ಚರ್ಚೆ ಮಾಡುವಾಗ ಎಲ್ಲಾ ಇಲಾಖೆಯ ಸಂಬಂಧಪಟ್ಟ ವಿಚಾರಗಳೂ ಇದರಲ್ಲಿ ಬರುತ್ತವೆ. ಆದ್ದರಿಂದ ಎಲ್ಲಾ ಇಲಾಖೆಯ ಅಧಿಕಾರಿಗಳೂ ಇರಬೇಕಾಗುತ್ತದೆ. ಇರಬೇಕಾದುದು ಅವರ ಕರ್ತವ್ಯವಾಗಿದೆ. ಬರಗಾಲದ ಬಗ್ಗೆ ಚರ್ಚಿಸುವಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರಬೇಕಾಗುತ್ತದೆ. ಬರಗಾಲ ಕುರಿತು ಚರ್ಚಿಸಲು ತುರ್ತು ಸದನವನ್ನು ಕರೆಯಬೇಕೆಂದು ನಾವು ಆಗ್ರಹಿಸಿದ್ದೆವು. ಆದರೆ ಸದನದ ಮೊದಲನೇ ದಿನ ಅವಿಶ್ವಾಸ ನಿರ್ಣಯ ಮಂಡನೆಯಾಗಿ ಸಭೆ ಬೇರೆ ದಾರಿ ಹಿಡಿಯಿತು. ಇವತ್ತು ಬೆಳಿಗ್ಗೆಯಿಂದ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದೇ ಇಲ್ಲ. ನಾನು ಸ್ವಲ್ಪ ಹೆಚ್ಚು ಕಡಿಮೆ ಬೆಳಿಗ್ಗೆ ಒಂಭತ್ತು ಗಂಟೆಗೇ ಸದನಕ್ಕೆ ಬಂದಿದ್ದೆ. ಆಗಿನಿಂದ ಈವರೆಗೂ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದಿಲ್ಲ. ಬಾರದೇ ಇರುವುದಕ್ಕೆ ಕಾರಣವೇನು ಎಂಬುದು ಬಹಳ ಮುಖ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸದನಕ್ಕೆ ಬಾರದೇ ಇರುವುದಕ್ಕೆ ಕಾರಣ ಏನೆಂದರೆ, ಹೈದರಾಬಾದನಲ್ಲಿ ಏನು ಗಲಾಟೆ ನಡೆದಿದೆ ನೋಡಿ, ಎನ್.ಟಿ.ಆರ್. ಅವರ ಪಕ್ಷ ಅಲ್ಲಿ ಹೇಗೆ ಎರಡು ಹೋಳಾಯಿತೋ, ಹಾಗೆ ಇಲ್ಲಿಯೂ ನಡೆದಿದೆಯಂತೆ. ಅದಕ್ಕೇ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರುವುದಕ್ಕೆ ಸ್ವಲ್ಪ ತೊಂದರೆಯಾಗಿದೆ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾರೂ 'ಶಿವಪಾರ್ವತಿ' ಇಲ್ಲ. ಹೈದರಾಬಾದನಲ್ಲಿ ಆಗಿರುವಂತಹ ಕೆಲಸ, ನಮ್ಮಲ್ಲೂ ಆಗುವುದು ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ' ಶಿವಪಾರ್ವತಿ' ಇಲ್ಲ ಎಂದರೆ, ಇಲ್ಲಿ ' ಹರೇ ಕೃಷ್ಣ, ಹರೇ ರಾಮ' ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ' ಶಿವಪಾರ್ವತಿ' ಇಲ್ಲಿ 'ರಾಮಕೃಷ್ಣ' ಆದುದರಿಂದ ಯಾವ ದೇವರುಗಳು ಯಾವ ಗಳಿಗೆಯಲ್ಲಿ ಇದಕ್ಕಿದ್ದ ಹಾಗೆ ಉದ್ಭವಾಗುತ್ತವೋ ಗೊತ್ತಿಲ್ಲ. ಯಾವ ಸ್ಥಳದಲ್ಲಿ ಉದ್ಭವಾಗುತ್ತವೋ ಎನ್ನುವಂತಹದ್ದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿಲ್ಲದಿರುವುದರಿಂದ ನನಗೇನಾಗಿದೆ ಎಂದರೆ, ಏನಾದರೂ ಅವರು ಗೋಪ್ಯವಾಗಿ ಆಂಧ್ರಪ್ರದೇಶಕ್ಕೆ ಹೋಗಿದ್ದಾರೋ ಏನೋ ಅಂತ. ಏಕೆಂದರೆ ಎನ್. ಟಿ.ಆರ್. ರವರಿಗೂ ಇವರಿಗೂ ಬಹಳ ಸ್ನೇಹ ಇದೆ. ತಕ್ಷಣ ಆಂಧ್ರಕ್ಕೆ ಹೋಗಿ ಎರಡೂ ಬಣಗಳ ನಡುವೆ ಸಂಧಾನ ಮಾಡಲಿಕ್ಕೆ ಹೊರಟಿದ್ದಾರೋ ಏನೋ ಗೊತ್ತಿಲ್ಲ. ಏಕೆಂದರೆ ಬೆಳಿಗ್ಗೆಯಿಂದ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲೂ ಇಲ್ಲ, ನಾನು ನೋಡಿಕೊಂಡು ಬಂದೆ. ಮೂರನೇ ಮಹಡಿಯಲ್ಲೂ ಅವರು ನಮಗೇನೂ ಕಾಣಿಸಲಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಹೋಗಿದ್ದಾರೆ? ಎಂಬುದ ನನಗೆ ಬೇಕು.

(ಗೊಂದಲ)

ಏಕೆಂದರೆ, ಈ ಬರಗಾಲದ ಬಗ್ಗೆ ಇಷ್ಟೊಂದು ಕಾಳಜಿಯಿಂದ ಈ ಸಭೆ ನಡೆಯುತ್ತಿರುವಾಗ, ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಪ್ರಭಾವಿತರಾಗಿ ಇಲ್ಲಿ ಕುಳಿತು, ತಮ್ಮ ಅನಿಸಿಕೆಗಳನ್ನು ಮತ್ತು ತಮ್ಮ ಸರ್ಕಾರದ ವಿಚಾರ ಧಾರೆಗಳನ್ನು ಹೇಳಬೇಕಾದುದು ಅವರ ಕರ್ತವ್ಯವಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲದಿರುವುದರಿಂದ ನನಗೆ ಅತ್ಯಂತ ಬೇಜಾರಾಗಿದೆ. ಇಲ್ಲಿ ಏನಾಗಿದೆ ಎಂದರೆ, ಒಂದಕ್ಕೊಂದು ಸಂಬಂಧ ಇದೆ. ಮಾನ್ಯ ಬಂಗಾರಪ್ಪನವರು ನಿನ್ನೆ ಶ್ರೀ ಶರದ್ ಪವಾರ್ ಅವರನ್ನು ಭೇಟಿ ಮಾಡಿದ್ದರು. ಗೋಪ್ಯವಾಗಿ ಶ್ರೀ ಶರದ್ ಪವಾರರವರು ಮಾನ್ಯ ಗೃಹ ಮಂತ್ರಿಗಳ ಮನೆಗೆ ಹೋಗಿದ್ದರು. ಹಾಗೆಂದು ನನಗೆ ತಿಳಿದು ಬಂದಿದೆ. ನಿಜವಾಗಿಯೂ ಬಂದಿದ್ದರೋ, ಇಲ್ಲವೋ ನನಗೆ ಗೊತ್ತಿಲ್ಲ. ಇವೆಲ್ಲಾ ಒಂದರ ಹಿಂದೆ ಒಂದು ನಡೆದಂತಹ ಘಟನೆಗಳನ್ನು ನೋಡಿದಾಗ ಏನೋ ನಡೆದಿದೆ ಎನಿಸುತ್ತದೆ. ಇದು ನಿಮ್ಮ ಸರ್ಕಾರದ ಭವಿಷ್ಯದ ಬಗ್ಗೆ ನನ್ನ ಚಿಂತನೆ ಅಷ್ಟೆ. ನಿಮ್ಮ ಸರ್ಕಾರ ಇರಬೇಕು ಎಂದು ಪ್ರಾಮಾಣಿಕವಾಗಿ ಹೇಳುವವರಲ್ಲಿ ನಾನೂ ಒಬ್ಬ. ಮಾನ್ಯ ನಂಜೇಗೌಡರೇ ತಮಗೆ ಗೊತ್ತಿದೆ, ತಮ್ಮ ಪಕ್ಷದವರು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದಾಗ, ನೀವು ಕನಿಷ್ಟ ಒಂದು ವರ್ಷವಾದರೂ ಇದನ್ನು ತಡೆಹಿಡಿಯಬೇಕಾಗಿತ್ತು, ಇಷ್ಟು ತುರ್ತಾಗಿ ಇದನ್ನು ತಂದಿದ್ದು ಸರಿಯಲ್ಲವೆಂದು ನಾನು ಹೇಳಿದ್ದೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ವಾಟಾಳರು ಇಲ್ಲಿ ಏಕಿರಬೇಕು ಎಂದರೆ, ನೀವು ಇಲ್ಲಿ ಇರುವುದರಲ್ಲಿ ಅವರಿಗೆ ಬಹಳ ಆಸಕ್ತಿ ಇದೆ. ನೀವು ಹೋದರೆ ಅವರು ಬರುವ ಹಾಗಿಲ್ಲ. ಯಡಿಯೂರಪ್ಪನವರು ಬಂದು ಬಿಡುತ್ತಾರೆ. ಇವರಿಗೆ ಬಹಳ ಫಜೀತಿಯಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರು ಬರುವುದು ನಿಮಗೆ ಇಷ್ಟವಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಿನ್ನೆ ಅವರೇ ಒಪ್ಪಿಕೊಂಡಿರುತ್ತಾರೆ. ಅವರು ಅಧಿಕಾರಕ್ಕೆ ಬಂದರೆ ಬರಗಾಲ, ಬಿ.ಜೆ.ಪಿ. ಯವರು ಅಧಿಕಾರಕ್ಕೆ ಬಂದರೆ ಭೂಕಂಪವಾಗುತ್ತದೆಂದು ಅದಕ್ಕೇ, ಭೂಕಂಪದವರೂ ಬೇಡ, ಬರಗಾಲದವರೂ ಬೇಡ. ನಾವು ಅಧಿಕಾರಕ್ಕೆ ಬರುತ್ತೇವೆ.

(ಗೊಂದಲ)

ಶ್ರೀ ಬಿ.ಬಿ ಶಿವಪ್ಪ : ಇವರು ಅಧಿಕಾರಕ್ಕೆ ಬಂದರೆ ಪ್ರಳಯವಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಭೂಕಂಪದ ವಿಷಯ ಬೇಡ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಯಾರಿಗೂ ಏನೂ ತೊಂದರೆಯಾಗದೇ ಇರತಕ್ಕ ಒಂದು ವ್ಯವಸ್ಥೆ ಇರಲಿ. ಅದರ ಬಗ್ಗೆ ನನ್ನದೇನೂ ಅಭ್ಯಂತರ ಇಲ್ಲ. ನಾನು ಇದನ್ನು ಬಹಳಹಾಸ್ಯವಾಗಿ ಅಥವಾ ಲಘುವಾಗಿ ತೆಗೆದುಕೊಂಡಿಲ್ಲ. ಏಕೆಂದರೆ ಈ ಸದನದಲ್ಲಿ ಬಹಳ ಜವಾಬ್ದಾರಿಯುತವಾಗಿ ಬರಗಾಲದ ಬಗ್ಗೆ ಚರ್ಚೆ ಮಾಡುವಾಗ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರಬೇಕು. ಮಿಕ್ಕ ಸಂದರ್ಭಗಳಲ್ಲಿ ಬೇಕಾದರೆ ಅವರಿಲ್ಲದಿದ್ದರೂ ಪರವಾಗಿಲ್ಲ. ಬರಗಾಲದ ಬಗ್ಗೆ ಎಷ್ಟು ತುರ್ತಾಗಿ ಚರ್ಚೆಯನ್ನು ಮಾಡಬೇಕೆಂದಿದ್ದವೋ, ಅದು ಅನೇಕ ಕಾರಣಗಳಿಂದ ತುರ್ತಾಗಿ ನಡೆಯಲಿಲ್ಲ. ಬರಗಾಲದ ಬಗ್ಗೆ ಚರ್ಚೆ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳೂ ಸೇರಿದಂತೆ, ಸದನದ ಮುಂದಿನ ಸಾಲಿನಲ್ಲಿ ಒಬ್ಬರೂ ಕೂಡ ಕುರ್ಚಿಯಲ್ಲಿ ಇಲ್ಲ. ನಮ್ಮ ಅಧಿಕಾರಿಗಳಿಗೆ ಒಂದು ಅಭ್ಯಾಸವಾಗಿ ಹೋಗಿದೆ. ಅದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತಿದ್ದರೆ, ಎಲ್ಲಾ ಅಧಿಕಾರಿಗಳೂ ಸದನದಲ್ಲೇ ಕುಳಿತಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಸದನದಿಂದ ಎದ್ದೂ ಹೊರಟರು ಎಂದರೆ, ಅವರ ಹಿಂದೆಯೇ ಅಧಿಕಾರಿಗಳು ಹೊರಟು ಹೋಗುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರೆ, ಅವರ ಹಿಂದೆಯೇ ಬಾಲ ಬಂದಂತೆ ಅಧಿಕಾರಿಗಳು ಬರುತ್ತಿರುತ್ತಾರೆ. ಇದು ಈ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳ ತೋರತಕ್ಕ ಅಗೌರವವೂ ಹೌದು. ಇದು ಮಾನ್ಯ ಮುಖ್ಯಮಂತ್ರಿಗಳ ಬರಗಾಲ ಚರ್ಚೆ ನಡೆಯುವಾಗ ಸದನದಲ್ಲಿ ಇಲ್ಲದಿರುವುದು ಈ ಸದನಕ್ಕೆ ತೋರತಕ್ಕ ಒಂದು ಅನಾದರಣೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಈ ಮಾತನ್ನು ನಾನು ಮಾನ್ಯ ಗೃಹ ಮಂತ್ರಿಗಳಿಗೇ ಏಕೆ ಹೇಳುತ್ತಿದ್ದೇನೆ ಎಂದರೆ.. ನನಗೆ ಅವರ ಬಗ್ಗೆ ಬಹಳ ಅಪಾರವಾದ ಗೌರವ ಇದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದಲ್ಲಿ ಪ್ರವಾಸ ಹೋದರು. ಈ ವಿಷಯ ತಮಗೂ ಗೊತ್ತಿರಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರವಾಸ ಕಾಲದಲ್ಲಿ ರಕ್ಷಣೆ ನೀಡಲು ಯಾರಾದರೂ ಉನ್ನತ ಪೋಲೀಸ್ ಅಧಿಕಾರಿಗಳು ಹೋಗಬಹುದಾಗಿತ್ತು ಅಥವಾ ಇತರೆ ಪೋಲೀಸ್ ಅಧಿಕಾರಿಗಳು ಹೋಗಬೇಕಾಗಿತ್ತು. ಆದರೆ ಅವರೆಲ್ಲರನ್ನೂ ಮೀರಿಸಿ, ನಮ್ಮ ಸ್ನೇಹಿತರಾದ ಮಾನ್ಯ ಗೃಹ ಮಂತ್ರಿಗಳು ನಮ್ಮ ಮುಖ್ಯಮಂತ್ರಿಗಳಿಗೆ ನಾನೇ ರಕ್ಷಣೆ ಕೊಡುತ್ತೇನೆಂದು ಪ್ರತಿ ಜಿಲ್ಲೆಯಲ್ಲೂ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಹೋದರು. ಇದು ಗೃಹ ಇಲಾಖೆಯ ಮೇಲೆ ಏನೊಂದು ಗೌರವ ಮತ್ತು ನಂಬಿಕೆ ಇತ್ತೋ, ಅದೀಗ ಇಲ್ಲವೇನೋ ಎಂಬ ಪರಿಸ್ಥಿತಿ ಉಂಟಾಗಿದೆ. ಮಾನ್ಯ ಗೃಹ ಸಚಿವರೇ ಸ್ವತಃ ಮಾನ್ಯ ಮುಖ್ಯಮಂತ್ರಿಗಳ.. ರಕ್ಷಣೆಗೆ ಹೋಗಿರತಕ್ಕದ್ದು ಸಂತೋಷ. ಮಾನ್ಯ ಸಿಂಧ್ಯಾರವರಿಗೂ ನನಗೂ ಒಳ್ಳೆಯ ಬಾಂಧವ್ಯ ಇದೆ, ಇದು ಅವರಿಗೂ ಗೊತ್ತಿದೆ, ಇದರ ಬಗ್ಗೆ ಯಾರದೇನೂ ಚಕಾರ ಇಲ್ಲ.ನಾನು ತಮಗೆ ಒಂದು ಮಾತು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಎಲ್ಲಿದ್ದಾರೆ ? ಸದನಕ್ಕೆ ಏಕೆ ಬಂದಿಲ್ಲ? ಎಂಬ ಬಗ್ಗೆ ತಾವು ಸುಳ್ಳು ಹೇಳದೇ, ಸತ್ಯವಾಗಿ ಇರುವ ಸಂಗತಿಯನ್ನು ಹೇಳಬೇಕು. ಏಕೆಂದರೆ ಈ ಬಗ್ಗೆ ಮಿಕ್ಕ ಸಚಿವರನ್ನು ಕೇಳುವುದು ಅಷ್ಟು ಸಮಂಜಸವಲ್ಲ. ಅವರೆಲ್ಲರಿಗಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿದ್ದಾರೆ ಎಂಬುದು ಮಾನ್ಯ ಗೃಹ ಸಚಿವರಿಗೇ ಗೊತ್ತಿರುತ್ತದೆ. ಆದುದರಿಂದ ಈ ಬಗ್ಗೆ ಒಂದು ಸ್ಪಷ್ಟವಾದ ವಿಚಾರವನ್ನು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹಮಂತ್ರಿಗಳು) : ಬರಗಾಲದ ಬಗ್ಗೆ ಚರ್ಚೆ ಮಾಡತಕ್ಕಂತಹ

ಸಂದರ್ಭದಲ್ಲಿ ಸಾಮಾನ್ಯವಾಗಿ ನಾವೆಲ್ಲರೂ ಕೂಡ ಇರಬೇಕು, ಮಾನ್ಯ ಸದಸ್ಯರುಗಳು ಹೇಳಿರತಕ್ಕಂತಹ ವಿಚಾರದಲ್ಲಿ ಸತ್ಯವಿದೆ, ಅದನ್ನು ನಾನು ಒಪ್ಪುತ್ತೇನೆ. ಮುಖ್ಯಮಂತ್ರಿಗಳು ಈ ವಿಧಾನಸೌಧದ ಮೂರನೆ ಮಹಡಿಯ ಅವರ ಕಛೇರಿಯಲ್ಲಿ ಇದ್ದಾರೆ. ಬೆಳಗಿನಿಂದಲೂ ಕೂಡ ಅಲ್ಲಿಯೇ ಇದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕಾರ್ಯಕ್ರಮವಾದ ಮೇಲೆ, ವಿಧಾನಸೌದ ತಮ್ಮ ಕೊಠಡಿಯಲ್ಲಿ ಈಗಲೂ ಸಹಿತ ಅಲ್ಲೇ ಇದ್ದಾರೆ. ಬರಗಾಲಕ್ಕೆ ಸಂಬಂಧಪಟ್ಟಹಾಗೆ, ಕೆಲವು ಬಡತನ ನಿರ್ಮೂಲನ ಕಾರ್ಯಕ್ರಮಗಳನ್ನು ಈ ಅಧಿವೇಶನದಲ್ಲಿ ಪ್ರಸ್ತಾಪ ಮಾಡುವ ದೃಷ್ಟಿಯಿಂದಾಗಿಯೇ ಅಧಿಕಾರಿಗಳ ಜೊತೆಯಲ್ಲಿ, ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆಯಲ್ಲಿ, ಗೃಹ ಇಲಾಖೆಯ ಕಾರ್ಯದರ್ಶಿಗಳ ಜೊತೆಯಲ್ಲಿ ಮತ್ತು ನಿನ್ನೆ ದಿವಸ ಈ ಸದನದಲ್ಲಿ ನಡೆದಂಥ ಗ್ರಾನೈಟ್ ವ್ಯವಹಾರಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ತನಿಖೆ, ಅದಕ್ಕೆ ಸಂಬಂಧಪಟ್ಟಂತೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಮುಖ್ಯಮಂತ್ರಿಗಳು ಅಲ್ಲೇ ತಮ್ಮ ಕೆಲಸವನ್ನು ಮಾಡುತ್ತಿದ್ದಾರೆ. ಮತ್ತೆ, ಬರಗಾಲದ ವಿಚಾರದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರುಗಳ ಅಭಿಪ್ರಾಯವನ್ನು ಕೇಳುವುದಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಇಲ್ಲೇ ಇದ್ದಾರೆ, ಮತ್ತು ನಾವು ಐದಾರು ಜನ ಸಹೋದ್ಯೋಗಿಗಳಾದ, ಗ್ರಾಮೀಣಾಭಿವೃದ್ಧಿ ಮಂತ್ರಿಗಳಿದ್ದಾರೆ, ಶಿಕ್ಷಣ ಮಂತ್ರಿಗಳಿದ್ದಾರೆ, ನಾನು ಕೂಡ ಇದ್ದೇನೆ. ಪ್ರತಿಯೊಂದು ಮಾತನ್ನೂ ಕೂಡ ಕೇಳುತ್ತಿದ್ದೇವೆ. ಬರೆದುಕೊಳ್ಳುತ್ತಿದ್ದೇವೆ ಹಾಗೂ ಇದರ ಬಗ್ಗೆ ಕ್ರಮವನ್ನು ಕೂಡ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಸದನಕ್ಕೆ ಅಗೌರವ ಕೊಡಬೇಕೆನ್ನುವ ದೃಷ್ಟಿ, ಸರ್ಕಾರಕ್ಕಾಗಲಿ, ನಮ್ಮಗಾಗಲಿ ಇಲ್ಲ. ಯಾವುದೇ ಒಬ್ಬ ಸದಸ್ಯರುಗಳು, ಒಬ್ಬರು ದೊಡ್ಡವರು, ಒಬ್ಬರು ಚಿಕ್ಕವರು, ಒಬ್ಬರು ಹೊಸಬರು ಹಳಬರು ಎನ್ನತಕ್ಕಂತಹ ಮನೋಭಾವನೆ ಇಲ್ಲ. ಮಾನ್ಯ ಗೌರವಾನ್ವಿತ ಸದಸ್ಯರು ಕೊಡತಕ್ಕಂತಹ ಎಲ್ಲಾ ಅಭಿಪ್ರಾಯಗಳನ್ನು ನಾವು ತೆಗೆದುಕೊಂಡು, ಇದನ್ನು ನಾವು ಕಾರ್ಯಗತ ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಎಲ್ಲಾ ಸದಸ್ಯರಿಗೂ ಕೂಡ ಕೊಡುವುದಕ್ಕೆ ಬಯಸುತ್ತೇನೆ. ಒಂದೆರಡು ವಿಚಾರಗಳನ್ನು ಮಾನ್ಯ ವಾಟಾಳ್ ನಾಗರಾಜ ರವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ೧೬ ಜಿಲ್ಲೆಗಳಲ್ಲಿ ಪ್ರವಾಸ ಮಾಡತಕ್ಕಂತಹ ಸಂದರ್ಭದಲ್ಲಿ, ಜನತಾದರ್ಶನ ಕಾರ್ಯಕ್ರಮದಲ್ಲಿ, ವಾಟಾಳರವರು ನನ್ನ ಮೇಲೆ ಇಟ್ಟಿರತಕ್ಕಂತಹ ಒಂದು ಹೆಚ್ಚಿನ ವಿಶ್ವಾಸದಿಂದ ಮುಖ್ಯಮಂತ್ರಿಯವರ ರಕ್ಷಣೆಗೋಸ್ಕರ ಹೋದರು, ಎಂದು ಅಷ್ಟೆ ಹೇಳಿದರು. ನಮ್ಮ ವಿರೋಧಪಕ್ಷದ ನಾಯಕರು, ಅವರಿಗೂ ನನ್ನ ಮೇಲೆ ಬಹಳ ಗೌರವವಿದೆ, ಆದರೆ ಅವರು ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಗೃಹ ಸಚಿವರು ಮುಖ್ಯಮಂತ್ರಿಯವ ಗನಮೆನ್ ಎಂದು ಹೇಳಿಬಿಟ್ಟರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಇದು ನನ್ನ ಪ್ರಾಥಮಿಕ ಕರ್ತವ್ಯವಾಗಿದೆ. ಈ ರಾಜ್ಯದ ಪ್ರತಿಯೊಬ್ಬ ಪ್ರಜೆಯು, ನಾಲ್ಕೂವರೆ ಕೋಟಿ ಜನರ ಪ್ರಾಣ, ಮಾನ ಮಗದೊಂದು ಸಂರಕ್ಷಣೆ ಮಾಡತಕ್ಕಂತಹದ್ದು ನನ್ನ ಕರ್ತವ್ಯ. ಆದರೆ ಒಂದು ವಿಚಾರವನ್ನು ತಾವು ಪ್ರಸ್ತಾಪ ಮಾಡಿರುವುದರಿಂದ ನಾನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಜನತಾದರ್ಶನಕ್ಕೆ ಬರಬೇಕೆಂದು ಹೇಳಿದ್ದು, ಬರೀ ಗೃಹಮಂತ್ರಿಗಳಿಗೆ ಮಾತ್ರವೇ ಇಲ್ಲ. ಎಲ್ಲಾ ಜಿಲ್ಲೆಗಳಲ್ಲೂ, ಮುಖ್ಯವಾಗಿ ಆಯಾ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಿರಬೇಕು, ಗ್ರಾಮೀಣಾಭಿವೃದ್ಧಿ ಮಂತ್ರಿಗಳಿರಬೇಕು, ಕಂದಾಯ

ಮಂತ್ರಿಗಳಿರಬೇಕು, ಹಣಕಾಸು ಮಂತ್ರಿಗಳಿರಬೇಕು, ಗೃಹ ಇಲಾಖೆಯ ಮಂತ್ರಿಗಳು ಕೂಡ ಇರಬೇಕು, ಸ್ಥಳೀಯವಾಗಿ ನಾವು ಮೊದಲನೆ ಸಾರಿ ಅಧಿಕಾರಕ್ಕೆ ಬಂದ ಮೇಲೆ ಅನೇಕ ಜಿಲ್ಲೆಗಳಿಗೆ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಕೆಲವು ಮಹತ್ವದ ವಿಚಾರಗಳ ಬಗ್ಗೆ ಅಲ್ಲಿಯೇ ನಾವು ತೀರ್ಮಾನಕ್ಕೆ ಬರಬಹುದೆಂಬ ದೃಷ್ಟಿಯಿಂದ ಮುಖ್ಯಮಂತ್ರಿಗಳು ಹೇಳಿದರು. ಆ ದೃಷ್ಟಿಯಿಂದಾಗಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಹೋಗಿದ್ದೆನೆಯೇ ಹೊರತು, ಅವರಿಗೆ ರಕ್ಷಣೆ ಕೊಡುವುದಕ್ಕೆ ಮತ್ತೊಂದು ಮಾಡುವುದಕ್ಕೆ ನಮ್ಮ ಕರ್ನಾಟಕದ ಪೋಲೀಸರು ಸಾಕಷ್ಟು ಶಕ್ತಿಯುತವಾಗಿದ್ದಾರೆ. ಅವರು ನಿಮಗೂ ರಕ್ಷಣೆ ಕೊಡುತ್ತಾರೆ, ಸದಸ್ಯರಿಗೂ ರಕ್ಷಣೆ ಕೊಡುತ್ತಾರೆ, ಅವರಿಗೂ ರಕ್ಷಣೆಯನ್ನೂ ಕೊಡುತ್ತಾರೆ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಗಳಾದ ಶರದ್ ಪವಾರ್‌ರವರು ನಾವು ಭೇಟಿ ಮಾಡಿರತಕ್ಕಂತಹದ್ದು ಗೌಪ್ಯವಾಗಿ ಏನಿಲ್ಲ. ಅವರು ಬೆಂಗಳೂರಿಗೆ ಬಂದಿದ್ದರು, ಸೌಜನ್ಯಕೋಸ್ಕರ ನಮ್ಮ ಮನೆಗೆ ಕರೆದಿದ್ದೆ, ಅವರು ಬಂದು ಹೋಗಿದ್ದಾರೆ, ಅದರಲ್ಲೇನೂ ಗೌಪ್ಯವಿಲ್ಲ. ಏತಕ್ಕೆ, ನಿಮ್ಮಲ್ಲಿ ರಾಮಕೃಷ್ಣ, ಎನ್ನತಕ್ಕಂತದಿದೆ, ಲೆಕ್ಕಾಚಾರವಿದೆ, ದೇವೇಗೌಡರು ಹೆದರಿಕೊಂಡು ಮನೆಯಲ್ಲಿ ಸೇರಿಕೊಂಡಿದ್ದಾರೆ, ಲೆಕ್ಕಾಚಾರ ಏನೋ ಹಾಕುತ್ತಿದ್ದಾರೆ, ಎನ್ನುವ ದೃಷ್ಟಿಯಲ್ಲಿ ಖರ್ಗೆ ಸಾಹೇಬರು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೆದರುವುದೇ ಇಲ್ಲ. ಅವರು ಪೇಪರ್, ಪೆನ್ನು ಇತ್ಯಾದಿಗಳನ್ನು ಹೇಗೆ ಬಿಸಾಕುತ್ತಾರೆಂಬುದನ್ನು ನೀವು ನೋಡಿದಿರಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ಖರ್ಗೆಯವರಿಗಾಗಲಿ, ವಾಟಾಳ್‌ರವರಿಗಾಗಲಿ ಇದರ ಬಗ್ಗೆ ಚಿಂತೆ ಬೇಕಾಗಿಲ್ಲ. ನಮ್ಮಲ್ಲಿ, ನಮ್ಮ ೧೧೯ ಶಾಸಕರ ಜೊತೆಗೆ ನಮಗೆ ಬೆಂಬಲ ಕೊಡುವ ೧೦ ಜನ ಶಾಸಕರು ಸೇರಿದಂತೆ ಒಟ್ಟು ೧೨೯ ಜನ ಶಾಸಕರುಗಳು, ನಾವೆಲ್ಲಾ ಭದ್ರವಾಗಿದ್ದೇವೆ. ಈ ಸರ್ಕಾರ ೫ ವರ್ಷ ಗಟ್ಟಿಯಾಗಿರಬೇಕೆಂದು ನಿಮ್ಮ ಮನಿಸ್ಸನಲ್ಲಿ ಏನಿದೆ, ಅದು ಗಟ್ಟಿಯಾಗಿರುತ್ತದೆ. ಖರ್ಗೆಯವರಿಗೆ ಸ್ವಲ್ಪ ತಳಮಳ ಇದೆ. ನಾನು ಅದನ್ನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಗರಿಷ್ಠ ಬೆಂಬಲವಾದ ಇನ್ನೂರು ಅರವತ್ತು, ಎಪ್ಪತ್ತು ಪಡೆದಂಥ ಎನ್.ಟಿ.ಆರ್. ಸರ್ಕಾರ ಆಂಧ್ರ ಪ್ರದೇಶದಲ್ಲಿ ಹಾಗೆ ಆಗಬೇಕಾದರೆ, ಇನ್ನು ನೀವೆಷ್ಟು ಜನ ಶಾಸಕರಿದ್ದೀರಿ...

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಲ್ಲ, ನಾನು ಹೇಳುತ್ತೇನೆ ಕುಳಿತುಕೊಳ್ಳಿ, ಇವತ್ತು ಅವರಿಗೆ ಏತಕ್ಕೆ ತಳಮಳವಿದೆ ಎಂದರೆ, ಅವರಿಗೆ ಅಮೇಥಿ ಭಾಷಣ ತಳಮಳವನ್ನು ತಂದಿರುತ್ತದೆ.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಇಲ್ಲಿ, ನಮ್ಮಲ್ಲಿ ಶಿವಪಾರ್ವತಿಯಾಗಲಿ ಸೋನಿಯ ಗಾಂಧಿಯಾಗಲಿ ಇಲ್ಲ. ನಾವೆಲ್ಲಾ ಭದ್ರವಾಗಿರುತ್ತೇವೆಂದು ತಿಳಿಸುತ್ತಿದ್ದೇನೆ. There is no need forus to have Sonia Gandhi or Shivaparvathi.

ಶ್ರೀ ಬಿ.ಬಿ. ಶಿವಪ್ಪ : ನಮ್ಮ ನಾಯಕರ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರಿಂದ

ನಾನು ಹೇಳಬೇಕಾಗಿದೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು ನನ್ನನ್ನು ಗನ್ ಮ್ಯಾನ್ ಎಂದು ಹೇಳಿದ್ದಾರೆಂದು ಅವರು ಪ್ರಸ್ತಾಪ ಮಾಡಿದರು. ಮತ್ತೊಂದು ವಿಚಾರವನ್ನು ಅವರು ಮಾತನಾಡುತ್ತಾ ಹೇಳಿದರು, ಮುಖ್ಯಮಂತ್ರಿಗಳಿಗೆ ಮಾತ್ರವಲ್ಲ, ಈ ರಾಜ್ಯದ ಎಲ್ಲರಿಗೂ ರಕ್ಷಣೆ ಕೊಡತಕ್ಕಂತಹ ಶಕ್ತಿಯುತವಾದಂತ ಪೋಲೀಸ್ ಅಧಿಕಾರಿಗಳು ನಮ್ಮಲ್ಲಿದ್ದಾರೆ, ಭಯಪಡುವುದು ಬೇಡವೆನ್ನುವ ಮಾತನ್ನು ಕೂಡ ಹೇಳಿದರು. ಆ ಮಾತನ್ನು ಪ್ರಸ್ತಾಪ ಮಾಡಬೇಕಾದಂಥ ಸಂದರ್ಭ ಏತಕ್ಕೆ ಒದಗಿ ಬಂತು? ಏತಕ್ಕೆಂದರೆ, ಸನ್ಮಾನ್ಯ ಗೃಹಸಚಿವರೇ ಒಬ್ಬ ಶಾಸಕರು ಕುತ್ತಿಗೆಪಟ್ಟಿಯನ್ನು ಹಿಡಿದರು ಎನ್ನತಕ್ಕ ವಿಚಾರ ಪತ್ರಿಕೆಯಲ್ಲಿ ಬಂದಂಥ ಆ ಸಂದರ್ಭದಲ್ಲಿ ಇವರು ಗನಮ್ಯಾನ್ ಮಾಡತಕ್ಕಂತಹ ಕೆಲಸವನ್ನು ಗೃಹಸಚಿವರು ಮಾಡಿದರು, ಎನ್ನುವ ಉದ್ದೇಶಕ್ಕೋಸ್ಕರ ನಮ್ಮನಾಯಕರು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆಯೇ ವಿನಃ ಗೃಹ ಸಚಿವರನ್ನೆ ಆ ಮಟ್ಟಕ್ಕೆ ಇಳಿಸಲಿಕ್ಕೆ ಅವರು ಮಾತನಾಡಿದ್ದಾರೆಂದು ಹೇಳುವುದನ್ನು ನಾನು ಖಂಡಿತಾ ಒಪ್ಪಿಕೊಳ್ಳುವುದಿಲ್ಲ. ಆದರೆ, ದಯಮಾಡಿ, ಗೃಹಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಮ್ಮನಾಯಕರ ಬಗ್ಗೆ ಆ ರೀತಿಯ ಆಪಾದನೆ ಮಾಡುವುದು ಬೇಡ. ಅವರ ವರ್ತನೆಯನ್ನು, ಅವರು ಇಲ್ಲಿ ಪ್ರಚಾರ ಮಾಡುವಂಥ ಉದ್ದೇಶ ಇಲ್ಲ ಅವರು ಇದನ್ನು ಪ್ರಸ್ತಾಪ ಮಾಡಿದ್ದು, ಸದನದ ಮುಂದೆ ಇಟ್ಟರು ಅಷ್ಟೆ. ಆದುದರಿಂದ ದಯಮಾಡಿ ಗೃಹಸಚಿವರು, ತಪ್ಪು ಕಲ್ಪನೆ ಮಾಡಿಕೊಂಡಿದ್ದೀರಿ. ತಾವು ಗೃಹಮಂತ್ರಿಗಳೇ ಅದರಲ್ಲಿ ಏನೇನೂ ಅನುಮಾನವಿಲ್ಲ. ಈ ವಿಚಾರವನ್ನು ನಾನು ಒತ್ತಿ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮ ಬಗ್ಗೆ ಅನುಮಾನ ಪಡಲಿಲ್ಲ. 'ಗೃಹ ಸಚಿವರು ಏನು ಹೇಳಿದರೆಂದರೆ, ನಮ್ಮ ಮೇಲೆ ಅನುಮಾನ ಪಡಬೇಡಿ, ನಿಮ್ಮ ಒಳ್ಳೆಯ ಚಿಂತನೆಗೆ, ಉದ್ದೇಶಕ್ಕೆ ನಾನು ಸಂತೋಷ ಪಡುತ್ತೇನೆ, ಖರ್ಗೆಯವರಿಗಾದರೆ ತಳಮಳ ಎಂದು ಹೇಳಿಬಿಟ್ಟರು. ನನಗನಿಸುತ್ತದೆ, ತಾವು ೧೨೦, ೧೩೦ ಜನ ಶಾಸಕರೆಂದು ಲೆಕ್ಕ ಹಾಕುತ್ತಿದ್ದೀರಲ್ಲ, ಆ ೧೨೯ ಎಲ್ಲಿದೆ? ಇವರು ದಿನಕ್ಕೆ ಒಂದೊಂದು ಮಾತನ್ನಾಡುತ್ತಾರೆ. ಮೊನ್ನೆ ಇವರ ಗಣಿ, ಭೂ ವಿಜ್ಞಾನ ಸಚಿವರು ವಿರೋಧಪಕ್ಷದಿಂದ ೧೨ ಜನ ಬರುತ್ತಾರೆಂದು ಹೇಳಿದರು. ಅವರ್‍ಯಾರು ಆ ೧೨ ಜನವೆಂದು ಅವರು ಇನ್ನು ಹೇಳಲಿಲ್ಲ. ಅಲ್ಲಿಗೆ ೧೨೦ ಜನ ಜೊತೆಗೆ ೧೨ ಜನ ಸೇರಿ ಒಟ್ಟು ೧೩೨ ಜನ, ಇದೇನು ಭ್ರಮೆನಾ ಹೇಗೆ? ನನಗನಿಸುತ್ತದೆ, ಪಾಪ ನಾನು ನಿಮ್ಮ ಸರ್ಕಾರ ಹೋಗಬೇಕೆಂದು ಇಚ್ಛೆಪಡತಕ್ಕಂತವನಲ್ಲ. ನಿಮ್ಮ ಸರ್ಕಾರ ಇರಬೇಕು, ನಿಮ್ಮ ಸರ್ಕಾರ ಇದ್ದರೆ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ವಾಟಾಳ್ ನಾಗರಾಜರವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ನಮ್ಮ ಸರ್ಕಾರದ ಹಿತದೃಷ್ಟಿಯಿಂದಾಗಲಿ, ನೀವು ದಯವಿಟ್ಟು, ನಿಮ್ಮ ಸರ್ಕಾರ ಇರಬೇಕು. ಇರಬೇಕು ಎಂದು ಹೇಳಲೇ ಬೇಡಿ, ನೀವು ಯಾರ್‍ಯಾರಿಗೆ ಹೇಳಿದ್ದಿರೋ ಅವರೆಲ್ಲಾ ಹೊರಟು ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಖಂಡಿತವಾಗಿ ಆ ರೀತಿ, ಅವರು ಯಾವ ಸಂದರ್ಭದಲ್ಲಿಯೂ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ, ಹೀಗಾದರೆ, ಅವರ ಸ್ಥಳ ಅದೇನೆ, ತಾವು ಹೇಳುತ್ತಾ ಹೋಗಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಏಕೆಂದರೆ, ಈ ಚಾಮರಾಜನಗರಕ್ಕೂ ಮುಖ್ಯಮಂತ್ರಿಗಳು ಹೋಗುವುದಕ್ಕೂ ಸಂಬಂಧವಿದೆ, ಖರ್ಗೆಯವರೂ ಆ ವಿಚಾರ ಗೊತ್ತಿದೆ. ಚಾಮರಾಜ ನಗರಕ್ಕೆ ಯಾರ್ಯಾರು ಮುಖ್ಯಮಂತ್ರಿಗಳು ಹೋಗಿದ್ದಾರೆ, ಅದರ ಮುಂದಿನ ತಿಂಗಳೂ ಅವರಿಗೆ ಅಧಿಕಾರ ಹೊರಟು ಹೋಗಿಬಿಡುತ್ತದೆ. ಅವರು ಅಲ್ಲಿನ ಶಾಸಕರು ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಎ. ರಾಮದಾಸ್ : ಏಕೆ ಆ ರೀತಿ ಆಗುತ್ತದೆಂದರೆ, ಈ ರಾಜ್ಯದ ಒಬ್ಬ ಮುಖ್ಯಮಂತ್ರಿಯಾಗಿ ಅವರು ಕೆಲಸ ಮಾಡುತ್ತಿರುವುದರಿಂದ ಬೇರೆಯವರ ಅವಶ್ಯಕತೆ ಅಲ್ಲಿಲ್ಲವೆಂದಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನನಗನಿಸುತ್ತದೆ, ನೀವು ಹೇಳುವುದರಿಂದ, ಮುಖ್ಯಮಂತ್ರಿಗಳು ಹೋದರೆಂದು ಅವರು ಮೊದಲು ಹೇಳಿದರು. ಅದು ಸತ್ಯಕ್ಕೆ ದೂರವಾದದ್ದು ಸಮಾಜ ಕಲ್ಯಾಣ ಸಚಿವರೆ ಕುಳಿತುಕೊಳ್ಳಿ, ಇವೆಲ್ಲಾ ಚರ್ಚೆಯಲ್ಲಿ ಸ್ವಲ್ಪ ಬರುತ್ತದೆ. ಯಾರದೋ ಒಬ್ಬರ ಹೆಸರು ಇಲ್ಲಿ ಪ್ರಸ್ತಾಪ ಬಂದಾಗ, ಅದು ಹಾಗೆ ಉಳಿಯಬಾರದು, ಅದು ಚರ್ಚೆಯಾಗಬೇಕು, ಹಾಗೆ ಉಳಿಯಬಾರದು. ನಾನು ಮಾನ್ಯ ಗೃಹಸಚಿವರಲ್ಲಿ ಹೇಳುತ್ತಿದ್ದೇನೆ, ನಾನು ಹೇಳಿದ ಮುಖ್ಯಮಂತ್ರಿಗಳೆಲ್ಲಾ ಹೋದರು ಎಂದು ಹೇಳಿದರು. ಹಾಗೆ ಹೋಗುವುದಾದರೆ ಸುಲಭವಾಗಿ ಹೊರಟು ಹೋಗುತ್ತಿದ್ದರು. ನೀವು ಇಷ್ಟೆಲ್ಲಾ ರಾಡಿ ಮಾಡಿ, ಆಕಾಶ ಭೂಮಿಗೆ ಇಳಿದು ಹೋಗಬೇಕಾಗಿರಲಿಲ್ಲ. ಅವರಿಗೆ ಗೊತ್ತಿಲ್ಲವೆಂದು ನಾನು ಹೇಳುತ್ತೇನೆ. ಮತ್ತು ಅವರು ನಮ್ಮ ಚಾಮರಾಜನಗರದ ಬಗ್ಗೆಯು ಪ್ರಸ್ತಾಪ ಮಮಾಡಿದರು, ವರಿಗೇನು ಗೊತ್ತಿಲ್ಲ. ಚಾಮರಾಜ ನಗರಕ್ಕೆ ಅನೇಕ ಸಾರಿ ಮಾನ್ಯ ಗೃಹಸಚಿವರು ಬಂದು ಹೋಗಿದ್ದಾರೆ. ಅವರು ಬಂದು ಹೋದ ಮೇಲೆ ಅನೇಕ ಸಾರಿ ಮಂತ್ರಿಯಾದರು. ನೀವು ಏನೂ ಹೆದರಬೇಕಾಗಿಲ್ಲ. ಇದು ತಪ್ಪು ಕಲ್ಪನೆ ಎಂದು ನನಗನಿಸುತ್ತದೆ, ಅದು ತೀರಾ ತಪ್ಪು ಕಲ್ಪನೆ. ಚಾಮರಾಜ-ನಗರ ಬಹಳ ಒಳ್ಳೆಯ ಪ್ರದೇಶ, ಬಹಳ ದೈವ ಸ್ವರೂಪವಾದಂಥ ಪ್ರದೇಶ. ಆ ಪ್ರದೇಶಕ್ಕೆ ಅವರು ಬರದೇ ಇದ್ದರೆ, ನಾನೇನು ಮಾಡುವುದಕ್ಕಾಗುತ್ತದೆ. ನೀವು ಬರವುದಾದರೆ ಬನ್ನಿ ಸಂತೋಷ, ನೀವು ಬರಲಿಲ್ಲವೆಂದರೆ ನಾನೇನು ಮಾಡುವುದಕ್ಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದ್ದೇನೆಂದರೆ, ದೊಡ್ಡ ಆಲದ ಮರದ ಕೆಳಗೆ ಇನ್ನೊಂದು ಗಿಡ ಬೆಳೆಯುವುದಿಲ್ಲವೆಂದು. ಚಾಮರಾಜ ನಗರದಲ್ಲಿ ವಾಟಾಳ್ ನಾಗರಾಜ್ ರವರು ಆಲದ ಮರದ ಹಾಗೆ ಇದ್ದಾರೆ, ಅದರ ಕೆಳಗೆ ಇನ್ನೊಂದು ಬೀಜ ಹಾಕಿದರೆ, ಗಿಡ ಹಾಕಿದರೆ ಬೆಳೆಯುವುದೇ ಇಲ್ಲ. ಅದಕ್ಕೆ ಅವರು ಹೇಳುವುದು.

ಶ್ರೀ ವಾಟಾಳ್ ನಾಗರಾಜ್ : ನಾನು ದೊಡ್ಡ ಆಲದ ಮರದಂತೆ, ನಿಮ್ಮ ಆಶಿರ್ವಾದ ಇರಲಿ. ನಾನು ಬಹಳ ಸಂತೋಷದಿಂದ ಸ್ವೀಕಾರ ಮಾಡುತ್ತೇನೆ. ಆದರೆ ಚಾಮರಾಜನಗರಕ್ಕೆ ಬಂದಂಥ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಳ್ಳುತ್ತಾರೆನ್ನುವುದು ಅದು ಖಂಡಿತಾವಾಗಿ ಸರಿಯಲ್ಲ.

ದಯವಿಟ್ಟು ಮುಖ್ಯಮಂತ್ರಿಗಳ ಜೊತೆಯಲ್ಲಿ ನಿಮ್ಮ ಇಡೀ ಸಚಿವ ಸಂಪುಟದ ಸದಸ್ಯರೆಲ್ಲರೂ ಬರಬೇಕೆಂದು ತಮ್ಮ ಮೂಲಕ ಅವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೆ, ಅವರು ಬಂದರೆ, ಅಲ್ಲಿಂದ ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನ, ಅದು ಬಹಳ ಪವಿತ್ರವಾದಂತ ದೇವಸ್ಥಾನ. ಅಲ್ಲಿಂದ ಮಹದೇಶ್ವರ ದೇವಸ್ಥಾನ, ಅವೆರಡೂ ದಾಟಿ ಬಂದರೆ ಅವರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಧೈರ್ಯವಾಗಿ ಇಡೀ ಮಂತ್ರಿಮಂಡಲ ಅಲ್ಲಿಗೆ ಬರಬೇಕೆಂದು ಬಹಿರಂಗವಾಗಿ ಆಹ್ವಾನ ಕೊಡುತ್ತೇನೆ. ಚಾಮರಾಜನಗರದ ಜನತೆಯ ಮೇಲೆ ಚಾಮರಾಜ ನಗರದ ಮೇಲೆ ಇರತಕ್ಕಂಥದ್ದು ನಿಮ್ಮದು ಯಾವುದು ಕೊಟ್ಟ ಭಾವನೆ ಇದೆಯಲ್ಲಾ ಅದು ಖಂಡಿತ ಹೋಗಬೇಕು ಎಂದು ಮಾನ್ಯ ಗೃಹ ಸಚಿವರಿಗೆ ಹೇಳುತ್ತೇನೆ. ಮೊನ್ನೆ ತಾನೆ ಅವರು ನಮ್ಮ ತಾಲ್ಲೂಕಿಗೆ ಬಂದು ಹೋಗಿದ್ದಾರೆ. ಎಷ್ಟು ಪರಿಶುದ್ಧವಾಗಿದೆ. ಆ ತಾಲ್ಲೂಕಿನ ಪರಿಸರ, ಆ ತಾಲ್ಲೂಕಿನ ವ್ಯವಸ್ಥೆ ಅದೆಲ್ಲಾ ನೋಡಿ ನಮ್ಮ ಗೃಹ ಸಚಿವರು ಸಂತೋಷಪಟ್ಟಿದ್ದಾರೆ. ಆದರೆ ಇವೊತ್ತು ಸ್ವಲ್ಪ ಹೆಚ್ಚು ಕಡಿಮೆ ಮಾತನಾಡುತ್ತಿದ್ದಾರೆ, ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

+ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೭.೮.೧೯೯೫ ರಂದು ಬರಗಾಲ ಪರಿಸ್ಥಿತಿಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಕೊನೆಗೂ ಹದಿನೈದು ದಿವಸ ತಡವಾಗಿಯಾದರೂ ಈ ಚರ್ಚೆ ಪ್ರಾರಂಭವಾಗಿದೆ ಇದಕ್ಕೆ ಸೂಕ್ತ ಪರಿಹಾರವನ್ನು ಸರ್ಕಾರದವರು ಕೊಡಬೇಕಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಈ ಒಂದು ಬರಗಾಲ ಪರಿಸ್ಥಿತಿಯಿಂದ ಇಡೀ ರಾಜ್ಯದಲ್ಲಿ ರೈತ ಸಮೂಹ ಹಾಗೂ ಕೃಷಿ ಕಾರ್ಮಿಕರು ಸಂಪೂರ್ಣವಾಗಿ ಕಂಗಾಲಾಗಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಬೇಕಾಗಿದೆ. ಈ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಈ ರಾಜ್ಯದ ಜನತೆ ಬಹಳ ವಿಶ್ವಾಸವನ್ನು ಇಟ್ಟಿದ್ದರು. ಉತ್ತಮವಾದ ಆಡಳಿತವನ್ನು ಕೊಡಬಹುದೇನೋ ಎನ್ನುವ ನಿರೀಕ್ಷೆಯನ್ನೂ ಕೂಡ ಮಾಡಿದ್ದರು. ಆದರೆ ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈ ಒಂದು ವಾತಾವರಣ ನಿರ್ಮಾಣ ಆದಾಗ, ಜನತೆ ಮಾತನಾಡತಕ್ಕಂಥ ಮಾತುಗಳನ್ನು ಕೇಳಿದಾಗ, ಅದು ಹುಸಿಯಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದರೆ ತಪ್ಪಾಗಲಿಕ್ಕಿಲ್ಲ . ನಮ್ಮ ರಾಜ್ಯದಲ್ಲಿ ತಲೆದೋರಿರತಕ್ಕಂಥ ಬರಗಾಲದ ಪರಿಸ್ಥಿತಿಯನ್ನು ಹತ್ತಿರಕ್ಕೆ ಪ್ರಾಮಾಣಿಕವಾದಂತಹ ಕನಿಷ್ಟ ಪ್ರಯತ್ನಗಳನ್ನೂ ಕೂಡ ಈ ಸರ್ಕಾರ ಮಾಡಲಿಲ್ಲ ಎನ್ನತಕ್ಕಂಥ ಆರೋಪವನ್ನು ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಈಗಾಗಲೇ ಸಾಕಷ್ಟು ಅಂಕಿ ಅಂಶಗಳನ್ನು ನಮಗೆ ಕೊಟ್ಟಿದ್ದಾರೆ. ಆದರೆ ಇವೊತ್ತು ನಮ್ಮ ರಾಜ್ಯದಲ್ಲಿ ಮಳೆ ಯಾವ ಸಮಯಕ್ಕೆ ಆಗಬೇಕಾಗಿತ್ತೋ ಆ ಸಮಯಕ್ಕೆ ಮಳೆಆಗಲಿಲ್ಲ. ಜೂನ್ ತಿಂಗಳ ೧೫ನೇ ತಾರೀಖಿನೊಳಗಾಗಿ ಅಂದರೆ ಯಾವ ಒಂದು ತಿಥಿಗೆ ಬರಬೇಕಾದ ಮಳೆಯ ಮೇಲೆ ವಿಶ್ವಾಸವನ್ನು ಇಟ್ಟು ಬೆಳೆ ಬೆಳೆಯುತ್ತಾರೆ ಆ ತಿಥಿಗೆ ಮಳೆ ಬರಲಿಲ್ಲ. ತಮಗೆ ಗೊತ್ತಿದೆ ತಾವೂ ಕೂಡ ಉತ್ತರ ಕರ್ನಾಟಕದವರು. ನಮ್ಮ ರೈತ ಸಮೂಹ ಒಂದು ನಿರ್ಧಿಷ್ಟ ತಿಥಿಗೆ ಬೆಳೆಗಳನ್ನು ಬೆಳೆಯದೆ ಹೋದರೆ ನಾವು ನಿರೀಕ್ಷಿಸಿದಷ್ಟು ಇಳುವರಿಯನ್ನು ಪಡೆಯಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಇವೊತ್ತು ಸಾಮಾನ್ಯವಾಗಿ ಒಂದು ನಂಬಿಕೆಯನ್ನು ಇಟ್ಟುಕೊಂಡು, ಅನುಭವದಿಂದ ಮಾತನಾಡತಕ್ಕಂಥ

ಜನತೆ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಇದ್ದಾರೆ. ಈ ಒಂದು ಸಂದರ್ಭದಲ್ಲಿ ನನ್ನ ಮತಕ್ಷೇತ್ರದ ಸವಣೂರು ಮತ್ತು ಶಿಗ್ಗಾಂವ್ ತಾಲ್ಲೂಕುಗಳಲ್ಲಿ ಅದರ ಜೊತೆಗೆ ಅನೇಕ ಜಿಲ್ಲೆಗಳಲ್ಲಿ ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಯಾವ ಒಂದು ತಿಥಿಗೆ ಮಳೆ ಆಗಬೇಕಾಗಿತ್ತೋ ಅದು ಆಗದೇ ೫೦. ದಿವಸ ದಾಟಿ ಮಳೆ ಆಯಿತು. ಇದು ಅನೇಕ ಪತ್ರಿಕೆಗಳಲ್ಲಿ ಕೂಡ ವರದಿಯಾಗಿದೆ. ಈ ಒಂದು ಮಾನಸೂನ್ ಮುಗಿಯುವುದಕ್ಕೆ ಮುಂಚಿತವಾಗಿ ಅಂದರೆ ಜೂನ್ ೧೫ನೇ ತಾರೀಖಿನ ಒಳಗಾಗಿ ಯಾವ ಬೆಳೆಗಳನ್ನು ನಾವು ಮುಖ್ಯವಾಗಿ ನಮ್ಮ ಭಾಗಗಳಲ್ಲಿ ಬೆಳೆಯತಕ್ಕಂಥ ಜೋಳದ ಬೆಳೆಯಾಗಲಿ, ಸಾವಿಯ ಬೆಳೆಯಾಗಲಿ, ಉದ್ದು, ಹೆಸರು, ಇನ್ನು ಇತರ ಮುಂಗಾರಿ ಬಿತ್ತತಕ್ಕಂಥ ಪರಿಸ್ಥಿತಿ ಬಂತು. ರೈತರು ಆ ಬೆಳೆಗಳನ್ನು ರೋಹಿಣಿಮಳೆಗೆ ಬೆಳೆಯಬೇಕಾಗಿತ್ತು. ಆ ಮಳೆ ನಮಗೆ ಆಗಲಿಲ್ಲ. ಮುಂದೆ ಆಕಾಲಿಕ ಮಳೆ ಬಂದನಂತರ ಆ ಬೆಳೆಯಬೇಕಾಗತಕ್ಕಂತ ಆ ಮಳೆ ನಮಗೆ ಆಗಲಿಲ್ಲ. ಮುಂದೆ ಆಕಾಲಿಕ ಮಳೆ ಬಂದನಂತರ ಆ ಬೆಳೆಗಳನ್ನು ಬಿತ್ತತಕ್ಕಂಥ ಪರಿಸ್ಥಿತಿ ಬಂತು. ರೈತರು ಆ ಬೆಳೆಗಳನ್ನು ಕೂಡ ಬಿತ್ತುವಾಗ ಬಹಳಷ್ಟು ಆಲೋಚನೆ ಮಾಡಿ ಬಿತ್ತಿದ್ದಾರೆ. ಅನೇಕ ಕಡೆ ಸಾಲ ಸೂಲವನ್ನು ಮಾಡಿದ್ದಾರೆ. ಬೀಜಗಳನ್ನು ಬಿತ್ತಿದ್ದಾರೆ. ಬೆಳೆಗಳು ಹುಟ್ಟಿದ್ದು, ಆ ಬೆಳೆಗಳು ಮತ್ತೆ ಬರುತ್ತವೆಯೋ ಇಲ್ಲವೋ ಎನ್ನತಕ್ಕಂಥ ವಿಚಾರವನ್ನು ನಾವು ನಿರೀಕ್ಷಿಸಿದಾಗ, ನಾನು ನೆನ್ನೆ ದಿವಸ ನನ್ನ ಮತಕ್ಷೇತ್ರದ ನಮ್ಮ ಜನರಿಗೆ ಫೋನ್ ಮಾಡಿ ತಿಳಿದುಕೊಂಡೆ, ಅಲ್ಲಿ ಇನ್ನೂ ಕೂಡ ಮಳೆ ಆಗಲಿಲ್ಲ. ಬೆಳೆಗಳು ಒಣಗತಕ್ಕಂಥ ಪರಿಸ್ಥಿತಿ ಇದೆ ಎನ್ನತಕ್ಕಂಥ ಮಾತನ್ನು ಅಲ್ಲಿಯ ಜನತೆ ಹೇಳಿದ್ದಾರೆ. ಅಷ್ಟೆ ಅಲ್ಲದೆ, ನಮ್ಮ ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಇಲ್ಲಿಯವರೆಗೆ ಕೂಡ ಬರಗಾಲ ಕಾಮಗಾರಿಗಳಲ್ಲಿ ಒಂದೂ ಕೆಲಸವನ್ನು ಕೈಗೊಂಡಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ನಿನ್ನೆ ದಿವಸ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕಿನ ಇಬ್ಬರೂ ತಹಸೀಲ್ದಾರರಿಗೆ ದೂರವಾಣಿ ಮುಖಾಂತರ ಮಾತನಾಡಿ ಬರಗಾಲ ಕಾಮಗಾರಿಯಲ್ಲಿ ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರಿ? ಎಷ್ಟು ಹಣ ಬಂದಿದೆ ಎನ್ನತಕ್ಕಂಥ ಮಾತನ್ನು ಕೇಳಿದೆ. ಅವರು ಶಿಗ್ಗಾಂವ್ ತಾಲ್ಲೂಕಿಗೆ ಯಾವುದೇ ಹಣ ಬಂದಿಲ್ಲ ಮತ್ತು ಸವಣೂರು ತಾಲ್ಲೂಕಿನಲ್ಲಿ ನೀರಾವರಿ ಇಲಾಖೆಯ ಅಡಿಯಲ್ಲಿ ಒಂದು ಲಕ್ಷ ರೂಪಾಯಿ ಬಂದಿದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಹೀಗಾದರೆ ಹೇಗೆ? ಯಾವ ಸಮಯದಲ್ಲಿ ನಮ್ಮ ಬರಗಾಲ ಕಾಮಗಾರಿ ಕೆಲಸ ಪ್ರಾರಂಭ ಆಗಬೇಕಾಗಿತ್ತೋ ಅವಾಗ ಪ್ರಾರಂಭ ಆಗಲಿಲ್ಲ. ಇದರಿಂದ ಜನತೆ ಬಹಳ ತತ್ತರಿಸಿ ಹೋಗಿದ್ದಾರೆ. ಇವೊತ್ತು ನಮ್ಮ ದೇಶದಲ್ಲಿರುವ ನೂರಕ್ಕೆ ಎಪ್ಪರತ್ತರಷ್ಟು ಮಳೆಯನ್ನು ಅವಲಂಬಿತವಾಗಿರತಕ್ಕಂಥ ರೈತ ಸಮೂಹಕ್ಕೆ, ಕೃಷಿ ಕಾರ್ಮಿಕರಿಗೆ ನಾವು ಮಹತ್ವವನ್ನು ಕೊಡದೇ ಹೋದರೆ ಹೆಚ್ಚು ಒತ್ತನ್ನು ಕೊಡದೇ ಹೋದರೆ ನಾವು ಜನತೆಗೆ ಸ್ಪಂದಿಸಿದಂತೆ ಆಗುವುದಿಲ್ಲ ನಾವು ಬದಲಾಗಿ ವಂಚನೆ ಮಾಡಿದಂತೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇವೊತ್ತು ಸುಮಾರು ೧೭೫ ತಾಲ್ಲೂಕುಗಳ ಪೈಕಿ ೧೩೪ ತಾಲ್ಲೂಕುಗಳಲ್ಲಿ ಮಳೆ ಆಗಿಲ್ಲ. ತದನಂತರ ಬಂದ ವರದಿಪ್ರಕಾರ ೮೧ ತಾಲ್ಲೂಕುಗಳಲ್ಲಿ ತೀವ್ರವಾದಂಥ ಬರಗಾಲ ಇದೆ. ಅಲ್ಲಿಯೂ ಕೂಡ ಇವೊತ್ತು ಶೇಕಡ ೩೫ರಷ್ಟು ಮಳೆ ಆಗಿದೆ, ಎನ್ನತಕ್ಕಂಥ ಮಾತನ್ನು ನಾವು ಕೇಳಿದ್ದೇವೆ. ಈ ರೀತಿ

ಅನೇಕ ಸಂದರ್ಭಗಳಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಕಳೆದ ವರ್ಷವೂ ಕೂಡ ಅತೀವೃಷ್ಟಿಯಿಂದ ಬರಗಾಲ ನಿರ್ಮಾಣ ಆಗಿತ್ತು. ಆದರೆ ಈ ವರ್ಷ ಅನಾವೃಷ್ಟಿಯಿಂದ ಬರಗಾಲ ನಿರ್ಮಾಣ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಇದರ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟು, ಜನತೆಯ ಬಗ್ಗೆ ಚಿಂತಿಸಬೇಕಾಗಿದೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ನಮ್ಮ ಸರ್ಕಾರದವರು ಕೂಡ ಕೇಂದ್ರ ಸರ್ಕಾರಕ್ಕೆ ಸುಮಾರು ೨೫೬ ಕೋಟಿ ರೂಪಾಯಿ ಹಣ ಬೇಕು ಎನ್ನತಕ್ಕಂಥ ಮನವಿಯನ್ನು ಮಾಡಿಕೊಂಡಿದ್ದಾರೆ. ಈ ಒಂದು ಸಂದರ್ಭದಲ್ಲಿ ಕೇಂದ್ರ ಸರ್ಕಾದವರು ಸುಮಾರು ೩೯ ಕೋಟಿ ರೂಪಾಯಿಯನ್ನು ಕೊಡತಕ್ಕಂಥ ಒಂದು ವಿಚಾರದಲ್ಲಿ ಈಗಾಗಲೇ ಸನ್ಮಾನ್ಯ ಆರ್. ಡಿ. ಪಿ. ಆರ್. ಮಂತ್ರಿಗಳು ಸುಮಾರು ೧೫ ಕೋಟಿ ರೂಪಾಯಿಗಳು ಬಂದಿವೆ, ನಾವು ಆ ಹಣವನ್ನು ಬಿಡುಗಡೆ ಕೂಡ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ೧೫ ಕೋಟಿ ರೂಪಾಯಿಬಂದಾಗ ಮಂತ್ರಿಗಳ ಹೇಳಿಕೆಯಲ್ಲಿ ನಾನು ನೋಡಿದಂತೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಸುಮಾರು ೨೦೦೬.೮೪ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಇರುತ್ತದೆ ಎನ್ನತಕ್ಕಂಥ ಮಾತನ್ನು ಅವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರದವರು ೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ಕೇವಲ ೫ ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಎಂಬ ಅಂಶ ಗಮನಿಸಿದರೆ, ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ. ಇದರ ಜೊತೆಗೆ ಅವರು ಇನ್ನು ಅನೇಕ ಅಂಶಗಳನ್ನು ಕೊಟ್ಟಿದ್ದಾರೆ. ಅಸೆಕ್ಷನ್ ಒಂದನ್ನು ನಾವು ನೋಡಿದಾಗ ವಿವಿಧ ಯೋಜನೆಗಳಲ್ಲಿ ತೊಡಗಿಸಿದ ಹಣವನ್ನು, ಆಯವ್ಯಯದಲ್ಲಿ ತೊಡಗಿಸಿದ ಹಣವನ್ನು ಇವೊತ್ತು ಈ ಬರಗಾಲ ಕಾಮಗಾರಿಗೆ, ಈ ಉದ್ಯೋಗ ಸೃಷ್ಟಿಸಿರುವಂತಹ ಕೆಲಸಗಳಿಗೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ಆಯವ್ಯಯ ಯೋಜನೆಯಲ್ಲಿ ವಿವಿಧ ಯೋಜನೆಗಳಲ್ಲಿ ಇರತಕ್ಕಂಥ ಹಣವನ್ನು ಅವರು ಬಿಡುಗಡೆ ಮಾಡತಕ್ಕಂಥದ್ದು ಸಾಧು ಅಲ್ಲ. ಅದು ಈಗಾಗಲೇ ಅನೇಕ ಹಿರಿಯ ಸದಸ್ಯರುಗಳು ಮಾತನಾಡಿದಂತೆ, ಆಯಾ ತಾಲ್ಲೂಕುಗಳಲ್ಲಿ ಜಿಲ್ಲೆಗಳಲ್ಲಿ ಕ್ರಿಯಾ ಯೋಜನೆ ಅಂತಿಮವಾಗಿ ಮುಗಿದಿಲ್ಲ. ಆದರೆ ಆ ಯೋಜನೆಗಳಿಗೆ ಒದಗಿಸಬೇಕಾದಂಥ ಹಣವನ್ನು ಇವೊತ್ತಿನ ಬರಗಾಲ ಕಾಮಗಾರಿಗಳಿಗೆ ಹೋಲಿಸಿದರೆ, ಅದು ಸಾಧು ಅಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯನವರು ದಿನಾಂಕ ೨೬-೦೭-೯೫ ರಂದು ಒಂದು ಪತ್ರಿಕಾ ಹೇಳಿಕೆ ಕೊಟ್ಟು, ಪ್ರತಿ ಜಿಲ್ಲೆಯಲ್ಲಿ ೮ ರಿಂದ ೧೦ ಕೋಟಿ ರೂ.ಗಳಷ್ಟು ಹಣ ಇದೆಯೆಂದು ಹೇಳುತ್ತಾ ರಾಜ್ಯದಲ್ಲಿ ೧೧೦ ತಾಲ್ಲೂಕುಗಳಲ್ಲಿ ಬರಗಾಲ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ ಮತ್ತು ಉದ್ಯೋಗ ಮತ್ತು ವಿವಿಧ ಯೋಜನೆಗಳಿಗಾಗಿ ಜನರಿಗೆ ಅನುಕೂಲ ಮಾಡುವುದಕ್ಕಾಗಿ ಪ್ರತಿ ತಾಲ್ಲೂಕಿಗೆ ಸರ್ಕಾರ ೨೫ ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಿದ್ದು ಕಾಮಗಾರಿ ಕೆಲಸಗಳನ್ನು ಜುಲೈ ೨೦ ರಿಂದ ಆರಂಭಿಸಲಾಗಿದೆ ಎನ್ನತಕ್ಕಂಥ ಮಾತನ್ನು ಕೂಡ ಅವರು ಹೇಳಿದ್ದಾರೆ. ಆದರೆ ಜುಲೈ

೨೦ ರಿಂದ ಯಾವುದೇ ಕಾರ್ಯಗಳು ಪ್ರಾರಂಭವಾಗಿಲ್ಲ. ಇದಲ್ಲದೇ ಹಣಕಾಸಿನ ಸಚಿವರು ಹೇಳಿದಂತೆ ಪ್ರತಿ ಜಿಲ್ಲಾಧಿಕಾರಿಗಳ ಹತ್ತಿರ ೮ ರಿಂದ ೧೦ ಕೋಟಿ ರೂ.ಗಳು ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಮಂತ್ರಿಗಳು ಕೊಟ್ಟಂಥ ಹೇಳಿಕೆಯನ್ನು ನೋಡಿದಾಗ, ಪ್ರತಿಯೊಂದು ಜಿಲ್ಲೆಗಳನ್ನೂ ತೆಗೆದುಕೊಂಡಾಗ, ಯಾವುದೇ ಜಿಲ್ಲೆಯಲ್ಲಿ ೪ ಕೋಟಿಗಿಂತ ಹೆಚ್ಚು ಹಣ ಅಲ್ಲಿಲ್ಲ. ಇವೊತ್ತು ೨೦ ಜಿಲ್ಲೆಗಳ ಸವಿಸ್ತಾರವಾದ ವರದಿಯನ್ನು ತೆಗೆದುಕೊಂಡಾಗ, ಯಾವ ಯಾವ ಹೆಡೆಗಳಲ್ಲಿ ಹಣವನ್ನು ಒದಗಿಸಿದ್ದಾರೆ, ಆ ಹಣ ಇವೊತ್ತು ಯಾವ ಜಿಲ್ಲೆಯಲ್ಲೂ ಕೂಡ ಬಳಕೆಯಾಗುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ೪ ಕೋಟಿ ೧೪ ಲಕ್ಷ ರೂ. ಇದೆ. ಉಳಿದ ಜಿಲ್ಲೆಗಳಲ್ಲಿ ೪ ಕೋಟಿಗಿಂತ ಕಡಿಮೆ ಇರತಕ್ಕಂಥ ಒಂದು ಅಂಶವನ್ನು ನಾವು ನೋಡುತ್ತಿದ್ದೇವೆ. ಇದರಲ್ಲಿ ಇವೊತ್ತು ಸರ್ಕಾರದವರೇ ಕೊಟ್ಟಂಥ ಅಂಕಿ ಅಂಶಗಳನ್ನು ನೋಡಿದಾಗ, ಅವರ ಹೇಳಿಕೆಯನ್ನು ನೋಡಿದಾಗ, ಎಷ್ಟು ವೆಚ್ಚವಾಗುತ್ತಿದೆ ಎನ್ನತಕ್ಕಂಥದ್ದನ್ನೂ ಕೂಡ ನಾವು ತಿಳಿದುಕೊಳ್ಳಬೇಕಾಗಿದೆ. ಇದರ ಜೊತೆಗೆ ಇವೊತ್ತು ಈ ಉದ್ಯೋಗ ಯೋಜನೆ ಯಡಿಯಲ್ಲಿ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ ಹಾಗೂ ಅರಣ್ಯ ಇಲಾಖೆ, ಈ ಇಲಾಖೆಗಳು ಮಾನವ ದಿನಗಳನ್ನು ಸೃಷ್ಟಿಸಿ ಅಲ್ಲಿಯೂ ಕೂಡ ಸುಮಾರು ೧೧೪ ಲಕ್ಷ ರೂ.ಗಳನ್ನು ಯೋಜನೆ ಮಾಡಿದ್ದೇವೆ, ಅದರಲ್ಲಿ ಹಣ ಖರ್ಚಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ವಿವಿಧ ಇಲಾಖೆಗಳ ಮುಖಾಂತರ ವಿವಿಧ ಯೋಜನೆಗಳಿಗೆ ಇಷ್ಟು ಸಣ್ಣ ಪ್ರಮಾಣದಲ್ಲಿ ಒದಗಿಸಿದಂಥ ಹಣವನ್ನು ಖರ್ಚು ಮಾಡಿಲ್ಲ. ಇನ್ನೂ ಕೆಲವು ತಾಲ್ಲೂಕುಗಳಿಗೆ, ಕೆಲವು ಜಿಲ್ಲೆಗಳಿಗೆ ಹಣವೇ ಬಂದಿಲ್ಲ ಎನ್ನತಕ್ಕಂಥ ಮಾತನ್ನು ಈಗಾಗಲೇ ನಾವು ಹೇಳಿದ್ದೇವೆ. ಇಂಥ ಒಂದು ತಾರತಮ್ಯವನ್ನು ನಾವು ನೋಡಿದಾಗ, ನಾವು ಜನರ ಬಗ್ಗೆ ಬರಗಾಲದ ಬಗ್ಗೆ ವಿಶೇಷವಾಗಿ ಹೆಚ್ಚು ಒತ್ತನ್ನು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇವೊತ್ತಿನ ದಿವಸ ಪರಿಹಾರ ರೂಪವಾಗಿ ನಾವು ಕೆಲವು ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ದನಗಳಿಗೆ ಮೇವನ್ನು ಪೂರೈಸುವಂಥದ್ದು, ಹಳ್ಳಿಗಳಲ್ಲಿ ಜಾನುವಾರುಗಳಿಗೆ ಕುಡಿಯಲಿಕ್ಕೆ ನೀರಿನ ವ್ಯವಸ್ಥೆಯ ಅನುಕೂಲ ಮಾಡಿಕೊಡತಕ್ಕಂಥದ್ದು, ಈ ರೀತಿಯ ಯೋಜನೆಗಳನ್ನು ನಾವು ಇವೊತ್ತು ಹಾಕಿಕೊಳ್ಳಬೇಕಾಗಿದೆ. ನಮ್ಮ ಮತ ಕ್ಷೇತ್ರದಲ್ಲಿ ಅಂದಾಜು ಮಾಡಿದ ಪ್ರಕಾರ ಕನಿಷ್ಟ ಪಕ್ಷ ಒಂದು ಹಳ್ಳಿಗೆ ೫ ಲಕ್ಷ ರೂ. ಗಳಾದರೂ ಕೂಡ ಖರ್ಚು ಮಾಡಿದರೆ, ಇದನ್ನು ನಾವು ಪರಿಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಒಂದು ವರದಿಯನ್ನು ಕೂಡ ಕೆಳಗಿನ ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದಾರೆ. ಇಂಥ ಒಂದು ಪರಿಸ್ಥಿತಿ ಇರುವಾಗ ಒಂದು ಮತ ಕ್ಷೇತ್ರಕ್ಕೆ ಕನಿಷ್ಟ ಪಕ್ಷ ೧ ಕೋಟಿ ರೂ.ಗಳು ಬೇಕೇ ಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಈಗ ಒದಗಿಸಿದಂಥ ಹಣ ಅದು ಎಳ್ಳಷ್ಟೂ ಆ ಭಾಗದ ಜನರಿಗೆ ಸಾಕಾಗುವುದಿಲ್ಲ, ಆ ಕಾರಣ ಇವೊತ್ತು ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು ಎನ್ನತಕ್ಕಂಥ ಮಾತನ್ನು ತಮ್ಮ ಮುಖೇನ ನಾನು ಕೇಳಿಕೊಳ್ಳುತ್ತೇನೆ. ನಮ್ಮ ರೈತರು ಕೂಡ ಬರಗಾಲ ಬಂದರೂ ಪರವಾಗಿಲ್ಲ, ಕೊನೆಗೆ ನಾವು ಬೆಳೆ ವಿಮೆಯನ್ನು ಪಡೆಯುತ್ತೇವೆಯೇ ಎನ್ನತಕ್ಕಂಥ ಒಂದು ವಿಚಾರವನ್ನು ಕೂಡ ಯೋಚನೆ ಮಾಡುತ್ತಿದ್ದಾರೆ. ಈ ಬೆಳೆ ವಿಮೆ ಯೋಜನೆಯನ್ನು ಡ್ರಾಟ್ ಇನಶ್ಯೂರೆನ್ಸ ಕಾನೂನು ಪ್ರಕಾರವಾಗಿ ಮಾಡಿದರೂ ಡ್ರಾಟ್ ಇನಶ್ಯೂರೆನ್ಸ ಸರಿಯಾಗಿ ರೈತರಿಗೆ

ಸಿಗುತ್ತಿಲ್ಲ. ಅದಕ್ಕೆ ಕಾರಣವೇನೆಂದರೆ ಆ ತಾಲ್ಲೂಕುಗಳನ್ನು ಒಂದು ಘಟಕಗಳನ್ನಾಗಿ ಮಾಡಿ, ಕ್ರಾಪ್ ಕಟಿಂಗ್ ಎಕ್ಸಪರಿಮೆಂಟ್‌ನ್ನು ಮಾಡುತ್ತಿದ್ದಾರೆ. ನೂತನವಾಗಿ ನಮ್ಮ ರೆವಿನ್ಯೂ ಸಚಿವರೂ ಕೂಡ ರೆವಿನ್ಯೂ ಇಲಾಖೆಯಿಂದ ಆ ತಾಲ್ಲೂಕುಗಳ ಬದಲಾಗಿ ಹೋಬಳಿ ವೈಸನ್ನು ಕೂಡ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ನಾನು ತಿಳಿದುಕೊಂಡಿದ್ದೇನೆ. ಅದು ಸಂತೋಷದ ವಿಚಾರ. ಆದರೆ ಆ ಹೋಬಳಿ ವೈಸ್ ಮಾಡಿದರೂ ಕೂಡ ಅದು ಸರಿಯಾದಂಥ ಒಂದು ಅಣೇವಾರಿ ಪದ್ಧತಿ ಆಗುವುದಿಲ್ಲ. ಆ ಕಾರಣ ಆಣೇವಾರಿ ಪದ್ಧತಿಯನ್ನು ಪ್ರತಿ ಹಳ್ಳಿಗೆ ಒಂದು ಪ್ರತ್ಯೇಕವಾಗಿ ಆಗತಕ್ಕಂಥ ವ್ಯವಸ್ಥೆಯನ್ನು ಅವರು ಮಾಡಬೇಕು. ಈ ಒಂದು ಅಣೇವಾರಿ ಪದ್ಧತಿ ಓಬಿರಾಯನ ಕಾಲದಲ್ಲಿ ಇರುವಂಥ ಒಂದು ಪದ್ಧತಿ. ಇವೊತ್ತು ಒಂದು ಬೆಳೆಯನ್ನು ನಾವು ತೆಗೆದಕೊಂಡು ಅದರ ಆಧಾರದ ಮೇಲೆ ಇಳುವರಿಯನ್ನು ನಿರ್ದಿಷ್ಟ ಪಡಿಸಲಿಕ್ಕೆ ಹೋದರೆ, ಇವೊತ್ತು ಖಂಡಿತವಾಗಿ ಸರಿಯಾದಂಥ ಇಳುವರಿಯನ್ನು ನಾವು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನೂತನವಾಗಿ ಹೊಸದಾಗಿ ಇವೊತ್ತು ಪದ್ಧತಿಗಳನ್ನು ಆಳವಡಿಸಿಕೊಂಡು ನಾವು ಮಾಡಿದ್ದೇ ಆದರೆ ಜನತೆಗೆ ಅದರಲ್ಲೂ ರೈತರಿಗೆ ವಿಶೇಷವಾಗಿ ನಾವು ಅನುಕೂಲಗಳನ್ನು ಮಾಡಿದ ಹಾಗಾಗುತ್ತದೆ.

ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಇವೊತ್ತು ನಾವು ಪ್ರತಿ ಹಳ್ಳಿಗಳಲ್ಲಿ ಕೆರೆಕಟ್ಟೆಗಳನ್ನು ಹೂಳು ತೆಗೆಯುವದರಲ್ಲಾಗಲೀ, ಹೊಸದಾಗಿ ಭೂಕಟ್ಟೆಗಳನ್ನು ಹಾಕುವುದರಲ್ಲಾಗಲೀ ಅಥವಾ ಭೂ ಸಾರ ಸಂರಕ್ಷಣೆ, ಈ ರೀತಿಯ ಅನೇಕ ಕೆಲಸಗಳನ್ನು ಕೈಗೆತ್ತಿ ಕೊಳ್ಳತಕ್ಕಂಥದ್ದು ಅತಿ ಅವಶ್ಯಕತೆ ಇದೆ. ಭೂಸಾರ ಸಂರಕ್ಷಣೆ ಇಲಾಖೆಯಲ್ಲಿ ಈಗಾಗಲೇ ಕೇಂದ್ರ ಸರ್ಕಾರದವರು ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ. ನಮ್ಮೆಲ್ಲರಿಗೂ ಗೊತ್ತಿರುವಂತೆ ಡೆನಿಡಾ ಯೋಜನೆ ಮತ್ತು ರಾಷ್ಟ್ರೀಯ ಜಲಾಯನ ಅಭಿವೃದ್ಧಿ ಯೋಜನೆಗಳು ಹಾಗೂ ಇನ್ನೂ ಅನೇಕ ಯೋಜನೆಗಳನ್ನೂ ಕೂಡ, ಅದರಂತೆ ತುಂಗಭದ್ರಾ ನದಿ ಕೊಳ್ಳ ಯೋಜನೆ ಅದೇ ರೀತಿ ಕೃಷ್ಣಾ ಕಾವೇರಿ ಕಣಿವೆ ನದಿ ಕೊಳ್ಳ ಯೋಜನೆಗಳು, ಈ ರೀತಿಯ ಅನೇಕ ಯೋಜನೆಗಳು ಇದೆ. ಬರತಕ್ಕಂಥ ಮಳೆ ಕಡಿಮೆ ಪ್ರಮಾಣದಲ್ಲಿದ್ದರೂ ಕೂಡ ಪ್ರತಿಯೊಂದು ಮಳೆ ಹನಿಯ ನೀರೂ ಕೂಡ ಹೋಗದಂತೆ ಜಮೀನಿನ ಸಮತಳಿಯಲ್ಲಿ ಉಳಿದುಕೊಳ್ಳತಕ್ಕಂಥ ಕೆಲವು ವಾಟರಶೆಡ್‌ಗಳನ್ನು, ಜಕಡಾಮಗಳನ್ನು ಹಾಗೂ ಇನ್ನಿತರ ಈ ನೀರಿನ ಸಮಾದಾತಳಿಯನ್ನು ಕಾಯ್ದುಕೊಂಡ ಜಮೀನಿನಲ್ಲಿ ಇರಿಸತಕ್ಕಂಥ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡರೆ, ಅಲ್ಲಿರತಕ್ಕಂಥ ಗ್ರಾಮಾಂತರ ಪ್ರದೇಶಗಳ ಜನರಿಗೆ ಉದ್ಯೋಗವನ್ನೂ ಕೂಡ ಕೊಡಲಿಕ್ಕೆ ಅನುಕೂಲ ಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅನೇಕ ಜನ ಬರಗಾಲದಿಂದ ವಲಸೆ ಹೋಗಿದ್ದಾರೆ. ನಮ್ಮ ಭಾಗದಲ್ಲಿ ಗೋವಾಕ್ಕೆ ಸುಮಾರು ೧೦೦ಕ್ಕೆ ೫೦ ರಷ್ಟು ಜನ ಹೋಗಿದ್ದಾರೆ. ಇನ್ನುಳಿದ ಜನ ಚಿಕ್ಕಮಗಳೂರಿಗೆ ಹೋಗಿದ್ದಾರೆ, ಇನ್ನೂ ಉಳಿದ ಜನ ಬಾಂಬೆ ಕಡೆಗೆ ಹೋಗಿದ್ದಾರೆ. ಅವರು ಏಕೆ ಹೋಗಿದ್ದಾರೆ ಅಂದರೆ, ಸಮಯಕ್ಕೆ ಸರಿಯಾಗಿ ನಾವು ಅವರಿಗೆ ಉದ್ಯೋಗವನ್ನು ಕೊಡಲಿಕ್ಕೆ ಆಗಲಿಲ್ಲ. ಅಲ್ಲಿ ಭಯಂಕರವಾದ ಪರಿಸ್ಥಿತಿ ಇತ್ತು, ಅಂಥ ಪರಿಸ್ಥಿತಿಯಲ್ಲಿ ಅವರು ಇವೊತ್ತು ಹೋಗಿದ್ದಾರೆ. ಇದರ ಬಗ್ಗೆ ತಾವು ಸರ್ವೇಯನ್ನೂ ಕೂಡ ಮಾಡಿಸಬೇಕು. ಪ್ರತಿ ತಾಲ್ಲೂಕಿನಿಂದ ಎಷ್ಟು ಜನ ಇವೊತ್ತು ವಲಸೆ

ಹೋಗಿದ್ದಾರೆ, ಯಾವ ಕಾರಣಕ್ಕಾಗಿ ವಲಸೆ ಹೋಗಿದ್ದಾರೆ, ಇವೊತ್ತು ನಮ್ಮ ಸರ್ಕಾರದ ಜವಾಬ್ದಾರಿ ಏನು? ಆ ಜನರಿಗೆ ನಾವು ಯಾವ ರೀತಿಯಾಗಿ ಉದ್ಯೋಗವನ್ನು ಕಲ್ಪಿಸಿಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ಸಮಗ್ರವಾಗಿ ತಾವು ಒಂದು ಸರ್ವೇಯನ್ನು ಮಾಡಿಸತಕ್ಕಂಥ ಕೆಲಸವನ್ನು, ಇಡೀ ರಾಜ್ಯದಲ್ಲಿ ಮಾಡಿಸಿದ್ದೇ ಆದರೆ ತಾವು ಈ ಬಡ ಜನತೆಗೆ ಒಂದು ದೊಡ್ಡ ಉಪಕಾರವನ್ನು ಮಾಡಿದಹಾಗೆ ಆಗುತ್ತದೆ ಎನ್ನತಕ್ಕಂತ ಮಾತನ್ನು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಆ ಕಾರಣಕ್ಕಾಗಿ ತಾವು ಈ ಬಗ್ಗೆ ಜಿಲ್ಲಾಧಿಕಾರಿಗಳು, ತಹಸೀಲ್ದಾರರಿಂದ ಕೂಡ ಸಂಪೂರ್ಣವಾದಂಥ, ವಿವರವಾದಂಥ ವರದಿಯನ್ನು ತರಿಸಬೇಕಾಗಿದೆ ಎಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಇವೊತ್ತು ಈ ಪ್ರದೇಶಗಳಲ್ಲಿ ಬರಗಾಲ ಯೋಜನೆಯನ್ನು ತೆಗೆದುಕೊಳ್ಳಬೇಕಾದರೆ, ಆ ಕೆಲಸಗಳನ್ನು ತೆಗೆದುಕೊಳ್ಳಬೇಕಾದಾಗ, ನಮ್ಮ ಕ್ಷೇತ್ರದಲ್ಲಿ ಈ ಬಗ್ಗೆ ಈವರೆಗೂ ಕೂಡ ಒಂದು ಮೀಟಿಂಗನ್ನು ಮಾಡಿಲ್ಲ, ನಮ್ಮ ಜೊತೆ ಚರ್ಚೆ ಕೂಡ ಮಾಡಲಿಲ್ಲ. ಅಧಿಕಾರಿಗಳನ್ನು ಕೇಳಿದರೆ ಜಿಲ್ಲಾಧಿಕಾರಿಗಳು ಒಂದೇ ದಿನದಲ್ಲಿ ಎಲ್ಲಾ ಕೆಲಸಗಳನ್ನು ಮಾಡಿ ನಮಗೆ ರಿಪೋರ್ಟು ಕೊಡಿ ಎಂದು ಕೇಳಿದರೆ ನಾವೇನು ಮಾಡುವುದಕ್ಕೆ ಆಗುತ್ತದೆ, ಆದುದರಿಂದ ಈ ಬಗ್ಗೆ ನಿಮ್ಮನ್ನೂ ಕೂಡ ಭೇಟಿ ಮಾಡಲಿಕ್ಕೇ ಆಗಲಿಲ್ಲ ಎಂದು ಹೇಳುತ್ತಾರೆ. ಅಧಿಕಾರಿಗಳಲ್ಲಿ ಈ ರೀತಿಯಾಗಿ ಹೇಳತಕ್ಕಂಥ ಒಂದು ಒಂದು ಪರಿಪಾಠ ಇದೆ. ಈ ರೀತಿಯಾದರೆ ಜಿಲ್ಲಾಧಿಕಾರಿಗಳು ಯಾವ ರೀತಿಯಾಗಿ ಸರಿಯಾದ ವರದಿಯನ್ನು ಕೊಡುವುದಿಲ್ಲ. ಇಲ್ಲಾ, ನಾವು ಬೇಗನೆ ವರದಿಯನ್ನು ರಾಜ್ಯ ಮಟ್ಟದಲ್ಲಿ ತಯಾರಿಸಬೇಕು, ಜಿಲ್ಲೆಯಿಂದ ತರಿಸಬೇಕು ನಂತರ ಕೇಂದ್ರಕ್ಕೆ ಕಳುಹಿಸಬೇಕು, ಆ ಕಾರಣ ನಮಗೆ ತೀವ್ರವಾದ ಬೇಕಾಗಿದೆ ಎನ್ನತಕ್ಕಂಥ ಒಂದು ಆದೇಶವನ್ನು ಅವರು ಕೊಟ್ಟಾಗ, ಅಧಿಕಾರಿಗಳೂ ಕೂಡ ಈ ಬಗ್ಗೆ ಸಮಗ್ರವಾಗಿ ಇವೊತ್ತು ಎಷ್ಟು ಜನರಿಗೆ ಉದ್ಯೋಗವನ್ನು ಕೊಡಬೇಕಾಗಿದೆ, ಯಾವ ಭಾಗದಲ್ಲಿ ಕೆರೆಕಟ್ಟೆಗಳು ಒಡೆದುಹೋಗಿವೆ ಅಥವಾ ಯಾರಿಕೆ ಉದ್ಯೋಗವನ್ನು ನಾವು ಕೊಡಬೇಕಾಗಿದೆ, ಇವೊತ್ತು ರಸ್ತೆಗಳಲ್ಲಿ ಬಸ್ಸುಗಳು ಅಡ್ಡಾಡಲಿಕ್ಕೆ ಆಗದ ಪರಿಸ್ಥಿತಿ ಕೆಲವು ಕಡೆ ಇದೆ, ಹೀಗಿರುವಾಗ ನಾವು ಯಾವ ರಸ್ತೆಗಳನ್ನು ಯಾವ ಭಾಗದಲ್ಲಿ ಮಾಡಬೇಕು, ಯಾವ ಭಾಗದಲ್ಲಿ ಜನರಿಗೆ ಉದ್ಯೋಗವನ್ನು ಕೊಟ್ಟರೆ ಸರಿಯಾಗುತ್ತದೆ. ಇವೆಲ್ಲವುಗಳ ಬಗ್ಗೆ ಸಮಗ್ರವಾಗಿ ಚಿಂತಿಸಿ, ಅವುಗಳ ಒಂದು ವರದಿಯನ್ನು ತರಿಸಿಕೊಳ್ಳಬೇಕಾದಂಥದ್ದು ಅತಿ ಅವಶ್ಯಕತೆ ಇದೆ. ಆ ಕಾರಣಕ್ಕಾಗಿ ತಾವು ಬಿಡುಗಡೆ ಮಾಡಿದಂಥ ಹಣ ಯಾವುದಕ್ಕೂ ಸಾಲುವುದಿಲ್ಲ. ಈ ಒಂದು ವಿಚಾರದಲ್ಲಿ ಸರ್ಕಾರದವರು ಬಹಳ ಗಂಭೀರವಾಗಿ ಪರಿಗಣಿಸಿಬೇಕು ಬರಗಾಲ ಪರಿಸ್ಥಿತಿ ಬಗ್ಗೆ ಅನೇಕರು ಈಗಾಗಲೇ ಅನೇಕ ರೀತಿಯ ಬೆಳಕನ್ನು ಚೆಲ್ಲಿದ್ದಾರೆ. ಅವೆಲ್ಲವುಗಳನ್ನೂ ಪರಿಗಣಿಸಿ, ತಾವು ಕೂಡಲೇ ಕಾರ್ಯಕ್ರಮಗಳನ್ನು ಹಾಕಿಕೊಂಡು ಪರಿಹಾರವನ್ನು ನೀಡಬೇಕು ಎನ್ನತಕ್ಕಂಥ ಒಂದು ಮನವಿಯನ್ನು ಈ ಸಂದರ್ಭದಲ್ಲಿ ಮಾಡಿ, ನನಗೆ ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ತಮಗೆ ಹೃತ್ಪೂರ್ವಕವಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಚಂದ್ರಶೇಖರ ಮಾಮನಿ (ಪರಸಡಗ) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಂದಾಯ ಸಚಿವರು ವರದಿಯನ್ನು ಓದಿದಾಗ, ಬೆಳಗಾಂ ಜಿಲ್ಲೆಯಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿ ಅಭಾವ ಪರಿಸ್ಥಿತಿ ಬಂದಿದೆ. ಆದರೆ ಈಗಾಗಲೇ ಅಭಾವ ಪರಿಸ್ಥಿತಿ ಇರುವ ೧೦ ತಾಲ್ಲೂಕುಗಳ

ಯಾದಿಯಲ್ಲಿ ಸವದತ್ತಿ ತಾಲ್ಲೂಕು ಇಲ್ಲ. ಆದುದರಿಂದ ಸನ್ಮಾನ್ಯ ಮಂತ್ರಿಗಳು ಆ ಯಾದಿಯನ್ನು ಇನ್ನೊಮ್ಮೆ ಪರಿಶೀಲನೆಮಾಡಬೇಕು. ಮಳೆಯ ಪ್ರಮಾಣ ಹೋದ ಸಾರಿ ೧೯೯೪ರಲ್ಲಿ ಜೂನ್ ತಿಂಗಳಲ್ಲಿ ೬೨.೮ ಇದ್ದು, ೧೯೯೫ರ ಜೂನ್ ತಿಂಗಳಲ್ಲಿ ೨೮.೪ ಇದೆ. ಆಮೇಲೆ ೧೯೯೪ಳ ಜುಲೈ ತಿಂಗಳಲ್ಲಿ ೯೩.೧ ಇದ್ದು ೧೯೯೫ರಲ್ಲಿ ೬೫.೨ ಇದೆ. ೧೯೯೪ರ ಆಗಸ್ಟನಲ್ಲಿ ೩೧.೫ ಇದ್ದು ೧೯೯೫ರಲ್ಲಿ ಆಗಸ್ಟ್ ತಿಂಗಳಲ್ಲಿ ಕೇವಲ ೧೬ ಎಂಎಂ. ಮಳೆಯಾಗಿ, ವರ್ಷದ ಸರಾಸರಿಯನ್ನು ನೋಡಿದಾಗ ೧೯೯೪ರಲ್ಲಿ ೧೯೭.೪ ಇದ್ದು, ೧೯೯೫ರಲ್ಲಿ ಕೇವಲ ೧೨೦.೫೦ ಮಳೆಯಾಗಿದ್ದು, ಸಾಕಷ್ಟು ಮಳೆಯಾಗದೆ ಜನರಿಗೆ ತೊಂದರೆಯಾಗಿದೆ. ಜೂನ್ ತಿಂಗಳಲ್ಲಿ ಮಳೆ ಶುರುವಾಗಿ ಸ್ವಲ್ಪ ಬಂದು ಬಿತ್ತನೆಯಾಗಿ ಈಗ ಜುಲೈನಲ್ಲಿ ಕೇವಲ ೧೬.ಎಂ.ಎಂ. ಮಳೆ ಆದುದರಿಂದ, ಬಂದಿದ್ದಂಥ ಪೀಕುಗಳೆಲ್ಲಾ ಒಣಗಿಹೋಗಿ ಇವೊತ್ತು ರೈತರ ಪರಿಸ್ಥಿತಿ ಬಹಳ ಚಿಂತಾಜನಕವಾದ ಪರಿಸ್ಥಿತಿಯಾಗಿದೆ.

ನಮ್ಮ ತಾಲ್ಲೂಕಿನಲ್ಲಿ ಬಿತ್ತನೆಯಾದಂಥ ಕ್ಷೇತ್ರ ೧೯೯೪ರಲ್ಲಿ ಒಟ್ಟು ೭೫,೯೫೩ ಹೆಕ್ಟೇರ್ ಆದರೆ ೧೯೯೫ ರಲ್ಲಿ ೪೬.೬೯೬ ಹೆಕ್ಟೇರ್ . ಇದರಲ್ಲಿ ಬೋರಗಳ ಅನುಕೂಲದಿಂದ, ಬಾವಿಗಳ ಆಶ್ರಯದಿಂದ ಹೀಗೆ ಎಲ್ಲಾ ಆಶ್ರಯಗಳಿಂದ ಇಷ್ಟು ಪ್ರದೇಶದಲ್ಲಿ ರೈತರು ಬಿತ್ತನೆಯನ್ನು ಮಾಡಿದ್ದಾರೆ. ಆದರೂ ಕೂಡ ಆಗಸ್ಟ ತಿಂಗಳಲ್ಲಿ ಮಳೆ ಕಡಿಮೆಯಾಗಿ ಪೀಕು ಏನು ಬಂದಿತ್ತು ಅದು ಒಣಗಿಹೋಗಿ ರೈತರು ಕಂಗಾಲಾಗಿದ್ದಾರೆ. ರೈತರು ಸಾಕಷ್ಟು ಗೊಬ್ಬರಕ್ಕೆ ಹಣ ಖರ್ಚು ಮಾಡಿದ್ದಾರೆ. ಇಷ್ಟೆಲ್ಲಾ ಖರ್ಚುಮಾಡಿದರೂ ಅದರ ಫಲಕೈಗೆ ಬರದಂತಾಗಿ, ರೈತರು ತೊಂದರೆಗೆ ಒಳಗಾಗಿದ್ದಾರೆ. ಸಚಿವರ ಹೇಳಿಕೆಯನ್ನು ನೋಡಿದಾಗ ನಮ್ಮ ತಾಲ್ಲೂಕಿನ ಹೆಸರು ಇದರಲಿಲ್ಲ. ಆದ್ದರಿಂದ ಪುನಃ ಮಳೆಯ ಪ್ರಮಾಣವನ್ನು ಮಾನ್ಯ ಕಂದಾಯ ಮಂತ್ರಿಗಳು ಪರಿಶೀಲನೆ ಮಾಡಿ, ನಮ್ಮ ಭಾಗದ ಮಳೆಯ ಪ್ರಮಾಣವನ್ನೂ ತಾವು ತರಿಸಿಕೊಂಡು ಈ ಪಟ್ಟಿಯಲ್ಲಿ ಅದನ್ನು ಸೇರಿಸಿಕೊಂಡು ರೈತರಿಗೆ ಅವಶ್ಯಕವಾಗಿ ಏನು ಸಹಾಯಧನವನ್ನು ಕೊಡಬೇಕು. ಜೊತೆಗೆ ಅಲ್ಲಿನ ಕೂಲಿಕಾರರಿಗಾಗಲಿ, ರೈತರಿಗಾಗಲಿ ಏನಾದರೂ ಕೆಲಸಕಾರ್ಯಗಳನ್ನು ಒದಗಿಸಿಕೊಡಬೇಕು. ಜಮೀನಿನಲ್ಲಿ ಏನನ್ನಾದರೂ ಬಿತ್ತಿ ಒಳ್ಳೆಯ ರೀತಿಯಲ್ಲಿ ಬೆಳೆಬಂದು ರೈತರು ಚೆನ್ನಾಗಿದ್ದದ್ದರೆ, ಇವತ್ತು ಕೂಲಿಕಾರರು ಸಮಾಧಾನವಾಗಿ ನೆಮ್ಮದಿಯಿಂದ ಇರಬಹುದಾಗಿತ್ತು. ಇವತ್ತು ರೈತರೂ ನೆಮ್ಮದಿಯಾಗಿಲ್ಲ, ಕೂಲಿಕಾರರು ನೆಮ್ಮದಿಯಾಗಿಲ್ಲ. ಇನ್ನು ಸ್ವಲ್ಪ ದಿವಸ ಹೀಗೆ ಆದರೆ ಜನರು ಬೇರೆಕಡೆ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕಳೆದ ವರ್ಷ ನಮ್ಮ ಮಲಪ್ರಭ ಜಲಾಶಯ ೩೬ ಟಿ.ಎಂ.ಸಿ. ನೀರು ಸಂಪೂರ್ಣವಾಗಿ ಭರ್ತಿಯಾಗಿತ್ತು. ಆದರೆ ಇವತ್ತು ಕೇವಲ ೧೨ ಟಿ.ಎಂ.ಸಿ. ಫೂಟ್ ನೀರು ಮಾತ್ರ ಬಂದಿದೆ. ನಾವು ಇಂಜನಿಯರಗಳನ್ನು ಕೇಳಿದರೆ, ಇನ್ನು ಕೇವಲ ೪೫ ದಿವಸ ಮಾತ್ರ ನಿಮಗೆ ನೀರು ಒದಗುತ್ತದೆಂದು ಹೇಳುತ್ತಾರೆ. ೪೫ ದಿವಸಗಳಾದಮೇಲೆ ಮುಂದೆ ಏನಪ್ಪಾ ಎಂಬ ಚಿಂತೆ ಅಲ್ಲಿನ ರೈತರಿಗೆ ಆಗಿದೆ. ಈ ಎಲ್ಲ ಅಂಶಗಳನ್ನೂ ಪರಿಶೀಲಿಸಿ, ನಮ್ಮ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಮಲಪ್ರಭಾಕ್ಕೆ ಸಂಬಂಧಪಟ್ಟಂತೆ ೯ ಲಿಫ್ಟ್ ಇರಿಗೇಷನ್‌ಗಳಿವೆ. ಇದರಲ್ಲಿ ೫೬ ಸಾವಿರ ಎಕರೆ ನೀರಾವರಿ ಆಗುತ್ತಿದೆ, ನಿನ್ನೆ ಸರ್ಕಾರದವರು ಕೊಟ್ಟಿರತಕ್ಕ ಹೇಳಿಕೆಯ ಪ್ರಕಾರ ಸುಮಾರು ೫೦ ಪರ್ಸೆಂಟ್ ವಿದ್ಯುತ್ ಖೋತಾ ಆಗುತ್ತದೆಂದು ತಿಳಿದುಬಂದಿರುವುದರಿಂದ

ರೈತರು ಕಂಗಾಲಾಗಿದ್ದಾರೆ. ಇವತ್ತು ಅಲ್ಲಿ ೧ ಎಕರೆಯಲ್ಲಿ ಹತ್ತಿಯನ್ನು ಬೆಳೆಯಬೇಕಾದರೆ, ಸುಮಾರು ೫-೬ ಸಾವಿರ ರೂ. ರೈತ ಖರ್ಚು ಮಾಡಿದ್ದಾನೆ. ತಮ್ಮ ಪ್ರಕಾರ ಅಲ್ಲಿ ಇವತ್ತು ೫೦ ಪರ್ಸೆಂಟ್ ವಿದ್ಯುತ್ ಕಟ್ ಆದರೆ ಇದುವರೆಗೆ ರೈತ ಏನು ಅಲ್ಲಿ ಖರ್ಚುಮಾಡಿದ್ದಾನೆ ಅದು ತನ್ನ ಕೈಗೆ ಬರದೆ ಅವನ ಪರಿಸ್ಥಿತಿ ತುಂಬಾ ಚಿಂತಾಜನಕವಾಗುತ್ತಿದೆ. ಮಲಪ್ರಭಾ ಯೋಜನೆಯ ಅಡಿಯಲ್ಲಿ ಬರತಕ್ಕ ನೀರಿನ ಆಶ್ರಯದಲ್ಲಿ ಬೇಸಾಯ ಮಾಡಿದ ರೈತರೂ ಕೂಡ ವಿದ್ಯುತ್ ಕೊರತೆಯಿಂದ ಇವತ್ತು ತೊಂದರೆಗೆ ಒಳಗಾಗಿದ್ದಾರೆ. ಇದರ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡಬೇಕು. ಇದರ ಜೊತೆಗೆ ದನಗಳ ಮೇವಿನ ಬಗ್ಗೆ, ಜನರ ಬಗ್ಗೆ ಆಗಲಿ ಹೆಚ್ಚಿನ ಆಸಕ್ತಿ ತೆಗೆದುಕೊಂಡು, ಉದ್ಯೋಗಾವಕಾಶಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕೆಂದು ತಮ್ಮ ಪರವಾಗಿ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಚಂದ್ರಕಾಂತ ಜಿ.ಬೆಲ್ಲದ (ಧಾರವಾಡ) : ಮಾನ್ಯ ಉಪಾಧ್ಯಕ್ಷರೆ, ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಇಂಥ ಒಂದು ಭೀಕರ ಬರಗಾಲವನ್ನು ಕಂಡಿರಲಿಲ್ಲ, ಅಂಥ ಬರಗಾಲವನ್ನು ನಮ್ಮ ಕರ್ನಾಟಕ ಈ ಸಾರಿ ಕಂಡಿದೆ. ಮುಂದಿನ ದಿನಗಳಲ್ಲಿ ವಿದ್ಯುತ್ ಕೊರತೆ ಎಷ್ಟಾಗಬಹುದೆಂದು ಮಾನ್ಯ ಸರ್ಕಾರದವರು ತಿಳಿಸಿದ್ದಾರೆ. ಕಳೆದ ೩ ದಶಕಗಳಿಂದಲೂ ಇಂಥ ಮಳೆಯ ಅಭಾವವನ್ನು ಕಂಡಿಲ್ಲವೆಂದು ಪತ್ರಿಕೆಗಳನ್ನು ಹೇಳಿದ್ದಾರೆ. ನಾನು ಹೇಳುವ ಮಾತುಗಳನ್ನು ಕೇಳಿ ಮಾನ್ಯ ಸಚಿವರಾದ ಪ್ರಕಾಶರವರು ಬಹಳ ಲಘುವಾಗಿ ತೆಗೆದುಕೊಂಡು ನಗುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ೭೨-೭೩ನೇ ಸಾಲಿಗೆ ಹೋಲಿಸಿದರೆ, ಮತ್ತು ೮೫-೮೬ನೇ ಸಾಲಿಗೆ ಹೋಲಿಸಿದರೆ, ಈ ಸಾರಿ ಎಷ್ಟೋ ಪರವಾಗಿಲ್ಲ.

ಶ್ರೀ ಚಂದ್ರಕಾಂತ ಜಿ.ಬೆಲ್ಲದ್ : ನಿಮ್ಮ ಲೆಕ್ಕದ ಪ್ರಕಾರವೇ ಆಗಿರುವಂಥ ಮಳೆಯ ಪರಿಣಾಮದಿಂದ ಉಂಟಾಗುವ ವಿದ್ಯುತ್ ಕೊರತೆಯ ಪ್ರಕಾರ, ೩ ದಶಕಗಳ ಕಾಲದಿಂದ ಇಂಥ ಒಂದು ಮಳೆಯ ಅಭಾವವನ್ನು ಕಂಡಿಲ್ಲವೆಂದು ನೀವೇ ಹೇಳಿದ್ದೀರಿ. ನಮ್ಮ ಧಾರವಾಡ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ನಮ್ಮ ಧಾರವಾಡ ಜಿಲ್ಲೆ ಇಂಥ ಬರಗಾಲವನ್ನು ಹಿಂದೆಂದೂ ಕಂಡಿರಲಿಲ್ಲ. ಬಹುಶಃ ಇತಿಹಾಸದಲ್ಲೇ ಇದು ಮೊದಲನೇ ಸಾರಿ ಕಂಡಿರುವಂಥಾದ್ದು. ನಮ್ಮ ಜಿಲ್ಲೆಯ ಬಹಳಷ್ಟು ತಾಲ್ಲೂಕುಗಳಲ್ಲಿ ಬರಗಾಲ ಇದೆ. ಈ ರಾಜ್ಯದ ೨೦ ಜಿಲ್ಲೆಗಳನ್ನೂ ತೆಗೆದುಕೊಂಡು ಹೋಲಿಕೆ ಮಾಡಿ ನೋಡಿದರೆ, ಧಾರವಾಡ ಜಿಲ್ಲೆಗಳಲ್ಲಿ ೧೭ ತಾಲ್ಲೂಕುಗಳಲ್ಲಿ ಬರಗಾಲ ಪರಿಸ್ಥಿತಿ ಇದೊಂದು ತಾವೇ ತಮ್ಮ ಹೇಳಿಕೆಯಲ್ಲಿ ಕೊಟ್ಟಿದ್ದೀರಿ. ತಾವು ೧೧ ತಾಲ್ಲೂಕುಗಳನ್ನು ಇಲ್ಲಿ ಏನು ಕೊಟ್ಟಿದ್ದೀರಿ ಇದರ ಜೊತೆಗೆ ಇನ್ನೂ ೪ ತಾಲ್ಲೂಕುಗಳನ್ನು ಸೇರಿಸಬೇಕಾಗಿದೆ. ಇಂಥ ಬರಗಾಲ ಪರಿಸ್ಥಿತಿಯನ್ನು ನಮ್ಮ ಭಾರತೀಯ ಜನತಾ ಪಾರ್ಟಿಯವರು ಕಳೆದ ಮೇ ತಿಂಗಳಿಂದಲೂ ಈ ಬರಗಾಲ ಪರಿಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು, ಮಾನ್ಯ ರಾಜ್ಯಪಾಲರನ್ನೂ ಕೂಡ ನಾವು ಭೇಟಿಯಾಗಿ ಮನವಿಯನ್ನು ಕೊಟ್ಟಿದ್ದೇವೆ. ಅನಂತರ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಮಾಡಿ ಅವರ ಮನೆಯ ಮುಂದೆಯೂ ಕೂಡ ಧರಣಿ ಮಾಡಿ, ಈ ರಾಜ್ಯದ ಬರಗಾಲದ ಪರಿಸ್ಥಿತಿ

ನಿವಾರಣೆಗಾಗಿ ಹಲವಾರು ಯೋಜನೆಗಳನ್ನು ರೂಪಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಇದರ ಜೊತೆಗೆ ನಾವು ಎಲ್ಲ ಶಾಸಕರೂ ದೆಹಲಿಗೂ ಹೋಗಿ ಮಾನ್ಯ ಪ್ರಧಾನ ಮಂತ್ರಿಗಳನ್ನೂ ಭೇಟಿ ಮಾಡಿ, ಕರ್ನಾಟಕ ರಾಜ್ಯದ ಬರಗಾಲದ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟು, ನಮ್ಮ ಮನವಿಯನ್ನು ಕೊಟ್ಟು ಬಂದಿರುವುದು ಇಡೀ ಕರ್ನಾಟಕದ ಜನತೆಗೆ ಮತ್ತು ತಮಗೂ ಕೂಡ ಗೊತ್ತಿರುವ ಸಂಗತಿ. ಬರಗಾಲದ ಬಗ್ಗೆ ಸರ್ಕಾರಕ್ಕೆ ಇಷ್ಟೊಂದು ಅರಿವು ಇದ್ದಾಗ್ಯೂ ಕೂಡ, ಬರಗಾಲದ ಬಗ್ಗೆ ತಾವು ತರಿಸಿಕೊಂಡಿರುವಂಥ ವರದಿಯಲ್ಲಿ ಕೂಡ ಕೊಟ್ಟಿರುವ ಅಂಕಿಸಂಖ್ಯೆಗಳು ಸರಿಯಾಗಿಲ್ಲವೆಂಬುದು ಇಲ್ಲಿ ಕಂಡುಬರುತ್ತಿದೆ. ತಮ್ಮ ಪಕ್ಷದ ಶಾಸಕರಾದ ಹಾಗೂ ಸವದತ್ತಿ ಕ್ಷೇತ್ರದ ಶಾಸಕರಾದ ಮಾನ್ಯ ಮಾಮನಿಯವರೂ ಕೂಡ ಮಾತನಾಡಿ ಈ ವರದಿಯಲ್ಲಿ ಸವದತ್ತಿ ಸೇರಿಲ್ಲ, ಅಲ್ಲೂ ಕೂಡ ಮಳೆ ಆಗಿಲ್ಲ ಎಂಬ ಮಾತನ್ನು ಹೇಳಿದರು. ಬಿಜಾಪುರ ಜಿಲ್ಲೆ ಕಳೆದ ಹಲವಾರು ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗವಂಥ ಜಿಲ್ಲೆ. ಆ ಜಿಲ್ಲೆಯಲ್ಲಿರುವ ೧೧ ತಾಲ್ಲೂಕುಗಳ ಪೈಕಿ ಕೇವಲ ೪ ತಾಲ್ಲೂಕುಗಳನ್ನು ಮಾತ್ರ ಇದರಲ್ಲಿ ಸೇರಿಸಿದ್ದೀರಿ. ಅಂದರೆ ನಿಮ್ಮ ಈ ವರದಿ ಸತ್ಯಕ್ಕೆ ಎಷ್ಟು ದೂರವಾದುದು ಎಂಬುದು ಕಂಡುಬರುತ್ತಿದೆ. ತಮ್ಮ ಅಧಿಕಾರಿಗಳಿಂದ ಇಂಥ ವರದಿಯನ್ನು ತರಿಸಿಕೊಂಡು ಈ ರಾಜ್ಯದ ಬರಗಾಲಕ್ಕೆ ತಾವು ಪರಿಹಾರವನ್ನು ಎಷ್ಟರಮಟ್ಟಿಗೆ ಕೊಡುವುದಕ್ಕೆ ಸಾಧ್ಯ ಎಂಬುದನ್ನು ನಾವು ಈ ಅಂಕಿಸಂಖ್ಯೆಗಳಿಂದ ತಿಳಿದುಕೊಳ್ಳಬಹುದಾಗಿದೆ. ಇದರಿಂದ ನಮ್ಮ ಜನತೆ ಸಂಕಷ್ಟಗಳನ್ನು ಈ ಸರ್ಕಾರ ಎಷ್ಟುಮಟ್ಟಿಗೆ ನೀಗಿಸುವುದಕ್ಕೆ ಸಾಧ್ಯ ಎಂಬುದು ಗೊತ್ತಾಗುತ್ತಿದೆ.

ಮಾನ್ಯ ಉಪಾಧ್ಯಕ್ಷರೆ, ಇವರು ಇವತ್ತು ಕೊಟ್ಟಿರುವ ವರದಿಯಿಂದ ಈ ಸರ್ಕಾರಕ್ಕೆ ಈ ರಾಜ್ಯದಲ್ಲಿರುವ ಜನತೆಯ ಬಗ್ಗೆ, ಬರಗಾಲ ನಿವಾರಣೆಯ ಬಗ್ಗೆ ಸರಿಯಾದ ಕಳಕಳಿ ಇಲ್ಲ ಎಂಬುದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತಿದೆ. ಈ ಬರಗಾಲ ಪರಿಸ್ಥಿತಿಯ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲವೆಂದು ಇದುವರೆಗೆ ಮಾತನಾಡಿದ ಎಲ್ಲಾ ಶಾಸಕ ಮಿತ್ರರೂ ಹೇಳಿದ್ದಾರೆ. ಆದ್ದರಿಂದ ನಾನು ಮತ್ತೆ ಆ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಈ ದಿಸೆಯಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬ ವಿಚಾರವನ್ನು ಖಚಿತವಾಗಿ ಕೊಡುತ್ತಿದ್ದೇನೆ. ಜನತೆ ಈ ಸರ್ಕಾರದ ಬಗ್ಗೆ ಬಹಳಷ್ಟು ವ್ಯಸನ ಪಡುವಂಥ ಪರಿಸ್ಥಿತಿ ಉಂಟಾಗಿದೆ ಎಂಬ ವಿಚಾರವನ್ನು ತಮ್ಮ ಮುಂದಿಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಏಪ್ರಿಲ್-ಮೇ ತಿಂಗಳಲ್ಲಿ ಮಳೆ ಪ್ರಾರಂಭವಾಗುತ್ತದೆ. ವ್ಯವಸಾಯದ ಕೆಲಸಕಾರ್ಯಗಳು ಏಪ್ರಿಲ್ ತಿಂಗಲ್ಲೇ ಪ್ರಾರಂಭವಾಗುವ ಈ ನಮ್ಮ ಕರ್ನಾಟಕದಲ್ಲಿ ಮೇ ತಿಂಗಳಿನಿಂದ ಎಲ್ಲೂ ಮಳೆಯೇ ಆಗದೆ ಇರುವುದರಿಂದ ಜೂನ್ ಮೊದಲನೇ ವಾರದಿಂದಲೇ ನಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುವಂಥ ಪ್ರಯತ್ನವನ್ನು ಮಾಡುತ್ತಾ ಬಂದಿದ್ದೇವೆ. ಕಳೆದ ೪ ತಿಂಗಳಿಂದ ಈ ರಾಜ್ಯದಲ್ಲಿ ಮಳೆ ಬಾರದೇ ಇರುವುದನ್ನು ನೋಡಿಯೂ ಈ ಸರ್ಕಾರ ಶಾಸಕರ ಅಧ್ಯಕ್ಷತೆಯಲ್ಲಿ ಬರಗಾಲ ಪರಿಹಾರಕಾರ್ಯಕ್ರಮಗಳನ್ನು ಕೈಗೊಳ್ಳಲು ಸಮಿತಿಗಳನ್ನು ರಚಿಸುವುದಕ್ಕೆ ಸರ್ಕಾರ ಆದೇಶವನ್ನು ಆಗಸ್ಟ ಮೊದಲನೇ ವಾರದಲ್ಲಿ ಕೊಟ್ಟಿದೆ. ನನಗೆ ತಿಳಿದಮಟ್ಟಿಗೆ ಇದುವರೆಗೆ ಯಾವುದೇ ತಾಲ್ಲೂಕಿನಲ್ಲೂ ಬರಗಾಲ ಪರಿಸ್ಥಿತಿಯ

ಹಣ ಬಂದಿಲ್ಲ. ಈ ದಿಸೆಯಲ್ಲಿ ಒದಿಗಸಬೇಕಾದ ಹಣದ ಬಗ್ಗೆ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ. ಬರಗಾಲ ಬಂದಿರುವ ಸಂದರ್ಭದಲ್ಲಿ ಜನತೆಗೆ ಉದ್ಯೋಗವನ್ನು ಒದಗಿಸುವ ವಿಚಾರದಲ್ಲಿ ಅದರಲ್ಲೂ ಕೂಲಿಕಾರರಿಗೆ, ಗ್ರಾಮೀಣ ಪ್ರದೇಶದ ಜನರಿಗೆ, ಬೇಸಾಯವನ್ನು ಅವಲಂಬಿಸಿರತಕ್ಕ ಜನರಿಗೆ, ಬಡ ಜನರಿಗೆ ಕೂಲಿಯನ್ನು ಒದಗಿಸಬೇಕೂ ಅದಕ್ಕೆ ಸಂಬಂಧಪಟ್ಟಂತೆ ರಾಜ್ಯದ ಯಾವ ಜಿಲ್ಲೆಗಳಿಗೂ ಇವರು ಇವತ್ತಿನವರೆಗೂ ಹಣವನ್ನು ಒದಗಿಸಿಲ್ಲ. ಇವರು ಕೊಟ್ಟಿರುವ ಅಂಕಿಸಂಖ್ಯೆಗಳ ಆಧಾರದಮೇಲೆಯೇ ನಾವು ಹೇಳುವುದಾದರೆ, ನಮ್ಮ ಧಾರವಾಡ ಜಿಲ್ಲೆ ಇಷ್ಟೊಂದು ಬರಗಾಲಕ್ಕೆ ತುತ್ತಾಗಿದ್ದರೂ ಅಲ್ಲಿ ಖರ್ಚುಮಾಡಬೇಕಾದ ಕೂಲಿ ಹಣವನ್ನು ಇವರು ಒದಗಿಸಿಲ್ಲ.

ಬಿಜಾಪುರ, ರಾಯಚೂರು, ಬೆಳಗಾಂ, ಬೀದರ್, ಅದೇ ಪ್ರಕಾರ ಮಂಡ್ಯ ಮೈಸೂರು, ಶಿವಮೊಗ್ಗ ಜಿಲ್ಲೆಗಳಿಗೂ, ಇದು ಮಲೆನಾಡು ಪ್ರದೇಶ, ಇಲ್ಲಿಯೂ ಸಹಿತ ಆ ದಿಸೆಯಲ್ಲಿ ಹಣವನ್ನು ಒದಗಿಸಿಲ್ಲ. ಮಳೆಇಲ್ಲದೇ ಇರುವಂತಹ, ಒಂದು ಬರಗಾಲದ ಜಿಲ್ಲೆಯಾದಂತಹ ಚಿತ್ರದುರ್ಗ ಜಿಲ್ಲೆಗೆ ಸಹಿತ, ಅಲ್ಲಿನ ಜನತೆಗೆ ಕೂಲಿ ಕೆಲಸವನ್ನು ಒದಗಿಸುವಂತಹ ಒಂದು ಅವಕಾಶವನ್ನು ಈ ಸರ್ಕಾರ ಮಾಡಿಕೊಟ್ಟಿಲ್ಲ ಎನ್ನುವುದನ್ನು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ಈ ದೃಷ್ಟಿಯಿಂದ ನಾವು ನೋಡಿದಾಗ ಬಹುತೇಕ ಕರ್ನಾಟಕ ರಾಜ್ಯದ ೨೦ ಜಿಲ್ಲೆಗಳಲ್ಲಿ ಸಾಧಾರಣವಾಗಿ ೧೭೫ ತಾಲ್ಲೂಕುಗಳಲ್ಲಿ ಬಹುತೇಕ ಎಲ್ಲ ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ನಾವು ಹೇಳಬೇಕಾಗುತ್ತದೆ. ಆದರೆ ಕಲವು ಕಡೆ ಮಳೆಯಾಗಿ, ಕೆಲವು ಕಡೆ ಸಣ್ಣ ಪ್ರಮಾಣದಲ್ಲಿ ಬಿತ್ತನೆ ಸಹಿತ ಆಗಿರುವುದು ನಮಗೆ ಕಂಡುಬಂದಿದೆ. ಆ ಬಿತ್ತನೆ ಆದಮೇಲೆ ರೈತ ಇವತ್ತು ಏನು ಕಷ್ಟವನ್ನು ಅನುಭವಿಸುತ್ತಾ ಇದ್ದಾನೆ. ಎಂದರೆ, ಬೀಜವನ್ನು ಕಳೆದುಕೊಂಡಿದ್ದಾನೆ, ಗೊಬ್ಬರಕ್ಕೆ ಮಾಡಿದಂತಹ ಖರ್ಚುಗಳು ಏನಿವೆ ಅದು ಅವನ ಮೈ ಮೇಲೆ ಬಂದಿದೆ. ಬೇಸಾಯಕ್ಕೆ ಮಾಡಿದಂತಹ ಇನ್ನಿತರೇ ಖರ್ಚು ಅವನ ಮೈ ಮೇಲೆಬಂದಿದೆ. ಮಳೆ ಇಲ್ಲದೆ ಎಲ್ಲಾ ಬೆಳೆಗಳು ಒಣಗಿವೆ, ಇಂತಹ ಪರಿಸ್ಥಿತಿಯಲ್ಲಿ ಇವತ್ತು ಇಡೀ ರಾಜ್ಯ ಬರಗಾಲಕ್ಕೆ ತುತ್ತಾದಂತಹ ಪರಿಸ್ಥಿತಿಯನ್ನು ಕಾಣುತ್ತಾ ಇದ್ದೇವೆ. ಧಾರವಾಡದಲ್ಲಿ ಯಾವಾಗಲೂ ಮಳೆಯಾಗುವಂತಹ ಪ್ರದೇಶ. ಧಾರವಾಡದ ನಮ್ಮ ತಾಲ್ಲೂಕಿನಲ್ಲಿ ಎಂದು ಈ ಪರಿಸ್ಥಿತಿ ಬಂದಿರಲಿಲ್ಲಿ. ಆದರೆ ಇಲ್ಲಿ ಎರಡು ತಿಂಗಳು ಲೇಟಾಗಿ, ತಡವಾಗಿ ಬಿತ್ತಿದಂತಹ ಬೀಜಗಳು ಇವತ್ತು ಮೊಳಕೆ ಹೊಡೆದು, ಇವತ್ತು ಮಳೆಯಿಲ್ಲದೆ ಬೆಳೆಗಳೆಲ್ಲ ನಾಶವಾಗುತ್ತಾ ಇದೆ. ಮಳೆಯಿಲ್ಲದೆ ಇದ್ದರೆ ಒಳ್ಳೆಯದು ಆಗುತ್ತಿತ್ತು. ನಡುವೇ ಮಳೆಯಾಯಿತು, ಕಡೆಗೆ ಏನಾದರೂ ದನಕರುಗಳಿಗೆ ಹುಲ್ಲು, ಆಗುತ್ತದೆ ಅನ್ನುವ ದೃಷ್ಟಿಯಿಂದ ಹಾಕಿದಂತಹ ಕಾಳು, ಹಾಕಿದಂತಹ ಗೊಬ್ಬರ, ಮಾಡಿದಂತಹ ಶ್ರಮ, ಮಾಡಿದಂತಹ ವೆಚ್ಚು ಇವತ್ತು ಅವನ ಮೈ ಮೇಲೆ ಬಂದು ಬೆಳೆ ಎಲ್ಲ ನಾಶವಾಗುತ್ತಾ ಇದೆ. ಇಂತಹ ಪರಿಸ್ಥಿತಿ ಬಹುಶಃ ಧಾರವಾಡದಲ್ಲಿ ಅಷ್ಟೆ ಅಲ್ಲ, ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಕಂಡು ಬರುತ್ತಾ ಇದೆ ಎನ್ನುವುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಸನಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ, ಸಣ್ಣ ನೀರಾವರಿ ಮಂತ್ರಿಗಳಿಗೆ ಜುಲೈನಲ್ಲಿ ನಾನು ಒಂದು ಪತ್ರವನ್ನು ಬರೆದಿದ್ದೆ. ಈ ರಾಜ್ಯದಲ್ಲಿ ಕುಡಿಯುವ ನೀರು ಬಹು ದೊಡ್ಡ

ಸಮಸ್ಯೆಯಾಗಿದೆ. ಬಹುತೇಕ ರಾಜ್ಯದ ದೊಡ್ಡ ನಗರಗಳು ಅಷ್ಟೆ ಅಲ್ಲ, ಮುನಿಸಿಪಾಲಿಟಿಗಳು ಇರತಕ್ಕಂತಹ ನಗರಗಳು ಅಷ್ಟೇ ಅಲ್ಲ, ಗ್ರಾಮಾಂತರ ಪ್ರದೇಶದಲ್ಲಿಯು ಸಹಿತ ಕುಡಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಭೂಮಿಯಲ್ಲಿರತಕ್ಕಂತಹ ಜಲದ ಅಂಶ ಬಹಳ ಕೆಳಗೆ ಹೋಗಿದೆ. ನಜೀರನಾಬರವರು ಇದ್ದಂತಹ ಕಾಲದಲ್ಲಿ ತೋಡಿದಂತಹ ಬೋರವೆಲಗಳಲ್ಲಿ ಇವತ್ತು ನೀರಿಲ್ಲದೇ ಬಂದ್ ಆಗಿಬಿಟ್ಟಿವೆ. ಬೋರವೆಲಗಳ ಪಂಪುಗಳು ಹಾಳಾಗಿವೆ, ಅವು ಯಾವುವು ಸರಿಯಾದಂತಹ ಸ್ಥಿತಿಯಲ್ಲಿಲ್ಲ. ಇಂತಹ ಸ್ಥಿತಿಯಲ್ಲಿ ನೀವು ಕುಡಿಯುವ ನೀರಿನ ಸಲುವಾಗಿ ಮೊದಲನೇಯ ಆದ್ಯತೆಯನ್ನು ಕೊಡಿ. ಎಲ್ಲಾ ಕೆರೆಕಟ್ಟೆಗಳಲ್ಲಿ ಹೂಳು ತೆಗೆಯಲಿಕ್ಕೆ ಪ್ರಯತ್ನ ಮಾಡಿ. ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಕೆರೆಕಟ್ಟೆಗಳನ್ನು ರಿಪೇರಿ ಮಾಡಿಸಿ. ಜನರಿಗೆ ಉದ್ಯೋಗವನ್ನು ಒದಗಿಸಿರಿ, ಆ ಭಾಗದಲ್ಲಿರತಕ್ಕಂತಹ ರೈತರು ಏನಾದರೂ ಬೆಳೆ ಬೆಳೆಯಬಹುದು, ದನಕರಗಳಿಗೆ ಏನಾದರೂ ಮೇವಾಗಬಹುದು, ಇಲ್ಲಿರತಕ್ಕಂತಹ ಚಿಕ್ಕಪುಟ್ಟ ಘಟಕಗಳಿಂದ, ಒಂದು ದೃಷ್ಟಿಯಿಂದ ಮಾತ್ರ ಭೂಮಿಯಲ್ಲಿ ಜಲದ ಅಂಶ ಹೆಚ್ಚಾಗಿ ಮತ್ತು ಬೋರಗಳಿಗೆ ನೀರು ಬರುವ ದೃಷ್ಟಿಯಿಂದ, ಕೆರೆಕಟ್ಟೆಗಳ ಕೆಲಸಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಬಹುಶಃ ನನಗೆ ತಿಳಿದಮಟ್ಟಿಗೆ ನಮ್ಮ ಸರ್ಕಾರ ಈ ರಾಜ್ಯದಲ್ಲಿ ಆಪ್ರಯತ್ನವನ್ನು ಇಲ್ಲಿಯವರೆಗೂ ಮಾಡಲಿಲ್ಲವೆಂದು ಕಂಡುಬರುತ್ತದೆ. ಏಕೆಂದರೆ ನಾನು ಬರೆದಂತಹ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಗಳಾಗಲಿ, ಸಣ್ಣ ನೀರಾವರಿ ಮಂತ್ರಿಗಳಾಗಲಿ ಇಲ್ಲಿಯವರೆಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿಲ್ಲ. ಇದಕ್ಕೆ ಹೆಚ್ಚಿನ ಆದ್ಯತೆಯನ್ನು ನಮ್ಮ ಸರ್ಕಾರ ಇವತ್ತ ಕೊಡಬೇಕಾಗಿತ್ತು. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಸನ್ಮಾನ್ಯ ಅಧ್ಯಕ್ಷರೇ, ಇದಾದನಂತರ ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಹಳ್ಳ, ನದಿಗಳು ಹರಿಯುತ್ತವೆ. ಆ ಹಳ್ಳ ನದಿಗಳಿಗೆ ಯಾವಾಗಲೋ ಆಕಾಲದಲ್ಲಿ ಮಳೆಯಾಗಿ ನೀರು ಹರಿದು ಸಮೃದ್ಧಿಯಾಗಿ ಕೂಡಿರುತ್ತದೆ. ಯಾವ್ಯಾವುದೋ ಪ್ರಾಜೆಕ್ಟ್‌ಗೆ ನೀರು ಹೋಗಿ ಕೂಡುತ್ತಾ ಇದೆ. ಈ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಅಥವಾ ಯಾವ ಹಳ್ಳ ಮತ್ತು ನದಿಗಳು ದಂಡೆಗಳ ಮೇಲೆ ಇರುವಂತಹ ಗ್ರಾಮಗಳಿಗೆ ನೀರಾವರಿ ಮೂಲಕ ಏನು ಹಸಿರು ಬೆಳೆದು ಅವರ ಉತ್ಪನ್ನವನ್ನು ತೆಗೆಯಲಿಕ್ಕೆ ಅನುಕೂಲವಾಗುವಂತಹ ಬದುಗಳನ್ನು ಕಟ್ಟಿಸಲಿಕ್ಕೆ ಸಾಕಷ್ಟು ಅವಕಾಶಗಳು ಇವೆ. ಆ ಬದುಗಳನ್ನಾದರೂ ಕಟ್ಟಿಸುವಂತಹ ಯೋಜನೆಯನ್ನು ಈಗ ಪ್ರಾರಂಭಮಾಡಬೇಕೆಂದು ಹೇಳಿ ಆ ಪತ್ರದಲ್ಲಿ ವಿನಂತಿ ಮಾಡಿಕೊಂಡಿದ್ದೆ. ಆದರೆ ಆ ದೃಷ್ಟಿಯಲ್ಲಿ ಕೆಲಸ ಸಹಿತ ಪ್ರಾರಂಭವಾಗಿಲ್ಲ ಎನ್ನುವುದು ನನಗೆ ಕಂಡು ಬರುತ್ತಿದೆ.

ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ಇರುವಂತಹ ಬರಗಾಲದ ಪರಿಸ್ಥಿತಿಯಲ್ಲಿ ಸರ್ಕಾರ ಕೆರೆಕಟ್ಟೆಗಳನ್ನು ರಿಪೇರಿ ಮಾಡುವುದು, ಅವುಗಳ ಹೂಳು ತೆಗೆಯುವುದಕ್ಕೆ ಮೊದನೆಯ ಆದ್ಯತೆಯನ್ನು ಕೊಡಬೇಕಾದರು, ಆನಂತರ ಕುಡಿಯುವ ನೀರಿನ ಸಲುವಾಗಿ ಜಲ ಅಂಶ ಹೆಚ್ಚಾಗುವಂತೆ ಆದ್ಯತೆಯನ್ನು ಕೊಡಬೇಕಾಗಿದ್ದು, ಹಳ್ಳಿಗಾಡಿನಲ್ಲಿರತಕ್ಕಂತಹ ಯಾವ್ಯಾವ ಚಿಕ್ಕ ಕಾಲು ರಸ್ತೆಗಳಿವೆ, ನಡೆದುಕೊಂಡು ಅಡ್ಡಾಡುವಂತಹ ರೈತ ಹಳ್ಳಿಗಳಿಗೆ ಹೋಗುವಂತಹ, ಹೊಲಗಳಿಗೆ ಹೋಗುವಂತಹ ರಸ್ತೆಗಳಿವೆ ಅಲ್ಲೆಲ್ಲ, ಇವತ್ತು ಕೂಲಿ ಕೆಲಸ ಕೊಡುವುದರ ಮೂಲಕ ಬರಗಾಲದ ಕಾಮಗಾರಿಗಳನ್ನು ಎತ್ತಿಕೊಳ್ಳುವುದರ ಮೂಲಕ ರಸ್ತೆಗಳನ್ನು ನಿರ್ಮಾಣ ಮಾಡುವಂಥ ಕಾರ್ಯಕ್ಕೆ ಮೊದಲನೆಯ ಆದ್ಯತೆಯನ್ನು ಕೊಟ್ಟು ಪ್ರಾರಂಭ ಮಾಡಬೇಕು.

ಆದರೆ, ಎಲ್ಲಿಎಲ್ಲಿ ಸಹಿತ ಸರ್ಕಾರ ಈ ಕೆಲಸಗಳನ್ನು ಪ್ರಾರಂಭ ಮಾಡಿಲ್ಲ. ನಮ್ಮ ಇಡೀ ಸದನದಲ್ಲಿ ಮಾತನಾಡುವಂತಹ ಸದಸ್ಯರ ಅಭಿಪ್ರಾಯದ ಪ್ರಕಾರ, ಬರಗಾಲದ ಕೆಲಸಗಳೆ ನಾವು ನೋಡಲಿಕ್ಕೆ ಪ್ರಾರಂಭವಾಗಿಲ್ಲ ಎನ್ನುವುದು ಇವತ್ತು ಕಂಡು ಬರುತ್ತಿದೆ. ಅನೇಕ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳ ಕಟ್ಟಡಗಳು ಇಲ್ಲ ಅನೇಕ ಹಳ್ಳಿಗಳಲ್ಲಿ ಏನು ಗೋಮಾಳಗಳಿವೆ, ಕೆರೆಕಟ್ಟೆಗಳು, ಸಣ್ಣ ಪ್ರದೇಶಗಳಿವೆ ಅಲ್ಲಲ್ಲಿ ಹೆಚ್ಚು ಗಿಡಮರಗಳನ್ನು ನೆಡುವುದರ ಮೂಲಕ ಸಹಿತ ಅನೇಕ ಜನರಿಗೆ ಉದ್ಯೋಗವಕಾಶವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಪರಿಸರದ ದೃಷ್ಟಿಯಿಂದಲೂ ಮಳೆಯ ಒಂದು ಅಭಾವದಿಂದಲೂ ಇವತ್ತು ಏನು ಗಿಡಮರಗಳು, ಅರಣ್ಯಗಳ ಸಂಖ್ಯೆ ಕಡಿಮೆಯಾಗಿ, ಪ್ರಮಾಣ ಕಡಿಮೆಯಾಗಿ, ಪ್ರದೇಶ ಕಡಿಮೆಯಾಗಿ ಏನು ಮಳೆ ಕಡಿಮೆಯಾಗುತ್ತಿದೆ, ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ಸರ್ಕಾರ ಯಾವುದೇ ಒಂದು ಪ್ರಯತ್ನವನ್ನು ಮಾಡಲಿಲ್ಲ, ಇಂಥ ಒಂದು ಯೋಜನೆಗಳ ಮೂಲಕ, ಈ ಬರಗಾಲ ಪರಿಹಾರಕ್ಕೆ ನಿಲ್ಲಬೇಕಾಗಿತ್ತು, ಆ ಪ್ರಯತ್ನವನ್ನು ಸರ್ಕಾರ ಪೂರ್ಣ ವಿಫಲವಾಗಿದೆಯೆಂದು ಹೇಳುತ್ತೇನೆ. ಇದರ ಜೊತೆಗೆ ಈಗಾಗಲೇ ವಿದ್ಯುಚ್ಛಕ್ತಿ ಬಗ್ಗೆ ನಮ್ಮ ಸರ್ಕಾರದ ಒಂದು ನಿಲುವು ತೆಗೆದುಕೊಳ್ಳುವಂತಹ ಪ್ರಸಂಗ ಇದೆ. ಇಡೀ ರಾಜ್ಯದಲ್ಲಿ ಈ ಸಲ ಕೇವಲ ನಲವತ್ತು ಪ್ರತಿಶತ ಮಳೆಯಾಗಿದೆ ಎನ್ನುವಂಥದ್ದು ನಮಗೆ ಅಂಕಿಸಂಖ್ಯೆಗಳಲ್ಲಿ ಗೊತ್ತಾಗಿದೆ. ರೈತರು ಏನು ಪಂಪಸೆಟ್ಟುಗಳನ್ನು ಹಾಕಿದ್ದಾರೆ, ಅದರ ಆಧಾರದ ಮೇಲೆ ಬೆಳೆ ಬೆಳೆಯಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಆ ವಿದ್ಯುತ್ತನ್ನು ಇಮೊತ್ತು ಏನಾದರೂ ಕಟ್ ಮಾಡಿದರೆ, ಬರಬೇಕಾದಂತಹ ಬೆಳೆ ಸಹಿತ ಹಾಳಾಗುತ್ತದೆ. ರೈತ ಬಹಳಷ್ಟು ಕಷ್ಟದಲ್ಲಿರುವಂತಹ ಕಾಲದಲ್ಲಿ ನಾವು ಅವರಿಗೆ ವಿದ್ಯುತ್ತಿನ ಕೊರತೆಯನ್ನು ಮಾಡಬಾರದು. ಎಲ್ಲರಿಗೂ ನೀವು ವಿದ್ಯುತ್ತನ್ನು ಕಟ್ ಮಾಡಿದರೂ ಅಡ್ಡಿ ಇಲ್ಲ ಈ ಪಂಪ್ ಸೆಟ್ಟು ಏನು ಇದೆ, ರೈತರು ಏನು ಅದರಿಂದ ಬೆಳೆ ಬೆಳೆಯುತ್ತಿದ್ದಾರೆ ಆ ಬೆಳೆಗಳು ಹಾಳಾಗುದಂತೆ, ಅವನ ಪರಿಸ್ಥಿತಿ ಈಗಾಗಲೇ ದುಃಸ್ಥಿತಿಯಲ್ಲಿದೆ. ಅವನ ಪರಿಸ್ಥಿತಿ ಇನ್ನೂ ಬಿಗಡಾಯಿಸದಂತೆ ಸರ್ಕಾರ ಈಗ ಇರುವಂತಹ ಪಂಪಸೆಟುಗಳಿಗೆ ವಿದ್ಯುತ್ತನ್ನು ಕಡಿತ ಮಾಡದಂತೆ ನೋಡಿಕೊಳ್ಳಬೇಕು ಎನ್ನುವಂತಹ ವಿಚಾರವನ್ನು ಹೇಳುತ್ತೇನೆ. ಮೊಟ್ಟ ಮೊದಲ ಆದ್ಯತೆಯನ್ನು ಈಗ ಸರ್ಕಾರ ಎಲ್ಲಾ ಜಿಲ್ಲೆಗಳಿಗೆ, ಎಲ್ಲಾ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆಗೆ ಮಾಡುತ್ತಿದ್ದೇವೆ ಎನ್ನುವಂಥ ವಿಚಾರವನ್ನು ಪೂರ್ಣ ತಿಳಿಸಿಕೊಡಬೇಕು. ಪ್ರತಿಯೊಂದು ತಾಲ್ಲೂಕುವಾರು ಹಣ ಬಿಡುಗಡೆ ಮಾಡಿ, ಅದರ ಅಂಕಿಸಂಖ್ಯೆಯನ್ನು ಕೊಡಬೇಕು ಎಂದು ಹೇಳಿ ಇಷ್ಟ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಶಿವರಾಮ: ನನಗೆ ಎರಡು ನಿಮಿಷ ಕೊಡಿ. ನಾನು ಭಾಷಣವನ್ನೇನು ಮಾಡುವುದಿಲ್ಲ. ಎರಡೇ ಎರಡು ವಿಚಾರಗಳನ್ನು ತಾವು ಅವಕಾಶ ಕೊಟ್ಟರೇ ಹೇಳುತ್ತೇನೆ.

ಅಧ್ಯಕ್ಷರು : ಯಾರು? ಇಬ್ಬರೂ ಹೇಳುತ್ತೀರೋ ನೀವೊಬ್ಬರೇ ಹೇಳುತ್ತಿರೋ?

ಶ್ರೀ ಬಿ. ಶಿವರಾಮ: ಬಹಳ ಹೊತ್ತಿನಿಂದ ಕುಳಿತಿದ್ದೇನೆ. ಎರಡೇ ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ಅಪ್ಪಚ್ಚುರವರೇ ಬುಧುವಾರ ಹೇಳಿ. ಊರಿಗೆ ಹೋಗಿ ಹಬ್ಬ ಎಲ್ಲಾ ಮುಗಿಸಿಕೊಂಡು ಬನ್ನಿ.

ಒಬ್ಬ ಮಾನ್ಯ ಸದಸ್ಯರು : ಈಗಾಗಲೇ ಬೋರಾಗಿದೆ. ಮತ್ತೆ ಯಾರಿಗೂ ಚರ್ಚೆ ಕೇಳಲು ತಾಳ್ಮೆ ಇಲ್ಲ.

ಶ್ರೀ ಬಿ. ಶಿವರಾಮು : ಸುಮ್ಮನೆ ಎರಡೆರಡು ನಿಮಿಷ ಹೇಳಿ, ಇವತ್ತೇ ಮುಗಿಸಿಬಿಟ್ಟಿದ್ದರೆ ಚೆನ್ನಾಗಿತ್ತು ಎಂದು ನನ್ನ ಅನಿಸಿಕೆ..

ಒಬ್ಬ ಮಾನ್ಯ ಸದಸ್ಯರು : ದಯಮಾಡಿ ನಮ್ಮ ಭಾವನೆಗಳನ್ನು ವ್ಯಕ್ತ ಮಾಡಲಿಕ್ಕೆ ಬುಧವಾರ ನಮಗೆ ಐದು ನಿಮಿಷ ಅವಕಾಶಕೊಡಿ .

ಒಬ್ಬ ಮಾನ್ಯ ಸದಸ್ಯರು : ಹಿಂದಿನವರಿಗೆ ನೀವು ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೀವು ನಿಮ್ಮ ಮುಂದಿನ ಬೆಂಚಿನವರಿಗೆ ಹೇಳಬೇಕು, ನಮಗೂ ಬಾಯಿ ಇದೆಯಪ್ಪಾ ತೆಗೆಯೋಕ್ಕೆ ಚಾನ್ಸ ಕೊಡಿ ಎಂದು.

(ನಗು)

ಒಬ್ಬಮಾನ್ಯ ಸದಸ್ಯರು : ನಾವು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ನೀವು ಸ್ವಲ್ಪ ಮುಂದಿನ ಬೆಂಚನ್ನೆಲ್ಲಾ ಕಡಿಮೆ ಮಾಡಿ, ಹಿಂದಿನವರೆಗೆ ನೀವು ಅವಕಾಶ ಕೊಡಬೇಕು. ನೀವು ನಮ್ಮನ್ನೇ ಕೂಡಿಸುತ್ತೀರಿ ಹೊರತು ಮುಂದಿನವರಿಗೆ ನೀವು ಒಂದು ಮಾತನ್ನೂ ಕೂಡ ಸಿರಿಯಸ್ಸಾಗಿ ಹೇಳುವುದಿಲ್ಲ.

ಅಧ್ಯಕ್ಷರು : ನೀವು ಕೈಯನ್ನು ವಾಟಾಳರ ಕಡೆಗೆ ತೋರಿಸಿದರೆ ಈ ಕಡೆಗೆ ನೋಡುವುದಕ್ಕೆ ಆಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ನಾನು ಗಂಭೀರವಾಗಿ ಕುಳಿತಿದ್ದೇನೆ. ಮುಂದಿನವರಿಗೆ ನೀವು ಕೊಡುತ್ತೀರಿ ಹಿಂದಿನವರಿಗೆ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ನಾವು ಹೇಗೆ ಕುಳಿತಿದ್ದೇವೆ ನೋಡಿ ಸ್ವಲ್ಪ.

ಶ್ರೀ ಬಿ. ಶಿವರಾಮು : ತಾವು ಸ್ವಲ್ಪ ಅರ್ಥಮಾಡಿಕೊಳ್ಳಿ. ಒಂದೊಂದು ಪಾರ್ಟಿಯಲ್ಲಿ ಒಬ್ಬೊಬ್ಬ ಸದಸ್ಯರಿಗೆ ನೀವು ಹೆಚ್ಚು ಅವಕಾಶ ಕೊಡುವ ಮೂಲಕ, ನಾವು ಸಂಖ್ಯಾ ಬಲದಲ್ಲಿ ಹೆಚ್ಚು ಇದ್ದೇವೆಂದು ನಮಗೆ ಕೊಡುವ ಅವಕಾಶವನ್ನು ತಪ್ಪಿಸಬೇಡಿ.

ಶ್ರೀ ಯು.ಆರ್. ಸಭಾಪತಿ : ಮುಂದಿನ ಬೆಂಚಿನವರಿಗೆ ತಾವೇ ಬುದ್ಧಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಯುವಕರಿಗೆ ತಮ್ಮ ಭಾವನೆಗಳನ್ನು ವ್ಯಕ್ತ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡದಿದ್ದರೆ, ಯಾವಾಗಲಾದರೂ ಅದು ಸ್ಫೋಟವಾಗುತ್ತದೆ. ಅದು ಸದನಕ್ಕೆ ಒಳ್ಳೆಯದಲ್ಲವೆಂದು ನಾನು ಮಾನ್ಯ ಸಭಾಧ್ಯಕ್ಷರಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ನನ್ನ ಒಂದು ಸಲಹೆ ಇದೆ. ಇವತ್ತು ಹೇಳಿದ್ದೆಲ್ಲ ಚೆನ್ನಾಗಿದೆ. ಇನ್ನೊಂದು ಸಾರಿ ಮುಂದಿನ ಬೆಂಚಿನಲ್ಲಿ ಎಲ್ಲರೂ ಕುಳಿತಾಗ ಈ ಮಾತು ಹೇಳಿ, ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಆಗ ನನ್ನ ಕೆಲಸ ಸುಲಭವಾಗುತ್ತದೆ.

ಶ್ರೀವಾಟಾಳ್ ನಾಗರಾಜ್ : ಏಕೋ ನೀವು ಮುಂದಿನ ಬೆಂಚಿನವರನ್ನು ಎತ್ತಿ ಕಟ್ಟುತ್ತಿದ್ದೀರೆಂದು ಕಾಣುತ್ತದೆ. ಇದು ಸರಿಯಲ್ಲ. ನಿಮ್ಮ ಮೇಲೆ ನಾವು ಅಪಾರವಾದ ಗೌರವನ್ನು ಇಟ್ಟುಕೊಂಡಿದ್ದೇವೆ. ನಮಗೆ ಅವರಿಗೆ ತಂದಿಡುತ್ತೀದ್ದೀರಲ್ಲ ಏನು ಇದು, ಇದು ಸರಿಯಲ್ಲ.

ಅಧ್ಯಕ್ಷರು : ಮಾನ್ಯ ಎಂ.ಪಿ ಪ್ರಕಾಶ್ ಅವರು ಮುಂದಿನ ಬೆಂಚಿನಲ್ಲಿ ಕುಳಿತಿದ್ದಾರೆ. ಅವರಿಗೆ ನಾವು ಹೇಳುವುದಕ್ಕಾಗುತ್ತದೆಯೆ ?

ಒಬ್ಬ ಮಾನ್ಯ ಸದಸ್ಯರು : ನಮಗೆ ಈ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಮುಂದಕ್ಕೆ ಬರಬರುತ್ತಾ ನಿಮಗೆ ಅವಕಾಶ, ಎಲ್ಲಾ ಯುವಕರದ್ದೆ.

ಶ್ರೀ ಆರ್. ಎಲ್. ಜಾಲಪ್ಪ : ಅವರು ಈ ವಿಚಾರವನ್ನು ತಮ್ಮ ಪಕ್ಷದಲ್ಲಿ ಮಾತನಾಡಬೇಕು,ಅಲ್ಲಿ ಕಾಲ ನಿಗಧಿ ಮಾಡಿ ಎಷ್ಟೆಷ್ಟು ನಿಮಿಷ ಮಾತನಾಡಬೇಕೆಂದು ಪಕ್ಷದ ಅಧ್ಯಕ್ಷರು ಮುಖಂಡರು ಇದ್ದಾರೆ, ಅವರು ಅವರಿಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೀವು ಹೇಳುವುದು ಅವರವರ ಪಕ್ಷಗಳಲ್ಲೆ ಆಂತರಿಕ ಪ್ರಜಾಪ್ರಭುತ್ವ ಬಲಗೊಳ್ಳಬೇಕು ಎಂಬುದು ನಿಮ್ಮ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಯಾವಾಗ ಸಾಧ್ಯ ಇದೆ ಎಂದರೆ, ನೀವು ಬಿ.ಜೆ.ಪಿ.ಗೆ ಎರಡು ತಾಸು, ಕಾಂಗ್ರೆಸನವರಿಗೆ ಎರಡು ತಾಸು, ಎಂದು ಕಾಲ ನಿಗದಿ ಮಾಡಬೇಕು. ಮೊದಲು ಪಾರ್ಟಿವೇಸ್ ಟೈಂ ಅಲಾಟ್ ಮಾಡುತ್ತಿದ್ದರು. ಪಾರ್ಟಿಗೆ ಇಷ್ಟಿಷ್ಟು ಗೆಂಟೆ ಎಂದು ಅದು ಮಾಡಿದರೆ ನಾನು ಅರ್ಧ ಗಂಟೆ ಮಾತನಾಡಬಹುದು, ಇನ್ನೊಂದು ಎರಡು ತಾಸಿನಲ್ಲಿ ಅವರಿಗೆ ಹೆಚ್ಚಿಗೆ ಕೊಡಬಹುದು. ಈಗ ಅದು ಯಾವುದನ್ನೂ ನಾವು ಪಾಲನೆ ಮಾಡುತ್ತಿಲ್ಲವಲ್ಲ. ಈಗ ಒಬ್ಬರು ಮಾತನಾಡಿದ ಮೇಲೆ ಇನ್ನೊಬ್ಬರು ಮಾತನಾಡುತ್ತಾರೆ, ಅದರಲ್ಲೇ ಟೈಂ ಹೋಗುತ್ತದೆ. ಒಬ್ಬರು ಮಾತನಾಡುವಾಗಲೇ ಎರಡು ತಾಸುಮುಗಿದು ಹೋಗುತ್ತದೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಹಿರಿಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ದಿ:ಶ್ರೀ ನಜೀರ್ ಸಾಬ್ ಅವರ ಕಾಲದಲ್ಲಿ ಹಾಕಿದ್ದ ಬೋರವೆಲಗಳು ಕೆಟ್ಟು ಹೋಗಿವೆ ಎಂದು ಹೇಳಿದರು, ಮತ್ತು ಅವು ದುರಸ್ತಿಯಾಗಿಲ್ಲವೆಂದು ಕೂಡ ಹೇಳಿದರು. ಈ ವಿಚಾರದಲ್ಲಿ ನಾನು ಸಲಹೆ ಕೊಡುವುದು, ಮಾತೆತ್ತಿದರೆ ಬೋರ್ ಕೊರೆಯುವ ವಿಷಯ ಏನಿದೆ ಇದಕ್ಕೆ ಸರ್ಕಾರ ಬದಲಾವಣೆಯ ಚಿಂತನೆಯನ್ನು ಮಾಡಬೇಕು. ಎಲ್ಲೆಲ್ಲಿ ನೀರು ವಾತಾವರಣ ಚೆನ್ನಾಗಿದೆ ಅಲ್ಲಿ ಎಲ್ಲಿ ಓಪನ್ ವೆಲ್ ಹಾಕುವುದಕ್ಕಾಗುತ್ತದೆ, ಎಲ್ಲಿ ತೋಡುಬಾವಿ ಹಾಕುವುದಕ್ಕಾಗುತ್ತದೆ ಆ ರೀತಿ ತೋಡುಬಾವಿ ವ್ಯವಸ್ಥೆ ಮಾಡಿದ ಸಂದರ್ಭದಲ್ಲಿ

ದುರಸ್ತಿ ಚಿಂತನೆ ಬರುವುದಿಲ್ಲ, ಬಹುಶಃ ಆ ಸಮಸ್ಯೆ ಬರುವುದಿಲ್ಲ, ಶಾಶ್ವತವಾಗಿ ಆ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗುತ್ತದೆ. ಎಲ್ಲಿ ಅನಿವಾರ್ಯವಾಗುತ್ತದೆ, ಎಲ್ಲಿ ಆಳವಾಗಿ ನೀರು ಸಿಗುವ ವಾತಾವರಣ ಇದೆ ಅಲ್ಲಿ ಮಾತ್ರ ಸರ್ಕಾರದವರು ಬೋರವೆಲ ವ್ಯವಸ್ಥೆ ಮಾಡಬೇಕೇ ಹೊರತು, ಸಾರಾಸಗಟಾಗಿ ಎಲ್ಲಾ ಕಡೆಯೂ ಬೋರಕೊರೆಯುವ ವ್ಯವಸ್ಥೆ ಏನಿದೆ ಆ ವ್ಯವಸ್ಥೆಯನ್ನು ದಯವಿಟ್ಟು ಕೈಬಿಡಿ. ಎಲ್ಲಿ ವಾಟರ್ ಬೆಲ್ಟ ಚೆನ್ನಾಗಿದೆ ಅಲ್ಲಿ ತೋಡುಭಾವಿ ತೋಡಿ. ಮೋಟರ್ ಕೂರಿಸುವಲ್ಲ ಮಿನಿ ವಾಟರ್ ಸಪ್ಲೈ ಏನು ಮಾಡುತ್ತೀರಿ, ಮಿನಿ ವಾಟರ್ ಸಪ್ಲೈ ಮಾಡುವಂಥ ಕಡೆ ಕೂಡ ತೋಡುಬಾವಿ ಮುಖಾಂತರ ನೀರು ಬರುವುದಕ್ಕೆ ಸಾಧ್ಯತೆ ಇದ್ದರೆ, ಅದಕ್ಕೆ ಮೋಟರ್ ಕೂರಿಸಿ ನೀರನ್ನು ಪಂಪ್ ಮಾಡುವ ವ್ಯವಸ್ತೆ ಮಾಡಿ. ಒಂದು ವೇಳೆ ಮೋಟರ್ ಕೆಟ್ಟು ಹೋದರೆ ತೋಡುಬಾವಿಯಿಂದ ನೀರು ಕುಡಿಯುತ್ತಾರೆ. ಬೋರ ಹಾಕುವ ಬದಲು ಬಾವಿ ವ್ಯವಸ್ಥೆ ಮಾಡುವ ಸಾಧ್ಯತೆ ಎಲ್ಲಿದೆ ಅಲ್ಲಿ ಪರಿಶೀಲನೆ ಮಾಡಿ. ಮಿನಿ ವಾಟರಗೆ ಕೂಡ ಎಲ್ಲಿ ಬಾವಿ ವ್ಯವಸ್ಥೆ ಸಾಧ್ಯತೆ ಇದೆ ಅಲ್ಲಿ ಬಾವಿ ವ್ಯವಸ್ಥೆ ಮೂಲಕ ನೀರಿನ ಸೌಲಭ್ಯ ಮಾಡಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಅಂದರೆ ೧೦೦-೧೫೦ ಅಡಿ ಮೇಲೆ ಹೋಗಬೇಕಾದ ವಾತಾವರಣದಲ್ಲಿ ಮಾತ್ರ ತಾವು ಬೋರ್ ವೆಲ್ ತೋಡುವ ವ್ಯವಸ್ಥೆ ಮಾಡುವಂಥ ಸೂಚನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಬೋರ್ ಹಾಕುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸತತವಾದ ದುರಸ್ತಿ ಕಾರ್ಯ ಏನಿದೆ ಅದು ಸರ್ಕಾರಕ್ಕೆ ಹೊರೆಯಾಗುತ್ತೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಅಧ್ಯಕ್ಷರು : ಹಿಂದೆ ಬಸ್ ಇಲ್ಲದೆ ಇದ್ದ ಕಾಲದಲ್ಲಿ ೨೦ ಮೈಲಿಯಾದರೂ ನಡೆದು ಹೋಗುತ್ತಿದ್ದರು. ಈಗ ಒಂದು ಕಿಲೋಮೀಟರಗೆ ಕೂಡ ಯಾರೂ ಜಪ್ಪಯ್ಯ ಅಂದರೂ ಬಸ್ ಹತ್ತದೆ ಇರುವುದಿಲ್ಲ. ಹಾಗೆಯೇ ಈಗ ತೋಡು ಬಾವಿಯ ಲಕ್ಷಣ. ಬಾವಿ ತೋಡುವವರು ಯಾರಿದ್ದಾರೆ?

ಒಬ್ಬ ಮಾನ್ಯ ಸದಸ್ಯರು : ಈಗ ಎಲ್ಲಿಯೂ ತೋಡುಬಾವಿ ತೆಗೆಯುವುದಕ್ಕಾಗುವುದಿಲ್ಲ.

ಪ್ರಕಟಣೆ

ಅಧ್ಯಕ್ಷರು : ಸದನದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಸಮಗ್ರವಾದ ತನಿಖೆಯನ್ನು ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು ಈ ಕೆಳಕಡ ೧೫ ಜನ ವಿಧಾನ ಸಭಾ ಸದಸ್ಯರನ್ನು ಹಾಗೂ ೫ ಜನ ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಜಂಟಿ ಸದನ ಸಮಿತಿಯನ್ನು ನೇಮಕ ಮಾಡಲಾಗಿದೆ.

ಶ್ರೀ ಯುತರುಗಳಾದ:

೧. ಕೆ.ಎನ್. ನಾಗೇಗೌಡ .... ಅಧ್ಯಕ್ಷರು

೨. ಸಿ.ಎಂ. ಉದಾಸಿ .... ಸದಸ್ಯರು